ಸಫಾಯಿ ಕರ್ಮಚಾರಿಗಳ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳು

(ಸಿಂಧನೂರ ತಾಲ್ಲೂಕನ್ನು ಅನುಲಕ್ಷಿಸಿ)

ಪಿಎಚ್.ಡಿ. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕರು:
ಕೆ. ಸಿದ್ದಲಿಂಗಪ್ಪ

ಮಾರ್ಗದರ್ಶಕರು
ಡಾ. ಚಲುವರಾಜು
ಸಹಪ್ರಾಧ್ಯಾಪಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಮಾಜ ನಿಕಾಯ
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ – 583 276

2012–2013

653

ಸಫಾಯಿ ಕರ್ಮಚಾರಿಗಳ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳು

(ಗುಲಬರ್ಗಾ ಜಿಲ್ಲೆಯನ್ನು ಅನುಲಕ್ಷಿಸಿ)

ಪಿಎಚ್.ಡಿ. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ ಮಹಾಪ್ರಬಂಧ

ಸಂಶೋಧನಾರ್ಥಿ

ಕೆ. ಗುರುಲಿಂಗಪ್ಪ

ಮಾರ್ಗದರ್ಶಕರು

ಡಾ. ಚಲುವರಾಜು

ಸಹಪ್ರಾಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಮಾಜ ನಿಕಾಯ

ಬುಡಕಟ್ಟು ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ ಹಂಪಿ

ವಿದ್ಯಾರಣ್ಯ – 583 276

[illegible]

ಘೋಷಣಾ ಪತ್ರ

ಸಫಾಯಿ ಕರ್ಮಚಾರಿಗಳ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳು (ಗುಲಬರ್ಗಾ ಜಿಲ್ಲೆಯನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಸಂಶೋಧನ ಮಹಾ ಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ **ಡಾ. ಚಲುವರಾಜು** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸುತ್ತಿದ್ದೇನೆ.

ಪ್ರಸ್ತುತ ಸಂಶೋಧನಾ ಮಹಾಪ್ರಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಪದವಿಗಳಿಗಾಗಲಿ, ಇತರ ಉದ್ದೇಶಗಳಿಗಾಗಲಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣಿಕರಿಸುತ್ತೇನೆ.

ದಿನಾಂಕ:

(ಕೆ. ಗುರುಲಿಂಗಪ್ಪ)
ಸಂಶೋಧಕರು

ದೃಢೀಕರಣ ಪತ್ರ

ಸಫಾಯಿ ಕರ್ಮಚಾರಿಗಳ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳು (ಗುಲಬರ್ಗಾ ಜಿಲ್ಲೆಯನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಸಂಶೋಧನ ಮಹಾ ಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸುತ್ತಿದ್ದಾರೆ.

ಈ ಮಹಾ ಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಪದವಿಗಳಿಗಾಗಲಿ ಅಥವಾ ಉದ್ದೇಶಗಳಿಗಾಗಲಿ ಇಡಿಯಾಗಿ ಇಲ್ಲವೆ ಬಿಡಿಯಾಗಿ ಎಲ್ಲಿಯೂ ಪ್ರಕಟ ಪಡಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ:

ಮಾರ್ಗದರ್ಶಕರು
ಡಾ. ಚಲುವರಾಜು
ಸಹಪ್ರಾಧ್ಯಾಪಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪರಿವಿಡಿ

ಅಧ್ಯಾಯ–1

ಅಧ್ಯಯನದ ಉದ್ದೇಶ ಸ್ವರೂಪ ಮತ್ತು ವ್ಯಾಪ್ತಿ

ಅಧ್ಯಾಯ–1

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಸಮಾಜ ಮತ್ತು ಸಂಸ್ಕೃತಿಗಳ ನಡುವೆ ಅತ್ಯಂತ ನಿಕಟವಾದ ಸಂಬಂಧವಿದೆ. ಅವೆರಡೂ ಒಂದೇ ನಾಣ್ಯದ ಎರಡು ಮುಖಗಳಂತೆ ಪರಸ್ಪರ ಪೂರಕ ಮತ್ತು ಪ್ರೇರಕವಾಗಿ ಕಾರ್ಯ ನಿರ್ವಹಿಸುತ್ತವೆ. ಆದರೆ ಈ ಸಮಾಜ ಮತ್ತು ಸಂಸ್ಕೃತಿಗಳು ಯಾವಾಗ ಉಗಮಗೊಂಡವೆಂದು ಖಚಿತವಾಗಿ ಅವುಗಳ ಕಾಲವನ್ನು ನಿರ್ಧರಿಸಲು ಸಾಧ್ಯವಿಲ್ಲ. ಆದರೆ ಇಷ್ಟು ಮಾತ್ರ ನಿಜ. ಸಮಾಜ ಮತ್ತು ಸಂಸ್ಕೃತಿಗಳನ್ನು ಹುಟ್ಟು ಹಾಕಿದವನು ಮಾನವನೇ ಎಂದು ಹೇಳಬಹುದು. ಬಹುಶಃ ಈ ಎರಡೂ ಮಾನವನ ಹುಟ್ಟಿನೊಂದಿಗೇ ಉಗಮಗೊಂಡಿವೆಯೆಂತಲೂ ಹೇಳಬಹುದು.

"ಸಮಾಜ ವಿಜ್ಞಾನಿಗಳು ಮಾನವನನ್ನು ಸಮಾಜ ಜೀವಿ, ಸಾಂಸ್ಕೃತಿಕ ಜೀವಿ ಎಂದು ಮುಂತಾಗಿ ಕರೆದಿರುವರು"[1] ಅಲ್ಲದೆ ಮಾನವನನ್ನು ಚಿಂತನಜೀವಿ ಅಥವಾ ಆಲೋಚನಾ ಜೀವಿ ಎಂತಲೂ ಕರೆಯಬಹುದು. ಜೀವ ವಿಕಾಸ ಪ್ರಕ್ರಿಯೆಯ ಫಲಶ್ರುತಿಯಾಗಿರುವ ಮಾನವನು ನಿಸರ್ಗ ಸಹಜವಾಗಿ ವಿಕಸಿತ ಮಿದುಳನ್ನು ಹೊಂದಿದ್ದು, ಇತರೆ ಎಲ್ಲ ಪ್ರಾಣಿ ವರ್ಗಗಳಿಗಿಂತಲೂ ಹೆಚ್ಚಿನ ಬುದ್ಧಿಶಕ್ತಿಯನ್ನು ಹೊಂದಿದ್ದಾನೆ. ಮಾನವನು ತನ್ನ ಬುದ್ಧಿ ಬಲದಿಂದ ತನ್ನ ಆಲೋಚನಪರತೆ ಮತ್ತು ಅಭಿವ್ಯಕ್ತಿಯನ್ನು ಹೆಚ್ಚಿಸಿಕೊಳ್ಳುತ್ತ ಬಂದಿದ್ದಾನೆ. ಪ್ರಕೃತಿಯಲ್ಲಿ ಜರುಗುವ ಹಗಲು-ರಾತ್ರಿ, ಸೂರ್ಯ-ಚಂದ್ರ-ನಕ್ಷತ್ರ, ಗುಡುಗು-ಮಿಂಚು, ಮಳೆ-ಗಾಳಿ, ಹುಟ್ಟು-ಸಾವು, ಬಿಸಿಲು-ನೆರಳು ಹೀಗೆ ಸಹಜ ಸಂಗತಿಗಳಿಗೆ ಕೆಲವೊಮ್ಮೆ ಬೆಚ್ಚಿ, ಹೆದರಿ, ವಿಸ್ಮಯಪಟ್ಟು ಕೌತುಕದಿಂದ ನೋಡುತ್ತ ಅವುಗಳ ಹಿಂದೆ ಇರುವ ಶಕ್ತಿಯನ್ನು ಒಲಿಸಿಕೊಳ್ಳಲು ಆರಾಧಿಸುತ್ತಲೇ ಕೈವಶ ಮಾಡಿಕೊಳ್ಳಲು ಏನೆಲ್ಲ ಪ್ರಯತ್ನಗಳನ್ನು ಪಟ್ಟು, ಪ್ರಕೃತಿಯ ಮೇಲೆ ತನ್ನ ಯಜಮಾನಿಕೆ ಹೊಂದಲು ಪ್ರಯತ್ನಿಸುತ್ತ ಬಂದಿರುವನು. ಪ್ರಕೃತಿಯ ಮೇಲೆ ಹಿಡಿತ ಸಾಧಿಸಲು ಮಾಡಿದ ಪ್ರಯತ್ನವನ್ನು ಸಮಾಜ ಮತ್ತು ಸಂಸ್ಕೃತಿಗಳ ಮೇಲೂ ಸಾಧಿಸಲು ಯತ್ನಿಸಿದನು. ಅದಕ್ಕಾಗಿ ತನ್ನದೇ ಆದ ಸಾಮಾಜಿಕ ವ್ಯವಸ್ಥೆಯನ್ನು ರೂಪಿಸಿ, ಅದರ ಯಜಮಾನನಾಗಲು ತೊಡಗಿದನೆಂದು ಹೇಳಬಹುದು.

"ಮಾನವನು ಮೂಲತಃ ಕಾಡಿನಲ್ಲಿದ್ದನೆಂಬ ಬಗ್ಗೆ ಯಾವ ವಿವಾದವೂ ಇಲ್ಲ."[2] ಆದಿಮಾನವನಿಗಿದ್ದ ಮೂಲ ಸಮಸ್ಯೆ ಆಹಾರದ್ದು. ಅದಕ್ಕಾಗಿ ಕಾಡಿನಲ್ಲಿ ಆತನು ಆಹಾರ ಹುಡುಕುವುದಕ್ಕೆಂದು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಅಲೆಮಾರಿಯಾಗಿ ತಿರುಗಾಡುತ್ತಿದ್ದನು. ಕಾಡಿನಲ್ಲಿ ದೊರೆಯುವ ಗೆಡ್ಡೆ ಗೆಣಸು ಇಲ್ಲವೇ ಪ್ರಾಣಿಗಳನ್ನು ಬೇಟೆಯಾಡಿ ತನ್ನ ಹಸಿವನ್ನು ನೀಗಿಸಿಕೊಳ್ಳುತ್ತಿದ್ದನು. ಇದಕ್ಕೆ ಅನೇಕ ಸಹಚರರ ನೆರವಿನ ಅಗತ್ಯ ಮಾನವನಿಗಿತ್ತು. ಆಹಾರ ಸಂಪಾದನೆ ಜತೆಗೆ ಕಾಡಿನ ಮೃಗಗಳು, ಪ್ರಾಕೃತಿಕ ಪ್ರತಿಕೂಲತೆಗಳು ಇತರ ಸಹಚರರ ತೊಂದರೆಗಳಿಂದ ಮಾನವ ತನ್ನನು ತಾನು ರಕ್ಷಣೆ ಮಾಡಿಕೊಳ್ಳಬೇಕಾಗಿತ್ತು. ಹೀಗಾಗಿ ಅವನಿಗೆ ಗುಂಪು ಜೀವನದ ಅವಶ್ಯಕತೆಯಿತ್ತು ಎನ್ನಬೇಕು.

ಕಾಡಿನಲ್ಲಿ ಬೇಟೆಯಾಡುತ್ತಿದ್ದ ಮಾನವ, ಆಹಾರದ ಉತ್ಪಾದನೆಯ ವಿಧಾನ ತಿಳಿದ ಮೇಲೆ ತನ್ನ ಅಲೆಮಾರಿತನವನ್ನು ತೊರೆದು ಒಂದೆಡೆ ನೆಲೆಯೂರಲು ತೊಡಗಿದನು. ಮಾನವನು ತನ್ನ ಗುಂಪಿನೊಂದಿಗೆ ಅಲ್ಲಲ್ಲಿ ನೆಲೆಯೂರಿದ ತಾಣಗಳೇ ಊರುಗಳಾದವು. ಆಹಾರ ಉತ್ಪಾದನೆಗಾಗಿ ವ್ಯವಸಾಯ ವೃತ್ತಿಯನ್ನು ಆರಂಭಿಸಿದನು. ಅಂದರೆ ತಾನು ನೆಲೆನಿಂತ ಕಾಡಿನಲ್ಲಿ ಇಲ್ಲವೇ

ಕಾಡಿನಂಚಿನ ಬಯಲಿನಲ್ಲಿ ನೆಲವನ್ನು ಅಗೆದು ಹದಮಾಡಿ ಬೀಜಗಳನ್ನು ಬಿತ್ತಿದ. ಅದಕ್ಕೆ ಸಹಚರರ ಪ್ರಾಣಿಗಳ ನೆರವನ್ನು ಪಡೆದನು. ಕಾಡು ಪ್ರಾಣಿಗಳನ್ನು ಪಳಗಿಸಿ ಸಾಕಾಣಿಕೆ ಪ್ರಾರಂಭಿಸಿದನು. ಇದರಿಂದ ಪಶು ಸಂಗೋಪನೆ ಮತ್ತು ವ್ಯವಸಾಯ ಜೀವನವನ್ನು ಆರಂಭಿಸಿದನು.

ಕಾಡು ತೊರೆದು ಹೊರಗೆ ಬಂದ ಮಾನವ ತನ್ನದೇ ಆದ ಸಮಾಜವನ್ನು ರಚಿಸಿಕೊಂಡನು. ಬಲವಂತನೂ ಬುದ್ಧಿವಂತನಾದ ತನ್ನ ಗುಂಪಿನಲ್ಲಿ ಒಬ್ಬನನ್ನು ಮುಖಂಡನನ್ನಾಗಿ ಆರಿಸಿ, ಅವನ ಅಣತಿಯಲ್ಲಿ ನಡೆದುಕೊಳ್ಳುವಂತೆ ಮಾಡಿದನು. ತನ್ನ ಸಮಾಜದ ವ್ಯವಸ್ಥಿತ ಬೆಳವಣಿಗೆಗೆ ಅನುಕೂಲವಾಗುವಂಥ ನಿಯಮ, ನೀತಿ, ಕಟ್ಟಳೆ, ಸಂಪ್ರದಾಯ, ವಿಧಿನಿಯಮಗಳನ್ನು ರೂಪಿಸಿದನು. ಅವುಗಳನ್ನು · ಎಲ್ಲರೂ ಕಟ್ಟುನಿಟ್ಟಾಗಿ ಪಾಲಿಸಲೇಬೇಕಿತ್ತು. ಅವುಗಳನ್ನು ಉಲ್ಲಂಘಿಸಿದವರಿಗೆ, ತಪ್ಪಿತಸ್ತರಿಗೆ ಬಹಿಷ್ಕಾರ, ಗಡಿಪಾರು ದಂಡ ಇಲ್ಲವೇ ಶಿಕ್ಷೆಗಳನ್ನು ವಿಧಿಸಲಾಗುತ್ತಿತ್ತು. ದುರ್ಬಲರು ಸೋಲು ಅಥವಾ ಸಾವಿನಲ್ಲಿ ತಮ್ಮ ಸಮ್ಮತಿಯನ್ನು ಸೂಚಿಸುತ್ತಿದ್ದರು. ಗುಂಪಿನ ಮೇಲಿನ ಯಜಮಾನಕ್ಕೆ ಹಿಂಬಾಲಕರನ್ನು ಹೆಂಗಸರನ್ನು ಒಳಗು ಮಾಡುತ್ತಲೇ ಮನುಷ್ಯ ಸಮಾಜವನ್ನು ಕಟ್ಟಲು ತೊಡಗಿದನು.

1.1.2 ಸಮಾಜ : ಅರ್ಥ, ಪರಿಕಲ್ಪನೆ

'ಸಮಾಜ'ವೆನ್ನುವುದು ಒಂದುಗೂಡಿ ಬಾಳುವ ಜನತೆಯ ಘಟಕ. ಆ ಜನತೆಯ ಜೀವನ, ರೀತಿ, ನೀತಿ, ನಡವಳಿಕೆ, ಭಾವನೆ, ಕಷ್ಟ ನಷ್ಟ, ನಂಬಿಕೆ ಮೊದಲಾದವು. ಆ ಸಮಾಜದಲ್ಲಿ ನಿರ್ಮಾಣಗೊಂಡಿರುವುದನ್ನು ಕಾಣುತ್ತೇವೆ. ಸಮಾಜದ ಪದರುಗಳನ್ನು ಬಿಚ್ಚಿ ತೋರಿಸುವಂತೆ ಆ ಸಮಾಜದಲ್ಲಿನ ಜನತೆಯ ಸಂಸ್ಕೃತಿ ಅಭಿವ್ಯಕ್ತಗೊಂಡಿರುತ್ತದೆ. ಆದ್ದರಿಂದ ಆಯಾ ಜಾತಿ ಸಮುದಾಯಗಳ ಸಾಂಸ್ಕೃತಿಕ ವಿವಿಧ ಮುಖಗಳನ್ನು ಅಧ್ಯಯನ ಮಾಡಲು ಹೊರಟಾಗ ಆಯಾ ಸಮುದಾಯಗಳನ್ನು ಅವುಗಳ ಸಮಾಜೋ ಆರ್ಥಿಕ ನೆಲೆಗಳನ್ನು ಅರಿತುಕೊಳ್ಳುವುದು ಅತ್ಯಾವಶ್ಯಕವಾಗಿದೆ.

'ಸಮಾಜ'ದ ಕಲ್ಪನೆ ಮಾನವ ನಾಗರಿಕತೆಯಷ್ಟೇ ಪ್ರಾಚೀನವಾದುದ್ದಾದರೂ ಆ ಪದವನ್ನು ಕುರಿತು ಶಾಸ್ತ್ರೀಯವಾಗಿ ವಿಶ್ಲೇಷಣೆಗೆ ತೊಡಗಿದ್ದು ಮಾತ್ರ ಇತ್ತೀಚಿಗೆ ಅಂದರೆ 19ನೇ ಶತಮಾನ

ಮಧ್ಯಭಾಗದಲ್ಲಿ ಪಾಶ್ಚಾತ್ಯ ವಿದ್ವಾಂಸರು ಮಾನವ ಸಮಾಜದ ಅಧ್ಯಯನಕ್ಕೆ ತೊಡಗಿದರು. ಅದಕ್ಕೂ ಪೂರ್ವದಲ್ಲಿ ಮಾನವ ಸಮಾಜವನ್ನು ಮಾನವಶಾಸ್ತ್ರದ ಭಾಗವಾಗಿ ಅಭ್ಯಾಸ ಮಾಡಲಾಗುತ್ತಿತ್ತು.

ಇಂದು ನಾವು ಈ 'ಸಮಾಜ' ಎಂಬ ಪದವನ್ನು ಇಂಗ್ಲಿಷ್ ಭಾಷೆಯ Society (ಸೊಸೈಟಿ) ಎಂಬುದಕ್ಕೆ ಸಂವಾದಿಯಾಗಿ ಬಳಸುತ್ತಿದ್ದೇವೆ. ಹಾಗೆಯೇ ಈ ಪದದ ಮೂಲ ಲ್ಯಾಟಿನ್ ಭಾಷೆಯದ್ದಾಗಿದೆ. ಲ್ಯಾಟಿನ್ ಭಾಷೆಯ Societus (ಸೋಸಿಯಟಸ್) ಎಂಬುದು ಇಂಗ್ಲಿಷಿನಲ್ಲಿ Society"[3] ಎಂದಾಗಿದೆ. ಸಮಾಜವೆಂದರೆ ವ್ಯಕ್ತಿಗಳು ಪರಸ್ಪರ ಸಹಕಾರದಿಂದ ಹಲವಾರು ಸಂಬಂಧಿಕ ಸೂತ್ರಗಳ ಸಂಕೀರ್ಣಕ್ಕೆ ಒಳಗಾಗಿ ಕೂಡಿ ಬಾಳುವುದಾಗಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟಿನಲ್ಲಿ ಕೂಡ ಸಮಾಜದ ಅರ್ಥವನ್ನು "ಕೂಡಿ ಬಾಳುವುದು"[4] ಎಂದೆ ಹೇಳುತ್ತದೆ. ಹೀಗೆ ಬಾಳಲು ಸಮಾಜದಲ್ಲಿ ಸೂಕ್ತ ನಿಯಮಗಳು, ರೀತಿಗಳು ಮತ್ತು ಕ್ರಿಯೆಗಳಿರುತ್ತವೆ. ಯಾವುದೇ ಒಂದು ಸಮಾಜವು ಸಕ್ರಿಯ ವ್ಯಕ್ತಿಗಳಿಂದ ಕೂಡಿದ್ದಾಗಿರುತ್ತದೆ. "ಸಮಾಜವೆಂದರೆ ಸಾಮಾಜಿಕ ಸಂಬಂಧಗಳನ್ನು ಹೊಂದಾಣಿಕೆಗಳನ್ನು ಹೊಂದಿರುವಂತಹ ವ್ಯಕ್ತಿಗಳ ಗುಂಪು"[4] ಎಂದು ಹೇಳಲಾಗುತ್ತದೆ. ಮನುಷ್ಯನಂತೆ ಮರಗಿಡಗಳು, ಪ್ರಾಣಿ ಪಕ್ಷಿಗಳು ಒಟ್ಟಿಗೆ ಇರುವವಾದರೂ ಅವು ಸಂಪೂರ್ಣ ಸಾಮಾಜಿಕವಾಗಿರಲಾರವು. ಏಕೆಂದರೆ ಅವು ಕೂಡಿ ಇರುವುದಕ್ಕೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಅವಶ್ಯಕತೆಗಿಂತ ಜೈವಿಕ ಅವಶ್ಯಕತೆಯೇ ಪ್ರಧಾನವಾಗಿರುತ್ತದೆ. ಕೆಲವು ಕ್ರಿಮಿ ಕೀಟಗಳು, ಪ್ರಾಣಿಗಳು ಹೆಚ್ಚಿನ ಗುಂಪುಗಳಲ್ಲಿ ನೆಲೆಸಿರುತ್ತವೆ. ಉದಾ: ಜೇನು ನೊಣಗಳು, ಇವು ಅತ್ಯಂತ ಹೆಚ್ಚಿನ ಪ್ರಮಾಣದ ಸಹಜೀವನವನ್ನು ಹೊಂದಿರುತ್ತವೆ. ಕೆಲವು ಪಕ್ಷಿಗಳು, ಕಾಡುಪ್ರಾಣಿಗಳು, ಕೋತಿಗಳು ಮುಂತಾದ ಪ್ರಾಣಿಗಳು ಒಂದಕ್ಕೊಂದು ಹೊಂದಿಕೊಂಡು ಕುಟುಂಬದ ರೀತಿಯಲ್ಲಿ ಜೀವಿಸುತ್ತವೆ. ಇದನ್ನು ಪ್ರಾಣಿ, ಪಕ್ಷಿಗಳ ಗುಂಪು ಅಥವಾ ಸಂಸಾರ ಜೀವನವೆನ್ನಬಹುದೇ ಹೊರತು ಹೆಚ್ಚಿನ ಸಾಮಾಜಿಕ ಗುಣ ಲಕ್ಷಣಗಳನ್ನುಳ್ಳ ಮಾನವ ಸಮಾಜಕ್ಕೆ ಹೋಲಿಸಲಾಗುವುದಿಲ್ಲ.

ಮಾನವನಿಗೂ ಇತರ ಪಕ್ಷಿ, ಪ್ರಾಣಿಗಳಿಗೂ ಇರುವ ವ್ಯತ್ಯಾಸವೆಂದರೆ ಸಂಸ್ಕೃತಿಯಾಗಿದೆ ಮಾನವನ ಸಂಸ್ಕೃತಿ ಪರಿಕಲ್ಪನೆಯು ಅವನ ಸಮಾಜದ ಹುಟ್ಟಿನಿಂದಲೇ ಪ್ರಾರಂಭವಾಯಿತೆಂಬುದು ತಿಳಿದ ವಿಷಯ ಸಂಸ್ಕೃತಿಯು ಮಾನವನ ಸೃಷ್ಟಿಯಾದರೂ ಅದು ಮಾನವನ ಮೇಲೆ ಹೆಚ್ಚಿನ ಪರಿಣಾಮ ಬೀರಿದೆ. ಅವನ ಸಮಾಜಿಕ ಕುಟುಂಬ ಜೀವನ, ಕಳ್ಳುಬಳ್ಳಿ, ಸಂಘ ಸಂಸ್ಥೆಗಳು,

ಸಮುದಾಯ ಜೀವನ ಇವೆಲ್ಲವೂ ಸಂಸ್ಕೃತಿಯಿಂದ ನಿರ್ಮಿಸಲ್ಪಟ್ಟ ಸಂಸ್ಥೆಗಳು ಇವುಗಳ ರಚನೆ, ಇರುವಿಕೆ, ಕಾರ್ಯ ನಿರ್ವಹಣೆ ಮೊದಲಾದವುಗಳು ಆಯಾ ಸಮಾಜದ ಸಂಸ್ಕೃತಿಯಿಂದ ಪ್ರಭಾವಿತವಾಗಿರುತ್ತವೆ. ಸಂಸ್ಕೃತಿಯು ಭಾರತೀಯ ಭಿನ್ನ ಭಿನ್ನ ಕಾಲದ ಪ್ರದೇಶಗಳಲ್ಲಿನ ವಿಭಿನ್ನ ವರ್ಗ, ಜಾತಿ ಸಮುದಾಯಗಳ ಜೀವನ ವಿಧಾನ, ಸಾಮಾಜಿಕ ರಚನೆಯಲ್ಲಿ ಯಾವ ರೀತಿಯಾದ ಪ್ರಭಾವ, ಪರಿಣಾಮವನ್ನು ಬೀರಿದೆ ಎಂಬುದನ್ನು ಪರಿಶೀಲಿಸುವುದು ಅಷ್ಟೇ ಅವಶ್ಯವಾಗಿದೆ. ಏಕೆಂದರೆ ಸಮಾಜ ಮತ್ತು ಸಂಸ್ಕೃತಿಗಳೆರಡು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಇವು ಒಂದಕ್ಕೊಂದು ತುಷ್ಟಿ ಪುಷ್ಟಿಯಾಗಿರುತ್ತವೆ ಮತ್ತು ಒಂದನ್ನು ಬಿಟ್ಟು ಮತ್ತೊಂದು ಇರಲಾರವು. ಸಮಾಜ ತಳ ಬೇರಾದರೆ, ಸಂಸ್ಕೃತಿ ಮರವಿದ್ದಂತೆ.

1.1.2 (ಅ) ಡಾ. ಬಿ.ಆರ್. ಅಂಬೇಡ್ಕರ್ : ಬಿ. ಬಸವಲಿಂಗಪ್ಪರವರ ದೃಷ್ಟಿಯಲ್ಲಿ

ಮಾನವನ ವಿಕಾಸಕ್ಕೆ ಪರಿಸರದಂತೆ ಸಮಾಜವೂ ಅವಶ್ಯಕವಾಗಿದೆ. ಯಾವುದೇ ಮಾನವ ಸಮುದಾಯಗಳ ವಿಕಾಸವು ಸಮಾಜ ರಹಿತವಾಗಿರುವುದು ಅಸಾಧ್ಯ. ಈ ವಿಕಾಸನ ಕ್ರಿಯೆಯಲ್ಲಿ ವ್ಯಕ್ತಿಗೆ ತನ್ನ ಜೀವನ ರೂಪಿಸಲು ಅವಕಾಶ ನೀಡಿರುವುದು ಸಮಾಜ, ಕುಟುಂಬ, ನೆರೆಹೊರೆ, ಸಹ ಜೀವನ ಇವು ಮಾನವನ ಅಭಿವೃದ್ಧಿಗೆ ಸಹಕಾರಿಯಾದ ವ್ಯವಸ್ಥೆಯಾಗಿವೆ. ಹೀಗಾಗಿ ಮಾನವ ಮತ್ತು ಸಮಾಜಗಳ ಸಂಬಂಧಗಳ ಬಗ್ಗೆ ಸಮಾಜ ವಿಜ್ಞಾನಿಗಳ, ಚಿಂತಕರು ತಮ್ಮದೇ ಆದ ಅನೇಕ ಅಭಿಪ್ರಾಯಗಳನ್ನು ನೀಡಿದ್ದಾರೆ.

ಪ್ರಾರಂಭಿಕ ಸ್ಥಿತಿಯಲ್ಲಿ ಮಾನವನ ಜೀವನವು ಭಯಾನಕ ಹಾಗೂ ಕಷ್ಟಕರವಾಗಿತ್ತು. ತನ್ನ ಸುತ್ತಲಿನ ಪರಿಸರ, ಕ್ರೂರ, ಮೃಗಗಳು, ಅನ್ಯಗುಂಪಿನ ಆಕ್ರಮಣ ಇವುಗಳನ್ನು ಎದುರಿಸಲು ಸಹಜೀವನವನ್ನು ಪ್ರಾರಂಭಿಸಿದನು. ಆರಂಭದಲ್ಲಿ ಒಬ್ಬನಿಗಾಗಿ ಎಲ್ಲರು, ಎಲ್ಲರಿಗಾಗಿ ಒಬ್ಬ ಎಂಬ ಧೋರಣೆಗೆ ಒಳಪಟ್ಟಿತ್ತು. ಇಡೀ ಸಮುದಾಯವೇ ಅದಕ್ಕಾಗಿ ಬದ್ಧವಾಗಿತ್ತು. ಇದರ ಫಲವಾಗಿ ಸಮಾಜ ಅಸ್ತಿತ್ವಕ್ಕೆ ಬಂದಿತೆಂದು ಪಾಶ್ಚಾತ್ಯ ಸಮಾಜ ವಿಜ್ಞಾನಿ ಹಾಬ್ಸ್ ಅವರ ವಾದವಾಗಿದೆ.

ಕ್ರಮೇಣವಾಗಿ ಜನಸಂಖ್ಯೆ ಹೆಚ್ಚಳ ಹಾಗೂ ಸಮಾಜ ದೊಡ್ಡದಾದಂತೆ ಸಹಜೀವನ, ಸರಳತೆ, ಮುಗ್ಧತೆ ಮಾಯವಾಗಿ ಕುಟುಂಬ, ಆಸ್ತಿ, ಅಧಿಕಾರ ಎಂಬ ಸಂಸ್ಥೆಗಳು ಸೃಷ್ಟಿಯಾಗಿ, ಸಮಾನತೆ ಮಾಯವಾಗ ತೊಡಗಿತು. ವ್ಯಕ್ತಿಗಳು ತಾನು–ತನ್ನದು, ಸಬಲ–ದುರ್ಬಲ, ಉಚ್ಚ–ನೀಚ, ಶ್ರೀಮಂತ–

ಬಡವ ಎಂಬ ತರತಮವಾಗಿ ಆಲೋಚಿಸಲು ಪ್ರಾರಂಭಿಸಿದನು. ಇದರ ಫಲವಾಗಿ ನಾಗರಿಕ ಸಮಾಜದ ಸ್ಥಾಪನೆಯು ಅನಿವಾರ್ಯವಾಯಿತು. ವ್ಯಕ್ತಿಯ ನೈಸರ್ಗಿಕ ಸ್ವಾತಂತ್ರ್ಯವು ನಾಗರಿಕ ಸ್ವಾತಂತ್ರ್ಯವಾಗಿ ಪರಿವರ್ತನೆಯಾದ ಮೇಲೆ ಸಮಾಜದಲ್ಲಿ ಮೇಲು-ಕೀಳು, ಜಾತಿ-ವರ್ಗ ವೃತ್ತಿಗಳು ಹುಟ್ಟಿಕೊಂಡಿರಬೇಕು, ಹೀಗೆ ಹುಟ್ಟಿಕೊಂಡ ವೃತ್ತಿಗಳಲ್ಲಿಯೂ ಶ್ರೇಷ್ಠ ವೃತ್ತಿ ಕನಿಷ್ಠ ವೃತ್ತಿಗಳೆಂಬ ವರ್ಗೀಕರಣವೂ ಆಗಿ ಅವುಗಳ ಮೇಲೆಯೇ ಮನುಷ್ಯನ ಸಾಮಾಜಿಕ ಸ್ಥಾನಮಾನಗಳು ಅಳೆಯಲ್ಪಟ್ಟವು, ಮೂಲತಃ 'ಆಚಾರ' ಎಂಬುದು 'ಕೆಲಸ' ಅಥವಾ 'ವೃತ್ತಿ' ಎಂಬ ಅರ್ಥ ಹೊಂದಿದೆ ಆದರೆ ಶ್ರೇಷ್ಠವೆನಿಸುವ ಕೆಲಸ ಮಾಡುವವನು 'ಆಚಾರ್ಯ' ಎನಿಸಿಕೊಂಡರೆ, ಕನಿಷ್ಠ ಕೆಲಸ ಮಾಡುವವನು 'ಕರ್ಮಚಾರಿ' ಎಂದು ಕರೆಯಿಸಿಕೊಂಡನು.

ಸಾಮುದಾಯಕ ಜೀವನದಲ್ಲಿ ನೈಪುಣ್ಯತೆಯನ್ನು ಆಧರಿಸಿ ವಿವಿಧ ಕುಲಕಸುಬು-ವೃತ್ತಿಗಳು ಹುಟ್ಟಿಕೊಂಡವು. ಉದಾಹರಣೆಗೆ: ಕಮ್ಮಾರಿಕೆ, ಕುಂಬಾರಿಕೆ, ನೇಕಾರಿಕೆ, ಬಡಿಗತನ, ಅಕ್ಕಸಾಲಿಗ, ಬೋವಿ, ಜಿಡಮಾಲಿ, ಸಫಾಯಿ ಕರ್ಮಾಚಾರಿ ಇತ್ಯಾದಿ ಸಮೂಹಗಳು ಸೃಷ್ಟಿಯಾಯಿತು ತದನಂತರ ಅನೇಕ ಜಾತಿಗಳು, ಸಮುದಾಯಗಳು ಬೆಳೆದು ಬಂದವು. ಆದಾಯದ ಆಧಾರದ ಮೇಲಿಂದ ಸಮಾಜಿಕ ಅಂತಸ್ತನ್ನು ನಿರ್ಧರಿಸಲು ಪ್ರಾರಂಭಿಸಲಾಯಿತು. ಸಾಮಾಜಿಕ ಏಣಿ-ಶ್ರೇಣಿ ವ್ಯವಸ್ಥೆಯಲ್ಲಿ ಮೇಲು-ಕೀಳು, ಶ್ರೇಷ್ಠ-ಕನಿಷ್ಠ ಎಂಬ ತಾರತಮ್ಯತೆಯ ಮನೋಭಾವಗಳ ಆಧಾರದ ಮೇಲಿಂದ ಅಸಂಖ್ಯಾತ ಜಾತಿ ಸಮೂದಾಯಗಳ ಉಗಮವಾಯಿತು.

ಭಾರತದ ಸಮಾಜಿಕ ವ್ಯವಸ್ಥೆ ಎಷ್ಟು ಸಂಕೀರ್ಣವೋ, ಅವ್ಯವಸ್ಥೆಯ ಆಗರವೂ ಆಗಿದೆ. ಸಾಮಾಜಿಕ ವ್ಯವಸ್ಥೆಯ ಭಾಗವಾಗಿರುವ ಸಫಾಯಿ ಕರ್ಮಚಾರಿ ಸಮುದಾಯವು ರೂಪುಗೊಳ್ಳುವುದಕ್ಕೆ ಕಾರಣವಾಗಿರುವ ಸಮಾಜಿಕ, ರಾಜಕೀಯ, ಆರ್ಥಿಕ ಸಂಗತಿಗಳು ಸಹ ಅಷ್ಟೇ ಸಂಕೀರ್ಣವಾಗಿವೆ. ಶ್ರೇಣೀಕರಣಕ್ಕಾಗಿ ಭಾರತದಲ್ಲಿ ಬದುಕುತ್ತಿರುವ ದುಡಿಯುವ ಕೆಳಜಾತಿಯ ಸಮುದಾಯಗಳು ಯಾವ ಹಂತಗಳಲ್ಲಿ ಎಂಥೆಂಥ ಕಷ್ಟಕರ ಪರಸ್ಥಿತಿಯನ್ನು ಅನುಭವಿಸಿ ಬಂದರೆಂಬುದನ್ನು ಡಾ. ಬಿ.ಆರ್. ಅಂಬೇಡ್ಕರ್ ಅವರು ತಮ್ಮ ಚಿಂತನೆಗಳಲ್ಲಿ ಅಭಿವ್ಯಕ್ತ ಪಡಿಸಿದ್ದಾರೆ. ಬಹುಸಂಖ್ಯಾತ ದುಡಿವ ವರ್ಗದ ಜನರ ಶ್ರಮವನ್ನು ಬಂಡವಾಳವಾಗಿಸಿಕೊಂಡು ಬದುಕುವ ಅಲ್ಪಸಂಖ್ಯಾತ ಆಳುವ ವರ್ಗ ಯಾವುದೇ ರೂಪದ ಮೂಲಕ ಅಸಮಾನತೆಯನ್ನು ಚಿರಂತನಗೊಳಿಸಲು ಶ್ರೇಣೀಕರಣವನ್ನು ಸಮರ್ಥಿಸುವ ಪ್ರಯತ್ನಗಳು ಭಾರತೀಯ ಸಮಾಜ ಚರಿತ್ರೆಯಲ್ಲಿ ನಿರಂತರವಾಗಿ ನಡೆದಿವೆ ಎಂಬುದು ಡಾ. ಅಂಬೇಡ್ಕರ್‌ರ ಅಭಿಪ್ರಾಯದಲ್ಲಿ

ಕಾಣುತ್ತೇವೆ. ಜಾತಿ ವ್ಯವಸ್ಥೆ ದುಡಿಯುವವರ ಮತ್ತು ದುಡಿಸಿಕೊಳ್ಳುವವರ ಮಧ್ಯ ಒಂದು ಅಸಹಜ ಸಾಮಾಜಿಕ ಸಂಬಂಧವಾಗಿ ಏರ್ಪಟ್ಟಿತು. ಈ ಕಾರಣದಿಂದ ಭಾರತದ ಶ್ರೇಣೀಕರಣವು ಜಗತ್ತಿನ ಎಲ್ಲ ತರಹದ ವ್ಯವಸ್ಥೆಗಳಿಂಗಿತ ಹೆಚ್ಚು ಸಂಕೀರ್ಣ ಮತ್ತು ಅಷ್ಟೇ ಕ್ರೂರ ವ್ಯವಸ್ಥೆಯಾಗಿದೆ. ಆಧುನಿಕ ಜಗತ್ತಿನಲ್ಲಿ ಏನೆಲ್ಲ ಕ್ರಾಂತಿಗಳಾಗಿವೆ. ಬದಲಾವಣೆಗಳುಂಟುವಾಗಿವೆ. ಆದರೆ ಕುಲಕಸುಬಿನ ಆಧಾರದ ಮೇಲೆ ಒಂದು ಜಾತಿಗೇ ಸೀಮಿತವಾಗಿರುವ ವೃತ್ತಿಹೀನ ವೃತ್ತಿಗಳು ಅದರಲ್ಲಿ ಮನುಷ್ಯರ ಮಲವನ್ನು ಮನಷ್ಯನೇ ಬಳಿದು ಎತ್ತಿ ಹೊತ್ತು ಹಾಕುವ ಸ್ವಚ್ಛಗೊಳಿಸುವಂತಹ ವೃತ್ತಿಗಳಲ್ಲಿ ಬದಲಾವಣೆಯಾಗದಿರುವುದು ಭಾರತೀಯ ಸಾಮಾಜಿಕ ಕ್ರೂರ ವ್ಯವಸ್ಥೆಗೆ ಸ್ಪಷ್ಟ ಉದಾಹರಣೆಯಾಗಿದೆ. ಈ ವೃತ್ತಿಯಲ್ಲಿ ಯಾವ ಬದಲಾವಣೆಗಳು ಆಗಿಲ್ಲದಿರುವುದು ಒಂದು ವಿಪರ್ಯಾಸವೇ ಎಂದು ಹೇಳಲೇಬೇಕು. ಈ ವೃತ್ತಿ ಸಮುದಾಯದವರ ಬಗ್ಗೆ ಡಾ. ಬಿ.ಆರ್. ಅಂಬೇಡ್ಕರ್‌ರವರು ಆಳವಾಗಿ ಚಿಂತಿಸಿದವರಲ್ಲಿ ಮೊದಲಿಗರು. ಸ್ವಾತಂತ್ರ್ಯ ನಂತರದಲ್ಲಿ 70 ದಶಕದಲ್ಲಿ ಬಿ. ಬಸವಲಿಂಗಪ್ಪನವರು ಪ್ರಮುಖರಾಗಿದ್ದಾರೆ. ದಲಿತ ವರ್ಗದ ಹಕ್ಕುಗಳ ವಿಚಾರದಲ್ಲಿ ಐತಿಹಾಸಿಕ ಪಾತ್ರವಹಿಸಿದರು. ಆಧುನಿಕ ಭಾರತದಲ್ಲಿ ಎಲ್ಲ ಜನಗಳಂತೆ ಸಫಾಯಿ ಕರ್ಮಚಾರಿಗಳು ಸ್ವಾಭಿಮಾನಿಗಳಾಗಿ ಜೀವಿಸುವಂತಹ ಸಾಂವಿಧಾನಿಕ ಹಕ್ಕುಗಳನ್ನು ಕಲ್ಪಿಸಿದರು, ಹೀಗಿದ್ದೂ ಸಮಜಾದಲ್ಲಿ ಅವರನ್ನು ನೋಡುವ ದೃಷ್ಟಿ ಇನ್ನೂ ಯಾವ ತರಹದ್ದಿದೆ ಎಂಬುದೂ ಲಕ್ಷಿಸತಕ್ಕದ್ದಾಗಿದೆ.

ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ತಮ್ಮ ಬದುಕನ್ನು ನಡೆಸಲು ಅನೇಕ ದಲಿತರು, ಸಫಾಯಿ ಕರ್ಮಚಾರಿಗಳು ತಮ್ಮ ಪರಂಪರಾಗತ ಕೆಲಸಗಳೆಂದು ನಂಬಿರುವ ಕೆಲಸವನ್ನು ಮಾಡುತ್ತಿದ್ದಾರೆ. ಈ ಎಲ್ಲ ಕೆಲಸಗಳನ್ನು ಅನಿವಾರ್ಯವಾಗಿ ಮಾಡಲೇ ಬೇಕಾಗುತ್ತದೆ. ಅಸ್ಪೃಶ್ಯ ಜಾತಿಗೆ ಸೇರಿದವರು ಪರಂಪರಾಗತವಾಗಿ ಮಾಡುತ್ತಿದ್ದ ಕೆಲಸಗಳನ್ನು ದಲಿತರು ಮಾಡಬೇಕೆಂದು ಸವರ್ಣಿಯರು ಈಗಲೂ ನಿರೀಕ್ಷೆ ಮಾಡುತ್ತಾರೆ. ಉದಾಹರಣೆ: ಹಲಗೆ ಬಾರಿಸುವುದು. ಕೆಲವು ಜಾತ್ರೆ ಮುಂತಾದ ಧಾರ್ಮಿಕ ಕಾರ್ಯಗಳ ಸಮಯದಲ್ಲಿ ಪ್ರಾಣಿ ವಧೆ ಮಾಡುವುದು, ಗೋರಿ ತೋಡುವುದು, ಸತ್ತ ಪ್ರಾಣಿಗಳನ್ನು ಸಾಗಿಸುವುದು ಮತ್ತು ಮಲ ಮೂತ್ರ ಮಾಡುವ (ಕಕ್ಕಸ ಮಾಡುವ) ಕೊಠಡಿ ಹಾಗೂ ಬೇಸಿನ್‌ಗಳನ್ನು ಶುಚಿಯಾಗಿಸುವುದು ಇವೆಲ್ಲ ಪಾರಂಪರಾಗತ ಕೆಲಸಗಳಲ್ಲಿ ಸೇರಿವೆ. ಒಂದು ವೇಳೆ ಅಸ್ಪೃಶ್ಯರು ಈ ಕೆಲಸವನ್ನು ಮಾಡಲು ನಿರಾಕರಿಸಿದ್ದರೆ ಅವರಿಗೆ ಕಿರುಕುಳ ತಪ್ಪಿದ್ದಲ್ಲ. ಸವರ್ಣಿಯರ ಬಲವಂತಕ್ಕೊ ಅಥವಾ ತಮ್ಮ ಸಾಮಾಜಿಕ ಹಾಗೂ ಆರ್ಥಿಕ

ಸ್ಥಿತಿಗತಿಗಳ ಕಾರಣದಿಂದಾಗಿಯೋ ಸಫಾಯಿ ಕರ್ಮಚಾರಿಗಳು ಈ ಕೆಲಸವನ್ನು ಪರಂಪರಾಗತವಾಗಿ ಮಾಡುತ್ತ ಬಂದಿರುವರು.

ಬಿ. ಬಸಲಿಂಗಪ್ಪನವರು ಪೌರಾಡಳಿತ ಮಂತ್ರಿಗಳಾಗಿದ್ದಾಗ ರಾಜ್ಯಾದ್ಯಂತ ಪ್ರವಾಸ ಮಾಡುತ್ತ ಜನರ ನಿಜ ಸ್ಥಿತಿಗಳನ್ನು ಅಭ್ಯಾಸ ಮಾಡಿದರು. ಸಮಾಜದ ಸಂಕೀರ್ಣತೆಗಳನ್ನು ಗುರುತಿಸುತ್ತ ತುಳಿಸಕ್ಕೊಳಗಾದ ಜನಸ್ತೋಮವನ್ನು ಕಣ್ಣಾರೆ ಕಂಡರು, ಈ ಸಮುದಾಯಲ್ಲಿ ಅವರಿಗೆ ಅತ್ಯಂತ ಕ್ರೂರ ಪದ್ಧತಿಯೊಂದು ಗೋಚರಿಸಿತು. ಬಸಲಿಂಗಪ್ಪನವರಿಗೆ ಬಡತನ, ಅಸ್ಪೃಶ್ಯತೆಯಲ್ಲಿ ತತ್ತರಿಸುತ್ತಿರುವ ಜನರಿಗೆ ತಲೆಯ ಮೇಲೆ ಮಲ ಹೊರಿಸುವ ಪದ್ಧತಿ ಅತ್ಯಂತ ಬರ್ಬರವೆನಿಸಿತು. ಜನರ ಬಗ್ಗೆ ವಿಶಾಲ ಭಾವನೆ ಹೊಂದಿರುವ ಹಾಗೂ ಸ್ವತಃ ನೋವನ್ನು ಅನುಭವಿಸಿರುವ ವ್ಯಕ್ತಿಗೆ ಬೇರೊಬ್ಬರ ಕಷ್ಟಗಳೂ ಕೂಡ ತನ್ನದೇ ಎನ್ನಿಸಿ ಬಿಡುತ್ತವೆ. ಅದೇ ರೀತಿ ಬಸಲಿಂಗಪ್ಪನವರು ಇಂಥ ನೀಚ ಪದ್ಧತಿಯ ನಿರ್ಮೂಲನೆಗೆ ಕ್ರಮಕೈಕೊಂಡರು. ಸರಕಾರದ ಜೊತೆಗೆ ಚರ್ಚಿಸಿದರು, ನಾಡಿನಾದ್ಯಂತ ಹೊಸ ಚಿಂತನೆಯನ್ನು ಕಾಣಿಸಿದರು, ಕೊನೆಗೂ ಈ ಪದ್ಧತಿಯನ್ನು ರದ್ದು ಮಾಡಿದರು.

ಬಸಲಿಂಗಪ್ಪನವರು ತಲೆಯ ಮೇಲೆ ಮಲ ಹೊರುವ ಪದ್ಧತಿಯನ್ನು ರದ್ದುಪಡಿಸಿದ ಇಪ್ಪತ್ತು ವರ್ಷಗಳ ನಂತರ ರಾಷ್ಟ್ರಕ್ಕೆ ಎಚ್ಚರವಾಯಿತು. ಅಂದಿನ ಪ್ರಧಾನಿ ಪಿ.ವ್ಹಿ. ನರಸಿಂಹರಾವ್ ಅವರು ಮಲ ಹೊರುವ ಪದ್ಧತಿಯನ್ನು ರದ್ದುಗೊಳಸಲು 'ಎಂಪ್ಲಾಯ್‌ಮೆಂಟ್ ಆಫ್ ಮ್ಯಾನ್ಯುಲ್ ಸ್ಕಾವೇಜಿಂಗ್ ಆ್ಯಂಡ್ ಕನ್ಸ್ಟ್ರಕ್ಷನ್ ಆಫ್ ಡ್ರೈಲ್ಯಾಟ್ರಿನ್ಸ್ ಪ್ರಾಹಿಬಿಕ್ಷನ್ ಆಕ್ಟ್ 1993' ಎಂಬ ಕಾನೂನು ಪಾಸುಮಾಡಿದರು.

ಬಸಲಿಂಗಪ್ಪನವರು ಅಂಬೇಡ್ಕರ್ ಅವರ ಚಿಂತನೆಯನ್ನು ರಕ್ತಗತ ಮಾಡಿಕೊಂಡಿದ್ದರು. ನಗರೀಕರಣದಿಂದ ಜಾತಿಯನ್ನು ತೊಡೆದು ಹಾಕಬಹುದೆಂಬ ಅಂಬೇಡ್ಕರ್ ವಾಣಿಯನ್ನು ಜಾರಿಗೊಳಿಸಲು ಪ್ರಯತ್ನಿಸಿದರು.

ಸಫಾಯಿ ಕರ್ಮಚಾರಿ ಸಮುದಾಯದವರು ತಲಾತಲಾಂತರಗಳಿಂದ ಮಾಡುತ್ತ ಬಂದ ತಮ್ಮ ವೃತ್ತಿಯಿಂದ ಅನುಭವಿಸಿದ ಸಂಕಷ್ಟಗಳೇನು? ಅವರು ನಾಗರಿಕ ಸಮಾಜದ ಶ್ರೇಯಸ್ಸಿಗಾಗಿ ದುಡಿದೂ ಅದೇ ನಾಗರಿಕ ಸಮಾಜದಲ್ಲಿ ಹೊರಗೆ, ದೂರದಲ್ಲಿ ಉಳಿದುಕೊಂಡು ಬರುವುದಕ್ಕೆ ಕಾರಣಗಳೇನು? ಅವರ ಈ ಹೊತ್ತಿನ ವೃತ್ತಿ, ಸಾಮಾಜಿಕ, ಆರ್ಥಿಕ ಸ್ಥಿತಿಗಳೇನು? ಸಮುದಾಯದ

ಮೇಲೆ ಆಗಿರುವ ಆಧುನಿಕತೆ, ಜಾಗತೀಕರಣ, ಖಾಸಗೀಕರಣಗಳ ಪ್ರಭಾವ ಎಂಥದು? ಹಲವಾರು ಸ್ಥಿತ್ಯಂತರಗಳ ನಡುವೆಯೂ ಅವರ ಸ್ಥಿತಿಗಳನ್ನು ಕುರಿತು ನನ್ನ ಅಧ್ಯಯನ ಸಮಗ್ರ ಕ್ಷೇತ್ರ ಕಾರ್ಯವನ್ನು ಆಧರಿಸಿ ಮಾಡುವ ಉದ್ದೇಶವಾಗಿದೆ.

1.1.3 ಸಂಸ್ಕೃತಿ : ಅರ್ಥ, ಪರಿಕಲ್ಪನೆ

ಮಾನವನ ಬದುಕಿಗೆ ಸಮಾಜದಷ್ಟೇ ಸಂಸ್ಕೃತಿಯೂ ಬಹು ಮುಖ್ಯವಾಗಿರುವುದರಿಂದ; ಸಂಸ್ಕೃತಿಯ ಹುಟ್ಟು, ಅರ್ಥ, ಲಕ್ಷಣ, ಅದರ ಸ್ವರೂಪ ಪ್ರಾಚೀನತೆ ಬಗೆಗೆ ಅನೇಕ ಚಿಂತಕರು ತಮ್ಮದೇ ಆದ ರೀತಿಯಲ್ಲಿ ವ್ಯಾಖ್ಯಾನಿಸಿರುವರು.

ನಮಗೆ ಅತ್ಯಂತ ಪ್ರಾಚೀನವಾದ ಸಾಂಸ್ಕೃತಿಕ ಪರಂಪರೆಯಿದೆಯಾದರೂ ಈ 'ಸಂಸ್ಕೃತಿ' ಎಂಬ ಪದವನ್ನು ತೀರ ಇತ್ತೀಚೆಗೆ ಹೆಚ್ಚಾಗಿ ಬಳಸುತ್ತಿದ್ದೇವೆ. ಇಂದು ನಾವು ವ್ಯಾಪಕವಾಗಿ ಬಳಸುತ್ತಿರುವ 'ಸಂಸ್ಕೃತಿ'ಯು ಇಂಗ್ಲಿಷನ 'Culture' 'ಪದಕ್ಕೆ ಸಂವಾದಿಯಾಗಿ ಬಳಸುತ್ತಿದ್ದೇವೆ. 'ಸಮಾಜ' ಪದದಂತೆ 'ಕಲ್ಚರ್' ಎನ್ನುವ ಪದವೂ ಲ್ಯಾಟಿನ್ ಮೂಲದ್ದಾಗಿದೆ. ಲ್ಯಾಟಿನ್ ಭಾಷೆಯ Cult (ಕಲ್ಟ) ಇಂಗ್ಲಿಷ್ ಭಾಷೆಯಲ್ಲಿ Culture ಆಗಿ ರೂಪುಗೊಂಡಿದೆ. 'ಕಲ್ಟ' ಎಂದರೆ ಭೂಮಿಯನ್ನು ಹದಗೊಳಿಸುವುದು, ಉಳಿಮೆ, ಅಭಿವೃದ್ಧಿ, ದುಡಿಮೆ, ಆರಾಧನೆ ಎಂಬ ಅರ್ಥಗಳಿವೆ."[5]

'ಸಂಸ್ಕೃತಿ' ಪದದ ನಿರ್ವಚನೆ ಅಷ್ಟು ಸುಲಭದಲ್ಲ, ಪಾಶ್ಚಾತ್ಯ ಮತ್ತು ಭಾರತೀಯ ಅನೇಕ ಜನ ವಿದ್ವಾಂಸರು ಅನೇಕ ರೀತಿಯಲ್ಲಿ ಅದನ್ನು ನಿರ್ವಚಿಸಲು ಪ್ರಯತ್ನಿಸಿದ್ದಾರೆ. ಇನ್ನೂ ಕೆಲವರು ಹೊಸದಾಗಿ ವ್ಯಾಖ್ಯಾನಗಳನ್ನು ಮಾಡುತ್ತಲೇ ಇದ್ದಾರೆ. ಕಾಲ ಬದಲಾದ ಹಾಗೆ, ಚಿಂತನೆಗಳು ಬದಲಾದ ಹಾಗೆ. ಹೊಸ ಹೊಸ ಆಲೋಚನೆಗಳು ಹುಟ್ಟಿಕೊಂಡ ಹಾಗೆ ಸಂಸ್ಕೃತಿಗೆ ವ್ಯಾಖ್ಯಾನಗಳು ಹುಟ್ಟಿಕೊಳ್ಳುತ್ತಲೇ ಇವೆ. ಸ್ಥಳೀಯ ನೆಲೆಯಿಂದ ಹಿಡಿದು ಜಾಗತಿಕ ನೆಲೆಯವರೆಗೆ 'ಸಂಸ್ಕೃತಿ' ಪದ ತನ್ನ ಬಾಹುಳ್ಯವನ್ನು ಹರಡಿದೆ.

ಪಾಶ್ಚಾತ್ಯರಲ್ಲಿ ಮ್ಯಾಥ್ಯೂ ಅರ್ನಾಲ್ಡ್‌ನೇ ಸಂಸ್ಕೃತಿ (Culture) ಎಂಬ ಪದವನ್ನು ವ್ಯಾಖ್ಯಾನಿಸಲು ಪ್ರಯತ್ನಿಸಿದ ಮೊದಲಿಗನು. ಅಲ್ಲಿಂದ ಈ ಪದಕ್ಕೆ ತುಂಬ ವ್ಯಾಪಕವಾದ ಚಾಲನೆ

ಸಿಕ್ಕಂತೆ ಕಾಣುತ್ತದೆ. ಮ್ಯಾಥ್ಯೂ ಅರ್ನಾಲ್ಡ್ ಬರೆದ 'ಸಂಸ್ಕೃತಿ ಮತ್ತು ಅರಾಜಕತೆ' (1869) ಎಂಬ ಪುಸ್ತಕದಲ್ಲಿ ಅವನು ಸಂಸ್ಕೃತಿಯ ಲಕ್ಷಣಗಳನ್ನು ಗುರುತಿಸಲು ಪ್ರಯತ್ನಿಸಿದ್ದಾನೆ. ಅವನ ಪ್ರಕಾರ "ಸಂಸ್ಕೃತಿಯೆಂಬುದು ಉದಾತ್ತ ಲಕ್ಷಣಗಳಿಂದ ಕೂಡಿದ್ದು ಅದನ್ನು ಅವನು ಹೈಕಲ್ಚರ್ ಎಂಬ ಅರ್ಥದಲ್ಲಿ ವಿವರಿಸಲು ಪ್ರಯತ್ನಿಸಿದ್ದಾನೆ. ಅದನ್ನು ನಾವು ಸುಸಂಸ್ಕೃತಿ ಎಂದು ಕರೆಯುತ್ತೇವೆ."[6] ಸಂಸ್ಕೃತಿಯು ಸುಗುಣ ಸಾಮರಸ್ಯ, ಸಮರಸ, ಸಂಪೂರ್ಣತೆಯಲ್ಲಿ ಎರಡು ಅತ್ಯುತ್ಕೃಷ್ಟ ಗುಣಗಳಿಂದ ಸಮ್ಮಿಳಿತಗೊಂಡಿರುತ್ತದೆಯೆಂಬುದು ಅರ್ನಾಲ್ಡ್‌ನ ವಾದವಾಗಿದೆ.

'ಸಂಸ್ಕೃತಿ'ಯನ್ನು ಕುರಿತು ವಿಶದವಾಗಿ ವ್ಯಾಖ್ಯಾನಿಸಿದವರಲ್ಲಿ ಡಿ.ವ್ಹಿ. ಗುಂಡಪ್ಪನವರೂ ಪ್ರಮುಖರಾಗಿದ್ದಾರೆ. ಭಾರತೀಯರಲ್ಲಿ ಅದೇ ತಾನೆ ಪಾಶ್ಚಾತ್ಯ ವಿಚಾರಧಾರೆಯಿಂದ ಕನ್ನಡದಲ್ಲಿ ಸಂಸ್ಕೃತಿ ಕುರಿತು ಚಿಂತನೆ ಪ್ರಾರಂಭವಾಗಿತ್ತು. ಸಂಸ್ಕೃತಿ ಪದದ ಮಹತ್ತು ಮತ್ತು ಪ್ರಾಬಲ್ಯವನ್ನು ಮನಗಂಡಿದ್ದ ಡಿ.ವ್ಹಿ.ಜಿ. ಯವರು ಅದನ್ನು ನಮ್ಮ ದೇಸಿ ನೆಲೆಯಿಂದ ನಿರ್ವಚಿಸಲು ಪ್ರಯತ್ನಿಸಿದರು.

ಸಂಸ್ಕೃತಿ ಪದದ ಬಗ್ಗೆ ಡಿ.ವ್ಹಿ.ಜಿ. ಯವರು ಅನೇಕ ವಿವರಗಳನ್ನು ಕೊಡುತ್ತಾರೆ. ಅವುಗಳಲ್ಲಿ ಬಹಳ ಮುಖ್ಯವಾದುದ್ದೆಂದರೆ ಸಂಸ್ಕೃತಿ ಪದಕ್ಕೂ ಸಂಸ್ಕಾರ ಪದಕ್ಕೂ ಇರಬಹುದಾದ ಸಂಬಂಧದ ಬಗೆಗಿನ ವಿಶ್ಲೇಷಣೆ ಮಹತ್ವದ್ದಾಗಿದೆ. "ಸಮ್ಯಕ್ ಕೃತಿಯಿಂದ ಸಂಸ್ಕಾರ್, ಸಂಸ್ಕಾರದಿಂದ ಸಂಸ್ಕೃತಿ ಎಂಬುದು ಅವರ ಅಭಿಪ್ರಾಯವಾಗಿದೆ."[7] ಉತ್ತಮವಾದ ನಡತೆ, ಮಾತು, ಗುಣ, ವಿಚಾರ-ವರ್ತನೆ ಈ ಎಲ್ಲವೂ ಸಂಸ್ಕೃತಿಯನ್ನು ಬಿಂಬಿಸುತ್ತದೆ. ಅವರ ಪ್ರಕಾರ ನಡೆ ನುಡಿಗಳ ಚೊಕ್ಕಟವೇ ಸಂಸ್ಕೃತಿ. ಚೊಕ್ಕಟವೆಂದರೆ ಕೊಳಕನ್ನು ತೊಳೆದು ಹಾಕುವುದು. ಸಂಸ್ಕೃತಿಯು ಮನುಷ್ಯನನ್ನು ತಿಕ್ಕಿ ತೊಳೆದು ಶುಚಿ ಮಾಡುತ್ತದೆ ಎಂಬ ವಿಚಾರದಿಂದ ಕೂಡಿದೆ.

ಪಾಶ್ಚಾತ್ಯರಲ್ಲಿ ಅರ್ನಾಲ್ಡ್ ಟೇಲರ್, ಭಾರತೀಯರಲ್ಲಿ ರವೀಂದ್ರನಾಥ ಟ್ಯಾಗೋರ, ಡಿ.ವ್ಹಿ.ಜಿ. ದೇವುಡು ಮೊದಲಾದವರು ಅಭಿಪ್ರಾಯಪಡುವಂತೆ ಸಂಸ್ಕೃತಿ ಭೂಮಿಯನ್ನು ಹದಗೊಳಿಸುವಂತೆ ನಮ್ಮ ಮನಸ್ಸನ್ನು ಹದಗೊಳಿಸಿ ಉತ್ತಮ ವಿಚಾರ ಸ್ವಭಾವವನ್ನು ಬಿತ್ತಿ ಬೆಳೆಯುವುದಾಗಿದೆ. ಸಂಸ್ಕೃತಿ ಮಾನವನ ಅಂತರಂಗದ ಬೆಳಕು ತನ್ನ ಉತ್ತಮ ನಡೆ ನುಡಿಗಳಿಂದ ತನ್ನ ಸಮಾಜವನ್ನು ಉತ್ತಮವಾಗಿಸುವನು. ಹೀಗಾಗಿ 'ಸಂಸ್ಕೃತಿ'ಯು ಮಾನವನ ಸೃಷ್ಟಿ. ಅವನು ಸಮಾಜಕ್ಕೆ ಕೊಡುಗೆಯಾಗಿಯೂ ನೀಡಿದ್ದಾನೆ ಎನ್ನಬೇಕು.

'ಕಲ್ಚರ್' ಪದವು ಮೂಲತಃ ಕೃಷಿ ಮೂಲದ್ದಾಗಿದ್ದು ಅದರಿಂದಲೇ 'ಅಗ್ರಿಕಲ್ಚರ್' ಅಂದರೆ ಭೂ ವ್ಯವಸಾಯ ಎಂದು ಬಂದಿದೆ. ಅಂದರೆ ಪ್ರಾಚೀನ ಕಾಲದ ಮಾನವನು ಕಾಡಿನಲ್ಲಿ ತನ್ನ ಅಲೆಮಾರಿತನವನ್ನು ತೊರೆದು, ನೆಲೆನಿಂತು ವ್ಯವಸಾಯದಿಂದ ಆಹಾರ ಉತ್ಪಾದನೆಗೆ ತೊಡಗಿಸಿಕೊಂಡ ಕಾಲದಲ್ಲಿಯೇ ಸಂಸ್ಕೃತಿ ಹುಟ್ಟಿತೆನ್ನಲು ಅಡ್ಡಿಯಿಲ್ಲ. ಸಂಸ್ಕೃತಿ ಬೆಳೆದಂತೆ ಈ ಪದದ ವ್ಯಾಪ್ತಿ ವಿಸ್ತಾರವಾದಂತೆ ಅನೇಕಾರ್ಥಗಳಲ್ಲಿ ಬಳಕೆಗೆ ಬಂದಂತೆ ತೋರುತ್ತದೆ. ಈಚೆಗೆ ಕಲ್ಚರ್ ಪದವು ನಾನಾ ವರ್ಗ, ಜನಾಂಗ, ಸಮಾಜ ಸಂಸ್ಥೆ, ವಿವಾಹ, ಕುಲಪದ್ಧತಿಗಳು ಉಡುಗೆ ತೊಡುಗೆ ಸಂಪ್ರದಾಯ, ಭಾಷೆ, ದೇಶ, ನಾಡು, ಧರ್ಮ ಮೊದಲಾದವುಗಳೊಂದಿಗೆ ಗುರುತಿಸುವ ಪ್ರಯತ್ನ ನಡೆಯುತ್ತಿದೆ.

ಉದಾ: ಮಾನವನ ಸದ್ಗುಣಗಳು ಸಂಸ್ಕೃತಿಯ ಶ್ರೇಷ್ಠತೆಯನ್ನು ದುರ್ಗುಣಗಳನ್ನು ವಿಕೃತಿಯನ್ನು ಅಥವಾ ಕೆಟ್ಟ ಸಂಸ್ಕೃತಿಯಾಗಿ ಪರಿಭಾವಿಸಲಾಗುತ್ತದೆ. ಹಾಗೆಯೇ ಮತ್ತೊಂದು ಮಾತಿನಲ್ಲಿ ಹೇಳುವುದಾದರೆ ಶಿಷ್ಟ ಸಂಸ್ಕೃತಿ ಮತ್ತು ಪರಿಶಿಷ್ಟ ಸಂಸ್ಕೃತಿ, ಪ್ರಧಾನ ಸಂಸ್ಕೃತಿ, ಉಪಸಂಸ್ಕೃತಿ, ದೇಶ, ನಾಡು, ಭಾಷಿಕ ನೆಲೆಯಲ್ಲಿ ಭಾರತೀಯ ಸಂಸ್ಕೃತಿ, ಪಾಶ್ಚಾತ್ಯ ಸಂಸ್ಕೃತಿ, ಕರ್ನಾಟಕ, ಮಹಾರಾಷ್ಟ್ರ, ತಮಿಳುನಾಡು, ಆಂಧ್ರಪ್ರದೇಶ ಅಥವಾ ಕನ್ನಡ, ತಮಿಳು, ತೆಲುಗು, ಮರಾಠಿ, ಸಂಸ್ಕೃತಿ, ಹಿಂದು, ಮುಸ್ಲಿಂ ಕ್ರಿಶ್ಚಿಯನ್ ಸಂಸ್ಕೃತಿ, ಕಾಡಿನ ಸಂಸ್ಕೃತಿ, ಗ್ರಾಮೀಣ ಸಂಸ್ಕೃತಿ, ಆದಿವಾಸಿ ಅಥವಾ ಬುಡಕಟ್ಟು ಸಂಸ್ಕೃತಿ ಜನಪದ ಸಂಸ್ಕೃತಿ, ನಗರ ಸಂಸ್ಕೃತಿಗಳೆಂತಲೂ, ಜಾತಿ, ಸಮುದಾಯಗಳ ನೆಲೆಯಲ್ಲಿ ಆರ್ಯ ಸಂಸ್ಕೃತಿ, ದ್ರಾವಿಡ ಸಂಸ್ಕೃತಿ, ವೈದಿಕ ಸಂಸ್ಕೃತಿ, ಗೌಡ ಸಂಸ್ಕೃತಿ, ವೀರಶೈವ ಸಂಸ್ಕೃತಿ, ಲಂಬಾಣಿ ಸಂಸ್ಕೃತಿ, ಕೆಂಬಟ್ಟೆ ಹೊಲೆಯರು, ಕುರುಬರು, ಕೊರಗರು, ಸಿದ್ದರು, ಬುಡಗ ಜಂಗಮ, ಮಾಂಗಾರುಡಿಗರು ಹಾಗೆಯೇ ಸಫಾಯಿ ಕರ್ಮಚಾರಿ (ಮೇಹತರ)ಗಳು ಹೀಗೆ ಅನೇಕ ಅಲಕ್ಷಿತ ಸಮುದಾಯಗಳು ತಮ್ಮದೇ ಸಂಸ್ಕೃತಿಯನ್ನು ಹೊಂದಿ ಬಾಳುತ್ತಿವೆ. ಆದ್ದರಿಂದ ಅವುಗಳ ಸಮಾಜೋ ಅಧ್ಯಯನ ನಡೆಯುವುದು ಅತ್ಯಗತ್ಯವಾಗಿದೆ.

1.2 ಅಧ್ಯಯನದ ಉದ್ದೇಶ

ಮಾನವನ ಸಾಮಾಜಿಕ ಸ್ಥಿತಿಗತಿಗಳನ್ನು ಸಮಗ್ರವಾಗಿ ತಿಳಿಯಬೇಕಾದರೆ, ಸಮಾಜದ ವಿವಿಧ ಸಮುದಾಯಗಳ ಸಮಾಜೋ ಆರ್ಥಿಕ, ಸಾಂಸ್ಕೃತಿಕ ಹಿನ್ನೆಲೆ ಮತ್ತು ಅವುಗಳ

ಸ್ವರೂಪವನ್ನು ಕುರಿತು ಅಧ್ಯಯನ ಮಾಡಬೇಕಾದುದು ಅತ್ಯಂತ ಅಗತ್ಯವಾಗಿದೆ. ಮಾನವ ಮತ್ತು ಅವನ ಸಂಸ್ಕೃತಿಯನ್ನು ಕುರಿತು ಅಭ್ಯಸಿಸುವ ಎಲ್ಲ ಮಾನವಿಕ ವಿಜ್ಞಾನಿಗಳು ಇಂದು ತಮ್ಮದೇ ದೃಷ್ಟಿಕೋನದಿಂದ ಸಮಾಜದ ವಿವಿಧ ಸಮುದಾಯಗಳ ಅಧ್ಯಯನವನ್ನು ಕೈಕೊಂಡು, ಅವುಗಳು ಹೊಂದಿರುವ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ವೈಶಿಷ್ಟ್ಯವನ್ನು ಗುರುತಿಸುತ್ತಿರುವರು. ಮೇಲುನೋಟಕ್ಕೆ ಬೇರೆ ಬೇರೆ ಸಂಸ್ಕೃತಿಗಳ ವೈಶಿಷ್ಟ್ಯ ಒಂದೇ ರೀತಿಯಾಗಿ ಕಂಡುಬಂದರೂ, ಆ ವೈಲಕ್ಷಣಗಳನ್ನು ಸಮಾಜೋ ಆರ್ಥಿಕ ದೃಷ್ಟಿಯಿಂದ ನೋಡಿದರೆ ಅವುಗಳ ಕಾರ್ಯ ಚಟುವಟಿಕೆಯ ವೈವಿಧ್ಯ ಬೇರೆ ಬೇರೆಯಾಗಿರುವುದು ಕಂಡುಬರುತ್ತದೆ. ನಿರ್ದಿಷ್ಟ ಸಮುದಾಯವೊಂದರ ಕುರಿತಾದ ಅಧ್ಯಯನದಲ್ಲಿ ಆ ಸಮುದಾಯದ ಆಚಾರ, ರೀತಿ ನೀತಿ, ಜೀವನ ವಿಧಾನ, ನಂಬಿಕೆ, ಸಂಪ್ರದಾಯ ಪದ್ಧತಿ ಅವುಗಳು ಕೈಕೊಂಡು ಬಂದಿರುವ ಉದ್ಯೋಗದ ಮತ್ತು ಅವುಗಳ ಆರ್ಥಿಕ ಪರಸ್ಥಿತಿಗಳಿಂದ ಸಾಮಾಜಿಕ ವ್ಯವಸ್ಥೆಯಲ್ಲಿ ಬೇರೆಯದೇ ಸ್ಥಾನಮಾನ ಹೊಂದಿರುತ್ತವೆ.

ಭಾರತೀಯ ಸಾಮಾಜಿಕ ವ್ಯವಸ್ಥೆ ಏಕ ರೀತಿಯದ್ದಾಗಿಲ್ಲ. ಅದು ಸಂಕೀರ್ಣ ಸ್ವರೂಪದಿಂದ ಕೂಡಿದೆ. ಸುಮಾರು ಐದು ಸಾವಿರ ವರ್ಷಗಳಿಗೂ ಮಿಗಿಲಾದ ಇತಿಹಾಸವನ್ನು ಹೊಂದಿರುವ ಭಾರತೀಯ ಸಮಾಜವು ವರ್ಣ, ಜಾತಿ, ವರ್ಗಗಳಾಧಾರಿತವಾಗಿ ರಚನೆಗೊಂಡಿರುವುದು. ಈ ವರ್ಣ, ಜಾತಿಗಳ ಜನರ ಜೀವನ ವಿಧಾನ, ಉದ್ಯೋಗಗಳು ಬೇರೆ ಬೇರೆಯಾಗಿರುವುದರಿಂದ ಅವರಿಗೆ ವಿಭಿನ್ ಸಾಮಾಜಿಕ ಸ್ಥಾನಮಾನಗಳಿವೆ.

ಉದಾ: ಸಮಾಜದ ಉನ್ನತ ಶ್ರೇಣಿಯಲ್ಲಿರುವ ಬ್ರಾಹ್ಮಣನು ವೇದಾಧ್ಯಯನ, ಯಜ್ಞ, ಪೂಜಾದಿಗಳನ್ನು ಮಾಡುವನು. ಅಲ್ಲದೆ ಆತನು ಶಿಕ್ಷಣದ ಫಲಾನುಭವಿಯಾಗಿದ್ದರಿಂದ ಸಹಜವಾಗಿಯೇ ಆತನು ಸಾಮಾಜಿಕವಾಗಿ ಉನ್ನತ ಶ್ರೇಣಿಯಲ್ಲಿರುತ್ತಾನೆ. ಆನಂತರ ಕ್ಷತ್ರೀಯ, ವೈಶ್ಯರು ಬರುತ್ತಾರೆ. ಜಾತಿ ಶ್ರೇಣಿಯ ಅತ್ಯಂತ ಕೆಳಸ್ತರದಲ್ಲಿರುವವನೇ ಶೂದ್ರ ಅಥವಾ ದಲಿತನು ಮಾತ್ರ. ಇದರಲ್ಲಿ ಮೇಲಿನ ಮೂರು ಶ್ರೇಣಿಯಲ್ಲಿರುವವರಿಗೆ ಅವರದೇ ಆದ ಉದ್ಯೋಗ ಮತ್ತು ಆದಾಯ ಮೂಲಗಳಿರುವವು. ಆದರೆ ಜಾತಿ ಶ್ರೇಣಿಯ ಕೆಳಗೆ ಇರುವ ಶೂದ್ರ ಅಥವಾ ದಲಿತರಿಗೆ ಯಾವುದೇ ನಿರ್ದಿಷ್ಟವಾದ ಸ್ವಂತ ಉದ್ಯೋಗವಾಗಲಿ, ಆದಾಯ ಮೂಲವಾಗಲಿ ಇಲ್ಲ. ಆತನು ಮೇಲಿನ ಶ್ರೇಣಿಯವರ ಕೆಲಸಕಾರ್ಯಗಳನ್ನು ಮಾಡುತ್ತ ಅವರ ಸೇವಕರಾಗಿ ಗುಲಾಮಿ ಜೀವನ ನಡೆಸಬೇಕು. ಹೀಗಾಗಿ ದಲಿತರು ತಮ್ಮ ಸ್ವಂತಿಕೆಯನ್ನು ಕಳೆದುಕೊಂಡು ಹೀನ ಸ್ಥಿತಿಯಲ್ಲಿ

ಸಾವಿರಾರು ವರ್ಷಗಳಿಂದ ಬದುಕುತ್ತಿರುವುದನ್ನು ಕಾಣಬಹುದಾಗಿದೆ. ಅಲ್ಲದೆ ನಮ್ಮ ಪ್ರಾಚೀನ ವೇದಗಳು, ಸ್ಮೃತಿಗಳು, ಭಗವದ್ಗೀತೆ ಮುಂತಾದ ಗ್ರಂಥಗಳು ಭಾರತೀಯ ಸಮಾಜದ ಜಾತಿ ವ್ಯವಸ್ಥೆಯನ್ನು ಸಮರ್ಥವಾಗಿ ಪ್ರತಿಪಾದಿಸಿಕೊಂಡು ಬಂದಿರುವುದು ಕೂಡ. ಸಾವಿರಾರು ವರ್ಷಗಳ ಕಾಲ ಭಾರತವನ್ನು ಆಳಿದ ಆರ್ಯರು, ವೈದಿಕರು ಅಥವಾ ವೈದಿಕ ಧರ್ಮವನ್ನು ಪೋಷಿಸಿಕೊಂಡ ರಾಜರು ಜಾತಿ ವ್ಯವಸ್ಥೆಯನ್ನು ಅತ್ಯಂತ ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬಂದಿರುವುದನ್ನು ಚರಿತ್ರೆಯಲ್ಲಿ ಕಾಣುತ್ತೇವೆ. ನಮ್ಮ ಚರಿತ್ರೆಯೂ ಸಹ ದಲಿತರ ಸಮಾಜೋ ಸಾಂಸ್ಕೃತಿಕ ವಿಶಿಷ್ಟತೆಯನ್ನು ಎಲ್ಲೂ ದಾಖಲಿಸಿಲ್ಲ. ದಲಿತರು, ಅಸ್ಪೃಶ್ಯರು ಭಾರತದ ಮೂಲ ನಿವಾಸಿಗಳೆಂಬುದರಲ್ಲಿ ಎರಡು ಮಾತಿಲ್ಲ. ಇಲ್ಲಿನ ಮೂಲ ನಿವಾಸಿಗಳಾದ ದ್ರಾವಿಡರು ಪರಕೀಯರಾದ ಆರ್ಯರ ದೃಷ್ಟಿಯಲ್ಲಿ ಅಸ್ಪೃಶ್ಯರಾಗಿ ಗೋಚರಿಸಿದರು. ಸಾವಿರಾರು ವರ್ಷಗಳಿಂದ ಇವರ ಮೇಲೆ ಅನೇಕ ದಾಳಿಗಳು ನಡೆದು ಅವರ ಸಾಮಾಜಿಕ, ಸಾಂಸ್ಕೃತಿಕ ವಿಶಿಷ್ಟತೆಯನ್ನೇ ಪಲ್ಲಟಗೊಳಿಸಿದರು. ಅವರನ್ನು ಶೂದ್ರ, ಪಂಚಮ, ಚಾಂಡಾಲ, ಅಂತ್ಯಜ, ಮ್ಲೇಚ, ಹೊಲೆಯ, ಹರಿಜನ ಮೊದಲಾದ ಹೆಸರುಗಳಿಂದ ಇತಿಹಾಸದಲ್ಲಿ ಗುರುತಿಸಿಕೊಂಡು ಬರಲಾಗಿದೆ. ಭಾರತದ ಚರಿತ್ರೆಯ ವಿವಿಧ ಕಾಲಘಟ್ಟದಲ್ಲಿ ಇವರು ಮೇಲು ಶ್ರೇಣಿಗಳಿಂದ ತುಳಿತಕ್ಕೊಳಪಟ್ಟವರು ಇಂದೂ ಅಸ್ಪೃಶ್ಯತೆಯ ಭೂತಕ್ಕೆ ಬಲಿಯಾಗಿ ನರಳುತ್ತಿದ್ದಾರೆ. ಈ ಬಗೆಯ ಸಾಮಾಜಿಕ, ಆರ್ಥಿಕ ತುಳಿತಕ್ಕೊಳಗಾದ ಅಸ್ಪೃಶ್ಯ ಸಮುದಾಯಗಳಲ್ಲಿ ಸಫಾಯಿಕರ್ಮಚಾರಿ ಅಥವಾ ಭಂಗಿ ಸಮುದಾಯವೂ ಒಂದಾಗಿದೆ. ಸಮಾಜ ವ್ಯವಸ್ಥೆಯಲ್ಲಿ ಈ ಸಮುದಾಯವು ತೀರ ಕೆಳಸ್ತರದಲ್ಲಿರುವುದು.

ಸಾಮಾಜಿಕ ವ್ಯವಸ್ಥೆಯನ್ನು ಕುರಿತು ಅಧ್ಯಯನ ಮಾಡುವ ಸಂದರ್ಭದಲ್ಲಿ 'ಸ್ತರವಿನ್ಯಾಸ' ಎಂಬ ಪದ ಬಳಸುವುದನ್ನು ನೋಡುತ್ತೇವೆ. ಆದರೆ ಈ ಪದವು ಮೂಲದಲ್ಲಿ ಭೂಗರ್ಭಶಾಸ್ತ್ರಕ್ಕೆ ಸಂಬಂಧಿಸಿದುದಾಗಿದೆ. ಅಲ್ಲಿ "ಶಿಲೆಯಲ್ಲಿನ ಒಂದು ಪದರದ ಮೇಲೆ ಮತ್ತೊಂದು ಪದರು ಬಂದು ಕುಳಿತಿರುವುದನ್ನು ಗುರುತಿಸಲು ಈ ಪದವನ್ನು ಬಳಸಲಾಗುತ್ತದೆ"[5]. ಆದರೆ ಭೂಗರ್ಭ ವಿಜ್ಞಾನವು ಪ್ರಸ್ತಾಪಿಸುವ ಸ್ತರ ವಿನ್ಯಾಸಕ್ಕೂ ಸಾಮಾಜಿಕ ಅಧ್ಯಯನಗಳಲ್ಲಿ ಉಪಯೋಗಿಸಲಾಗುವ ಸಾಮಾಜಿಕ ಸ್ತರ ವಿನ್ಯಾಸಕ್ಕೂ ಬಹಳ ವ್ಯತ್ಯಾಸವಿದೆ. ಶಿಲೆಯಲ್ಲಿ ಅನುಕ್ರಮವಾಗಿರುವ ಪದರುಗಳ ನಡುವೆ ಯಾವುದೇ ಬಗೆಯ ಅಂತರ್ ಸಂಬಂಧ (Inter connection) ಇರುವುದಿಲ್ಲ. ಆದರೆ ಸಾಮಾಜಿಕ ಸ್ತರ ವಿನ್ಯಾಸಗಳ ನಡುವೆ ಸಾಮಾಜಿಕ ಸಂಬಂಧಗಳಿರುತ್ತವೆ. ಪ್ರತಿಯೊಂದು

ಸಾಮಾಜಿಕ ಜಾತಿ, ವರ್ಗವು ಸಹ ಸ್ತರ ವಿನ್ಯಾಸ ವ್ಯವಸ್ಥೆಯ ಒಂದು ಭಾಗವೂ ಆಗಿರುತ್ತದೆ ಎಂಬುದನ್ನು ಗಮನಿಸಬೇಕು.

ಸಾಮಾಜಿಕ ಸ್ತರ ವಿನ್ಯಾಸದ ಸ್ತರಗಳ ನಡುವಿನ ಅಂತರ್ ಸಂಬಂಧವು ವಿವಿಧ ಸ್ತರಗಳ ನಡುವಿರುವ ಮೇಲು-ಕೀಳು ಭಾವನೆಗಳ ಬಾಂಧವ್ಯಗಳನ್ನು ಒಳಗೊಂಡಿರುತ್ತದೆ. ಸಾಮಾನ್ಯವಾಗಿ ಅವು ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ಕೆಲವೊಮ್ಮೆ ಧಾರ್ಮಿಕವಾದವುಗಳೂ ಆಗಿರುತ್ತವೆ. ಆದ್ದರಿಂದ ತಮ್ಮ ಅಸ್ತಿತ್ವದ ದೃಷ್ಟಿಯಿಂದ ಅವು ಸಂಘರ್ಷಗಳನ್ನು ಹೊಂದಿರುತ್ತವೆ. ಆ ಸಮುದಾಯಗಳ ನಿಗದಿತ ವರ್ಗ ಸ್ಥಾನವು (Class Position) ಅವು ಅಷ್ಟಾಗಿ ಸ್ಪಷ್ಟವಾಗಿ ಗ್ರಹಿಸದಿದ್ದರೂ ಅವುಗಳ ವರ್ತನೆಯ ಮೇಲೆ ಗಮನಾರ್ಹವಾದ ಪ್ರಭಾವ ಬೀರಿರುತ್ತದೆ ಎಂದು ಹೇಳಬಹುದು.

ಸಾಮಾಜಿಕ, ಧಾರ್ಮಿಕ, ರಾಜಕೀಯ ವಿಷಮ ಸ್ಥಿತಿಯನ್ನು ಸಂಘರ್ಷವನ್ನು ಎದುರಿಸುತ್ತಲೇ ತಮ್ಮ ಪೂರ್ವಕಾಲದ ಹಾಗೂ ಇಂದಿನ ಸ್ಥಿತಿಗತಿಗಳನ್ನು ಅವಲೋಕಿಸುವ ಅಗತ್ಯವನ್ನು ಕಾಣುವುದು ವಾಸ್ತವ. ಅಶಕ್ತರು, ಅಲಕ್ಷಿಸಲ್ಪಟ್ಟವರನ್ನು ಕುರಿತು ಚರ್ಚಿಸುವ, ಚಿಂತಿಸುವ, ಸಂಶೋಧನಾಧ್ಯಯನ ನಡೆಸುವ ಜರೂರಿದೆ. ದೇಶದ ಉದ್ದಗಲಕ್ಕೂ ಶೋಷಿತರ, ಅಸ್ಪೃಶ್ಯರ ಮೇಲೆ ನಿರಂತರ ಹಲ್ಲೆ, ಹತ್ಯಾಕಾಂಡ, ದೌರ್ಜನ್ಯ, ಕೊಲೆ, ನಿಂದನೆ, ಅಪಮಾನ ಮೊದಲಾದ ಘಟನೆಗಳು ನಿತ್ಯವೂ ಒಂದಲ್ಲ ಒಂದು ಕಡೆಗಳಲ್ಲಿ ನಡೆಯುತ್ತಿರುತ್ತವೆ. ದಿನಪತ್ರಿಕೆ, ಸುದ್ದಿ ಮಾಧ್ಯಮಗಳಲ್ಲಿ ಶೋಷಿತರ ಕುರಿತ ಸಂಗತಿ ಇದ್ದೇ ಇರುತ್ತದೆ. ಈ ಬಗೆಯ ನಾನಾ ಸಂಕಷ್ಟಗಳಲ್ಲಿರುವ ದಲಿತರಲ್ಲಿಯೇ ದಲಿತರಾಗಿ ಅಸ್ಪೃಶ್ಯತೆ, ಅಪಶಕುನಗಳಂಥ ಮೌಢ್ಯಗಳಿಗೆ ಬಲಿಯಾಗಿ ನಿತ್ಯವೂ ಅಪಮಾನದ ಬೇಗೆಯಲ್ಲಿ ಬೇಯುವ ಬದುಕು ನಿಜಕ್ಕೂ ಶೋಚನೀಯ.

ಅಸಮಾನತೆ, ಹಿಂಸೆ, ದೈಹಿಕ ಹಲ್ಲೆ, ಶೋಷಣೆ, ಮೋಸಗೊಳಿಸುವಲ್ಲಿ ಮೇಲ್ಜಾತಿಯವರ ಪಾತ್ರ, ಮೇಲ್ವರ್ಗದವರು ಇಷ್ಟೊಂದು ಅವಮಾನಗೊಳಿಸಲು ಕಾರಣಗಳೇನು? ಅವರ ಸಾಮಾಜಿಕ ಹೀನ ಸ್ಥಿತಿಗೆ ಇದ್ದಿರುವ ಈ ಸಾಮಾಜಿಕ ನ್ಯಾಯವನ್ನು ಸರಿಪಡಿಸಲು ಅವಿರತ ಹೋರಾಟ ಇನ್ನೂ ಸಾಗುತ್ತಿದ್ದು ಸಫಾಯಿಕರ್ಮಚಾರಿ ಸಮುದಾಯದ ಮೇಲಿನ ದೌರ್ಜನ್ಯ ಇಷ್ಟಕ್ಕೆ ನಿಂತಿಲ್ಲ. ಇವರ ಸ್ಥಿತಿ ಕರ್ನಾಟಕದಲ್ಲಿ ಮಾತ್ರವಲ್ಲ, ಹೊರಗೂ ಸಫಾಯಿಕರ್ಮಚಾರಿಗಳ ಬದುಕು ಹೀನಾಯಾವಾಗಿರುವುದು ಗಮನಾರ್ಹ. ಇಷ್ಟೆಲ್ಲ ಅವಮಾನ, ಹಿಂಸೆ, ಶೋಷಣೆಯನ್ನು

ಅನುಭವಿಸುತ್ತಿರುವುದಕ್ಕೆ ಈ ಸಮುದಾಯ ಹಿಂದಿನಿಂದಲೂ ಅನುಸರಿಸಿಕೊಂಡು ಬಂದಿರುವ ವೃತ್ತಿಯೇ ಕಾರಣವಾಗಿದೆ.

ಸಫಾಯಿಕರ್ಮಚಾರಿ ಸಮುದಾಯವು ಭಾರತದ ಎಲ್ಲೆಡೆಯೂ ನೆಲೆಸಿರುವುದನ್ನು ಕಾಣುತ್ತೇವೆ. ಅಷ್ಟೇ ಅಲ್ಲದೆ ಈ ಸಮುದಾಯವು ಅತ್ಯಂತ ಪ್ರಾಚೀನವಾದ ಸಮುದಾಯಗಳಲ್ಲೊಂದಾಗಿದೆ. ಪ್ರಾಚೀನ ಕಾಲದಲ್ಲಿ ಮೇಲ್ವರ್ಣದವರಾದ ಆರ್ಯರು, ವೈದಿಕರು, ಇತಿಹಾಸ ಕಾಲದಲ್ಲಿ ಪ್ರಭುತ್ವ, ಅಧಿಕಾರಿಶಾಹಿ, ಮೇಲ್ವರ್ಗ, ಶ್ರೀಮಂತರು, ಮಧ್ಯಕಾಲೀನದಲ್ಲಿ ಜಮೀನ್ದಾರಿಗಳು ಸ್ವಾತಂತ್ರ್ಯಪೂರ್ವದಲ್ಲಿ ಬ್ರಿಟಿಷಶಾಹಿಯ ತಪ್ಪು ಧೋರಣೆಗಳಿಂದ ಹೀಗೆ ಇತಿಹಾಸದುದ್ದಕ್ಕೂ ಸಫಾಯಿ ಕರ್ಮಚಾರಿ ಸಮುದಾಯವು ದಮನಕ್ಕೊಳಗಾಗುತ್ತಲೇ ಬಂದಿದೆ. ಅವರ ಸಾಮಾಜಿಕ, ಆರ್ಥಿಕ ಪರಸ್ಥಿತಿಯಂತೂ ಅತ್ಯಂತ ಶೋಚನೀಯದ್ದಾಗಿದೆ. ವಾಸಿಸುವುದಕ್ಕೆ ಭದ್ರವಾದ ಮನೆಯಿಲ್ಲ. ಉಳುಮೆಗೆ ಭೂಮಿಯಿಲ್ಲ. ಊರ ಹೊರಗೆ ನಾಯಿ, ಹಂದಿಗಳು ನೆಲೆಸುವ ಕೊಳಚೆ ಪ್ರದೇಶದಲ್ಲಿ ಊರಿನಿಂದ ಬೇರ್ಪಟ್ಟು ಅನಾರೋಗ್ಯಕರ ವಾತಾವರಣದಲ್ಲಿ ನಾಗರಿಕ ಸೌಲಭ್ಯಗಳಿಂದ ವಂಚಿತರಾಗಿ ಹೀನವಾಗಿ ಬದುಕು ದೂಡುತ್ತಲೇ ಈ ಸಮುದಾಯ ಇತಿಹಾಸದ ಹೆಜ್ಜೆ ತುಳಿಯುತ್ತಲೇ ಬಂದಿದೆ.

ಕರ್ನಾಟಕದ ಎಲ್ಲ ಜಿಲ್ಲೆ, ನಗರ ಮತ್ತು ಅರೆನಗರಗಳಲ್ಲಿ ಈ ಜನರ ನೆಲೆ ಕಾಣುತ್ತೇವೆ. ಗ್ರಾಮೀಣ ಪ್ರದೇಶದಲ್ಲಿ ಇವರ ಇರುವಿಕೆ ತೀರ ಕ್ವಚಿತ್ತ. ಇದಕ್ಕೆ ಅವರು ಮಾಡುವ ವೃತ್ತಿಯೂ ಕಾರಣವಾಗಿದೆ. ಬೆಳಗಾಗುತ್ತಲೇ ನಾಗರಿಕರ, ಶ್ರೀಮಂತರ ಮನೆಯ ಮಲ ಸ್ವಚ್ಛಗೊಳಿಸಿ ಅದನ್ನು ತಲೆ ಮೇಲೆ ಹೊತ್ತು ಊರ ಹೊರಗೆ ಸಾಗಿಸಬೇಕು. ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯ ಬಂದ ಸುಮಾರು ಮೂರು ದಶಕಗಳವರೆಗೂ ಈ ಸಮುದಾಯದತ್ತ ಯಾರೂ ಆಲೋಚಿಸಿರಲಿಲ್ಲ. ಎಪ್ಪತ್ತರ ದಶಕದಲ್ಲಿ ದಿ. ದೇವರಾಜ ಅರಸರ ಮಂತ್ರಿಮಂಡಲದಲ್ಲಿ ಸಚಿವರಾಗಿದ್ದ ದಿ.ಬಿ. ಬಸವಲಿಂಗಪ್ಪನವರು ವಿಧಾನಸಭೆಯಲ್ಲಿ ಮೊದಲಬಾರಿಗೆ ಭಂಗಿ ಸಮುದಾಯದ ಕೆಲಸ, ಅವರ ಸಮಾಜೋ ಆರ್ಥಿಕ ಇತರ ಸ್ಥಿತಿಗತಿ ಬಗ್ಗೆ ಬಹು ಸುದೀರ್ಘವಾಗಿ ಚರ್ಚಿಸಿದರು. ಭಂಗಿಗಳೂ ಎಲ್ಲರಂತೆ ಮನುಷ್ಯರಾಗಿದ್ದು, ಮಾನವನೇ ಮಾನವನ ಮಲವನ್ನು ತಲೆ ಮೇಲೆ ಹೊರುವ ಪದ್ಧತಿ ನಮ್ಮಲ್ಲಿ ಬಿಟ್ಟರೆ ಪ್ರಪಂಚದ ಯಾವ ನಾಗರಿಕ ದೇಶಗಳಲ್ಲಿಯೇ ಇಲ್ಲ. ಭಾರತದಲ್ಲಿ ಮಾತ್ರ ಅದಿನ್ನೂ ಜೀವಂತವಾಗಿರುವುದು ಅವಮಾನಕರವೆಂದು ಹೋರಾಡಿ, ಭಂಗಿಗಳು ತಲೆ ಮೇಲೆ ಮಲ ಹೊರುವ ಪದ್ಧತಿಯನ್ನು ನಿಷೇಧಗೊಳಿಸಿದರು. ಅಲ್ಲದೆ ಅವರನ್ನು ಸಫಾಯಿಕರ್ಮಚಾರಿಗಳೆಂದು

ಕರೆಯಬೇಕೆಂದು ಹೇಳಿದರು. ಇಡೀ ನಾಗರಿಕರನ್ನು ಬುದ್ಧಿಜೀವಿ, ಚಿಂತಕರನ್ನು ಈ ಸಮುದಾಯದತ್ತ ದೃಷ್ಟಿ ಹಾಯಿಸುವಂತೆ ಮಾಡಿದರೆಂದು ಹೇಳಬೇಕು.

ವಿಪರ್ಯಾಸವೆಂದರೆ ಸ್ವಾತಂತ್ರ್ಯ ಬಂದು ಆರು ದಶಕಗಳು ಗತಿಸಿದರೂ ಸಫಾಯಿ ಕರ್ಮಚಾರಿಗಳ ಸಾಮಾಜಿಕ, ಆರ್ಥಿಕ ಸ್ಥಿತಿಯಲ್ಲಿ ಯಾವುದೆ ಮಹತ್ವದ ಬದಲಾವಣೆಗಳಾಗಿಲ್ಲ. ಅದೇ ಸಾಮಾಜಿಕ ಅವಮಾನ, ಶೋಷಣೆ, ಬಡತನ, ಮೌಢ್ಯತೆಗಳಿಂದಲೇ ಬದುಕುತ್ತಿದ್ದಾರೆ. ಇದಕ್ಕೆ ಗುಲಬರ್ಗಾ ಜಿಲ್ಲೆಯಲ್ಲಿರುವ ಸಫಾಯಿ ಕರ್ಮಚಾರಿ (ಭಂಗಿ)ಗಳು ಹೊರತಾಗಿಲ್ಲ. ಈ ಸಮುದಾಯದ ಕುರಿತಾಗಿ ಅಲ್ಲಲ್ಲಿ ಪತ್ರಿಕೆಗಳಲ್ಲಿ ಅಲ್ಪಸ್ವಲ್ಪ ಸುದ್ದಿ, ನಿಯತಕಾಲಿಕಗಳಲ್ಲಿ ಪರಿಚಯಾತ್ಮಕ ಲೇಖನಗಳನ್ನು ಹೊರತುಪಡಿಸಿದರೆ ಇವರ ಸಾಮಾಜಿಕ, ಆರ್ಥಿಕ, ಸಂಸ್ಕೃತಿ ಸಾಹಿತ್ಯ, ಸಂಸ್ಕೃತಿ ಹಾಗೂ ಮತ್ತಿತರ ನೆಲೆಗಳ ಕುರಿತಾಗಿ ಅಷ್ಟೊಂದು ಅಧ್ಯಯನಗಳಾಗಿಲ್ಲ. ಹೀಗಾಗಿ ಪ್ರಸ್ತುತವಾಗಿ ಗುಲಬರ್ಗಾ ಜಿಲ್ಲೆಯನ್ನು ಅನುಲಕ್ಷಿಸಿ 'ಕರ್ನಾಟಕ ಸಫಾಯಿ ಕರ್ಮಚಾರಿಗಳ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳು' ಕುರಿತು ಸಂಶೋಧನಾಧ್ಯಯನ ಕೈಕೊಳ್ಳಲು ಉದ್ದೇಶಿಸಿದ್ದೇನೆ.

1.3 ಅಧ್ಯಯನ ವಿಧಾನ

ಸಮಾಜದ ಮೂಲ ಉದ್ದೇಶವು ಸಹಜೀವನದಿಂದ ಪ್ರಾರಂಭವಾಯಿತಾದರೂ ಮಾನವ ಯಾವಾಗ ಉತ್ಪಾದನೆ ಪ್ರಾರಂಭಿಸಿದನೋ, ಆವಾಗ ಅವರು ಸಮಾಜದ ಮೇಲೆ ತನ್ನ ನಿಯಂತ್ರಣ ಹೊಂದಲು ನಿರ್ಧರಿಸಿದನು. ಅದರಲ್ಲೂ ಆಸ್ತಿಯ ಒಡೆತನ ಅವನನ್ನು ಮತ್ತಷ್ಟು ಆಶಾವಂತನನ್ನಾಗಿ ಮಾಡಿತು. ಇಡೀ ಸಮಾಜವನ್ನು ತನ್ನ ಹಿಡಿತದಲ್ಲಿಟ್ಟುಕೊಂಡು ಬಲಪ್ರಯೋಗ, ಧರ್ಮ, ಸಂಪ್ರದಾಯಗಳ ಹೆಸರಿನಲ್ಲಿ ವ್ಯವಸ್ಥೆಯನ್ನು ಒಡೆದು ಆಳಲು ಪ್ರಾರಂಭಿಸಿರಬೇಕು. ಇದರ ಪರಿಣಾಮವೇ ಸಮಾಜದಲ್ಲಿ ವರ್ಣ, ಜಾತಿ, ವರ್ಗ ಶ್ರೇಣಿಗಳು ಹುಟ್ಟಲು ಕಾರಣಗಳಾದವು. ಬಲವಂತರು, ಉಳ್ಳವರು, ಉಚ್ಚ ವರ್ಣ ವರ್ಗದವರೆನಿಸಿದರೆ ಬಲಹೀನರು ದುರ್ಬಲರು. ಬಡವರು ಶೋಷಿತರು, ಅಸ್ಪೃಶ್ಯರು ಗುಲಾಮರಾಗಿ ಬಾಳಲು ತೊಡಗಿದರು. ನಮ್ಮ ಸಾಮಾಜಿಕ, ಧಾರ್ಮಿಕ ಕಟ್ಟಳೆಗಳು ಬಲಿಷ್ಠವಾದಂತೆ ಈ ವರ್ಗಗಳ ಸುತ್ತಲೂ ಕಂದಕಗಳು ನಿರ್ಮಾಣಗೊಂಡವು. ಅವರವರಿಗೆ ಇಂತಿಂತಹ ವೃತ್ತಿಗಳೆಂದು ನಿರ್ಧರಿಸಲ್ಪಟ್ಟವು. ಅವರಾರೂ ತಮ್ಮ ವೃತ್ತಿ, ಜಾತಿ

ಗಡಿಗಳನ್ನು ದಾಟುವಂತಿಲ್ಲ. ಹಾಗೆ ದಾಟಲು ಪ್ರಯತ್ನಿಸಿದರೆ ಶಿಕ್ಷೆ, ಪಾಪ ನರಕಗಳ ಭಯದ ಸೆರೆಯಲ್ಲಿ ಬಂಧಿಸಲ್ಪಟ್ಟರು. ವೃತ್ತಿಗಳು ಜಾತಿಗಳಾಗಿ ಜಾತಿಗಳೇ ಮನುಷ್ಯನ ಸುತ್ತಲೂ ನಿರ್ಮಿಸಿದ ಬೇಲಿಗಳಾಗಿ ಇವತ್ತಿಗೂ ಅವುಗಳಿಂದ ಇಂತಹವರು ಬಿಡುಗಡೆ ಪಡೆದಿಲ್ಲ. ಅವರಲ್ಲಿ ಸಫಾಯಿ ಕರ್ಮಚಾರಿಗಳೂ (ಭಂಗಿಗಳು) ಹೊರತಾಗಿಲ್ಲ. ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಕೆಲವು ಸಮಸ್ಯೆಗಳಿಗೆ ಅಧ್ಯಯನದಲ್ಲಿ ಉತ್ತರ ಕಂಡುಕೊಳ್ಳಲು ಪ್ರಯತ್ನಿಸಲಾಗಿದೆ.

1. ಸಪಾಯಿ ಕರ್ಮಚಾರಿಗಳ ಅಸಮಾನತೆಗೆ ಇದ್ದಿರುವ ಕಾರಣಗಳು ಅವರ ವೃತ್ತಿ ಸಾಮಾಜಿಕ, ಆರ್ಥಿಕ ಸ್ತರೀಕರಣ.

2. ಸಫಾಯಿ ಕರ್ಮಚಾರಿ ಸಮುದಾಯದ ಮೂಲ ಬೆಳವಣಿಗೆ, ಲಕ್ಷಣಗಳು ಮತ್ತು ಚರಿತ್ರೆಯಲ್ಲಿ ಈ ಸಮುದಾಯದ ಸ್ಥಾನಮಾನ ಕುರಿತು ವಿವರಿಸಿಕೊಳ್ಳುವುದು.

3. ಪ್ರಾಚೀನ. ಮಧ್ಯಕಾಲಿನ ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಕಾಲದಲ್ಲಿ ಸಫಾಯಿ ಕರ್ಮಚಾರಿಗಳ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳಲ್ಲಿ ಉಂಟಾಗಿರಬಹುದಾದ ಬದಲಾವಣೆಗಳ ಕುರಿತು ವಿಶ್ಲೇಷಣೆ.

4. ಕೇಂದ್ರ, ರಾಜ್ಯ ಹಾಗೂ ಸ್ಥಳೀಯ ಸರಕಾರಗಳು ದಮನಿತ ಸಫಾಯಿ ಕರ್ಮಚಾರಿಗಳ ಅಭಿವೃದ್ಧಿಗೆ ಆಯೋಜಿಸಿದ ಯೋಜನೆಗಳು ವಸತಿ ಆರೋಗ್ಯ, ಶಿಕ್ಷಣ, ಉದ್ಯೋಗ ಖಾತ್ರಿ ಇವುಗಳಿಗೆ ಸಂಬಂಧಿಸಿದ ಅಂಕಿ ಅಂಶಗಳ ಆಧಾರದ ಮೇಲೆ ಪ್ರಗತಿಯ ನೋಟದ ವಿವರಣೆ.

5. ಸಫಾಯಿ ಕರ್ಮಚಾರಿಗಳ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳಂತೆ ಇತರ ಅಂದರೆ ಅವರ ನೆಲೆ, ವಲಸೆ, ಸ್ಥಳೀಯ ಸಂಸ್ಕೃತಿಗಳಲ್ಲಿ ಬೆರೆಯುವಿಕೆಯ ಪಾತ್ರ, ಧಾರ್ಮಿಕತೆ, ಜಾತ್ರೆ, ಉತ್ಸವ, ಮನರಂಜನೆ, ಸಾಮಾಜಿಕವಾದ ಕುಟುಂಬ ವಿವಾಹ, ಸಂಪ್ರದಾಯಗಳು, ನಂಬಿಕೆಗಳು, ವಿಧಿ ಆಚರಣೆಗಳು, ಶಕುನ, ಪಂಚಾಂಗ, ಗೋತ್ರ ಸಂಪ್ರದಾಯ, ಭಾಷೆ ಮೌಖಿಕ ಸಾಹಿತ್ಯ ಮಂತಾದವುಗಳನ್ನು ಅವುಗಳ ಸಾಂಸ್ಕೃತಿಕ ಅನನ್ಯತೆಯನ್ನು ಇತರ ಶಿಸ್ತುಗಳ ನೆಲೆಯಲ್ಲಿ ನೋಡುವುದಾಗಿದೆ.

6. ಬದಲಾದ ಪರಸ್ಥಿತಿಯಲ್ಲಿ ಅಂದರೆ, ಇವತ್ತಿನ ಜಾಗತೀಕರಣ, ಆರ್ಥಿಕ ಉದಾರೀಕರಣ, ಖಾಸಗೀಕರಣಗಳ ಪ್ರಭಾವ, ಪರಿಣಾಮ, ಸಫಾಯಿ ಕರ್ಮಚಾರಿಗಳ ಸ್ಥಿತಿಗತಿ ಅವರ ಭವಿಷ್ಯ ಜೀವನದ ಬಗೆಗಿನ ಚಿಂತೆಗಳು ಒಳಗೊಂಡಿವೆ.

ಈ ಮೇಲಿನ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಶೋಷಿತ ಸಮುದಾಯವಾದ ಸಫಾಯಿ ಕರ್ಮಚಾರಿಗಳ ಸಮಾಜೋ ಆರ್ಥಿಕ, ಸಾಂಸ್ಕೃತಿಕ ಚರಿತ್ರೆ ಪುನಾರಚನೆ ಆಗಬೇಕಾಗಿದೆ. ಅದಕ್ಕಾಗಿ ವ್ಯಾಪಕವಾದ ಕ್ಷೇತ್ರಕಾರ್ಯಾಧಾರಿತ ಹಾಗೂ ಇತರ ಅನುಷಂಗಿಕ ದಾಖಲೆಗಳ ನೆರವಿನ ಅಗತ್ಯವಿದೆ.

1.3.1 ಕ್ಷೇತ್ರಕಾರ್ಯಾಧ್ಯಯನ

ಸಾಮಾಜಿಕ ಅಧ್ಯಯನಗಳಲ್ಲಿ ಕ್ಷೇತ್ರ ಕಾರ್ಯಕ್ಕೆ ಹೆಚ್ಚಿನ ಮಹತ್ವವಿದೆ. ವಿಷಯ ಸಂಗ್ರಹಣೆ, ವರ್ಗೀಕರಣ ಮತ್ತು ವಿಶ್ಲೇಷಣೆ ಮುಂತಾದ ಮುಖಗಳಲ್ಲಿ ಅಧ್ಯಯನ ನಡೆಸಲಾಗುತ್ತದೆ. ಇವರಲ್ಲಿ ಕ್ಷೇತ್ರ ಕಾರ್ಯ ಮತ್ತು ವಿಷಯ, ವಿಶ್ಲೇಷಣೆಗಳು ಪ್ರಮುಖ ಪಾತ್ರವಹಿಸುತ್ತವೆ. ಸಾಮಾಜಿಕ ನೆಲೆಯ ಅಧ್ಯಯನ ಕ್ಷೇತ್ರಕಾರ್ಯದ ಹಿನ್ನೆಲೆಯನ್ನು ಹೊಂದಿದ್ದರೆ ಅದು ಪರಿಪೂರ್ಣವೂ ಅಧಿಕೃತವೂ ಎನಿಸುತ್ತದೆ. ಕ್ಷೇತ್ರಕಾರ್ಯದಲ್ಲಿ ಮುಖ್ಯವಾಗಿ ಸಂವಾದ, ಚರ್ಚೆ, ಪ್ರಶ್ನಾವಳಿ ಮತ್ತು ಅವಲೋಕನ ವಿಧಾನಗಳನ್ನು ಅನುಸರಿಸಲಾಗಿದೆ. ಹೀಗಿದ್ದೂ ಪ್ರಶ್ನಾವಳಿಗಳಿಗೆ ಮಾಹಿತಿ ನೀಡುವವರು ಸಮಂಜಸವಾದ ಹೇಳಿಕೆ ನೀಡದಿರಲೂಬಹುದು. ಅಂಥ ಸಂದರ್ಭದಲ್ಲಿ ನಾವು ಮಾಹಿತಿ ಸಂಗ್ರಹದ ಬೇರೆ ವಿಧಾನಗಳನ್ನು ಅನುಸರಿಸಬೇಕಾಗುತ್ತದೆ. ಈ ಎಲ್ಲ ಅಡೆತಡೆಗಳನ್ನು ನಿವಾರಿಸಿಕೊಂಡು ಸ್ಥಳೀಯ ಜನರ ನಂಬಿಕೆಗೆ ಧಕ್ಕೆ ಆಗದ ರೀತಿಯಲ್ಲಿ ಅಲ್ಲಿನ ಸ್ಥಳೀಯ ವಕ್ತೃಗಳನ್ನು ಸಂದರ್ಶಿಸಿ, ಪ್ರಶ್ನಾವಳಿ, ಗುಂಪು ಚರ್ಚೆಗಳ ವಿಧಾನದಲ್ಲಿ ಮಾಹಿತಿ ಸಂಗ್ರಹಿಸಲಾಗುವದು. ಟಿಪ್ಪಣೆ ಸಫಾಯಿ ಕರ್ಮಚಾರಿ ಸಮುದಾಯದ ಮುಖಂಡರು, ಹಿರಿಯರು ಸ್ತ್ರೀಯರನ್ನು ನೇರವಾಗಿ ಭೇಟಿಮಾಡಿ ಮಾಹಿತಿ ಸಂಗ್ರಹಿಸಲಾಗಿದೆ. ಕೆಲವೊಮ್ಮೆ ಅವರ ಹತ್ತಿರದ ಸಂಬಂಧಿಗಳು, ಮನೆಯವರು, ನೆರೆಹೊರೆಯವರಿಂದ ಮಾಹಿತಿ ಪಡೆಯುವ ಮೂಲಕ ಹಾಗೂ ಪ್ರತ್ಯಕ್ಷವಾಗಿ ಕ್ಷೇತ್ರಕಾರ್ಯದಲ್ಲಿ ಕಂಡಂತಹ ಅನುಭವಗಳಿಂದ ಪ್ರಸ್ತುತ ಅಧ್ಯಯನವನ್ನು ರೂಪಿಸಿರುತ್ತೇನೆ.

1.3.2. ಅಧ್ಯಯನದ ಮಹತ್ವ

ಇತಿಹಾಸದುದ್ದಕ್ಕೂ ಜನಸಂಖ್ಯೆಯ ಅರ್ಧಕ್ಕಿಂತ ಹೆಚ್ಚು ಶ್ರಮಿಕ ಸಮುದಾಯವಿದೆ. ಆದರೂ ಸಾಮಾಜಿಕ, ಧಾರ್ಮಿಕ, ಆರ್ಥಿಕ, ಕಲೆ, ಸಾಹಿತ್ಯ, ಸಾಮಾಜಿಕ ಸಾರ್ವಕಾಲಿಕ ಮೌಲ್ಯಗಳು ಆಳುವ ವರ್ಗದವರ ಪಾಲಾಗಿವೆ. ಶೋಷಿತ ಹಾಗೂ ದಲಿತ ಸಮುದಾಯಗಳ ಸಾಮಾಜಿಕ ಹಾಗೂ ಸಂಸ್ಕೃತಿಕ ಬಗೆಗಿನ ಚರಿತ್ರೆಯನ್ನು ನೋಡುವ, ಕಟ್ಟುವತನಕ ಅವರ ಮಹತ್ವದ ಅರಿವು ಮೂಡಲಿಕ್ಕೆ ಸಾಧ್ಯವಾಗದು. ಆಳುವವರ್ಗದ ದೌರ್ಜನ್ಯಕ್ಕೆ ಗುರಿಯಾಗಿ ಮೂಲೆಗುಂಪಾದ ದಲಿತರು ಶೋಷಿತರು ಮೌಖಿಕ ಸಾಹಿತ್ಯದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಾಣಿಸಿಕೊಳ್ಳುವುದು ಸಹಜ. ಆದರೆ ದಲಿತರ, ಅಲಕ್ಷಿತರ ಬಗೆಗಿನ ಧ್ವನಿ, ದಾಖಲೆಗಳಿಲ್ಲದ ಈವರೆಗಿನ ಅಧ್ಯಯನಗಳು ಏಕಮುಖವಾಗಿವೆ. ಅವೆಲ್ಲವೂ ಅಪೂರ್ಣವೇ ಹೌದು.

ನಮ್ಮ ದೇಶದಲ್ಲಿ ನೈಸರ್ಗಿಕ ಮತ್ತು ಮಾನವ ಸಂಪನ್ಮೂಲಗಳಿಗೆ ಕೊರತೆಯಿಲ್ಲ. ಸಮೃದ್ಧ ಭಾರತದಲ್ಲಿ ಏಕರೂಪದ ಸಾಮಾಜಿಕ ವ್ಯವಸ್ಥೆ ಇಲ್ಲದ ಕಾರಣ ಸರ್ವಾಂಗೀಣ ಅಭಿವೃದ್ಧಿ ಅಸಾಧ್ಯವಾಗಿದೆ. ದೇಶ ಪರರ ದಾಸ್ಯದಿಂದ ವಿಮುಕ್ತಿ ಹೊಂದಿದ್ದರೂ ದೇಶದೊಳಗಿನ ಬಡವರು, ಶೋಷಿತರು, ಅಸ್ಪೃಶ್ಯರು ಸಾಮಾಜಿಕ, ಆರ್ಥಿಕ ಸ್ವಾತಂತ್ರ್ಯದಿಂದ ಮುಕ್ತರಾಗಿಲ್ಲದಿರುವುದು ವಿಪರ್ಯಾಸ. ಇಂತಹ ವಿಶಿಷ್ಟ ಸನ್ನಿವೇಶದಲ್ಲೂ ರಾಷ್ಟ್ರೀಯ, ಸಾಮಾಜಿಕ ಚಿಂತಕರೆಲ್ಲರೂ ಸೇರಿ ಅಲಕ್ಷಿತರ ಬಾಳಿಗೊಂದು ಪಥ್ಯರಹಿತವಾದ ಔಷಧಿಯನ್ನು ಸಿದ್ಧಪಡಿಸಿದರು. ಈ ಔಷಧಿಯೇ 1950ರ ಸಂವಿಧಾನ ರೂಪದಲ್ಲಿ ಬಂದಿತು. ಶೋಷಿತರ ಮತ್ತು ದುರ್ಬಲರ ಮೀಸಲಾತಿ ನಾಮಕರಣ ಮಾಡಿತು.

ಮೀಸಲಾತಿ ಅನಾದಿಕಾಲದ ಸಾಮಾಜಿಕ ಪಿಡುಗಿಗೆ ಸಿಲುಕಿ ಅಲಕ್ಷಿತರಾದವರಿಗೆ ಎಂದು ತೀರ್ಮಾನಿಸಿತ್ತು. ಆದರೆ ಅವರುಗಳಿಗೆ ಸರಿಯಾದ ಶಿಕ್ಷಣವಿಲ್ಲದ ಕಾರಣ ಸಂವಿಧಾನ ಕಲ್ಪಿಸಿದ ಸೌಲಭ್ಯಗಳ ಪರಿಚಯವಾಗಲಿ, ಅರ್ಥವಾಗಲಿ ಇಂದಿಗೂ ಜನರಿಗೆ ಸರಿಯಾಗಿ ತಿಳಿದಿಲ್ಲ. ಪ್ರಸ್ತುತ ಅಧ್ಯಯನವು ಈ ಮಹತ್ವವನ್ನು ಕಿಂಚಿತ್ತಾದರೂ ತಿಳಿಸಿಕೊಡುವಲ್ಲಿ ನೆರವಾದೀತೆಂದು ಭಾವಿಸಲಾಗಿದೆ. ಸಾಮಾಜಿಕ ಪಿಡುಗಿಗೆ ಸಿಕ್ಕಿಹಾಕಿಕೊಂಡಿರುವ ಸಫಾಯಿ ಕರ್ಮಚಾರಿಗಳಂತಹ ಅಲಕ್ಷಿತ ಸಮುದಾಯಗಳನ್ನು ಈ ಅಧ್ಯಯನವು ಕೇಂದ್ರಬಿಂದುವನ್ನಾಗಿಸಿಕೊಂಡಿದೆ.

ಈಗಾಗಲೇ ಜಾತಿ, ಧರ್ಮ, ಭಾಷೆ, ಸಂಸ್ಕೃತಿ, ಲಿಂಗಭೇದ ಮುಂತಾದವುಗಳ ಮೇಲೆ ಎಷ್ಟೆಷ್ಟೋ ವಿಪುಲವಾದ ವ್ಯಾಖ್ಯಾನಗಳು, ಲೇಖನಗಳು, ಕೃತಿಗಳು ಬಂದಿವೆ. ಆದರೆ ಅವು ಸಮಸ್ಯೆಯ ಮೇಲೆ ನಮ್ಮ ಗಮನ ಸೆಳೆದಿವೆಯೇ ಹೊರತು, ಅವುಗಳ ಸಮಸ್ಯೆಗಳ ಮುಕ್ತಿಗೆ ಬದಲಾವಣೆಗೆ ಅಷ್ಟೊಂದು ಪರಿಣಾಮಕಾರಿಯಾಗಿ ಬಂದಿಲ್ಲವೆನ್ನುವ ಕೊರಗು ಇದೆ.

1. ಭಾರತೀಯ ಜಾತಿ, ವರ್ಗ, ಸಮುದಾಯಗಳ ಕುರಿತು ಬರೆದು ವರದಿ ಮಾಡಿದವರಲ್ಲಿ ವಿದೇಶಿ ವಿದ್ವಾಂಸರೇ ಪ್ರಥಮಿಗರು. ಥರಸ್ಟನ್‌ರು ಭಾರತದ ಜಾತಿ, ಜನಾಂಗ, ಬುಡಕಟ್ಟುಗಳ ಕುರಿತು ಸಮೀಕ್ಷೆ ನಡೆಸಿ ವರದಿ ಸಿದ್ಧಪಡಿಸಿದ್ದಾರೆ. ಅಲ್ಲೆಲ್ಲ ಅಲಕ್ಷಿತ, ಶೋಷಿತ ಸಮುದಾಯಗಳ ಪಟ್ಟಿ ಹಾಗೂ ವಿವರ ನೀಡಿರುವರು.

2. ಇಂಡಿಯನ್ ಗೆಜಿಟೀಯರ್, ಕರ್ನಾಟಕ ಗೆಜಿಟೀಯರ್, ವಿಶ್ವಕೋಶಗಳಲ್ಲಿ ಭಾರತ'ದ ದಲಿತ ಜಾತಿಗಳ ಕುರಿತು ಹೇಳುವ ಸಂದರ್ಭದಲ್ಲಿ ತೀರ ಸಂಕ್ಷಿಪ್ತವಾಗಿ ಸಫಾಯಿ ಕರ್ಮಚಾರಿಗಳ ಕುರಿತು ಉಲ್ಲೇಖವಿದೆ.

3. ಕರ್ನಾಟಕ ಸರಕಾರದ ಮಂತ್ರಿಗಳಾಗಿದ್ದ ಬಿ. ಬಿ. ಬಸವಲಿಂಗಪ್ಪನವರು ಕರ್ನಾಟಕದ ಸಫಾಯಿ ಕರ್ಮಚಾರಿಗಳ ಬಗೆಗೆ ವಿಧಾನ ಸೌಧದಲ್ಲಿ ಮಾಡಿದ ಭಾಷಣ, ಪತ್ರಿಕಾ ವರದಿ ಈ ಸಮುದಾಯಗಳ ಮೇಲೆ ಒಂದಷ್ಟು ಚೆಲ್ಲಿತು.

4. ಹಾವನೂರ ಆಯೋಗದ ವರದಿ, ಚಿನ್ನಪ್ಪರೆಡ್ಡಿ ಆಯೋಗದ ವರದಿಗಳು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ಅಲ್ಪಸಂಖ್ಯಾತ ವರ್ಗಗಳಿಗೆ ಮೀಸಲಾತಿ ಕಲ್ಪಿಸುವ ಸಂಬಂಧದ ದಾಖಲೆಗಳಲ್ಲಿ ಈ ಸಮುದಾಯಗಳ ಬಗೆಗೆ ವಿವರಗಳು ದೊರಕುತ್ತವೆ.

5. ಭಾರತ ಸರಕಾರದ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಆಯೋಗದ ವರದಿ.

6. ಕನ್ನಡ ವಿಶ್ವವಿದ್ಯಾಲಯ ಹಂಪಿ ಅವರು ಬುಡಕಟ್ಟು ಅಧ್ಯಯನ ವಿಭಾಗದಿಂದ ಏರ್ಪಟ್ಟ ವಿಚಾರ ಸಂಕಿರಣಗಳ ಪ್ರಬಂಧಗಳು, ನಿಯತಕಾಲಿಕದಲ್ಲಿ ಪ್ರಕಟವಾದ ಲೇಖನಗಳಲ್ಲಿ ಸಫಾಯಿ ಕರ್ಮಚಾರಿಗಳ ಬಗೆಗೆ ಅಲ್ಪಸ್ವಲ್ಪ ಮಾಹಿತಿಗಳು ಲಭ್ಯಸುತ್ತವೆ.

7. ಹಾವೇರಿ ಜಿಲ್ಲೆಯ ಸವಣೂರಿನಲ್ಲಿ ಭಂಗಿಗಳು ತಮ್ಮ ಸಾಮಾಜಿಕ, ಆರ್ಥಿಕ ಪರಸ್ಥಿತಿಗಳತ್ತ ಗಮನ ಸೆಳೆಯಲು ತಲೆಯ ಮೇಲೆ ಮಲ ಸುರಿದುಕೊಂಡು ಪ್ರತಿಭಟಿಸಿದರು. ಆ ಕುರಿತ ಪತ್ರಿಕೆ, ದೃಶ್ಯ ಮಾಧ್ಯಮದ ವರದಿಗಳು.
8. ಹಿಂದಿ ಚಲನಚಿತ್ರ ನಟ ಅಮೀರಖಾನ್ 'ಸತ್ಯಮೇವ ಜಯತೆ' ದೂರದರ್ಶನ ಧಾರಾವಾಹಿಯಲ್ಲಿ ಸಫಾಯಿ ಕರ್ಮಚಾರಿಗಳ ಕುರಿತು ಮಾಡಿದ ಚಿತ್ರಣ.
9. ಸಣ್ಣಕಥೆ, ಚಿಂತನ ವೈಚಾರಿಕ ಸಾಹಿತ್ಯದಲ್ಲಿ ಮೂಡಿಬಂದ ಸಫಾಯಿ ಕರ್ಮಚಾರಿಗಳ ಬರಹ.
10. ಸಫಾಯಿ ಕರ್ಮಚಾರಿಗಳ ಬಗೆಗಿರುವ ನಂಬಿಕೆ, ಸಂಪ್ರದಾಯ, ಅವರ ಸಾಹಿತ್ಯ, ಸಂಸ್ಕೃತಿ ಕುರಿತು ಬರೆದ ಸಂಶೋಧನಾತ್ಮಕ ಲೇಖನಗಳು ಈ ಎಲ್ಲ ದಾಖಲೆಗಳು ಮಾಹಿತಿ ಪ್ರಧಾನವಾಗಿವೆ. ನನ್ನ ಅಧ್ಯಯನಕ್ಕೆ ಇವು ನೀಡುವ ಮಾಹಿತಿಗಳನ್ನು ಪೂರಕವಾಗಿಟ್ಟುಕೊಂಡು ನೋಡುವ ಪ್ರಯತ್ನ ಪ್ರಸ್ತುತ ಮಹಾಪ್ರಬಂಧದಲ್ಲಿ ಮಾಡಲಾಗಿದೆ.

1.4 ಅಧ್ಯಯನದ ಸ್ವರೂಪ

ಭಾರತೀಯ ಚರಿತ್ರೆಯಲ್ಲಿ ಅತ್ಯಂತ ಪುರಾತನ ಜನವರ್ಗವಾಗಿರುವ ಸಫಾಯಿ ಕರ್ಮಚಾರಿಗಳ ಕುರಿತಾಗಿ ಅವರ ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ವಿವರಗಳನ್ನು ಅಧ್ಯಯನ ಮಾಡಿದ ನಂತರ ಮಹಾಪ್ರಬಂಧದ ಸ್ವರೂಪವನ್ನು ಈ ಕೆಳಗಿನ ಅಧ್ಯಾಯಗಳಲ್ಲಿ ರೂಪಿಸಲಾಗಿದೆ.

ಒಂದನೆಯ ಅಧ್ಯಾಯದಲ್ಲಿ ಪೀಠಿಕೆಯೊಂದಿಗೆ ಅಧ್ಯಯನದ ಉದ್ದೇಶ, ಅಧ್ಯಯನದ ವಿಧಾನ, ಮಹತ್ವ, ಅದರ ಸ್ವರೂಪ ಮತ್ತು ವ್ಯಾಪ್ತಿಯನ್ನು ವಿವರಿಸಲಾಗಿದೆ. ಮತ್ತು ಸಫಾಯಿ ಕರ್ಮಚಾರಿಗಳ ಕುರಿತು ಕನ್ನಡ, ಇಂಗ್ಲಿಷ್ ಇತರೆ ಭಾಷೆಗಳಲ್ಲಿ ಈವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆಯನ್ನು ಸಂಕ್ಷಿಪ್ತ ವಿವರಿಸಲಾಗಿದೆ.

ಅಧ್ಯಾಯ ಎರಡರಲ್ಲಿ ನನ್ನ ಮಹಾಪ್ರಬಂಧಕ್ಕೆ ಅಧ್ಯಯನದ ನೆಲೆ ಹಾಗೂ ಪ್ರವೇಶಿಕೆಯನ್ನು ಒದಗಿಸುತ್ತದೆ. ಈ ಅಧ್ಯಾಯದಲ್ಲಿ ಗುಲಬರ್ಗಾ ಜಿಲ್ಲೆಯ ಭೌಗೋಳಿಕ ಪರಿಸರ,

ಇತಿಹಾಸ, ಇಲ್ಲಿ ನೆಲೆಸಿರುವ ವಿವಿಧ ಧರ್ಮ, ಜಾತಿ ಸಮುದಾಯಗಳ ಉಗಮ, ಲಕ್ಷಣ, ಬೆಳವಣಿಗೆ, ವಲಸೆ ಬಂದ ಸಮುದಾಯಗಳು ಸ್ಥಳೀಯ ಸಂಸ್ಕೃತಿಯೊಂದಿಗಿನ ಅವುಗಳ ಸಂಬಂಧ ಸ್ವರೂಪ ಇವುಗಳ ಸ್ಥೂಲ ಚಿತ್ರವನ್ನು ನೀಡಲಾಗಿದೆ. ಇವುಗಳ ಜೊತೆಗೆ ಸಫಾಯಿ ಕರ್ಮಚಾರಿ ಸಮುದಾಯಕ್ಕೆ ಇರುವ ಪರ್ಯಾಯ ಹೆಸರುಗಳು, ಪ್ರಾದೇಶಿಕ ಭಿನ್ನತೆ, ಈ ಸಮುದಾಯವು ಕರ್ನಾಟಕದ ಮೂಲ ನಿವಾಸಿಗಳೇ? ಅಥವಾ ವಲಸೆ ಬಂದವರೇ? ಅವರ ಮೂಲ ನೆಲೆ, ಲಕ್ಷಣ, ಚರಿತ್ರೆಯ ಕಾಲ ಸಂದರ್ಭದಲ್ಲಿ ಈ ಸಮುದಾಯದವರ ಪಾತ್ರ ಮುಂತಾದವುಗಳನ್ನು ಕುರಿತು ವಿವರಗೊಳಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಗುಲಬರ್ಗಾ ಜಿಲ್ಲಾ ವ್ಯಾಪ್ತಿಯಲ್ಲಿ ಹರಡಿಕೊಂಡಿರುವ ಸಫಾಯಿ ಕರ್ಮಚಾರಿಗಳ ಸಾಮಾಜಿಕ ಸ್ಥಿತಿಗತಿ ಕುರಿತು ಚರ್ಚಿಸಲಾಗಿದೆ. ಭಾರತೀಯ ಇತರ ಸಾಮಾಜಿಕ ಪರಿಸರದ ಸ್ಥಿತಿಯಿಂದ ಗುಲಬರ್ಗಾ ಜಿಲ್ಲೆಯು ಭಿನ್ನವಾಗಿಲ್ಲ. ಭಾರತೀಯ ಸಾಮಾಜಿಕ, ಧಾರ್ಮಿಕ ಕಟ್ಟಳೆಗಳು ಸಂಪ್ರದಾಯಗಳು ಧರ್ಮ, ಜಾತಿ ಸಮುದಾಯಗಳ ವಿಷಯದಲ್ಲಿ ಇರುವ ಸಾಂಪ್ರದಾಯಿಕ ನಂಬಿಕೆಗಳು ಇಲ್ಲಿಯೂ ಚಲಾವಣೆಯಲ್ಲಿವೆ. ಮೇಲ್ವರ್ಣ, ವರ್ಗ ಉಳ್ಳವರ ಕರಿನೆರಳಿನೊಳಗೆ ಇಲ್ಲಿನ ಸಫಾಯಿ ಕರ್ಮಚಾರಿಗಳು (ಭಂಗಿಗಳು) ಬದುಕುತ್ತಿದ್ದಾರೆ. ಶೋಷಣೆಗೆ ಪರ್ಯಾಯ ಪದವೇ ಪರಿಶಿಷ್ಟ ಜಾತಿ, ಪಂಗಡವೆಂದರೆ ಅತಿಶಯೋಕ್ತಿಯಲ್ಲ. ಗುಲಬರ್ಗಾ ಪ್ರದೇಶದಲ್ಲಿ ಎಂದಿನಿಂದಲೂ ಸಫಾಯಿಗಳು ಅಸ್ಪೃಶ್ಯರಾಗಿ ಪರಿಶಿಷ್ಟ ಜಾತಿಗೆ ಸೇರಿದ ಸಮುದಾಯವೆನಿಸಿದೆ. ಒಂದು ವಿಚಿತ್ರವೆಂದರೆ ಇವರು ಪರಿಶಿಷ್ಟ ಜಾತಿಗೆ ಸೇರಿದ್ದರೂ, ಅವರಲ್ಲಿಯೇ ತೀರ ಅಸ್ಪೃಶ್ಯರೆನಿಸಿಕೊಂಡಿದ್ದಾರೆ. ಪಟ್ಟಭದ್ರ ಹಿತಾಸಕ್ತಿಗಳ ಮೇಲುಗೈ ಮುಂದುವರಿದ ಜಾತಿ ಪಂಗಡಗಳ ಸ್ವಾರ್ಥ, ರಾಜಕೀಯ ಧೋರಣೆ, ಪ್ರಭಾವಗಳ ಕಪಿಮುಷ್ಠಿಯಲ್ಲಿ ಸಾಮಾಜಿಕವಾಗಿ ಬಹಿಷ್ಕೃತ ಸಮುದಾಯವೇ ಇದಾಗಿದೆ. ಸಫಾಯಿ ಕರ್ಮಚಾರಿಗಳ ಸಾಮಾಜಿಕ ಜೀವನ, ಸ್ಥಾನಮಾನ ಕುಟುಂಬ, ವಿವಾಹ, ವಸತಿ, ಊಟೋಪಚಾರ, ಉಡುಗೆ ತೊಡುಗೆ, ಕುಟುಂಬ ವಿವಾದ, ಜಗಳ, ಕುಲಗೋತ್ರ, ನ್ಯಾಯಪದ್ಧತಿ, ದೈವ ಜಾತ್ರೆ, ಉತ್ಸವ ನಂಬಿಕೆ, ಸಂಪ್ರದಾಯ, ಸಂಸ್ಕಾರಗಳು ಮರಣ ವಿಧಿನಿಯಮಗಳು ಮೊದಲಾದವುಗಳನ್ನು ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಸಫಾಯಿ ಕರ್ಮಚಾರಿಗಳ ಸಾಮಾಜಿಕ ಪರಸ್ಥಿತಿಯನ್ನು ಕುರಿತು ವಿವರಿಸಿದರೆ, ಈ ಅಧ್ಯಾಯದಲ್ಲಿ ಅವರುಗಳ ಆರ್ಥಿಕ ಸ್ಥಿತಿಗತಿ ಕುರಿತು ವಿಶ್ಲೇಷಿಸಲಾಗಿದೆ.

ಸಫಾಯಿ ಕರ್ಮಚಾರಿಗಳು ಸಾಮಾಜಿಕವಾಗಿ ಅಸ್ಪೃಶ್ಯರೆನಿಸಿಕೊಂಡ ಕಾರಣವಾಗಿ ಅವರು ದೊಡ್ಡ ದೊಡ್ಡ ಅಧಿಕಾರಿಗಳಾಗಲಿ, ಗೌರವಯುತ ಉದ್ಯೋಗವನ್ನಾಗಲಿ ಮಾಡುವುದಕ್ಕೆ ಅವಕಾಶವಿರಲಿಲ್ಲ. ಹೀಗಾಗಿ ಅವರ ಆರ್ಥಿಕ ಪರಸ್ಥಿತಿ ಅಂತಹ ಹೇಳಿಕೊಳ್ಳುವಂಥದ್ದಾಗಿಲ್ಲ. ಬಡತನವನ್ನೇ ಹೆಚ್ಚಾಗಿ ಅನುಭವಿಸುವರು. ಪುರುಷರು ಉಳ್ಳವರ ಶ್ರೀಮಂತರ ಮನೆಯ ಮಲ ಸ್ವಚ್ಛಗೊಳಿಸಿ ತಲೆ ಮೇಲೆ ಹೊತ್ತು ಊರ ಹೊರಗೆ ಸಾಗಿಸುವ ಕೆಲಸ ಮಾಡಿದರೆ, ಸ್ತ್ರೀಯರು ಅವರ ಸಫಾಯಿ ಕೆಲಸಕ್ಕೆ ಸಹಾಯಕರಾಗಿರುತ್ತಿದ್ದರು. ಇದೊಂದು ಅಷ್ಟೊಂದು ಮುಖ್ಯ ಕೆಲಸ ಎಂಬುದಾಗಿ ಸಮಾಜ ಪರಿಗಣಿಸಿದೆ. ಮೇಲಾಗಿ ಅದು ಜಾತಿ ವಾಚಕವೃತ್ತಿಯಾಗಿ ಬಂದಿದ್ದರಿಂದ ಅವರಿಗೆ ದೊರಕುವ ಸಂಬಳ ತೀರ ಅತ್ಯಲ್ಪ. ಸಫಾಯಿಗಳು ಪರ್ಯಾಯ ಕೆಲಸಗಳನ್ನು ಮಾಡುವುದಕ್ಕೆ ಸಮಾಜ ಅವಕಾಶ ನೀಡಿರದ ಕಾರಣ ಅವರು ಬಡವರಾಗಿಯೇ ಉಳಿದಿದ್ದಾರೆ. ಪ್ರಸ್ತುತ ಅಧ್ಯಾಯದಲ್ಲಿ ಕ್ಷೇತ್ರಕಾರ್ಯ, ಸಂದರ್ಶನ, ಆಯೋಗಗಳು, ಸಂಶೋಧನೆಗಳು ನೀಡುವ ಅಂಕಿ ಅಂಶಗಳ ನೆರವಿನಿಂದ ಸಫಾಯಿ ಕರ್ಮಚಾರಿಗಳ ಆರ್ಥಿಕ ಪರಸ್ಥಿತಿಯ ಮೇಲೆ ಬೆಳಕು ಚೆಲ್ಲುವುದು, ಅವರ ಆರ್ಥಿಕ ಸಮಸ್ಯೆಗೆ ಪರಿಹಾರೋಪಾಯ ಮಾರ್ಗಗಳ ಬಗ್ಗೆ ಗಮನ ಸೆಳೆಯುವ ಪ್ರಯತ್ನ ಮಾಡಲಾಗಿದೆ.

ಐದನೆಯ ಅಧ್ಯಾಯವು ನನ್ನ ಸಂಶೋಧನಾಧ್ಯಯನಕ್ಕೆ ಪೂರಕ ಅಧ್ಯಾಯವಾಗಿದೆ. ತಲತಲಾಂತರಗಳಿಂದ ಬಂದ ಸಫಾಯಿ ಕರ್ಮಚಾರಿಗಳ ಧಾರ್ಮಿಕ ವಿಧಿ, ನಂಬಿಕೆ, ವಿಧಾನಗಳ ಜೊತೆಗೆ ಅವರ ಭಾಷೆ, ಅನ್ಯಬಾಷಿಕ, ಸಾಂಸ್ಕೃತಿಕ ಪ್ರಭಾವಗಳು, ಮೌಖಿಕ ರೂಪದಲ್ಲಿ ಜೀವಂತವಾಗಿರುವ ಹಾಡು, ಕತೆ, ಗಾದೆ, ಒಗಟು, ಒಡಪು, ಈ ಜನಾಂಗ ಕುರಿತಾಗಿರುವ ಜನಪದರ ನಂಬಿಕೆಗಳು ಸಾಹಿತ್ಯದಲ್ಲಿ ಬಂದಿರುವ ಆಧಾರಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ಅಧ್ಯಯನ ಮಾಡಲಾಗಿದೆ.

ಆರನೆಯ ಅಧ್ಯಾಯದಲ್ಲಿ ಆಧುನಿಕೋತ್ತರ ಕಾಲದಲ್ಲಿ ನಮ್ಮ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಕ್ಷೇತ್ರಗಳ ಮೇಲೆ ಜಾಗತೀಕರಣ ತೀವ್ರವಾದ ಪ್ರಭಾವವನ್ನು ಬೀರಿದೆ. ಇದರಿಂದ ನಮ್ಮ ಸಂಸ್ಕೃತಿ ವ್ಯವಸ್ಥೆ ಪಲ್ಲಟಕ್ಕೊಳಗಾಗಿರುವುದು ಸತ್ಯ. ಜಾಗತೀಕರಣದಲ್ಲಿ ಸಮಾನತೆ ಮತ್ತಷ್ಟು ಮರೀಚಿಕೆಯಾಗುತ್ತದೆ. ಉಳ್ಳವರು ಉಳ್ಳವರಾಗುತ್ತಾರೆ, ಬಡವರು ಬಡವರಾಗಿಯೇ ಉಳಿಯುತ್ತಾರೆ. ಬಲವಿದ್ದವರೇ ಬದುಕಬಲ್ಲರು. ಇಂತಹ ನಂಬಿಕೆಯ ನಡುವೆ ಸಫಾಯಿ ಕರ್ಮಚಾರಿಗಳ ಒಟ್ಟು

ಜೀವನ ಪರಸ್ಥಿತಿ ಅವಲೋಕಸಿ ಅವರನ್ನು ಮೇಲೆತ್ತುವುದಕ್ಕೆ ಇರುವ ಮಾರ್ಗಗಳನ್ನು ಹುಡುಕುವ ಪ್ರಯತ್ನವಾಗಿದೆ.

ಕೊನೆಯ ಅಧ್ಯಾಯದಲ್ಲಿ ಒಟ್ಟಾರೆ ಅಧ್ಯಯನದಿಂದ ಕಂಡುಕೊಂಡ ಫಲಿತಗಳನ್ನು ಹಾಗೂ ಸಲಹೆಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಹಾಗೂ ಅಧ್ಯಯನಕ್ಕೆ ಪೂರಕವಾದ ಹೆಚ್ಚಿನ ಮಾಹಿತಿಯನ್ನು ಪ್ರಬಂಧದ ಕೊನೆಯ ಅನುಬಂಧದಲ್ಲಿ ನೀಡಲಾಗಿದೆ.

1.5 ಅಧ್ಯಯನ ವ್ಯಾಪ್ತಿ

ಸಫಾಯಿ ಕರ್ಮಚಾರಿಗಳು ಭಾರತದಾದ್ಯಂತ ಎಲ್ಲ ರಾಜ್ಯ, ಜಿಲ್ಲೆ, ನಗರ, ಅರೆನಗರ ಹಾಗೂ ಇತರ ಪ್ರದೇಶದಲ್ಲಿ ಹರಡಿಕೊಂಡಿದ್ದಾರೆ. ಬೇರೆ ಬೇರೆ ಪ್ರದೇಶಗಳಲ್ಲಿ ಈ ಜನಾಂಗಕ್ಕೆ ಬೇರೆ ಬೇರೆ ಹೆಸರುಗಳಿಂದ ಕರೆಯಲ್ಪಡುತ್ತಾರಾದರೂ, ಅವರ ಕಾಯಕ, ಸಾಮಾಜಿಕ, ಆರ್ಥಿಕ ಪರಸ್ಥಿತಿಗಳು ಹೆಚ್ಚುಕಡಿಮೆ ಒಂದೇ ತೆರನಾಗಿವೆ. ಅವರೆಲ್ಲರೂ ಸಾಮಾಜಿಕ ನಂಬಿಕೆ ವಿಧಿ ನಿಷೇಧಗಳ ವರ್ಣ, ವರ್ಗಗಳ ಕಪಿಮುಷ್ಠಿಯಲ್ಲಿ ಬಂದಿತರಾಗಿ ಕತ್ತಲೆಯ ಜಗತ್ತಿನಲ್ಲಿ ಬದುಕುತ್ತಿದ್ದಾರೆ. ಶತಶತಮಾನಗಳು ಸಂದು ಹೋದರೂ ಸಫಾಯಿಗಳ ಜೀವನದಲ್ಲಿ ಅಂತಹ ಮಹತ್ವವಾದ ಬದಲಾವಣೆಗಾಗಿಲ್ಲ. ಇದಕ್ಕೆ ಗುಲಬರ್ಗಾ ಜಿಲ್ಲೆಯು ಹೊರತಾಗಿಲ್ಲ.

ಗುಲಬರ್ಗಾ ಜಿಲ್ಲೆಯು ತನ್ನದೇ ಆದ ವಿಶಿಷ್ಟ ಭೌಗೋಳಿಕ, ಪ್ರಾದೇಶಿಕ, ಚಾರಿತ್ರಿಕ ಸಾಂಸ್ಕೃತಿಕ ಸನ್ನಿವೇಶವನ್ನು ಒಳಗೊಂಡಿದೆ. ಕ್ರಿ.ಪೂ.ದ ಮೌರ್ಯರಿಂದ ಹೈದರಾಬಾದಿನ ನಿಜಾಮರವರೆಗೆ ಹಿಡಿದು ಇಪ್ಪತ್ತನೆಯ ಶತಮಾನದ ನಾಲ್ಕು ದಶಕಗಳವರೆಗೆ ಸಾವಿರಾರು ವರ್ಷಗಳ ಕಾಲ ಈ ಪ್ರದೇಶವನ್ನು ಅನೇಕ ಅರಸರು ಮನೆತನಗಳು ಆಳಿವೆ. ಅಶೋಕನ ಬೌದ್ಧ ಧರ್ಮ, ಆನಂತರ ವೈದಿಕ, ಶೈವ, ಶಾಕ್ತ, ವೀರಶೈವ, ಇಸ್ಲಾಂ, ಕ್ರೈಸ್ತ ಧರ್ಮಗಳು ಇಲ್ಲಿ ಧರ್ಮ ಪ್ರಸಾರಗೈದಿವೆ. ಬೌದ್ಧರ ಕಾಲದಲ್ಲಿ ಮತ್ತು ಹನ್ನೆರಡನೆಯ ಶತಮಾನದ ವಚನಕಾರರ ಕಾಲದಲ್ಲಿ ಈ ನೆಲದ ದಲಿತರು, ಅಸ್ಪೃಶ್ಯರ ಬಗೆಗೆ ಒಂದಷ್ಟು ಚಿಂತನೆಗಳು ನಡೆದದ್ದು ಸಮಾಧಾನಕರ ಸಂಗತಿ. ಅಷ್ಟನ್ನು ಹೊರತುಪಡಿಸಿದರೆ ಎಲ್ಲ ಕಾಲದ ಪ್ರಭುತ್ವಗಳು, ಧರ್ಮಗಳು ಕೆಳವರ್ಗದವರನ್ನು ಅಂತ್ಯಜರನ್ನು ಕುರಿತಾಗಿ, ಅವರ ಜೀವನೋದ್ಧಾರ ಕುರಿತಾಗಿ ಆಲೋಚಿಸಿದ್ದು ಕಡಿಮೆ. ಸ್ವಾತಂತ್ರ್ಯ ನಂತರದಲ್ಲೂ ಈ ಬಗ್ಗೆ ಚರ್ಚೆ, ಚಿಂತನೆಗಳು ನಡೆದದ್ದೂ ತೀರ ಕಡಿಮೆಯೆಂದೇ ಹೇಳಬೇಕು.

ಹೀಗಾಗಿ ದೇಶದ ತುಂಬೆಲ್ಲಾ ವ್ಯಾಪಿಸಿರುವ ಸಫಾಯಿ ಕರ್ಮಚಾರಿಗಳನ್ನು ಕುರಿತು ಅಧ್ಯಯನಕ್ಕೆ ವಿಷಯವನ್ನು ಆಯ್ದುಕೊಂಡಾಗ ಅದರ ವಿಸ್ತರಣೆಯು ಅರಿವಿಗೆ ಬಂದಿತು. ಆದರೆ ವಿಷಯದ ಗಂಭೀರತೆ ಮತ್ತು ಅಧ್ಯಯನದ ಅನುಕೂಲತೆಗಾಗಿ ನಾನಿಲ್ಲಿ ಗುಲಬರ್ಗಾ ಜಿಲ್ಲೆಯನ್ನು ವ್ಯಾಪ್ತಿಯಾಗಿಸಿಕೊಂಡಿದ್ದೇನೆ. ಅದಕ್ಕಾಗಿ ಪ್ರಬಂಧದ ಶೀರ್ಷಿಕೆಯಾಗಿ 'ಕರ್ನಾಟಕ ಸಫಾಯಿ ಕರ್ಮಚಾರಿಗಳ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿ (ಗುಲಬರ್ಗಾ ಜಿಲ್ಲೆ ಅನುಲಕ್ಷಿಸಿ) ಎಂದು ಹೆಸರಿಸಿಕೊಂಡಿರುವೆನು.

ಪ್ರಸ್ತುತ ಪ್ರಬಂಧದಲ್ಲಿ ಗುಲಬರ್ಗಾ ಜಿಲ್ಲೆಯ ಏಳು ತಾಲೂಕುಗಳು ಮತ್ತು ಹೋಬಳಿಗಳು ಹಾಗೂ ಗುಲಬರ್ಗಾ ನಗರ ·ಪ್ರದೇಶದಲ್ಲಿ ನಡೆಸಿದ ಕ್ಷೇತ್ರಕಾರ್ಯ ಸಂಗ್ರಹಿಸಿದ ಮಾಹಿತಿ ಪೂರಕ ಸಾಹಿತ್ಯ ಮೊದಲಾದವುಗಳನ್ನು ಆಧರಿಸಿ ಅಭ್ಯಾಸ ಮಾಡಲಾಗಿದೆ. ಪೂರಕವಾಗಿ ಅಗತ್ಯವಿದ್ದಲ್ಲಿ ಅನ್ಯ ಪ್ರದೇಶಗಳ ಸಫಾಯಿ ಕರ್ಮಚಾರಿಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ.

ಅಡಿಟಿಪ್ಪಣಿಗಳು

1 ಶಂಕರರಾವ್ ಚ.ನ., ಸಾಮಾಜಿಕ ಸಂಶೋಧನೆಯ ಕೈಪಿಡಿ ಪು. 1 ಜೈಭಾರತ ಪ್ರಕಾಶನ, ಮಂಗಳೂರು 1997.

2 ಬರಗೂರ ರಾಮಚಂದ್ರಪ್ಪ, ಉಪಸಂಸ್ಕೃತಿ ಮಾಲಿಕೆಯ ಪ್ರಸ್ತಾವನೆ ಪು. 8, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು 1993.

3 ರಘು ಕೆ., ಶೈಕ್ಷಣಿಕ ಸಮಾಜಶಾಸ್ತ್ರ, ಪು. 5, 1997, ಚೇತನ ಬುಕ್‌ಹೌಸ್, ಮೈಸೂರು.

4 ಕನ್ನಡ ರತ್ನಕೋಶ, ಪು. 225, (ಸ.ಸಂ) ಡಾ. ಹಾ.ಮಾ. ನಾಯಕ, 1997 ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

5 ಲಿಂಗದೇವರು ಹಳೆಮನೆ, ಸಂಸ್ಕೃತಿ ಶೋಧ, ಪು. 1, 2000 ಅರುಹು ಕುರುಹು ಪ್ರಕಾಶನ, ಬೆಂಗಳೂರು.

6 ಅದೇ ಪು.4.

7 ಭೈರಪ್ಪ ಕೆ., ಸಾಮಾಜಿಕ ಸಂಸ್ಥೆಗಳು, ಸಾಮಾಜಿಕ ಸಮೂಹಗಳು ಮತ್ತು ಪರಿವರ್ತನೆಗಳು ಪು. 109, 2012, ಸಿದ್ಧಲಿಂಗೇಶ್ವರ ಪ್ರಕಾಶನ, ಗುಲಬರ್ಗಾ.

8 ಭೈರಪ್ಪ ಕೆ., ಸಾಮಾಜಿಕ ಸಂಸ್ಥೆಗಳು, ಸಾಮಾಜಿಕ ಸಮೂಹಗಳು ಮತ್ತು ಪರಿವರ್ತನೆಗಳು ಪು. 109, 2012, ಸಿದ್ಧಲಿಂಗೇಶ್ವರ ಪ್ರಕಾಶನ, ಗುಲಬರ್ಗಾ.

ಅಧ್ಯಾಯ–2

ಗುಲಬರ್ಗಾ ಜಿಲ್ಲೆ : ಭೌಗೋಳಿಕ, ಇತಿಹಾಸ ಮತ್ತು ಸಂಸ್ಕೃತಿ

2.1 ಗುಲಬರ್ಗಾ ಜಿಲ್ಲೆಯ ಭೌಗೋಳಿಕ ಹಿನ್ನೆಲೆ

2.2 ಗುಲಬರ್ಗಾ ಜಿಲ್ಲೆಯ ಚಾರಿತ್ರಿಕ ಹಿನ್ನೆಲೆ

2.3 ಗುಲಬರ್ಗಾ ಜಿಲ್ಲೆಯ ಸಾಮಾಜಿಕ ಸನ್ನಿವೇಶ ಮತ್ತು ಅಸ್ಪೃಶ್ಯ ಸಮುದಾಯ

2.4 ಸಾಮಾಜಿಕ ಸ್ತರವಿನ್ಯಾಸ : ಜಾತಿ–ಉಪಜಾತಿ

2.5 ವರ್ಣ–ಜಾತಿ ವ್ಯವಸ್ಥೆ

ಅಧ್ಯಾಯ–2

ಗುಲಬರ್ಗಾ ಜಿಲ್ಲೆ : ಭೌಗೋಳಿಕ, ಇತಿಹಾಸ ಮತ್ತು ಸಂಸ್ಕೃತಿ

2.1 ಗುಲಬರ್ಗಾ ಜಿಲ್ಲೆ: ಭೌಗೋಳಿಕ ಹಿನ್ನೆಲೆ

ಕರ್ನಾಟಕ ರಾಜ್ಯದ ಉತ್ತರ ಮತ್ತು ಈಶಾನ್ಯ ಭಾಗದಲ್ಲಿರುವ ಗುಲಬರ್ಗಾ ಜಿಲ್ಲಾ ಮತ್ತು ವಿಭಾಗೀಯ ಆಡಳಿತ ಕೇಂದ್ರವಾಗಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಇದು ಹೈದರಾಬಾದ ಸಂಸ್ಥಾನಕ್ಕೊಳಪಟ್ಟಿತ್ತು. 1948 ಸಪ್ಟಂಬರ್ 17 ರಂದು ಅಂದಿನ ಭಾರತ ಸರಕಾರದ ಗೃಹಮಂತ್ರಿ ಸರದಾರ ವಲ್ಲಭಭಾಯಿ ಪಟೇಲರ ನೇತೃತ್ವದಲ್ಲಿ ಪೊಲೀಸ ಕಾರ್ಯಾಚರಣೆ ನಡೆದು, ಹೈದರಾಬಾದ ಸಂಸ್ಥಾನವು ಭಾರತ ಸರಕಾರದಲ್ಲಿ ವಿಲೀನವಾದಾಗ ಗುಲಬರ್ಗಾ ಜಿಲ್ಲೆ ಕೂಡ ಭಾರತದ ಅಂಗವಾಯಿತು. ನಂತರ 1956ರಲ್ಲಿ ಭಾಷಾವಾರು ರಾಜ್ಯ ಪುನರ್‌ವಿಂಗಡಣೆಯಾದಾಗ ಗುಲಬರ್ಗಾ ಜಿಲ್ಲೆಯು ಕರ್ನಾಟಕಕ್ಕೆ ಸೇರಲ್ಪಟ್ಟಿತು.

ಜಿಲ್ಲೆಯ ಉತ್ತರ ಮತ್ತು ವಾಯುವ್ಯಕ್ಕೆ ಮಹಾರಾಷ್ಟ್ರ ರಾಜ್ಯದ ಉಸ್ಮಾನಾಬಾದ ಮತ್ತು ಸೊಲ್ಲಾಪುರ ಜಿಲ್ಲೆಗಳು ಪೂರ್ವಕ್ಕೆ ಆಂಧ್ರಪ್ರದೇಶದ ಮೇಡಕ್ ಮತ್ತು ಮೆಹಬೂಬನಗರ ಜಿಲ್ಲೆಗಳು ಹಾಗೂ ಉತ್ತರಕ್ಕೆ ಬೀದರ, ದಕ್ಷಿಣಕ್ಕೆ ರಾಯಚೂರು, ಪಶ್ಚಿಮಕ್ಕೆ ವಿಜಯಪುರ ಜಿಲ್ಲೆಗಳು ಎಲ್ಲೆಗಳಾಗಿವೆ. ಜಿಲ್ಲೆಯ ದಕ್ಷಿಣದಲ್ಲಿ ಕೃಷ್ಣಾನದಿ, ಪಶ್ಚಿಮದಲ್ಲಿ ಭೀಮಾನದಿ, ಉತ್ತರದಲ್ಲಿ ಮುಲ್ಲಾಮಾರಿ ನದಿಗಳು ಜಿಲ್ಲೆಯನ್ನು ಮಹಾರಾಷ್ಟ್ರ ರಾಜ್ಯ ಬೀದರ ಮತ್ತು ವಿಜಯಪುರ ಜಿಲ್ಲೆಗಳಿಂದ ಪ್ರಾಕೃತಿಕವಾಗಿ ಬೇರ್ಪಡಿಸಿವೆ.

"ಗುಲಬರ್ಗಾ ಜಿಲ್ಲೆಯು 79^0–04 ಮತ್ತು 77^0–42 ಪೂರ್ವ ರೇಖಾಂಶ ಹಾಗೂ 16'–12' ಮತ್ತು 17'–46' ಉತ್ತರ ಅಕ್ಷಾಂಶಗಳ ನಡುವೆ ಹರಡಿಕೊಂಡಿದೆ. ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತಾರವು 16224 ಚದುರ ಕಿಲೋಮೀಟರ್ ಹೊಂದಿದ್ದು, ಇದು ರಾಜ್ಯದ ಶೇ. 8.46 ರಷ್ಟು ಪ್ರದೇಶವನ್ನು ಒಳಗೊಂಡಿದೆ. ವಿಸ್ತೀರ್ಣದಲ್ಲಿ ಗುಲಬರ್ಗಾ ಜಿಲ್ಲೆಯು ರಾಜ್ಯದ 6ನೇ ಸ್ಥಾನದಲ್ಲಿದೆ. 2001ರ ಜನಗಣತಿಯ ಪ್ರಕಾರ ಜಿಲ್ಲೆಯು ಒಟ್ಟು ಜನಸಂಖ್ಯೆ 35.82 ಲಕ್ಷದಷ್ಟಿದೆ. ಇದರಲ್ಲಿ 17.16 ಲಕ್ಷ ಪುರುಷರು, 17.66 ಲಕ್ಷ ಮಹಿಳೆಯರು ಇದ್ದಾರೆ. ಒಟ್ಟು ಜನಸಂಖ್ಯೆಯಲ್ಲಿ 22.72 ಲಕ್ಷ ಜನರು ಗ್ರಾಮೀಣ ಪ್ರದೇಶದಲ್ಲಿ ನೆಲೆಸಿದ್ದರೆ, ಉಳಿದ 13.10 ಲಕ್ಷ ಜನರು ನಗರ, ಪಟ್ಟಣ ಪ್ರದೇಶಗಳಲ್ಲಿ ಕಂಡು ಬರುತ್ತಾರೆ. ಪ್ರತಿ ಚದುರ ಕಿ.ಮೀ. ಪ್ರದೇಶದಲ್ಲಿ ಸರಾಸರಿ 225 ಜನ ವಾಸಿಸುತ್ತಾರೆಂದು ಜಿಲ್ಲಾ ಅಂಕಿ ಸಂಖ್ಯೆ ಹೇಳುತ್ತದೆ. ಪ್ರತಿ ಸಾವಿರ ಗಂಡಸರಿಗೆ 981 ಹೆಂಗಸರ ಪ್ರಮಾಣವಿದೆ. ರಾಜ್ಯದ ಜನಸಂಖ್ಯೆಯಲ್ಲಿ ಜಿಲ್ಲೆಯು ಏಳನೇ ಸ್ಥಾನವನ್ನು ಪಡೆದಿದೆ ಎಂದು ಹೇಳಲಾಗುತ್ತದೆ. ಜಿಲ್ಲೆಯಲ್ಲಿ ಒಟ್ಟು 9.15 ಲಕ್ಷ ಪರಿಶಿಷ್ಟ ಜಾತಿಗೆ ಸೇರಿದವರಿದ್ದಾರೆ. ಇದು ಜಿಲ್ಲೆಯ ಒಟ್ಟು ಜನಸಂಖ್ಯೆ 25.66% ರಷ್ಟು ಆಗಿರುತ್ತದೆ."[1]

ಜಿಲ್ಲಾ ಪುನರ್‌ವಿಂಗಡನಾ ಪೂರ್ವದಲ್ಲಿ ಜಿಲ್ಲೆಯಲ್ಲಿ ಹತ್ತು ತಾಲೂಕುಗಳಿದ್ದವು. ನಂತರ ಜಿಲ್ಲೆಯ ತಾಲೂಕು ಸ್ಥಾನವಾಗಿದ್ದ ಯಾದಗಿರಿಯನ್ನು ಜಿಲ್ಲಾ ಕೇಂದ್ರವಾಗಿಸಿ ಪುನರ್ ವಿಂಗಡಣೆಗೊಳಿಸಲಾಯಿತು. ಈಗ ಗುಲಬರ್ಗಾ ಜಿಲ್ಲೆಯು ಅಫಜಲಪುರ, ಆಳಂದ, ಗುಲಬರ್ಗಾ, ಚಿತ್ತಾಪುರ, ಚಿಂಚೋಳಿ, ಜೇವರಗಿ ಮತ್ತು ಸೇಡಂ ಹೀಗೆ ಒಟ್ಟು ಏಳು ತಾಲೂಕುಗಳನ್ನು ಹೊಂದಿದೆ.

ಗುಲಬರ್ಗಾ ಡೆಕ್ಕನ್ ಪ್ರಸ್ಥಭೂಮಿಗೆ ಸೇರಿದೆ. ಭೌಗೋಳಿಕವಾಗಿ, ಪ್ರಾಕೃತಿಕವಾಗಿ ಮತ್ತು ಹವಾಗುಣಗಳಿಂದಲೂ ಈ ಡಕ್ಕನ್ ಪ್ರಾಂತ ಮಾನವನ ನೆಲೆಗೆ ಅನುಕೂಲಕರವಾಗಿದೆ. ಕೃಷ್ಣಾ ಮತ್ತು ಭೀಮಾ ನದಿಗಳ ಪ್ರದೇಶವು ಜನಸಮುದಾಯಗಳ ಬದುಕಿಗೆ ಆಸರೆಯಾಗಿದೆ. ಪ್ರಾಚ್ಯ ಇತಿಹಾಸ ತಜ್ಞರ ಪ್ರಕಾರ ಈ ಪ್ರದೇಶವು "ನವಶಿಲಾಯುಗದ ವೇಳೆಗೆ ಇಲ್ಲಿನ ಜನರು ಕೃಷಿಕರಾಗಿದ್ದರು. ಸಾಮಾಜಿಕ ವ್ಯವಸಾಯ, ಪಶುಪಾಲನೆ ಅದಕ್ಕೆ ಬೇಕಾದ ತಂತ್ರಜ್ಞಾನವನ್ನು ರೂಢಿಸಿಕೊಂಡಿದ್ದರು."[2] ವ್ಯವಸಾಯ, ಭೂಮಿಯಲ್ಲಿ ದೊರಕುವ ಖನಿಜ ನಿಕ್ಷೇಪಗಳಂಥ ಪ್ರಾಕೃತಿಕ ಸಂಪತ್ತಿನಿಂದ ತುಂಬಿತುಳುಕಿತ್ತು. ಹೀಗಾಗಿ ಪ್ರಾಚೀನ ಕಾಲದಲ್ಲಿಯೇ ಜಿಲ್ಲೆಯಲ್ಲಿ ನಾಗರಿಕತೆ ಬೆಳೆದಿತ್ತೆಂದು ತಿಳಿದುಬರುತ್ತದೆ.

ಗುಲಬರ್ಗಾ ಜಿಲ್ಲೆಯ ಹೆಚ್ಚಿನ ಭಾಗವು ಡೆಕ್ಕನ್ (ದಕ್ಷಿಣ ಟ್ರ್ಯಾಪಶಿಲಾ) ಪ್ರದೇಶವಾಗಿದೆ. ಜಿಲ್ಲೆಯ ಮಧ್ಯಭಾಗದಲ್ಲಿ ಸ್ವಲ್ಪಮಟ್ಟಿಗೆ ಭೀಮಾ ನದಿ ಪಾತ್ರಕ್ಕೆ ಸೇರಿದ ಪ್ರದೇಶದಲ್ಲಿ ಸುಣ್ಣದ ಕಲ್ಲು ಮತ್ತು ಶೇದಿ ಕಲ್ಲಿನ ನಿಕ್ಷೇಪವಿದೆ. ಜಿಲ್ಲೆಯ ದಕ್ಷಿಣ ಮತ್ತು ಪೂರ್ವ ಭಾಗದ ಅಂಚಿನಲ್ಲಿ ಕೆಲವಡೆಗಳಲ್ಲಿ ಬಹಳ ಪ್ರಾಚೀನವಾದ ಪೈನಿನ್ಸುಲರ್ ನೈಸ್ ಶಿಲೆಗಳು ಕಂಡುಬರುತ್ತವೆ. ಜಿಲ್ಲೆಯು ಭಾರತದ ದಕ್ಷಿಣ ಪ್ರಸ್ತಭೂಮಿಗೆ ಸೇರಿದ್ದು, ಉತ್ತರದಿಂದ ದಕ್ಷಿಣಕ್ಕೆ ಇಳಿಜಾರಿನಿಂದ ಕೂಡಿದೆ. ಜಿಲ್ಲೆಯು ಸಮುದ್ರಮಟ್ಟದಿಂದ 300 ರಿಂದ 600 ಮೀ. ಎತ್ತರವಾಗಿದೆ. ಅಲ್ಲಲ್ಲಿ ಬೆಟ್ಟಸಾಲು, ಕಣಿವೆ ಹಾಗೂ ಸಮತಟ್ಟಾದ ಭೂಮಿಯನ್ನು ಕಾಣುತ್ತೇವೆ.

ಜಿಲ್ಲೆಯಲ್ಲಿ ಹರಿಯುವ ಕೃಷ್ಣಾ ಮತ್ತು ಭೀಮಾ ಇವೆರಡು ನದಿಗಳು ಅತ್ಯಂತ ಹಿಂದಾಗಿದ್ದು, ರೈತರ ಜೀವನಾಡಿಯಾಗಿವೆ. ಮಹಾರಾಷ್ಟ್ರದ ಸಹ್ಯಾದ್ರಿ ಶ್ರೇಣಿಯಲ್ಲಿರುವ ಸಾತಾರ ಜಿಲ್ಲೆಯ ಮಹಾಬಲೇಶ್ವರದಲ್ಲಿ ಉಗಮವಾಗಿ ಅಲ್ಲಿಂದ ಸಾತಾರಾ, ಸಾಂಗ್ಲಿ, ಕೊಲ್ಲಾಪುರ, ಬೆಳಗಾವ ಜಿಲ್ಲೆಗಳಲ್ಲಿ ಹರಿದು ನಾರಾಯಣಪುರ ಎಂಬಲ್ಲಿ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಭೀಮಾ ನದಿಯೂ ಮಹಾರಾಷ್ಟ್ರದ ಭೀಮಾಶಂಕರ ಎಂಬಲ್ಲಿ ಉಗಮಿಸುತ್ತದೆ. ಅಲ್ಲಿಂದ ಪೂರ್ವಾಭಿಮುಖವಾಗಿ ಹರಿದು ಗುಲಬರ್ಗಾ ಜಿಲ್ಲೆಯ ಅಫಜಲಪುರ ತಾಲೂಕಿನ ಉಡಚಣ ಗ್ರಾಮದ ಮೂಲಕ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಈ ಎರಡು ಮುಖ್ಯ ನದಿಗಳಲ್ಲದೆ ಅಮರಜಾ ಬೆಣ್ಣೆತೊರೆ, ಕಾಗಿನಾ, ಕಮಲಾವತಿ, ಮುಲ್ಲಾಮಾರಿ, ಬೋರಿ ನಾಲಾ ಮೊದಲಾದ ಉಪನದಿಗಳು ಹರಿಯುವುದರಿಂದ ಜಿಲ್ಲೆಯ ನದಿಗಳು ಎರಡೂ ದಡಗಳಲ್ಲಿ ಫಲವತ್ತಾದ ಮಣ್ಣನ್ನು ಹರಡಿ, ಅಂತರಜಲ ಸಂಪನ್ಮೂಲ ಹೆಚ್ಚಳಕ್ಕೆ ಕಾರಣವಾಗಿವೆ. ಜಿಲ್ಲೆಯ ವಾರ್ಷಿಕ ಮಳೆಯ ಪ್ರಮಾಣ ಹೆಚ್ಚಿಲ್ಲದಿದ್ದರೂ ಮುಂಗಾರು

ಮತ್ತು ಹಿಂಗಾರು ಮಾರುಗಳಿಂದ ಮಳೆಯಾಗುತ್ತದೆ. ಕಳೆದ 50 ವರ್ಷಗಳಲ್ಲಿ ಮಳೆಯ ಪ್ರಮಾಣದಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳು ಕಂಡುಬಬರುತ್ತಿದೆ. ಸು. 400 ರಿಂದ 700 ಮಿ.ಮೀ. ಮಳೆಯಾಗುತ್ತದೆ. ಉಷ್ಣತೆಯ ವಾರ್ಷಿಕ ಸರಾಸರಿಯಲ್ಲಿ ವ್ಯತ್ಯಾಸಗಳನ್ನು ಗಮನಿಸಬಹುದು. ಏಪ್ರೀಲ್-ಮೇ ತಿಂಗಳಲ್ಲಿ ಉಷ್ಣತೆ 45-46 ಸೆಲ್ಸಿಯಸ್ ಡಿಗ್ರಿಯವರೆಗೆ ಹೆಚ್ಚಾಗುತ್ತದೆ. ನವ್ಹಂಬರ್-ಡಿಸೆಂಬರ್ ಚಳಿಗಾಲದಲ್ಲಿ ಕಡಿಮೆ ಉಷ್ಣಾಂಶ 15.2 ರಿಂದ 20.06 ಡಿಗ್ರಿಯವರೆಗೆ ಇರುತ್ತದೆ.

ಜಿಲ್ಲೆಯ ಚಿಂಚೋಳಿ ಸ್ವಲ್ಪ ಪ್ರಮಾಣದಲ್ಲಿ ಸೇಡಂ ತಾಲೂಕುಗಳಲ್ಲಿ ಅರಣ್ಯ ಪ್ರದೇಶವಿದೆ. ಇಲ್ಲೆಲ್ಲ ಮಳೆ ಪ್ರಮಾಣ ಉಳಿದ ತಾಲೂಕುಗಳಲ್ಲಿಗಿಂತ ಸ್ವಲ್ಪ ಅಧಿಕ ಪ್ರಮಾಣದಲ್ಲಿ ಆಗುವುದು. ಉಳಿದ ತಾಲೂಕುಗಳಲ್ಲಿ ಅರಣ್ಯ ಪ್ರದೇಶ ಕ್ಷೀಣವಾಗಿರುವುದು. ಚಿಂಚೋಳಿ ತಾಲೂಕಿನ ಅರಣ್ಯದಲ್ಲಿ ತೇಗ, ಶ್ರೀಗಂಧ ಮತ್ತು ಮುತ್ತುಗ ಕಾಡುಮರಗಳು ಉಳಿದಂತೆ ಜಾಲಿ, ಬೇವು, ಆಲ, ಕಕ್ಕೆ, ದಿಂಡಿಲು ಮುಂತಾದ ಮರಗಳು ಕಂಡುಬರುತ್ತವೆ. ಕಾಡುಬೆಕ್ಕು, ಕೌಜುಗ, ಕತ್ತೆಕಿರುಬ, ನರಿ, ತೋಳ, ಕಾಡುಹಂದಿ, ಮುಳ್ಳಂದಿ, ಜಿಂಕೆ, ಮಂಗ, ಹೆಬ್ಬಾವು, ನಾಗರ ಕಾಳಿಂಗ, ಕೇರೆ ಇತರೆ ಸರಿಸೃಪಗಳು, ಮೊಲ, ನವಿಲು, ಕೌಜುಗ, ಕಾಗೆ, ಕೋಗಿಲೆ, ಪುರಲೆಹಕ್ಕಿ, ಪಾರಿವಾಳ, ಕಲ್ಲುಕೋಳಿ, ಕಬ್ಬಾರೆ, ಕ್ರೌಂಚ ಮೊದಲಾದ ಪ್ರಾಣಿ-ಪಕ್ಷಿಗಳಿವೆ.

ನದಿ ಪ್ರದೇಶದಲ್ಲಿ ಫಲವತ್ತತೆಯಿಂದ ಕೂಡಿದ ಕಪ್ಪು, ಕೆಂಪು, ಕಪ್ಪು ಮಿಶ್ರಿತ ಮಸಾರಿ, ಸೌಳು ಮಣ್ಣನ್ನು ಜಿಲ್ಲೆಯ ವಿವಿದೆಡೆ ಕಾಣುವೆವು. ಜೋಳ, ತೊಗರಿ, ಗೋಧಿ, ಮೆಕ್ಕೆಜೋಳ, ಸಜ್ಜಿ, ನವಣೆ ಮುಂಗಾರು ಬೆಳೆಗಳಾದ ಹುರುಳಿ, ಉದ್ದು, ಹೆಸರು, ಎಳ್ಳು, ಕಡಲೆ, ವಾಣಿಜ್ಯ ಬೆಳೆಗಳಾದ ಹತ್ತಿ, ಕುಸುಬೆ, ಸೂರ್ಯಕಾಂತಿ; ಕಬ್ಬು, ಅರಿಷಿಣ, ಬೆಳ್ಳುಳ್ಳಿ ಮುಂತಾದವುಗಳನ್ನು ನೀರಾವರಿ ಪ್ರದೇಶದಲ್ಲಿ ತರಕಾರಿ ಬೆಳೆಗಳನ್ನು ಬೆಳೆಯುವರು. ಜಿಲ್ಲೆಯ (ಈಗ ಯಾದಗಿರಿ ಜಿಲ್ಲೆಗೆ ಸೇರಿದ) ನಾರಾಯಣಪುರದಲ್ಲಿ ಕೃಷ್ಣಾ ನದಿಗೆ ಅಡ್ಡಲಾಗಿ ಆಣೆಕಟ್ಟೆ ಕೆಳದಂಡೆ ಕಾಲುವೆ ಮುಖಾಂತರ ಕೆಲವು ಪ್ರದೇಶ ನೀರಾವರಿ ಸೌಕರ್ಯವನ್ನು ಪಡೆದಿದೆ. ಭೀಮಾ ನದಿಗೆ ಅಫಜಲಪುರ ತಾಲೂಕಿನ ಕಡಣಿ, ಘತ್ತರಗಿ, ಸನ್ನತಿಗಳಲ್ಲಿ ಬ್ಯಾರೇಜು ನಿರ್ಮಿಸಿ ನೀರನ್ನು ತಡೆದು ನೀರಾವರಿಗೆ ಬಳಸಿಕೊಳ್ಳಲಾಗುತ್ತದೆ. ನೀರಾವರಿ ಸೌಲಭ್ಯವಿರುವ ಪ್ರದೇಶಗಳಲ್ಲಿ ಭತ್ತ, ಮೆಣಸಿನಕಾಯಿ, ಹತ್ತಿ ಸೇಂಗಾ ಬೆಳೆಯಲಾಗುತ್ತದೆ.

ಜಿಲ್ಲೆಯ ಬೇರೆ ಬೇರೆ ಸ್ಥಳಗಳಲ್ಲಿ ಕಬ್ಬಿಣ, ತಾಮ್ರ, ಯುರೇನಿಯಮ್, ಸವಳು, ಚಿನ್ನ ಮೊದಲಾದ ನಿಕ್ಷೇಪಗಳಿರುವುದು ಸಂಶೋಧನೆಯಿಂದ ದೃಢಪಟ್ಟಿದೆ. ಚಿಂಚೋಳಿ ತಾಲೂಕಿನ

ಸುಲೇಪೇಟೆ, ಬೀರನಳ್ಳಿ, ಕೋಡ್ಲಿ, ಮೇಘಾ ಮುಂತಾದ ಊರುಗಳಲ್ಲಿ ದೊರೆಯುವ ಸವಳ ಮಣ್ಣನ್ನು ಪೆಟ್ರೋಲಿಯಂ ಸುದ್ಧೀಕರಣಕ್ಕೆ ಸಾಬೂನು ತಯಾರಿಕೆಗೆ ರಫ್ತು ಆಗುತ್ತದೆ. ಮಿರಿಯಾಣ, ಕಲ್ಲೂರು, ನಿಡಗುಂದಾ, ಚಿತ್ತಾಪುರ ತಾಲೂಕಿನ ಶಹಾಬಾದ, ವಾಡಿ, ರಾವೂರ, ಭಂಕೂರು, ಮತ್ತಿತರಗಳಲ್ಲಿ ಪರಸಿ (ಪದರು ಶಿಲೆ) ಕಲ್ಲು, ಸುಣ್ಣದಕಲ್ಲು ಅಪಾರ ಪ್ರಮಾಣದಲ್ಲಿ ದೊರೆಯುವುದು. ಇಲ್ಲಿನ ಸುಣ್ಣದ ಕಲ್ಲನ್ನು ಸಿಮೆಂಟು ತಯಾರಿಸುವುದಕ್ಕೆ ಬಳಸುತ್ತಾರೆ. ಪಾಲಿಸ್ ಸ್ಟೋನ್ ಕಾರ್ಖಾನೆಗಳು ವಾಡಿ, ಶಹಾಬಾದ ಸೇಡಂ, ಮಳಖೇಡ ಸಿಮೆಂಟ್ ಕಾರ್ಖಾನೆಗಳು ಸ್ಥಳೀಯ ಸಾವಿರಾರು ಜನರಿಗೆ ಉದ್ಯೋಗವನ್ನು ನೀಡುತ್ತಿವೆ. ಇಡೀ ದೇಶದಲ್ಲಿಯೇ ಅಪಾರ ಪ್ರಮಾಣದಲ್ಲಿ ಜಿಲ್ಲೆಯಲ್ಲಿ ತೊಗರಿ ಬೆಳೆಯುತ್ತಿದ್ದ ಗುಲಬರ್ಗಾ ಜಿಲ್ಲೆ ತೊಗರಿ ಕಣಜ ಎಂದೇ ಹೆಸರಾಗಿದೆ.

ಗುಲಬರ್ಗಾ ಜಿಲ್ಲೆಯು ದಕ್ಷಿಣ ಪ್ರಸ್ತಭೂಮಿಯ ಬಯಲು ಪ್ರದೇಶವನ್ನು ಹೊಂದಿದ್ದರೂ ಇಲ್ಲಿನ ನದಿ, ಹಳ್ಳ, ಕೊಳ್ಳಗಳ ಪಾತ್ರ ಚಿಕ್ಕ-ಪುಟ್ಟ ಗುಡ್ಡ ಬೆಟ್ಟಗಳ ಆಶ್ರಯದಲ್ಲಿ ಪ್ರಾಚೀನ ಮಾನವನು ನೆಲೆಸಿದ್ದನು. ಜಿಲ್ಲೆಯ ಪ್ರಾಗೈತಿಹಾಸವನ್ನು ಗಮನಿಸಿದರೆ ಶಿಲಾಯುಗದಷ್ಟು ಹಿಂದೆಯೇ ಇಲ್ಲಿ ನೆಲೆಸಿದ ಮಾನವನ ಅವಶೇಷಗಳು ದೊರೆತಿವೆ. ಹಾಗೆ ನೋಡಿದರೆ "ಭೂರಚನಾ ಶಾಸ್ತ್ರಜ್ಞರ ಅಭಿಪ್ರಾಯದಂತೆ ದಖನ್ ಪ್ರಾಂತವೇ ಮನುಷ್ಯನ ಪುರಾತನ ವಾಸಸ್ಥಾನವಾಗಿದೆ. ಈ ಪ್ರಾಂತದಲ್ಲಿ ನಡೆಸಿದ ಪ್ರಾಚ್ಯ ಸಂಶೋಧನೆಗಳಿಂದ ಇದು ತಿಳಿದುಬಂದಿದೆ."[3] ಪ್ರಾಕೃತಿಕವಾಗಿ ದಖನ್ ಪ್ರಾಂತ ಮಾನವನ ವಾಸಕ್ಕೆ ಅನೇಕ ರೀತಿಯಲ್ಲಿ ಅನುಕೂಲಕರವಾಗಿತ್ತು. ಸಮೃದ್ಧ ಕಾಡು ತುಂಬಿ ಹರಿಯುವ ನದಿ ಹಳ್ಳಗಳು ಆಹಾರ ಉತ್ಪಾದನೆ, ವ್ಯವಸಾಯಕ್ಕೆ ಅನುಕೂಲಕರವಾದ ಫಲವತ್ತಾದ ಭೂಪ್ರದೇಶ ಇವೆಲ್ಲವೂ ಪ್ರಾಚೀನ ಜನಸಮುದಾಯಗಳ ಬದುಕಿಗೆ ಆಸರೆಯಾಗಿತ್ತು ಎಂದು ಹೇಳಬಹುದು.

ದಖನ್ ಪ್ರಾಂತದಲ್ಲಿನ ಗೋದಾವರಿ, ಕೃಷ್ಣಾ, ಭೀಮಾ, ತುಂಗಭದ್ರಾ ನದಿಗಳ ಪ್ರದೇಶವು ಜನಸಮುದಾಯಗಳಿಗೆ ನೆಲೆಬೀಡಾಗಿತ್ತೆಂದು ಪ್ರಾಚ್ಯ ಇತಿಹಾಸಕಾರರ ಅಭಿಪ್ರಾಯವಾಗಿದೆ. ನವಶಿಲಾಯುಗದ ವೇಳೆಗೆ ಇಲ್ಲಿನ ಜನರು ಪಶುಸಂಗೋಪನೆ, ಸಾಮೂಹಿಕ ವ್ಯವಸಾಯ. ಅದಕ್ಕೆ ಬೇಕಾದ ತಂತ್ರಜ್ಞಾನದ ಬಳಕೆಯನ್ನು ಕಲಿತಿದ್ದರು. ಈ ದಖನ್ ಪ್ರಾಂತಕ್ಕೆ ಸೇರಿದ ಉತ್ತರ ಕರ್ನಾಟಕದ ರಾಯಚೂರು ಜಿಲ್ಲೆಯ ಮಸ್ಕಿ, ಪಾಲ್ಕಿಗುಂಡ, ಸಂಗನಕಲ್ಲು ಕೊಪ್ಪಳ ಜಿಲ್ಲೆಯ ಗವಿಮಠ, ಪಿಕ್ಲಿಹಾಳ ಯಾದಗಿರಿ ಜಿಲ್ಲೆಯ ಕೊಡೇಕಲ್ಲು, ಹುಣಸಗಿ, ಬೂದಿಹಾಳ, ಶಿರವಾಳ ಗುಲಬರ್ಗಾ ಜಿಲ್ಲೆಯ ಸನ್ನತಿ, ರಾವೂರ, ಕೊಳಕೂರ, ಗೊಟ್ಟಂಗೊಟ್ಟಿ, ನಾಗಾವಿ ಮುಂತಾದ

ಸ್ಥಳಗಳು ನವಶಿಲಾಯುಗದ ಜನರ ವಾಸಸ್ಥಾನಗಳಾಗಿದ್ದವು. ಇತಿಹಾಸ ಪೂರ್ವಕಾಲಕ್ಕೆ ಈ ಪ್ರಾಂತ್ಯದಲ್ಲಿ ಕಬ್ಬಿಣ, ಚಿನ್ನ, ತಾಮ್ರ, ಕಂಚು ತಯಾರಿಸುವ ಕಲೆಯನ್ನು ಕಲಿತಿದ್ದರು. ಅದು ಉತ್ಪಾದನಾ ಸಾಧನವಾಗಿ ಪರಿಣಮಿಸಿತ್ತು.

ಈಗಾಗಲೇ ಮೇಲೆ ಹೇಳಿದಂತೆ ಗುಲಬರ್ಗಾ ಜಿಲ್ಲಾ ಪ್ರದೇಶವು ಪ್ರಾಕೃತಿಕ ಸಂಪದ್ಭರಿತವಾಗಿದೆ. ಭೀಮಾ ನದಿಯು ವಾಯುವ್ಯ, ಆಗ್ನೇಯ ದಿಕ್ಕಿನಲ್ಲಿ ಜಿಲ್ಲೆಯ ಮಧ್ಯದಲ್ಲಿ ಹರಿಯುತ್ತಿದ್ದು ಇದರ ಉಪನದಿಗಳು ಜಿಲ್ಲೆಯನ್ನು ಆವರಿಸಿವೆ. ಈ ನದಿಯ ಉತ್ತರ ಭಾಗದಲ್ಲಿ ಫಲವತ್ತಾದ ಕರಿಮಣ್ಣಿದೆ. ಈ ಮಣ್ಣಿನಲ್ಲಿ ಜೋಳ, ಭತ್ತ, ಗೋಧಿ, ಹತ್ತಿ, ತೊಗರಿ, ಸೇಂಗಾ, ಔಡಲ ಮುಂತಾದ ಮತ್ತು ಎಣ್ಣೆ ವಾಣಿಜ್ಯ ಬೀಜಗಳನ್ನು ಬೆಳೆಯಲಾಗುತ್ತಿತ್ತು. ಆದರೆ ಈ ಪ್ರಾಂತ್ಯದಲ್ಲಿ ಮಳೆ ಪ್ರಮಾಣ ಕಡಿಮೆ ಇರುವುದರಿಂದ ಗಣಿಗಾರಿಕೆ ಉತ್ಪಾದನೆ ಪಶುಪಾಲನೆ ನಡೆದವು. ಹೀಗಾಗಿ ಈ ಪ್ರದೇಶದಲ್ಲಿ ಸಾಮ್ರಾಜ್ಯಗಳು ಉದಯವಾಗಿ ಬೆಳೆಯಲು ಪ್ರಯತ್ನಿಸಿದವು.

ಹಳೆ ಶಿಲಾಯುಗದ ನೆಲೆಗಳು ಇರುವ ಸ್ಥಳಗಳಲ್ಲಿ ಮಾನವನು ರಚಿಸಿ ಬಳಸಿದ ಉಪಕರಣಗಳಿಂದ ಆತನ ದೈನಂದಿನ ಚಟುವಟಿಕೆಗಳನ್ನು ಗ್ರಹಿಸಬಹುದಾಗಿದೆ. ಆಹಾರಕ್ಕೋಸ್ಕರ ಕಲ್ಲಿನ ಉಪಕರಣಗಳಿಂದ ಗೆಡ್ಡೆಗೆಣಸು ಮತ್ತು ಫಲಗಳನ್ನು ಸಂಗ್ರಹಿಸುತ್ತಿದ್ದರು. ಈ ಜನರು ಸಾಮಾನ್ಯವಾಗಿ ಗವಿಗಳಲ್ಲಿ ಮತ್ತು ನೀರಿನ ಅನುಕೂಲತೆಗಳಿರುವ ಬೆಟ್ಟ ಗುಡ್ಡಗಳಲ್ಲಿ ಮತ್ತು ನದಿ ಹಳ್ಳಗಳ ಹತ್ತಿರದ ಆಶ್ರಯಗಳಲ್ಲಿ ವಾಸಮಾಡಿಕೊಂಡಿದ್ದರು. ಆಹಾರಕ್ಕೋಸ್ಕರ ಕಲ್ಲಿನ ಉಪಕರಣಗಳನ್ನು ಬಳಸುತ್ತಿದ್ದರು. ಈ ಉಪಕರಣಗಳಲ್ಲಿ ಬಹು ಮುಖ್ಯವಾಗಿ ಕೈಕೊಡಲಿ, ವರ್ತುಲ ಚಕ್ರ, ಬೇಟೆಯಾಡಿದ ಪ್ರಾಣಿಗಳ ಎಲುಬುಗಳನ್ನು ಸೀಳಲು ಸೀಳು ಗತ್ತಿಗಳನ್ನು ಬಳಸುತ್ತಿದ್ದರು.

ಕ್ರಮೇಣ ಆದಿಶಿಲಾಯುಗ ಹಂತದಿಂದ ಮಾನವನ ನಿತ್ಯ ಜೀವನದಲ್ಲಿ ಪರಿವರ್ತನೆಯಾಗುತ್ತ ಆತನು ನಿರ್ಮಿಸುತ್ತಿದ್ದ ಕಲ್ಲಿನ ಉಪಕರಣಗಳಲ್ಲಿ ಬದಲಾವಣೆಯಾಗುತ್ತ ಬಂತು. ಈ ಬದಲಾವಣೆಯ ಅಂಶಗಳನ್ನು ಜಿಲ್ಲೆಯ ಬೂದಿಹಾಳ ಹಾಗೂ ಇತರಡೆಗಳಲ್ಲಿ ದೊರೆತ ಉಪಕರಣಗಳಲ್ಲಿ ಗುರುತಿಸಲಾಗಿದೆ. ಇಲ್ಲಿ ಮರಳುಕಲ್ಲಿನ ಬದಲಾಗಿ ಜಾಸ್ಪರ್ ಮತ್ತು ಚರ್ಟ ಕಲ್ಲುಗಳನ್ನು ಉಪಕರಣಗಳ ತಯಾರಿಕೆಗೆ ಬಳಸಲಾಗಿದೆ. ಇವು ದೊಡ್ಡ ವರಟು ಕಲ್ಲುಗಳಿಗೆ

ಬದಲಾಗಿ ಚಕ್ಕೆಗಳನ್ನು ಎಬ್ಬಿಸಿ ತೆಳ್ಳಗಿನ ಮೊನೆಗಳು ತೂತು ಮಾಡಲು ಅನುಕೂಲವಾಗಿರುವಂಥ ಉಪಕರಣಗಳು ಬಳಕೆಗೆ ಬಂದವು.

ಮಧ್ಯಶಿಲಾಯುಗದ ಮಾನವ "ಆಹಾರ ಸಂಗ್ರಹಣೆಯ ಜೊತೆಗೆ ಶಿಲಾಪದರುಗಳ ಮೇಲೆ ರೇಖಾಚಿತ್ರಗಳನ್ನು ಬಿಡಿಸುವ ಹವ್ಯಾಸವನ್ನು ಬೆಳೆಸಿಕೊಂಡನು."[4] ಬಂಡೆಗಳ ಮೇಲೆ ಕೊರೆಯುವ ಕಲ್ಲಿನ ಉಪಕರಣದಿಂದ ಪ್ರಾಣಿಗಳ ಗೀರು ಚಿತ್ರಗಳನ್ನು ಹಾಗೂ ಗವಿಗಳಲ್ಲಿ ಖನಿಜ ಮತ್ತು ಸಸ್ಯ ಬಣ್ಣಗಳಿಂದ ರೇಖಾಚಿತ್ರಗಳನ್ನು ಬಿಡಿಸಲಾಗುತ್ತಿತ್ತು. ಗುರಸಣಗಿ, ಏವೂರ ಬೆಟ್ಟಗಳಲ್ಲಿ ಇಂಥ ಚಿತ್ರಗಳಲ್ಲದೆ ಮನುಷ್ಯರ ಆಕೃತಿಗಳನ್ನು ಸಹ ಬಿಡಿಸಲಾಗಿದೆ. ಇವುಗಳಲ್ಲಿ ಕೆಲವು ಹಳೆಯ ಶಿಲಾಯುಗ ಹಂತದಲ್ಲಿ ತೆಗೆದಿರಬಹುದೆಂದು ಊಹಿಸಲಾಗಿದೆ. ಈ ಪ್ರದೇಶದಲ್ಲಿ ಹಳೆಯ-ಮಧ್ಯ-ಅಂತ್ಯ ಶಿಲಾಯುಗಕ್ಕೆ ಸೇರಿದ ಉಪಕರಣಗಳು ಗೊಟ್ಟಂಗೊಟ್ಟಿ, ಶಿರವಾಳ, ಕೊಳಕೂರ, ಕೆಲ್ಲೂರು, ಹಿಪ್ಪರಗಿ ಮುಂತಾದ ನೆಲೆಗಳಲ್ಲಿ ಕಂಡುಬಂದಿವೆ.

ಪ್ರಾಚ್ಯ ಇತಿಹಾಸಕಾರರು ಅಂತ್ಯ ಶಿಲಾಯುಗದ ಮುಂದಿನ ಹಂತವನ್ನು ಸೂಕ್ಷ್ಮ ಶಿಲಾಯುಗವೆಂದು ಕರೆದಿರುವರು. ಈ ಕಾಲದಲ್ಲಿ ಮಾನವನು ಅತಿ ಸಣ್ಣ ಹಾಗೂ ಸೂಕ್ಷ್ಮ ಶಿಲಾ ಉಪಕರಣಗಳನ್ನು ತಯಾರಿಸುವುದನ್ನು ಕಲಿತಿದ್ದನು. ಉತ್ತಮ ಜಾತಿಯ ಕಲ್ಲುಗಳಲ್ಲಿ "1 ಸೆಂ.ಮೀ. ಉದ್ದ ಮತ್ತು 3 ಸೆಂ.ಮೀ. ಅಗಲದ ಉಪಕರಣಗಳನ್ನು ತಯಾರಿಸಿದ್ದು ಕಂಡುಬರುತ್ತವೆ."[5] ಇವುಗಳನ್ನು ಸಣ್ಣ ಸಣ್ಣ ಗಿಡ ಗಂಟೆ, ಸಸ್ಯಗಳನ್ನು ಕೊಯ್ಯುವುದಕ್ಕೆ ಬಳಸಲಾಗುತ್ತಿತ್ತು. ಇದರಿಂದ ಸೂಕ್ಷ್ಮ ಶಿಲಾಯುಗದ ಹೊತ್ತಿಗೆ ಈ ಪ್ರದೇಶದ ಆದಿ ಮಾನವರು ವ್ಯವಸಾಯ ಪದ್ಧತಿಯನ್ನು ರೂಢಿಸಿಕೊಂಡಿದ್ದರೆಂದು ಹೇಳಬೇಕಾಗುತ್ತದೆ. ಪ್ರಾಣಿಗಳ ಎಲುಬುಗಳಿಂದ ಕಿವಿಯೋಲೆ, ಕೊರಳಾಭರಣಗಳನ್ನು ತಯಾರಿಸುತ್ತಿದ್ದರು.

ನೂತನ ಶಿಲಾಯುಗದ ವೇಳೆಗೆ ಮಾನವನ ಚಟುವಟಿಕೆಗಳಲ್ಲಿ ಸಂಪೂರ್ಣ ಬದಲಾವಣೆ ಕಾಣಿಸಿಕೊಂಡವು. ವಾಸದ ಮನೆಗಳು ನದಿ, ಬೆಟ್ಟ, ಹಳ್ಳಗಳ ಆಶ್ರಯದಲ್ಲಿ ಫಲವತ್ತಾದ ಭೂಮಿಯಲ್ಲಿ ಕೃಷಿ ಚಟುವಟಿಕೆ ಹಾಗೂ ಕುರಿ, ಮೇಕೆ, ದನಗಳ ಸಾಕಾಣಿಕೆ ಪ್ರಾರಂಭಿಸಿ ನಾಗರಿಕತೆಯನ್ನು ಕಟ್ಟಿಕೊಂಡು ಬಾಳಲು ಪ್ರಾರಂಭಿಸಿದರು. ಜಿಲ್ಲೆಯ ಕೃಷ್ಣಾ ಮತ್ತು ಅದರ ಉಪನದಿಗಳ ಬಯಲು ಪ್ರದೇಶದಲ್ಲಿ ಇಂಥ ನಾಗರಿಕತೆ ನೆಲೆಗಳನ್ನು ಕಾಣುವೆವು.

2.2 ಗುಲಬರ್ಗಾ ಜಿಲ್ಲೆಯ ಚಾರಿತ್ರಿಕ ಹಿನ್ನೆಲೆ

ಜಿಲ್ಲೆಯ ವೈರುಧ್ಯಗಳಿಂದ ಕೂಡಿರುವ ಭೌಗೋಳಿಕ ಪರಿಸರ ಹಾಗೂ ಜೀವ ಪರಿಸರಗಳಿಗೆ ಅನುಗುಣವಾಗಿ ಇಲ್ಲಿನ ಚರಿತ್ರೆಯು ನಿರ್ಮಾಣಗೊಂಡಿದೆ. 19ನೇ ಶತಮಾನದಲ್ಲಿ ಪ್ರಾಕ್ತನ ಶಾಸ್ತ್ರದ ಅಧ್ಯಯನ ಕರ್ನಾಟಕದ ಇತರೆ ಪ್ರದೇಶಗಳಲ್ಲಿ ಗುಲಬರ್ಗಾ ಜಿಲ್ಲೆಯಲ್ಲಿಯೂ ನಡೆದು ಬಂದಿರುವುದು, ಜಿಲ್ಲೆಯ ಚಾರಿತ್ರಿಕ ಪ್ರಾಚೀನತೆ ಶಿಲಾಯುಗದಿಂದ ಪ್ರಾರಂಭವಾಗುತ್ತದೆ. ಶಿಲಾಯುಗವು ಅತ್ಯಂತ ಸುಧೀರ್ಘ ಕಾಲವನ್ನು ಹೊಂದಿದೆ. ಅದು ಹಳೆಯ ಶಿಲಾಯುಗ, ಮಧ್ಯ ಶಿಲಾಯುಗ (ಸೂಕ್ಷ್ಮಶಿಲಾಯುಗ), ನವಶಿಲಾಯುಗ, ತಾಮ್ರ ಶಿಲಾಯುಗ, ಬೃಹತ್ ಶಿಲಾಯುಗಗಳಲ್ಲಿ ವ್ಯಾಪಿಸಿಕೊಂಡಿದೆ. ಶಿಲಾಯುಗದ ಪ್ರತಿಯೊಂದು ಹಂತವನ್ನು ಅಂದಿನ ಮಾನವ ಆಯುಧೋಪಕರಣಗಳನ್ನು ತಯಾರಿಸಲು ಬಳಸಿದ ತಂತ್ರ ಹಾಗೂ ಅದರ ಮೂಲಕ ಸಿದ್ಧಪಡಿಸಿದ ಉಪಕರಣಗಳ ಮಾದರಿ ಮತ್ತು ಆಕೃತಿಗಳಿಗೆ ಅನುಗುಣವಾಗಿ ನಿರ್ಧರಿಸಲಾಗಿದೆ.

ಗುಲಬರ್ಗಾ ಜಿಲ್ಲೆಯು ದಖನ್ ಪ್ರಾಂತ್ಯವನ್ನು ಒಳಗೊಂಡಿದ್ದಿದೆ. ಈ ಜಿಲ್ಲೆಯ ಸಂಶೋಧನೆಗಳಿಂದ ಇಲ್ಲಿ ಶಿಲಾಯುಗದ ವಿವಿಧ ಕಾಲ ಘಟ್ಟಗಳಲ್ಲಿ ಮಾನವನು ನೆಲೆ ಹೊಂದಿದ್ದನೆಂದು ತಿಳಿದು ಬರುತ್ತದೆ. ಈ ಪ್ರದೇಶವು ಪ್ರಾಕೃತಿಕವಾಗಿ, ನೀರು, ಮಣ್ಣು ಹವಾ ಗುಣಗಳಿಂದ ಉತ್ತಮವಾಗಿದ್ದು ಪುರಾತನ ಕಾಲದಿಂದಲೂ ಮಾನವನು ಇಲ್ಲಿ ನೆಲೆಯೂರಿ ಪಶುಸಂಗೋಪನೆ, ಕೃಷಿ ಇತರ ಚಟುವಟಿಕೆಗಳನ್ನು ಮಾಡಿಕೊಂಡು ಬಂದಿದ್ದಾನೆ. ಅದರಲ್ಲೂ ಕೃಷ್ಣಾ ಮತ್ತು ಭೀಮಾ ನದಿಗಳ ಪ್ರದೇಶವು ಜನ ಸಮುದಾಯಗಳ ಬದುಕಿಗೆ ಆಸರೆಯಾಗಿತ್ತು. ನವಶಿಲಾಯುಗದ ವೇಳೆಗೆ ಇಲ್ಲಿ ಜನರು ಕೃಷಿಕರಾಗಿದ್ದು. ಈ ಪ್ರಾಂತ್ಯದಲ್ಲಿನ ವ್ಯವಸಾಯ ಉತ್ಪಾದನೆ, ಗಣಿಗಾರಿಕೆ, ಉತ್ಪಾದನೆ ಉತ್ತಮವಾಗಿತ್ತು. ಈ ಎಲ್ಲ ಕಾರಣಗಳಿಗಾಗಿ ಈ ಎಲ್ಲ ಸಂಪತ್ತನ್ನು ಉಪಯೋಗಿಸಿಕೊಳ್ಳುವ ಸಲುವಾಗಿ ಹಲವು ರಾಜ ಪ್ರಭುತ್ವಗಳು ಜಿಲ್ಲೆಯಲ್ಲಿ ಸ್ಥಾಪಿತವಾಗಿ, ನೆಲೆಯೂರಿದವು ಎಂದು ಹೇಳಬಹುದು.

ಜಿಲ್ಲೆಯ ಚರಿತ್ರೆಯು ಮೌರ್ಯರ ಆಳಿಕೆಯಿಂದ ಪ್ರಾರಂಭವಾಗುತ್ತದೆ. ಕ್ರಿ.ಪೂ. 274–233 ರಲ್ಲಿದ್ದ ಮೌರ್ಯ ಸಾಮ್ರಾಟ ಅಶೋಕನ ಆಡಳಿತಕ್ಕೆ ಈ ಜಿಲ್ಲೆಯು ಸೇರಿತ್ತು. ಕಲಬುರ್ಗಿ ಜಿಲ್ಲೆಯ ಚಿತ್ತಾಪೂರ ತಾಲೂಕಿನ ಸನ್ನತಿ, ನಾಗಾವಿ, ಮತ್ತಿತರ ಪ್ರದೇಶಗಳಲ್ಲಿಯೂ ಅಶೋಕನ ಕಾಲದ ಶಾಸನಗಳು, ಸ್ಮಾರಕಗಳು ದೊರೆತಿರುವವು, ಅಶೋಕನು ತನ್ನ ಬೌದ್ಧ ಧರ್ಮ ಪ್ರಸಾರಕ್ಕಾಗಿ ಈ ಶಾಸನ ಸ್ಮಾರಕಗಳನ್ನು ನಿರ್ಮಿಸಿರಬೇಕು. ಇವು ದೊರೆತಿರುವ ಸ್ಥಗಳು ಆ ಕಾಲದಲ್ಲಿ ದಖನ್

ಪ್ರಾಂತದ ಮುಖ್ಯ ಧಾರ್ಮಿಕ, ಸಾಮಾಜಿಕ, ರಾಜಕೀಯ, ಶೈಕ್ಷಣಿಕ, ಆರ್ಥಿಕ, ಸಾಂಸ್ಕೃತಿಕ ಕೇಂದ್ರಗಳಾಗಿದ್ದಿರಬೇಕು.

ಜಿಲ್ಲೆಯನ್ನು ಕಲಬುರಗಿ, ಕಲಬುರ್ಗಿ, ಕಲ್ಬುರ್ಗಿ ಮತ್ತು ಗುಲಬರ್ಗಾ ಎಂಬ ಮುಂತಾದ ಪರ್ಯಾಯ ಹೆಸರುಗಳಿಂದ ಕರೆಯಲಾಗುತ್ತದೆ. ಐತಿಹಾಸಿಕವಾಗಿ ಸುಮಾರು ಕ್ರಿ.ಶ. 12–13ನೇ ಶತಮಾನದ ಅಫಜಲ್‌ಪುರ ತಾಲೂಕಿನ ಚಿನಮಳ್ಳಿ, ಗುಲಬರ್ಗಾ ತಾಲೂಕಿನ ಹುಣಸಿ ಹಡಗಿಲ್ ಮತ್ತು ಕ್ರಿ.ಶ. 14ನೇ ಶತಮಾನದ ನಾಗನಳ್ಳಿ ಶಿಲಾಶಾಸನಗಳಲ್ಲಿ 'ಕಲಂಬುರಿಗೆ' ಎಂದು ಉಲ್ಲೇಖಗೊಂಡಿರುವುದು ಹಾಗೆಯೇ ಹಾಸನ ಜಿಲ್ಲೆಯ ಬೇಲೂರಿನ ಕ್ರಿ.ಶ. 1397ರ ಶಾಸನ ಕ್ರಿ.ಶ. 1532 ರ ಶಿರವಾಳ ಶಾಸನಗಳಲ್ಲಿಯೂ ಕ್ರಮವಾಗಿ ಕಲಬುರಗೆ ಹಾಗೂ ಕಲಬುರಗಿ' ಎಂದು ದಾಖಲಾಗಿದೆ"[5] ಅದರಂತೆ "ವಿಜಯನಗರಕ್ಕೆ ಬಂದಿದ್ದ ಪರ್ಶಿಯನ್ ರಾಯಭಾರಿ ರಝಾಕನು ಇದನ್ನು ಕಲಬುರ್ಗಾ' ಎಂದು ಹೇಳಿದ್ದಾನೆ"[6] ಜಿಲ್ಲೆಯ ಹೆಸರು ಶಾಸನ, ಜನ ಬಳಕೆಯಲ್ಲಿ ಕಲಂಬರಿಗೆ–ಕಲಬುರಗಿ ಇದ್ದದ್ದು. ನಂತರದ ಮುಸ್ಲಿಂ ಆಳರಸರ ಕಾಲದಲ್ಲಿ ಕಲಬುರ್ಗ>ಗುಲಬರ್ಗಾ ಎಂದು ಬದಲಾಣೆಗೊಂಡಿರ ಬಹುದಾಗಿದೆ.

ಜಿಲ್ಲೆಯ ಇತಿಹಾಸವು ಮೌರ್ಯರ ಆಳ್ವಿಕೆಯೊಂದಿಗೆ ತಳಕು ಹಾಕಿಕೊಂಡಿರುವುದಾದೂ ಈ ಪ್ರದೇಶವನ್ನು ನೇರವಾಗಿ ಆಳಿದವರಲ್ಲಿ ಶಾತವಾಹನರು, ಮಳಖೇಡದ ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಬಹಮನಿ ಸುಲ್ತಾನರು, ಹೈದರಾಬಾದ ನಿಜಾಮ ಮತ್ತು ಸ್ಥಳೀಯ ಪಾಳೇಯಗಾರರು, ಸಂಸ್ಥಾನಿಕರು ಪ್ರಮುಖರಾಗಿದ್ದಾರೆ.

ಮೌರ್ಯರಿಗೆ ಸಾಮಂತರಾಗಿದ್ದು, ಅವರ ನಂತರ ಅವರ ಉತ್ತರಾಧಿಕಾರಿಗಳಾಗಿ ಶಾತವಾಹನರು ಅಧಿಕಾರಕ್ಕೆ ಬಂದರು. ಇವರೂ ಕೂಡ ಮೌರ್ಯರ ಆಡಳಿತ ವ್ಯವಸ್ಥೆಯನ್ನೇ ಹಲ ಕೆಲವು ಮಾರ್ಪಾಡುಗಳೊಂದಿಗೆ ಮುಂದುವರಿಸಿದರು. ಆಡಳಿತ ವಿಭಾಗಗಳು ಮತ್ತು ಅಧಿಕಾರಿಗಳ ಹುದ್ದೆಗಳ ಹೆಸರುಗಳು ಮೌರ್ಯರ ಸಂಪ್ರದಾಯದಂತೆ ಮುಂದುವರೆದವು. ಗ್ರಾಮವು ಅತ್ಯಂತ ಚಿಕ್ಕ ಆಡಳಿತ ಘಟಕವಾಗಿದ್ದು ಅದನ್ನು ನೋಡಿಕೊಳ್ಳಲು ಗ್ರಾಮಿಕ ಎಂಬ ಅಧಿಕಾರಿ ಇದ್ದನು. ಪಟ್ಟಣಗಳಲ್ಲಿ ನಿಗಮ ಸಭೆ ಇಂದಿನ ನಗರ ಪಾಲಿಕೆಗಳಂತೆ ಕಾರ್ಯ ನಿರ್ವಹಿಸುತ್ತಿದ್ದವು.

ಕ್ರಿ.ಶ. 9ನೇ ಶತಮಾನದಲ್ಲಿ ಗುಲಬರ್ಗಾ ಜಿಲ್ಲೆಯು ಕರ್ನಾಟಕದ ಚರಿತ್ರೆಯಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸಿತ್ತು. ಈಜಿಲ್ಲೆಯ ಸೇಡಂ ತಾಲೂಕಿನಲ್ಲಿರುವ ಮಳಖೇಡವು ರಾಷ್ಟ್ರಕೂಟ ಅರಸರ ರಾಜಧಾನಿಯಾಗಿತ್ತೆಂದು ಇತಿಹಾಸಕಾರರು ಅಭಿಪ್ರಾಯಪಡುತ್ತಾರೆ. ಈ ಬಗೆಗೆ

ವಿದ್ವಾಂಸರಲ್ಲಿ ಅಭಿಪ್ರಾಯ ಭೇದವಿರುವುದು. ಇದು ಇನ್ನೂ ಚರ್ಚಾ ವಿಷಯವಾಗಿದೆ ಎಂದೇ ಹೇಳಬೇಕು. ರಾಷ್ಟ್ರಕೂಟರು ಕನ್ನಡ ಅರಸರಾಗಿದ್ದು. ಅವರ ಸಾಮ್ರಾಜ್ಯವು ದಕ್ಷಿಣದಲ್ಲಿ ಕಾವೇರಿಯಿಂದ ಉತ್ತರದಲ್ಲಿ ಮಹಾರಾಷ್ಟ್ರದಲ್ಲಿನ ಗೋದಾವರಿ ನದಿಯವರೆಗೆ ವಿಸ್ತರಿಸಲ್ಪಟ್ಟಿತ್ತು. ಈ ವಿಶಾಲವಾದ ರಾಜ್ಯದಲ್ಲಿ ಹಲವು ಆಡಳಿತ ಪ್ರಾಂತ್ಯಗಳಿದ್ದವು ಇದನ್ನು ಕ್ರಿ. ಶ. 850 ರಲ್ಲಿ ಅಮೋಘವರ್ಷ ನೃಪತುಂಗನ ಆಸ್ಥಾನ ಕವಿ ಶ್ರೀ ವಿಜಯನು ಕವಿರಾಜ ಮಾರ್ಗದಲ್ಲಿ ಉಲ್ಲೇಖಿಸಲ್ಪಟ್ಟಿರುವನು.

ರಾಷ್ಟ್ರಕೂಟರ ಕಾಲದಲ್ಲಿ ಭೂಮಾಲೀಕರು ಪ್ರಬಲರಾಗಿ ಪ್ರಭುತ್ವ ಮತ್ತು ಸಮಾಜದ ನಡುವೆ ಮಧ್ಯವರ್ತಿಯಾಗಿ ನಿಂತರು. ಭೂ ಮಾಲೀಕರಂತು ನೇರವಾಗಿ ಪ್ರಭುತ್ವವನ್ನು; ನಿಯಂತ್ರಿಸುವಷ್ಟು ಬಲವಂತರಾಗಿದ್ದರು. ಇವರು ಅನೇಕ ಉತ್ಪನ್ನಗಳ ಮೇಲೆ ತಮ್ಮ ಹಿಡಿತವನ್ನು ಸಾಧಿಸಿದ್ದರು. ವಣಿಕ ಸಮಾಜವಂತೂ ನಾಡು ಮತ್ತು ಭಾಷೆಗಳ ಗಡಿಯನ್ನು ಮೀರಿ ತಮ್ಮ ವಾಣಿಜ್ಯ ಚಟುವಟಿಕೆಗಳನ್ನು ಬೆಳೆಸಿಕೊಂಡಿದ್ದರು. ಇವರು 'ವಣಿಕ' ಸಂಘ ಸಂಸ್ಥೆಗಳನ್ನು ಕಟ್ಟಿಕೊಂಡು ಪ್ರಬಲರಾಗಿದ್ದರು.ಆಡಳಿತವರ್ಗ ಮತ್ತು ವಣಿಕ ವರ್ಗಗಳು ಗಣಿಗಾರಿಕೆ, ಕೃಷಿ, ವ್ಯಾಪಾರ,ರಾಜಾದಾಯ (ತೆರಿಗೆ) ನಿಗದಿ, ಪ್ರಾಕೃತಿಕ ಉತ್ಪನ್ನಗಳು, ಬಿಟ್ಟಿ ಚಾಕರಿ ಪಡೆಯುವುದು ಇತ್ಯಾದಿ ಹಕ್ಕುಗಳನ್ನು ಹೊಂದಿದ್ದರು.

ರಾಷ್ಟ್ರಕೂಟರ ಕಾಲದಲ್ಲಿ ವರ್ಣ ವ್ಯವಸ್ಥೆ ಪ್ರಧಾನವಾಗಿತ್ತು. ದುಡಿಯುವ ವರ್ಗ, ಶೂದ್ರರು. ತಳ ಸಮುದಾಯಗಳನ್ನು ಪೌರ ಸೇವೆ, ಬಿಟ್ಟಿ ಸೇವೆಗಳಿಗೆ ಬಳಸಿಕೊಳ್ಳಲಾಗುತ್ತಿತ್ತೆಂದು ಹೇಳಬಹುದಾಗಿದೆ. ಕ್ರಿ.ಶ. 10ನೇ ಶತಮಾನದ ವೇಳೆಗೆ ನಗರ, ಪಟ್ಟಣಗಳು ಹುಟ್ಟಿಕೊಳ್ಳ ತೊಡಗಿದವು. ಅಲ್ಲದೆ ಮೇಲಿಂದ ಮೇಲೆ ಯುದ್ಧಗಳು ನಡೆಯುತ್ತಿದ್ದವು. ಯುದ್ಧದಲ್ಲಿ ಸೆರೆ ಸಿಕ್ಕವರನ್ನು ತಂದು ಗುಲಾಮರಾಗಿ ಮಾಡಿ, ಪೌರ ಸೇವೆ, ಸಫಾಯಿ ಕರ್ಮಚಾರಿ ಕೆಲಸಗಳಿಗೆ ಅವರುಗಳನ್ನು ಶ್ರೀಮಂತರು, ಆಡಳಿತ ವರ್ಗಗಳು ಬಳಸಿಕೊಂಡವೆಂತಲೂ ಹೇಳಬಹುದಾಗಿದೆ.

ರಾಷ್ಟ್ರಕೂಟರನ್ನು ಬದಿಗೆ ಸರಿಸಿ ಅಧಿಕಾರಕ್ಕೆ ಬಂದ ಚಾಲುಕ್ಯರು ಮಾನ್ಯಖೇಟ (ಈಗಿನ ಮಳಖೇಡ) ದಲ್ಲಿ ಕೆಲವು ಕಾಲ ಆಳಿ, ನಂತರ ತಮ್ಮ ರಾಜಧಾನಿಯನ್ನು ಬೀದರ ಜಿಲ್ಲೆಯ ಈಗಿನ ಬಸವಕಲ್ಯಾಣಕ್ಕೆ ಸ್ಥಳಾಂತರಿಸಿದರು. ಮುಂದೆ ಇತಿಹಾಸದಲ್ಲಿ ಇವರು ಕಲ್ಯಾಣ ಚಾಲುಕ್ಯರೆಂದು ಪ್ರಸಿದ್ಧರಾದರು. ಚಾಲುಕ್ಯರಲ್ಲಿ ಆರನೆಯ ವಿಕ್ರಮಾದಿತ್ಯ ಅತ್ಯಂತ ಪ್ರಬಲ ಹಾಗೂ ತುಂಬಾ ಜನಪ್ರಿಯ ಚಕ್ರವರ್ತಿಯೆನಿಸಿದ್ದನು. ಇಮ್ಮಡಿ ಸೋಮೇಶ್ವರ ತರುವಾಯ ಕ್ರಿ. ಶ. 1076ರಲ್ಲಿ ಕಲ್ಯಾಣ

ನಗರದಲ್ಲಿ ಪಟ್ಟಾಭಿಷಿಕ್ತನಾದನು. ಈತನು ತನ್ನ ಹೆಸರಿನ ವಿಕ್ರಮಶಕೆಯನ್ನು ಪ್ರಾರಂಭಿಸಿದನು. ಆರನೇ ವಿಕ್ರಮಾದಿತ್ಯನ ಕಾಲದಲ್ಲಿ ಸಮಾಜದಲ್ಲಿ ವರ್ಣ ಮತ್ತು ಜಾತಿ ವ್ಯವಸ್ಥೆ ಕಟ್ಟು ನಿಟ್ಟಾಗಿ ಆಚರಣೆಯಲ್ಲಿ ಹಿಂದಿನ ಆಳುವ ವರ್ಗಗಳು ಸಮಾಜದ ಮೇಲೆ ತಮ್ಮ ಹಿಡಿತವನ್ನು ಮುಂದುವರಿಸಿಕೊಂಡು ಬಂದಿದ್ದವು. ಶೂದ್ರರು, ಅಂತ್ಯಜರು ಈ ಕಾಲದಲ್ಲಿಯೂ ಬಿಟ್ಟಿ ಚಾಕರಿಗೊಳಪಟ್ಟಿದ್ದರೆಂದು ಹೇಳಬೇಕು. ಈತನ ಕಾಲದಲ್ಲಿಯೇ ವಿಜ್ಞಾನೇಶ್ವರನೆಂಬ ಪಂಡಿತನು ಹಿಂದು ನ್ಯಾಯ ಶಾಸ್ತ್ರ ಗ್ರಂಥವಾದ ಮಿತಾಕ್ಷರವನ್ನು ರಚಿಸಿದನು. ಅವಿಭಕ್ತ ಕುಟುಂಬ, ಆಸ್ತಿಹಕ್ಕು, ಕಾನೂನು ಕಟ್ಟಳೆಗಳ ಕುರಿತು ಈ ಗ್ರಂಥವು ವಿಸ್ತೃತವಾಗಿ ವಿವರಿಸುತ್ತದೆ.

ಕಲ್ಯಾಣ ಚಾಲುಕ್ಯರನ್ನು ಬದಿಗೆ ತಳ್ಳಿ ಕಲಚೂರ್ಯರು ಕ್ರಿ.ಶ. 1162 ರಿಂದ 1184 ರ ವರೆಗೆ ಈ ಪ್ರದೇಶವನ್ನು ಆಳಿದರು. ಇವರ ಆಳ್ವಿಕೆಯ ಕಾಲಾವಧಿ ಸುಮಾರು 22 ವರ್ಷಗಳು ಮಾತ್ರ. ಈ ಮನೆತನದ ಬಿಜ್ಜಳ ಕಾಲದಲ್ಲಿ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಸಂಘರ್ಷಗಳು ಜರುಗಿದವು. ಅದರಿಂದಾದ ಪರಿವರ್ತನೆ, ಪರಿಣಾಮಗಳಿಂದ ಮಧ್ಯ ಕಾಲೀನ ಕರ್ನಾಟಕದ ಚರಿತ್ರೆ ಅನನ್ಯವಾಗಿಸಿದೆ. ಕಲಚೂರಿ ಬಿಜ್ಜಳನ ಮಂತ್ರಿಯಾಗಿದ್ದ ಬಸವಣ್ಣನ ನೇತೃತ್ವದಲ್ಲಿ ಕಲ್ಯಾಣದಲ್ಲಿ ಬಹುದೊಡ್ಡದಾದ ಆಂದೋಲನವು ನಡೆಯಿತು. ಈ ಆಂದೋಲನದ ಭಾಗವಾಗಿ ಶರಣರು ವಚನಗಳನ್ನು ಕಟ್ಟಿದರು. ಅಂದಿನ ಶರಣರು ನಡೆಸಿದ ಆಂದೋಲನದಲ್ಲಿ ಅನೇಕ ತಳ ಸಮುದಾಯದ ಕರ್ಮಿಗಳು ಪಾಲ್ಗೊಂಡಿದ್ದರು. ಅವರಲ್ಲಿ ಡೋಣಿ ನಡೆಸುವವರು, ಹಗ್ಗ ಹೊಸೆಯುವರು, ಚರ್ಮ ಹದ ಮಾಡುವವರು, ಹತ್ತಿ-ಹಿಂಜಿ ದಾರ ಮಾಡುವರು, ಒಕ್ಕಲಿಗರು ಚಪ್ಪಲಿ ತಯಾರಿಸುವವರು. ಕೇರುವವರು, ಕುಟ್ಟುವವರು ಬೀಸುವವರು, ನೇಕಾರರು, ಕುಂಬಾರರು, ಕಂಬಾರರು, ಹೆಂಡ ಮಾರುವವರು, ಬಹುರೂಪಿ ಕಲಾವಿದರು ಊರ ಬೀದಿಗಳನ್ನು ಸ್ವಚ್ಛಗೊಳಿಸುವ ಕರ್ಮಚಾರಿಗಳು ಮುಂತಾದವರಿದ್ದರು. 12ನೇ ಶತಮಾನದ ಹೊತ್ತಿಗೆ ಭೂಮಾಲೀಕರು, ಶ್ರೀಮಂತರು, ಪುರೋಹಿತ ಶಾಹಿ ಶಕ್ತಿಗಳು ಸೇರಿಕೊಂಡು ತಳ ಸಮುದಾಯದ ದುಡಿಯುವ ವರ್ಗವನ್ನು ಮತ್ತು ಕಸುಬುದಾರರನ್ನು ಶೋಷಣೆಗೆ ಗುರಿ ಮಾಡಿದ್ದವು. ದೇವಸ್ಥಾನ ವ್ಯವಸ್ಥೆಯು ಕಸುಬುದಾರರನ್ನು ಮಧ್ಯವರ್ತಿ ಭೂಮಾಲಿಕ ವ್ಯವಸ್ಥೆಯ ರೈತರನ್ನು ಆಳುವ ವ್ಯವಸ್ಥೆ ದುಡಿಯುವ ವರ್ಗವನ್ನು ಸುಲಿಯುತ್ತಿತ್ತು ಈ ಎಲ್ಲ ಶೋಷಿತ ಸಮುದಾಯಗಳು ಅಂದಿನ ಶರಣರು ಪ್ರಾರಂಭಿಸಿದ್ದ ಚಳವಳಿಯನ್ನು ಬೆಂಬಲಿಸಿ ಅದರಲ್ಲಿ ತಾವೂ ಪಾಲ್ಗೊಂಡಿದರು. ಬಸವಣ್ಣನ ಮುಂದಾಳತ್ವದಲ್ಲಿ ನಡೆದ ಈ ಆಂದೋಲನವನ್ನು ಶರಣ ಚಳವಳಿ, ವಚನಕಾರರ ಚಳವಳಿ,

ಎಂತಲೂ ಕರೆಯಲಾಗುತ್ತದೆ. ಅನೇಕ ದುಡಿಯುವ ಸಮುದಾಯಗಳು ಹೊಸದಾಗಿ ಸ್ಥಾಪಿತವಾಗಿದ್ದ ವೀರಶೈವ ಅಥವಾ ಲಿಂಗಾಯತ ಮತಕ್ಕೆ ಸೇರಿದರು. ಸಾಂಸ್ಕೃತಿಕವಾಗಿ ಸಮಾಜವನ್ನು ಪರಿವರ್ತಿಸಿ, ಹೊಸರೂಪವನ್ನು ಕೊಡುವ ಪ್ರಯತ್ನ ಈ ಕಾಲದಲ್ಲಿ ನಡೆಯಿತೆಂದು ಹೇಳಬೇಕು.

ಸುಮಾರು 12ನೇತಮಾನದ ಅಂತ್ಯದ ವೇಳೆಗೆ ಕಲಚೂರಿ ಮನೆತನವು ನಾಶ ಹೊಂದಲು, ದಕ್ಷಿಣದಲ್ಲಿ ಹೊಯ್ಸಳರು, ಉತ್ತರದಲ್ಲಿ ಯಾದವರು, ಕಾಕತಿಯರು ಪ್ರಬಲರಾಗಿ ಸ್ವತಂತ್ರಗೊಂಡರು. ಇದೇ ಸಮಯದಲ್ಲಿ ದೆಹಲಿಯಲ್ಲಿ ಸುಲ್ತಾನರ ಸಾಮ್ರಾಜ್ಯವು ಸ್ಥಾಪಿತವಾಯಿತು. ಆರಂಭದಲ್ಲಿ ಉತ್ತರ ಭಾರತಕ್ಕೆ ಸೀಮಿತವಾಗಿದ್ದ ಸುಲ್ತಾನರು ನಂತರದಲ್ಲಿ ದಖಿನ್ ಪ್ರಾಂತದ ಮೇಲೆ ಮೇಲಿಂದ ಮೇಲೆ ತಮ್ಮ ಧಾಳಿಗಳನ್ನು ನಡೆಸಿ ದಖನ್ನಿನ ರಾಜಕೀಯ ಸ್ಥಿತಿಯನ್ನು ಅಭದ್ರಗೊಳಿಸಿದರು. ಖಿಲ್ಜಿ ಮತ್ತು ತುಘಲಕ ಮನೆತನದ ಅರಸರಿಂದ ಯಾದವರು, ಹೊಯ್ಸಳರು, ಕಾಕತೀಯರು ಸಾಕಷ್ಟು ಸೋಲು, ನೋವುಂಡರು.

ಮಹಮ್ಮದ್ ಬಿನ್ ತುಘಲಕನು ದೇವಗಿರಿ ಯಾದವರನ್ನು ಸದೆ ಬಡಿದು ಅವರ ದೇವಗಿರಿಯನ್ನು ತನ್ನ ಕೈವಶ ಮಾಡಿಕೊಂಡು ಅದಕ್ಕೆ ದೌಲತಾಬಾದ ಎಂಬುದಾಗಿ ಪುನರ್ ನಾಮಕರಣ ಮಾಡಿದನು. ಕೆಲವು ಕಾಲ ತುಘಲಕನು ದೌಲತಾಬಾದಿನಿಂದ ಆಡಳಿತ ನಡೆಸಿ ಪುನಃ ತನ್ನ ರಾಜಧಾನಿಯನ್ನು ದೆಹಲಿಗೆ ಸ್ಥಳಾಂತರಿಸಿದನು. ತಾನು ವಶಪಡಿಸಿಕೊಂಡಿದ್ದ ದಖನ್ ಪ್ರದೇಶಕ್ಕೆ ಅಲಾವುದ್ದಿನ್ ಬಹುಮನಿ ಹಸನ್ ಎನ್ನುವವನು ಅಧಿಕಾರಿಯನ್ನಾಗಿ ನೇಮಿಸಿದ್ದನು.

ಮಹ್ಮದ್ ಬಿನ್ ತುಘಲಕ. ದೆಹಲಿಗೆ ಸ್ಥಳಾಂತರವಾದ ನಂತರದಲ್ಲಿ ಆತನ ವಿರುದ್ಧ ಅನೇಕ ಪ್ರಾಂತಾಧಿಕಾರಿಗಳು ಬಂಡಾಯವೆದ್ದರು. ಅವರಲ್ಲಿ ಪ್ರಮುಖ ಬಂಡಾಯಗಾರನಾಗಿದ್ದ. ಬಹಮನಿ ಹಸನ್‌ನು ಕ್ರಿ.ಶ. 1347ರಲ್ಲಿ ಗುಲಬರ್ಗಾದಲ್ಲಿ ಬಹಮನಿ ಷಾಹಿ ರಾಜ್ಯ ಸ್ಥಾಪಿಸಿದನು. ಬಹುಮನಿ ಷಹಾನು ತನ್ನ ರಾಜ್ಯವನ್ನು ಭದ್ರಪಡಿಸಿ ನಾಲ್ಕು ತರಫ್ ಅಥವಾ ವಿಭಾಗಗಳನ್ನಾಗಿ ಮಾಡಿ ಪ್ರತಿಯೊಂದು ವಿಭಾಗಕ್ಕೂ ತನಗೆ ಆಪ್ತರಾದ ರಾಜಪಾಲರನ್ನು ನೇಮಿಸಿದನು. ಈತನ ಕಾಲದಲ್ಲಿ ಗುಲಬರ್ಗಾ ನಗರವನ್ನು ಬೃಹತ್ ಕಟ್ಟಡಗಳಿಂದ ಹಾಗೂ ಉತ್ತಮ ನಗರ ವ್ಯವಸ್ಥೆಗಳಿಂದ ಆಧುನಿಕಗೊಳಿಸಿದನು. ಪ್ರಸಿದ್ಧ ಸೂಫಿ ಸಂತರಾಗಿದ್ದ. ಗೋಸೂದ ರಾಜ್ ಖಾಜಾ ಬಂದಾನವಾಜ್‌ರು ಈತನ ಕಾದಲ್ಲಿಯೇ ಗುಲಬರ್ಗಾದಲ್ಲಿ ಬಂದು ನೆಲೆಸಿದರು. ಬಹುಮನ್ ಷಾಹನು ಅಧಿಕಾರಕ್ಕೆ ಬಂದನು. ಈತನ ಕಾಲದಲ್ಲಿ ವಿಜಯ ನಗರ ಮತ್ತು ತೆಲಂಗಾಣದ ವಿರುದ್ಧ ಹಲವಾರು ಯುದ್ಧಗಳು ನಡೆದವು. ಮುಂದೆ ಅಧಿಕಾರಕ್ಕೆ ಬಂದ ಅಹ್ಮದ ಷಾಹನು ಕ್ರಿ.ಶ. 1428ರಲ್ಲಿ

ರಾಜಧಾನಿಯನ್ನು ಗುಲಬರ್ಗಾದಿಂದ ಬೀದರ್‌ಗೆ ವರ್ಗಾಯಿಸಿದನು. ಆನಂತರದ ಕೆಲವೇ ವರ್ಷಗಳಲ್ಲಿ ಬಹುಮನಿ ರಾಜ್ಯ ಒಡೆದು ವಿಜಾಪುರದಲ್ಲಿ ಆದಿಲ್‌ಶಾಹಿ, ಅಹ್ಮದ್ ನಗರದಲ್ಲಿ ಇಮಾಮಶಾಹಿ, ಗೋಲ್ಕೊಂಡಾದಲ್ಲಿ ನಿಜಾಮ ಶಾಹಿ, ಗುಲಬರ್ಗಾದಲ್ಲಿ ಕುತುಬ್‌ಶಾಹಿ ಮತ್ತು ಬೀದರನಲ್ಲಿ ನಿಜಾಮ ಶಾಹಿ, ಗುಲಬರ್ಗಾದಲ್ಲಿ ಕುತುಬ್‌ಶಾಹಿ ಮತ್ತು ಬೀದರನಲ್ಲಿ ಖರೀದ್‌ಶಾಹಿ ಎಂಬ ಐದು ರಾಜ್ಯಗಳಾದವು. ಇವು ನಿರಂತರವಾಗಿ ವಿಜಯ ನಗರದವರೊಂದಿಗೆ ಯುದ್ಧ ಮಾಡುತ್ತ ಬಂದರು. ಮುಂದೆ ವಿಜಯ ನಗರ ಪತನವಾದ ನಂತರ ಪ್ರಬಲವಾಗಿದ್ದ ವಿಜಾಪುರದ ಆದಿಲ್ ಶಾಹಿ ರಾಜ್ಯದಲ್ಲಿ ಸೇರಿಕೊಂಡವು.

ಗುಲಬರ್ಗಾದಲ್ಲಿ ಬಹಮನಿ ಷಾಹ ರಾಜ್ಯ ಸ್ಥಾಪನೆಯಾದ ನಂತರ ಇಲ್ಲಿನ ಧಾರ್ಮಿಕ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ರಂಗಗಳಲ್ಲಿ ಸಾಕಷ್ಟು ಬದಲಾವಣೆಗಳಾದವು. ಉತ್ತರ ಭಾರತದ ಕಡೆಯಿಂದ ಅರಬರು, ಟರ್ಕರು, ಅಫಘನ್ನರು ಪರ್ಶಿಯನ್ನರು, ಮೊಗಲರು ಇಲ್ಲಿಗೆ ಬಂದರು. ಅಲ್ಲದೆ ಸಾಮಾನ್ಯ ಸೈನಿಕರಿಂದ ಹಿಡಿದು ವ್ಯಾಪಾರಿಗಳು ಕುಶಲಕರ್ಮಿಗಳು, ಕಟ್ಟಡ ಕೂಲಿ ಕಾರ್ಮಿಕರು, ಸಪಾಯಿ ಕರ್ಮಚಾರಿಗಳು, ವಿದ್ವಾಂಸರು, ಸೂಫಿಸಂತರು ಧಾರ್ಮಿಕ ಮುಖಂಡರು ಮುಂತಾದವರೆಲ್ಲರೂ ಬಂದು ನೆಲೆ ಪಡೆದರು.

ಈ ಪ್ರಕ್ರಿಯೆಯಿಂದ ಭಾಷೆ, ಧರ್ಮ–ಸಂಸ್ಕೃತಿಗಳು ಸಂಕರಗೊಂಡವು. ಹೊರಗಿನಿಂದ ಬಂದ ಮುಸ್ಲಿಂರು ಪ್ರಭುತ್ವದ ಬೆಂಬಲ, ಆಶ್ರಯ ಪಡೆದಿದ್ದರಿಂದ ಅವರೊಂದಿಗೆ ಸ್ಥಳೀಯರು ಹೊಂದಾಣಿಕೆ ಮಾಡಿಕೊಳ್ಳುವ ಸಂದರ್ಭಗಳು ನಿರ್ಮಾಣಗೊಂಡವು. ಈ ಸಂಕ್ರಮಣ ಸ್ಥಿತಿಯಲ್ಲಿ ಈ ಪ್ರದೇಶದಲ್ಲಿ ನಗರ, ಆಳರಸರ, ಅಧಿಕಾರ ವರ್ಗಗಳ, ಶ್ರೀಮಂತರ ಮನೆಗಳನ್ನು ಸ್ವಚ್ಛಗೊಳಿಸುವ ಸೇವಕ ವರ್ಗವೊಂದು ಹುಟ್ಟಿಕೊಂಡಿರಬೇಕೆಂದು ಹೇಳಬಹುದಾಗಿದೆ. ಹೀಗೆ ಸ್ವಚ್ಛತಾ (ಸಫಾಯಿ) ಕೆಲಸಕ್ಕೆಂದು ಹುಟ್ಟಿಕೊಂಡ ಈ ಸೇವಕ ವರ್ಗದಲ್ಲಿ ಸಾಮಾಜಿಕವಾಗಿ ಅಸ್ಪೃಶ್ಯರೆನಿಸಿಕೊಂಡ ಸಮುದಾಯಗಳು, ತಳ ಸಮುದಾಯಗಳು, ಮುಸ್ಲಿಂ ಜಾತಿಗೆ ಸೇರಿದವರು ಇದ್ದರು. ಇವತ್ತಿಗೂ ಗುಲಬರ್ಗಾ ಜಿಲ್ಲೆಯಲ್ಲಿ ಈ ವರ್ಗಗಳು ಸಫಾಯಿ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುನದನ್ನು ಕಾಣುತ್ತೇವೆ. ತಳ ಸಮುದಾಯಗಳನ್ನು ಶಾಹಿ ಅರಸರು, ಅಧಿಕಾರಿಗಳು ಅನೇಕ ಸೌಕರ್ಯ ನೀಡುವುದರ ಮೂಲಕ ಅವರನ್ನು ಆಕರ್ಷಿಸಿದರು. ಇವರು ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡರೆ ಅವರಿಗೆ ಉದ್ಯೋಗಾವಕಾಶ, ಆರ್ಥಿಕ ಸವಲತ್ತುಗಳು ದೊರಕುತ್ತಿದ್ದವು. ಸಮಾಜದಲ್ಲಿ ಅವರ ಸ್ಥಾನಮಾನವೂ ಮೇಲೆಕ್ಕೇರುತ್ತಿತ್ತು. ಅದರಲ್ಲೂ ಈ ವರ್ಗವು

ಯಾವುದಾದರು ಕಲೆಯಲ್ಲಿ ಇಲ್ಲವೆ ಕಸುಬಿನಲ್ಲಿ ಪರಿಣಿತಿ ಪಡೆದಿದ್ದರಂತೂ ಇನ್ನೂ ಹೆಚ್ಚಿನ ಲಾಭವಿತ್ತು. ಇನ್ನು ತೀರ ನಿಕೃಷ್ಟರಾದ ತಳ ಸಮುದಾಯದವರಾದ ಜಾತಿಗಾರರು, ಕಟುಕರು, ಪಿಂಜಾರರು ಇಸ್ಲಾಂ ಧರ್ಮಕ್ಕೆ ವ್ಮತಾಂತರಾದರೂ ಅವರು ಕನಿಷ್ಠ ಕೆಲಸ ಇಲ್ಲವೇ ಸೇವೆಯನ್ನು ಮಾಡಿಕೊಂಡು ಇರಬೇಕಾದ ಪರಸ್ತಿತಿಯನ್ನು ಕಾಣುತ್ತೇವೆ. ಇಸ್ಲಾಂ ಧರ್ಮಕ್ಕೆ ಸೇರಿದ ತಳ ಸಮುದಾಯವು ಮುಸ್ಲಿಂ ಅರಸರ ಅಧಿಕಾರಿಗಳ, ಶ್ರೀಮಂತರ ಮನೆಯೊಳಗಿನ ಸಫಾಯಿ ಕೆಲಸಕ್ಕೆ ನೇಮಕವಾದರೆ, ಉಳಿದ ಸಫಾಯಿಗಳು ಊರು ಕೇರಿ ರಸ್ತೆಗಳನ್ನು ಸ್ವಚ್ಚಗೊಳಿಸುವುದು, ಊರವರ ಮನೆಯ ಶೌಚಾಲಯಗಳಲ್ಲಿನ ಮಲವನ್ನು ಎತ್ತಿ ಹಾಕುವ ಸ್ವಚ್ಚತಾ ಕೆಲಸಕ್ಕೆ ನಿಯುಕ್ತಿಗೊಂಡರು. ಇಲ್ಲಿನ ಗಮನಾರ್ಹ ವಿಷಯವೆಂದರೆ ವಿಜಾಪುರದ ಆದಿಲ್ ಶಾಹಿಗಳು ಸಫಾಯಿ ಕರ್ಮಚಾರಿ ಸಮುದಾಯಕ್ಕೆಂದೇ ವಿಜಯಪುರದಲ್ಲಿ ಮಸೀದಿಯನ್ನು ಕಟ್ಟಿಸಿದ್ದರು. ಅದನ್ನು ಭಂಗಿಮಹತ್ ಅಥವಾ ಮೆಹತರ್ ಮಹಲ್ ಎಂದು ಕರೆಯಲಾಗುತ್ತದೆ. ಹೀಗೆ ಸಫಾಯಿ ಕರ್ಮಚಾರಿಗಳನ್ನು ಇಸ್ಲಾಂಕ್ಕೆ ಮತಾಂತರಗೊಳಿಸಿ ಧಾರ್ಮಿಕ ಸೌಲತ್ತನ್ನು ನೀಡಿ, ಆಕರ್ಷಿಸುವುದಾಗಿತ್ತು ಎನ್ನಬೇಕು.

ಕ್ರಿ.ಶ. 1686 ರಲ್ಲಿ ಆದಿಲ್‌ಶಾಹಿಗಳ ರಾಜ್ಯವು ಮೊಗಲರ ಕೈವಶವಾಯಿತು. ಮೊಗಲರ ದೊರೆ ಔರಂಗಜೇಬನು ವಿಜಯಪುರ, ಗುಲಬರ್ಗಾ, ಬೀದರ ನಗರಗಳ ಮೇಲೆ ದಾಳಿ ಮಾಡಿ ಅವುಗಳನ್ನು ವಶಪಡಿಸಿಕೊಂಡು ಮೊಗಲ ಸಾಮ್ರಾಜ್ಯದಲ್ಲಿ ಸೇರಿಸಿಕೊಂಡನು. ಔರಂಗಜೇಬನು ತನ್ನ ನೆಚ್ಚಿನ ದಂಡ ನಾಯಕನಾಗಿದ್ದ ನಿಜಾಮ ಉಲ್ ಮುಲ್ಕ ಅಸಫ್ ಜಾಹ ಎಂಬುವವನು ತಾನು ಗೆದ್ದ ಪ್ರದೇಶಕ್ಕೆ ಸುಬೇದಾರನನ್ನಾಗಿ ಮಾಡಿದನು. ಔರಂಗ ಜೇಬನು ನಿಧನನಾದ ತರುವಾಯ ಕ್ರಿ.ಶ. 1724ರಲ್ಲಿ ತಾನು ಸ್ವತಂತ್ರನೆಂದು ಘೋಷಿಸಿ ಹೈದರಾಬಾದನಲ್ಲಿ ಅಸಫ ಜಾಹ ನಿಜಾಮ ರಾಜ್ಯವನ್ನು ಸ್ಥಾಪಿಸಿದನು. ಅಲ್ಲಿಂದ ಭಾರತಕ್ಕೆ ಸ್ವಾತಂತ್ರ್ಯ ದೊರಕಿ ಒಂದು ವರ್ಷ ಒಂದು ತಿಂಗಳ ಎರಡು ದಿನಗಳವರೆಗೆ ಅಂದರೆ 1948 ಸೆಪ್ಟೆಂಬರ್ 17ನೇ ತಾರೀಖಿನವರೆಗೂ ಹೈದರಾಬಾದ ರಾಜ್ಯವು ಅಸ್ತಿತ್ವದಲ್ಲಿದ್ದು ಗುಲಬರ್ಗಾ ಜಿಲ್ಲೆಯು ಇದರ ಆಡಳಿತಕ್ಕೆ ಸೇರಿತ್ತು.

ಹೈದರಾಬಾದ ಪ್ರಾಂತದಲ್ಲಿ ವೈದಿಕರು, ಮರಾಠರು, ಇತರ ಮೇಲ್ವರ್ಗದವರು ಆಡಳಿತ, ಶಿಕ್ಷಣ ಮೊದಲಾದ ರಂಗದಲ್ಲಿ ಪ್ರಮುಖ ಸ್ಥಾನವನ್ನು ಹೊಂದಿದ್ದರು, ಹೀಗಾಗಿ ಇಲ್ಲಿ ಉರ್ದು, ಮರಾಠಿ ಭಾಷೆ ಮತ್ತು ಶಿಕ್ಷಣ ಮಾಧ್ಯಮಕ್ಕೆ ಹೆಚ್ಚಿನ ಪ್ರಾಶಸ್ತ್ಯವಿತ್ತು, ಬಹುತೇಕ ಶಿಕ್ಷಣ, ಉದ್ಯೋಗಗಳಲ್ಲಿ ಮೇಲ್ವರ್ಗದವರೇ ಹೆಚ್ಚಿನ ಅವಕಾಶಗಳನ್ನು ಹೊಂದಿದ್ದರು. ಹೀಗಾಗಿ ಈ

ಹಂತದಲ್ಲಿ ಸಫಾಯಿ ಕರ್ಮಚಾರಿ ಸಮುದಾಯವು ಇವುಗಳಿಂದ ವಂಚಿತರಾಗಿಯೇ ಉಳಿದು ತಮ್ಮ ಮೂಲ ಕಸುಬನ್ನು ಮುಂದುವರೆಸಿಕೊಂಡು ಬಂರು ಎಂದು ಹೇಳಬಹುದಾಗಿದೆ.

2.3 ಗುಲಬರ್ಗಾ ಜಿಲ್ಲೆಯ ಸಾಮಾಜಿಕ ಸನ್ನಿವೇಶ ಮತ್ತು ಅಸ್ಪೃಶ್ಯ ಸಮುದಾಯ

ಮಾನವ, ಸಮಾಜ, ನಾಗರಿಕತೆ ಮತ್ತು ಸಂಸ್ಕೃತಿಗಳು ಒಂದಕ್ಕೊಂದು ಪೂರಕ. ಇವು ಒಂದನ್ನು ಬಿಟ್ಟು ಇನ್ನೊಂದಿಲ್ಲ. ಹಾಗೆಯೇ ಒಂದನ್ನು ಬಿಟ್ಟು ಮತ್ತೊಂದು ಬಾಳಲಾರವು ಮತ್ತು ಬೆಳೆಯಲಾರವು. ಹಾಗೆ ನೋಡಿದರೆ, ಸಮಾಜ, ನಾಗರಿಕತೆ ಮತ್ತು ಸಂಸ್ಕೃತಿಗಳ ಸೃಷ್ಟಿಕರ್ತನೇ ಮನುಷ್ಯನಾಗಿದ್ದಾನೆ. ಹೀಗಿದ್ದೂ ಮಾನವನನ್ನು ನಾಗರಿಕನನ್ನಾಗಿ ಮಾಡಲು ಇವು ಆತನಿಗೆ ಅತ್ಯವಶ್ಯಕವಾಗಿವೆ. ಮಾನವನಿಗೆ ಸಂಸ್ಕಾರ ಲಭ್ಯವಾಗುವುದು ಸಮಾಜದ ಮೂಲಕವೇ ಹೌದು. ಉತ್ತಮ ಸಮಾಜದಲ್ಲಿ ಉತ್ತಮ ನಾಗರಿಕರು, ಸುಸಂಸ್ಕೃತರು ನಿರ್ಮಾಣವಾಗುತ್ತಾರೆ.

ಸಮಾಜವು ಮರದ ತಳಬೇರು ಇದ್ದಂತೆ. ನಾಗರಿಕತೆ, ಸಂಸ್ಕೃತಿ ಇವು ಆ ಮರದ ಕಾಂಡ, ಎಲೆ, ಹೂವು, ಕಾಯಿಗಳಿದ್ದಂತೆ. ತಳಬೇರು ರೋಗಗ್ರಸ್ಥವಾದರೆ, ಮರಕ್ಕೆ ಕೇಡು ತಪ್ಪಿದ್ದಲ್ಲ. ಇಡೀ ಮರವೇ ಒಣಗಿ ತನ್ನ ಅಸ್ತಿತ್ವವನ್ನೇ ಕಳೆದುಕೊಂಡುಬಿಡುತ್ತದೆ. ಒಮ್ಮೊಮ್ಮೆ ಮೂಲ ತಳಬೇರು ತನಗೆ ಅಂಟಿದ ರೋಗವನ್ನು ತನ್ನ ಸುತ್ತಲಿನ ಪರಿಸರದ ಮಣ್ಣು, ನೀರು, ಗಾಳಿ, ಬೆಳಕು, ಗೊಬ್ಬರ ಇತ್ಯಾದಿಗಳನ್ನು ಯಥೇಚ್ಛವಾಗಿ ಪಡೆದುಕೊಂಡು ಚೈತನ್ಯದಾಯಕವಾಗಿ ಬೆಳೆಯುತ್ತದೆ. ಆ ಚೈತನ್ಯವೇ ಆ ಮರದ ತಳಬೇರಿಗೆ ಶಕ್ತಿಯನ್ನು ಕೊಡುತ್ತದೆ. ನಾಗರಿಕತೆ–ಸಂಸ್ಕೃತಿ ಬೆಳೆಯಲು, ಅಳಿಯಲು ಸಮಾಜದ ಆಗುಹೋಗುಗಳು, ನೋವು ನಲಿವುಗಳು ಮೂಲ ಕಾರಣವೆನ್ನಬಹುದು. ಸಮಾಜವಿದ್ದಂತೆ ನಾಗರಿಕತೆ–ಸಂಸ್ಕೃತಿಗಳು ವಿಕಸನಗೊಳ್ಳುತ್ತವೆ. ಆದ್ದರಿಂದ ಸಮಾಜ, ನಾಗರಿಕತೆ ಮತ್ತು ಸಂಸ್ಕೃತಿಗಳು ಒಂದಕ್ಕೊಂದು ಪೂರಕವಾಗಿ ಬೆಳೆದು ಬಂದಿವೆ. ಒಂದನ್ನು ತಿಳಿಯದೆ ಇನ್ನೊಂದರ ಮರ್ಮವಾಗದು. ಸಮಾಜದ ಸ್ಥಿತಿಗತಿಯನ್ನು ಅರಿಯದೆ ಅದರ ಸಂಸ್ಕೃತಿಯನ್ನು ಕುರಿತು ಹೇಳಹೋಗುವುದು ತಪ್ಪೆನಿಸದೆ ಇರದು.

"ಸಮಾಜವೆನ್ನುವುದು ಎಲ್ಲರೂ ಒಂದುಗೂಡಿ ಸಹಬಾಳುವೆ ಮಾಡುವ ಜನರ ಒಂದು ಘಟಕವೆಂತಲು ಹೇಳಲಾಗುತ್ತದೆ."[7] ಆಯಾ ಸಮುದಾಯದ ಜನರ ಜೀವನ, ರೀತಿನೀತಿ,

ನಡವಳಿಕೆ, ಭಾವನೆ, ನಂಬಿಕೆ, ಕಷ್ಟಸುಖ, ಆಗುಹೋಗು, ಸಂಪ್ರದಾಯ ಮುಂತಾದವು ಆಯಾ ಸಮಾಜದಲ್ಲಿ ಹೆಪ್ಪುಗಟ್ಟಿ ನಿಂತಿರುವುದನ್ನು ಕಾಣುತ್ತೇವೆ. ಆ ಸಮಾಜದ ಪದರುಗಳನ್ನು ಬಿಚ್ಚಿ ತೋರಿಸುವಂತೆ ಆ ಜನತೆಯ ಸಂಸ್ಕೃತಿ ಮೂಡಿಬರುವುದುಂಟು. ಆದ್ದರಿಂದ ಆಯಾ ಸಮಾಜದ (ಅಥವಾ ಸಮುದಾಯದ) ಸಾಮಾಜಿಕ, ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಅಂಶಗಳನ್ನು ಶೋಧಿಸಲು ಹೊರಡುವಾಗ ಆಯಾ ಸಮುದಾಯವನ್ನು ಅದರ ಸಮಾಜ ಸಂಸ್ಕೃತಿಗಳನ್ನು ಅರಿತುಕೊಳ್ಳುವುದು ಅಧ್ಯಯನದ ದೃಷ್ಟಿಯಿಂದ ಅತ್ಯಾವಶ್ಯಕವಾಗಿದೆ.

2.4 ಸಾಮಾಜಿಕ ಸ್ತರ ವಿನ್ಯಾಸ : ಜಾತಿ–ಉಪಜಾತಿ

ಭಾರತೀಯ ಸಾಮಾಜಿಕ ಸ್ತರ ವಿನ್ಯಾಸವು ತುಂಬಾ ವಿಚಿತ್ರವಾಗಿದೆ. ಹೋಲಿಕೆ ಮತ್ತು ಭೇದಗಳೆರಡನ್ನೂ ಸಮಾಜವು ತನ್ನಲ್ಲಿ ಸರಿಸಮನಾಗಿ ಅಳವಡಿಸಿಕೊಂಡಿದೆ. ಹೀಗಾಗಿ ಮನುಷ್ಯನ ಹುಟ್ಟು, ಸಂಸ್ಕಾರ, ಆಹಾರ, ಉಡುಗೆ, ತೊಡುಗೆ, ಭಾಷೆ, ಸಂಸ್ಕೃತಿ, ಉದ್ಯೋಗ ಮುಂತಾದವುಗಳಲ್ಲಿ ವೈವಿಧ್ಯತೆಗಳು ಸಹಜವಾಗಿ ಕಂಡುಬರುತ್ತವೆ. ಇದಕ್ಕೆ ಪ್ರಮುಖ ಕಾರಣ ಸಾಮಾಜಿಕ ಸ್ತರ ವಿನ್ಯಾಸಗಳು. ಹಲವಾರು ಜಾತಿ, ಮತ, ಪಂಥ, ಧರ್ಮ ಹಾಗೂ ಸಮುದಾಯಗಳಲ್ಲಿ ಅಖಂಡ ಭಾರತವು ಹರಿದು ಹಂಚಿಹೋಗಿದ್ದನ್ನು ಗಮನಿಸುತ್ತೇವೆ. ಇದನ್ನರಿತೇ ನಮ್ಮ ದೇಶವನ್ನು ವೈವಿಧ್ಯತೆಯ ಪುಟ್ಟ ಪ್ರಪಂಚವೆಂದು ಕರೆಯಲಾಗಿದೆ.

ಭಾರತೀಯ ಸಾಮಾಜಿಕ ಸ್ತರ ವಿನ್ಯಾಸಗಳ ಬಗೆಗೆ ಪಾಶ್ಚಾತ್ಯ ಹಾಗೂ ಭಾರತೀಯ ಸಮಾಜ ವಿಜ್ಞಾನಿಗಳು ತಮ್ಮದೇ ಆದ ದೃಷ್ಟಿಕೋನಗಳಿಂದ ವ್ಯಾಖ್ಯಾನ ಮಾಡಿದ್ದಾರೆ.

"ಸಾಮಾಜಿಕ ಸ್ತರ ವಿನ್ಯಾಸರಹಿತ ಸಮಾಜದ ಅಸ್ತಿತ್ವವೇ ಕಾಲ್ಪನಿಕವಾದುದ್ದು ಎಂದು ಪಿ.ಎ. ಸಾರೋಕಿನ್ ಅವರು ಹೇಳಿದರೆ"[15] "ಸ್ತರ ವಿನ್ಯಾಸಗಳು ಸಮಾಜದ ಅನಿವಾರ್ಯ ಘಟಕಗಳೆಂದು ಪರೆಟೋ ಅವರ ಅಭಿಪ್ರಾಯವಾಗಿದೆ."[16] ಅದರಂತೆ ಭಾರತೀಯ ಸಮಾಜ ವಿಜ್ಞಾನಿಗಳಾದ ಡಿ.ಎನ್. ಮುಜುಮ್‌ದಾರ್ ಮತ್ತು ಮದನ್ ಅವರುಗಳು "ಜಾತಿ ಪದ್ಧತಿಯನ್ನು ಮುಚ್ಚಿದ ಸಮೂಹಗಳೆಂದು ಕರೆದು, ನಮ್ಮದೆ ದೇಶದಲ್ಲಿ ಸುಮಾರು 3000ಕ್ಕಿಂತಲೂ ಹೆಚ್ಚು ಜಾತಿ ಮತ್ತು ಉಪಜಾತಿಗಳಿವೆ ಎಂದು ಗುರುತಿಸಿರುವರು."[17] ಪ್ರಸಿದ್ಧ ಸಮಾಜ ವಿಜ್ಞಾನಿಗಳಾದ ಡಾ. ಎಂ.ಎಸ್. ಶ್ರೀನಿವಾಸ ಅವರು ಅನುವಂಶಿಕತೆ, ಒಳಬಾಂಧವ್ಯದ ವಿವಾಹ ಮತ್ತು ನಿರ್ಧಿಷ್ಟ ಕಸಬು

ಹೊಂದಿರುವ ಸಮೂಹವೇ ಒಂದು ಜಾತಿ ಸ್ತರದಲ್ಲಿ ಗುರುತಿಸಲ್ಪಡುತ್ತಾರೆಂದು ಹೇಳಿರವರು. ಜನನವೇ ಜಾತಿಯನ್ನು ನಿರ್ಧರಿಸುತ್ತದೆ ಎಂದು ಹೇಳಬಹುದು. ಯಾವ ಜಾತಿಯಲ್ಲಿ ವ್ಯಕ್ತಿ ಜನ್ಮ ತಾಳುತ್ತಾನೋ ಜನ್ಮತಃ ಅದರ ಸದಸ್ಯತ್ವವನ್ನು ಆತ ಪಡೆದಿರುತ್ತಾನೆ.

ಜಾತಿ ಮತ್ತು ಉಪಜಾತಿಗಳಿಂದ ಇಡೀ ಸಮಾಜವೇ ವಿಚ್ಛಿನ್ನವಾಗಿ ಹಂಚಿ ಹೋಗಿರುವುದನ್ನು ಈಗಾಗಲೇ ವಿವರಿಸಲಾಗಿದೆ. ಇಲ್ಲಿ ಸ್ಪರ್ಶ ಮತ್ತು ಅಸ್ಪೃಶ್ಯರ ನಡುವೆ ಸಂಪರ್ಕವೇ ತೀರ ಇಲ್ಲವೆನ್ನುವಷ್ಟರಮಟ್ಟಿಗೆ ಇರುತ್ತದೆ. ಅದೂ ಬರೀ ಸೇವೆಯ ಸಂದರ್ಭವನ್ನು ಹೊತುಡಿಸಿದರೆ ಉಳಿದ ಸಮಯದಲ್ಲಿ ಇರುವುದೇ ಇಲ್ಲ ಎನ್ನಬಹುದು. ಈ ಕಾರಣದಿಂದ ಅವರನ್ನು ಊರ ಹೊರಗೆ ಪ್ರತ್ಯೇಕವಾದ ಸ್ಥಳದಲ್ಲಿ ಇರಿಸಲಾಗಿದೆ. ಅಸ್ಪೃಶ್ಯರು ವಾಸಿಸುವ ಸ್ಥಳಗಳು ಕೊಳಚೆ ಪ್ರದೇಶಗಳಾಗಿರುವುದರಿಂದ ಅವರ ನಿತ್ಯ ಬದುಕಿನಲ್ಲಿ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗಿರುವುದು. ಈ ಸಮಸ್ಯೆ ಕೇವಲ ಪ್ರಾಚೀನ ಕಾಲಕ್ಕೆ ಮಾತ್ರವೇ ಸೀಮಿತವಾಗಿಲ್ಲ. ಆಧುನಿಕ ಕಾಲದಲ್ಲಿಯೂ ಅಸ್ಪೃಶ್ಯರು ನಿತ್ಯ ಹಲವಾರು ಸಮಸ್ಯೆಗಳಿಗೆ ಈಡಾಗುತ್ತಿದ್ದಾರೆ. ಇದರಿಂದಾಗಿ ಅಸ್ಪೃಶ್ಯ ಜಾತಿಯ ಜನರ ಸಾಮಾಜಿಕ ಮತ್ತು ಆರ್ಥಿಕ ಏಳಿಗೆಯನ್ನೇ ಕುಂಠಿತಗೊಳಿಸಿವೆಯೆಂದು ಹೇಳಬೇಕು.

ಹಿಂದೂ ಸಮಾಜದ ಅನಿಷ್ಟ ಪದ್ಧತಿಯೊಳಗೆ ಸಿಕ್ಕಿಹಾಕಿಕೊಂಡಿರುವ ಅಸ್ಪೃಶ್ಯರನ್ನು ಶೂದ್ರ, ಪಂಚ'ಮ, ಚಾಂಡಾಲ, ಅಂತ್ಯಜ, ಪೌರಕಾರ್ಮಿಕ (ಭಂಗಿ) ಸಫಾಯಿ ಕರ್ಮಚಾರಿಗಳು ಮೂಲತಃ ದ್ರಾವಿಡರೇ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. ಇವರುಗಳು ದೇಶದೆಲ್ಲೆಡೆಗಳಲ್ಲಿ ಶೂದ್ರ, ನಾಮಶೂದ್ರ, ಪಂಚಮ, ಅಂತ್ಯಜ, ಚಾಂಡಾಲ ಪೌರಕಾರ್ಮಿಕ, ಸಫಾಯಿ ಕರ್ಮಚಾರಿ (ಭಂಗಿ) ಜಾಡಮಾಲಿ, ಹೊಲೆಯ ಮುಂತಾದ ಪಂಗಡಗಳನ್ನಾಗಿ ಕರೆಯಲಾಗುತ್ತದೆ. ಇವರು ಬೇರೆ ಬೇರೆ ಪಂಗಡಗಳಲ್ಲಿ ವಿಭಜಿಸಲ್ಪಟ್ಟಿದ್ದರೂ ಇವರೆಲ್ಲರೂ ಅನುಭವಿಸುತ್ತಿರುವ ಸಂಕಷ್ಟಗಳು ಒಂದೇ ಮಾದರಿಯವು ಆಗಿವೆ ಎನ್ನಬೇಕು.

ತನ್ನ ಜೀವನಕ್ಕೆ ಅವಶ್ಯಕವಾದ ಎಲ್ಲ ಸುಖ ಸೌಕರ್ಯಗಳನ್ನು ಸೃಷ್ಟಿಸುವಲ್ಲಿ ಯಶಸ್ವಿಯಾದ ಮಾನವನು ಕೊಳಚೆಗಳನ್ನು ನಿರ್ಮೂಲನೆಗೊಳಿಸುವ ನಿಟ್ಟಿನಲ್ಲಿ ಮಾತ್ರ ಆತನು ಯಶಸ್ವಿಯಾಗಿಲ್ಲವೆಂತಲೇ ಹೇಳಬೇಕು. ಇದರ ಜೊತೆಗೆ ಕೊಳಚೆ ಪ್ರದೇಶಗಳ ನಿರ್ಮಾಣದಲ್ಲಿ ನಗರೀಕರಣದ ಪಾಲೂ ತಳ್ಳಿ ಹಾಕುವಂತಿಲ್ಲ. ಕಾಲ, ಸಮಾಜ ಬದಲಾವಣೆ ಹೊಂದಿದರೂ,

ನಾಗರಿಕತೆ ಬೆಳೆದರೂ ವಿಜ್ಞಾನ ಮತ್ತು ತಂತ್ರಜ್ಞಾನ ಸಾಕಷ್ಟು ಅಭಿವೃದ್ಧಿ ಹೊಂದಿದ್ದರೂ ಭಾರತದ ಹಾಗೆಯೇ ಕರ್ನಾಟಕದ ಅಸ್ಪೃಶ್ಯ ಸಮುದಾಯಗಳೇಕೆ ಇನ್ನೂ ಕೊಳಗೇರಿಯಲ್ಲಿ ಬಡತನದ ಹೀನ ಬಾಳು ಬಾಳುತ್ತಿರುವುದು? ಎಂದೆಲ್ಲ ಕುರಿತು ಗಂಭೀರ ಚಿಂತನೆ ತುರ್ತಾಗಿ ನಡೆಯಬೇಕಿದೆ.

ಸಾಮಾಜಿಕ ರಚನೆಯಲ್ಲಿ ಹಿಂದೂ ಸಮಾಜ ವ್ಯವಸ್ಥೆಯೇ ಪ್ರಧಾನವಾಗಿ ಪರಿಗಣಿಸುತ್ತ ಬರಲಾಗಿರುವುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಬಹುಭಾಷೆ, ಸಂಸ್ಕೃತಿ, ಜನಸಮುದಾಯ, ಧರ್ಮ, ಮತ ಪ್ರದೇಶ ಮತ್ತು ವಿಶಿಷ್ಟ ಚಾರಿತ್ರಿಕ ಲಕ್ಷಣಗಳಿರುವ ಭಾರತದಲ್ಲಿ ಎಲ್ಲ ಸಮುದಾಯ ವ್ಯವಸ್ಥೆಯನ್ನು ಒಂದೇ ರೇಖೆಯಲ್ಲಿ ನೋಡಿಲ್ಲ. ಇಲ್ಲಿನ ಬಹುಸಂಖ್ಯೆಯ ಅಸ್ಪೃಶ್ಯ ಸಮುದಾಯಗಳಿಗೂ ಅವರದೇ ಆದ ಸಾಮಾಜಿಕ, ರಾಜಕೀಯ, ಧಾರ್ಮಿಕ, ಆರ್ಥಿಕ, ಸಾಂಸ್ಕೃತಿಕ ಅನನ್ಯತೆಯಿದೆ. ಅದನ್ನು ಚರಿತ್ರೆಯಲ್ಲಿ ಮಸುಕಾಗಿಸಲಾಗಿದೆ. ಬಹಿಷ್ಕೃತ, ಅಲಕ್ಷಿತ ಸಮುದಾಯಗಳ ಕುರಿತು ಬಹುಶಿಸ್ತೀಯ ಅಧ್ಯಯನಗಳಿಂದ ಅವರ ಚರಿತ್ರೆಯನ್ನು ಅರಿಯಲು ಪುನರ್ ನಿರ್ಮಾಣ ಮಾಡಲು ಸಾಧ್ಯವಿದೆ. "ಮಹಾತ್ಮ ಜ್ಯೋತಿಬಾ ಪುಲೆ, ಡಾ. ಬಾಬಾಸಾಹೇಬ ಅಂಬೇಡ್ಕರ್, ಪೆರಿಯಾರ ರಾಮಸ್ವಾಮಿ, ನಾರಾಯಣಗುರು, ಬಿ. ಶಾಮಸುಂದರ್, ಯ್ಯನ್ ಕಾಳಿಯಂಥ ಸಮಾಜ ಚಿಂತಕರು ಈ ಕುರಿತು ಪ್ರಾಮಾಣಿಕ ಪ್ರಯತ್ನ ಮಾಡಿರುವುದು ಗಮನಾರ್ಹ"[18] ಇದರಿಂದ ದಲಿತ ಸಂಸ್ಕೃತಿ, ವಿಮೋಚನೆ, ಅಸ್ತಿತ್ವ, ಚರಿತ್ರೆಯ ಬಗ್ಗೆ ಸಾಮಾಜಿಕವಾಗಿ, ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಸಂದರ್ಭಗಳು ಅಧಿಕಾರದ ಮೂಲಕ ಬದಲಾದ ಸನ್ನಿವೇಶಗಳನ್ನು ಗುರುತಿಸಲಾಗುತ್ತಿದೆ.

ಭಾರತೀಯ ಸಮಾಜವು ವರ್ಣ ಪರಿಕಲ್ಪನೆಯ ನೆಲೆಯಲ್ಲಿ ಹುಟ್ಟಿದೆಯೆಂಬುದನ್ನು ಈ ಹಿಂದೆಯೇ ಗಮನಿಸಿದ್ದೇವೆ. ವರ್ಣ ವ್ಯವಸ್ಥೆಯಲ್ಲಿ ವರ್ಣಗಳು ಮೂಲದಲ್ಲಿ ಎರಡು ಮೂರಾಗಿ, ಮೂರು ನಾಲ್ಕಾಗಿ ಬೆಳೆದ ರೀತಿಯ ಚರಿತ್ರೆಯನ್ನೂ ನೋಡಿದ್ದೇವೆ. ವರ್ಣ ವ್ಯವಸ್ಥೆಯೊಂದಿಗೆಯೇ ಅಸ್ಪೃಶ್ಯತೆ ಜೊತೆಗೂಡಿ ಬಂದಿದೆ ಎಂದು ಹೇಳುವುದಕ್ಕಿಂತ ಪೂರ್ವದಲ್ಲಿಯೇ ಅದು ಇತ್ತೆಂದು ಹೇಳುತ್ತಾರೆ. ಡಾ. ಅಂಬೇಡ್ಕರ್ ಸಮೂಹದ ಬದುಕು, ಜೀತಗಾರಿಕೆಯ ಬದುಕು ಹೇಗೆ ರೂಪುಗೊಂಡವು ಎಂಬುದನ್ನು ತುಂಬ ಸಮರ್ಥವಾಗಿಯೇ ಗುರುತಿಸಿದ್ದಾರೆ.

ಗುಂಪುಗಾರಿಕೆ, ನಾಯಕತ್ವದ ಬದುಕು, ಪರಸ್ಪರ ಗುಂಪುಗಳ ನಡುವೆ ನಡೆಯುವ ಸಂಘರ್ಷ, ಸೋತವರು ಜೀತಕ್ಕಾಗಿ ಬದುಕುವ ಬಗೆ ಇವೆಲ್ಲ ವಾಸ್ತವಕ್ಕೆ ತೀರ ಹತ್ತಿರವಾದವುಗಳೇ

ಆಗಿವೆ. ಡಾ. ಅಂಬೇಡ್ಕರ್‌ರಲ್ಲದೆ ಹಲವಾರು ಚಿಂತಕರು ಈ ಕುರಿತು ಚಿಂತಿಸಿದ್ದಾರೆ. ಅವರೆಲ್ಲರ ಆಲೋಚನಾ ರೀತಿಗಳೂ ಒಂದೊಂದು ಕಾಲಘಟ್ಟದಲ್ಲಿ ಆಗಿರುವ ಬದಲಾವಣೆಯ ಅಂಶಗಳನ್ನು ಪ್ರತಿಪಾದಿಸುವುದು ಕಂಡುಬರುತ್ತದೆ.

ಈ ಎಲ್ಲ ಅಂಶಗಳು ಏಕಕಾಲಕ್ಕೆ ಜಾತಿಯ ಹುಟ್ಟಿಗೆ, ಅಸ್ಪೃಶ್ಯತೆಯ ಹುಟ್ಟಿಗೆ ಪ್ರೇರೇಪಿಸಿವೆ ಎಂದಲ್ಲ. ವಿವಿಧ ಕಾಲಘಟ್ಟಗಳಲ್ಲಿ ಒಂದೊಂದು ಇನ್ನೊಂದು ಅಂಶದೊಂದಿಗೆ ಸೇರಿ ಹದಗೊಳಿಸಿ ಭದ್ರಪಡಿಸುತ್ತ ಬಂದಿದೆ. ಹೀಗೆ ಭದ್ರಪಡಿಸುವ ಕ್ರಿಯೆಯೊಂದಿಗೆ ಜಾತಿ, ಅಸ್ಪೃಶ್ಯತೆ ಎನ್ನುವಂಥವು ಸ್ಥಾಯಿಯಾದ ಗುಣವನ್ನು ಪಡೆದುಕೊಂಡಿವೆ ಎನ್ನಬೇಕು. ಸೋತವರನ್ನು ದೂರವಿಟ್ಟು ಸೇವಕರಂತೆ ಅಥವಾ ಗುಲಾಮರಂತೆ ದುಡಿಸಿಕೊಳ್ಳುವ ಪದ್ಧತಿಯು ಆರಂಭವಾದಾಗಲೂ ಅಧಿಕೃತವಾಗಿ ಜಾತಿ ಅಥವಾ ಅಸ್ಪೃಶ್ಯತೆಗೆ ರೂಪ ಸಿಕ್ಕಿತು. ಇಲ್ಲಿ ವರ್ಣಗಳು ಎರಡು ಮೂರಾಗಿ, ಮೂರು ನಾಲ್ಕಾಗಿ ಬೆಳೆದ ಸಂದರ್ಭದಲ್ಲಿ ಒಂದನೆ ವರ್ಣಕ್ಕೆ ಎರಡನೆ ವರ್ಣ ಎರಡು ವರ್ಣಗಳಿಗೆ ಮೂರನೇ ವರ್ಣ ಇವೆಲ್ಲವುಗಳಿಗೆ ನಾಲ್ಕನೆಯ ವರ್ಣವು ಅಸ್ಪೃಶ್ಯವೆನಿಸಿಕೊಂಡಿತು. ಆದರೆ ಇಲ್ಲಿಯ ವರ್ಣ ವ್ಯವಸ್ಥೆಯ ಕ್ರಮದ ಸ್ವರೂಪದಲ್ಲಿ ಕೆಳಕ್ಕೆ ಇಳಿಯುತ್ತ ಹೋದಂತೆ ಅಸ್ಪಶ್ಯತೆಯ ಪ್ರಮಾಣ ಹೆಚ್ಚುತ್ತ ಹೋಯಿತು ಎನ್ನಬಹುದು.

ಶೂದ್ರ ಅಥವಾ ಅಸ್ಪೃಶ್ಯರು ಉಚ್ಚವರ್ಣ ಇಲ್ಲವೇ ಜಾತಿಯವರ ಸೇವೆಗೈಯಬೇಕು ಎಂಬುದನ್ನು ದೈವ, ಅರ್ಥ, ನಿಯಮವನ್ನು ಮಾಡಿ ಅವರನ್ನು ದುಡಿಸಿಕೊಳ್ಳಲು ಹಿಂದಿನ ಪ್ರಾಚೀನ ಸಮಾಜವು ತೊಡಗಿತು. ಅದನ್ನೇ ನಂತರದ ಕಾಲಘಟ್ಟದಲ್ಲಿ ಮುಂದುವರಿಸಿಕೊಂಡು ಬರಲಾಯಿತು. ಅದನ್ನೇ ಮನು ಕಾನೂನುವಾಗಿಸಿ ಆಚರಣೆಗೆ ತರಲೆತ್ನಿಸಿದ್ದು ಸ್ಮೃತಿ ಗ್ರಂಥಗಳಿಂದ ತಿಳಿಯಲಾಗುತ್ತದೆ. ಶೂದ್ರನು ಉಚ್ಚ ಜಾತಿಗಳ ಸೇವೆಗೈಯಬೇಕು. ಇದು ದೈವ ನಿಯಮ ಎಂಬ ಹಳೆಯ ಸಿದ್ಧಾಂತವನ್ನೇ ಮನು ಪುನರುಚ್ಚರಿಸುತ್ತಾನೆ. ಅವನು "ವ್ಯಾಪಾರ, ಹಣದ ಸಾಲ ಕೊಡುವುದು, ಬೇಸಾಯ ಮತ್ತು ಜಾನುವಾರುಗಳ ಸಾಕಣೆ ಇವುಗಳಲ್ಲಿ ವೈಶ್ಯನೂ ಮೂರು ಉಚ್ಚ ವರ್ಣಗಳ ಸೇವೆಯಲ್ಲಿ ಶೂದ್ರನು ತೊಡಗತಕ್ಕದ್ದೆಂದೂ, ಆದರೆ ಆಪತ್ಕಾಲವೂ ಲಭಿಸುತ್ತದೆ. ಇದು ಸಾಧ್ಯವಾಗದೆ ಹೋದರೆ ಅವನು ಕ್ಷತ್ರೀಯನ ಸೇವೆ ಮಾಡಬಹುದು, ಇಲ್ಲವೇ ಒಬ್ಬ ಶ್ರೀಮಂತ ವೈಶ್ಯನ ಶುಶ್ರೂಷೆ ಮಾಡಿಯಾದರೂ ತನ್ನ ಜೀವನೋಪಾಯವನ್ನು ಕಂಡುಕೊಳ್ಳಬಹುದೆಂದು ಸ್ಮೃತಿಯಲ್ಲಿ ಹೇಳಲಾಗಿರುವುದನ್ನು"[19] ಆರ್.ಎಸ್. ಶರ್ಮಾ ಅವರು ತಮ್ಮ ಪ್ರಾಚೀನ ಭಾರತದಲ್ಲಿ ಶೂದ್ರರು ಎಂಬ ಗ್ರಂಥದಲ್ಲಿ ಈ ಕುರಿತು ವಿವರವಾಗಿ ವಿವರಿಸಿದ್ದಾರೆ.

ಶೂದ್ರ ಅಥವಾ ಅಂತ್ಯಜರು ಕೈಕೊಳ್ಳಬೇಕಾದ ನಿರ್ದಿಷ್ಟ ಕೆಲಸಗಳು ಮತ್ತು ಅದಕ್ಕೆ ನೀಡುವ ಪ್ರತಿಫಲಗಳ ವಿಷಯಗಳಲ್ಲಿಯೂ ಕೆಲವು ನಿಯಮಗಳನ್ನು ಆಯಾ ಕಾಲದಲ್ಲಿ ನಿರ್ಣಯಿಸಲಾಗುತ್ತಿತ್ತೆಂದು ಹೇಳಬೇಕು. "ಗುಲಾಮಗಿರಿ ಅಂತ್ಯಜನ ಎಡೆಬಿಡದ ವಿಧಿ ಎಂಬ ತತ್ವವನ್ನು ನಿರೂಪಿಸಿದವರಲ್ಲಿ ಮನು ಮೊದಲಿಗನು"[20] ಆಗಿದ್ದಾನೆ. ಹಣ ಕೊಟ್ಟು ಅಂತ್ಯಜನನ್ನು ಖರೀದಿ ಮಾಡಲಿ ಅಥವಾ ಹಾಗೆಯೇ ಆತನನ್ನು ಕೆಲಸಕ್ಕೆ ತರುವುದಿರಲಿ, ಅವನನ್ನು ದಾಸ (ಗುಲಾಮ)ನ ಸ್ಥಾನಕ್ಕೆ ಇಳಿಸಬೇಕೆಂದು ಮನುಶಾಸ್ತ್ರ ಹೇಳುತ್ತದೆ. ಏಕೆಂದರೆ "ಬ್ರಾಹ್ಮಣನ ಸೇವೆಗೈಯುವುದಕ್ಕಾಗಿಯೇ ದೇವನಿಂದ ಅವನು ಸೃಷ್ಟಿಸಲ್ಪಟ್ಟಿದ್ದಾನೆ. ಆದ್ದರಿಂದ ದಾಸ್ಯದಿಂದ ಅವನನ್ನು ಬಿಡುಗಡೆ ಮಾಡಲು ಸಾಧ್ಯವಾಗದು. ದಾಸ್ಯಗುಣ ಅವನಲ್ಲಿ ನೈಸರ್ಗಿಕವಾಗಿಯೇ ಇದೆ ಎನ್ನುತ್ತಾನೆ ಮನು."[15] ಅಂತ್ಯಜರ ಸಾಮಾಜಿಕ ಅಂತಸ್ತನ್ನು ಕಲ್ಪಿಸುವ ಕಟ್ಟಳೆಗಳಿಗೆ ಸಂಬಂಧಿಸಿದಂತೆ ಮನು ಕಠಿಣ ನಿರ್ಧಾರಗಳನ್ನು ತಳೆದು ಅವರ ಸಾಮಾಜಿಕ ಆರ್ಥಿಕ ಸ್ಥಾನಮಾನಗಳನ್ನು ಮತ್ತಷ್ಟು ಅಧೋಗತಿಗಿಳಿಯುವಂತೆ ಮಾಡುವಲ್ಲಿ ಯಶಸ್ವಿಯಾದನೆಂದೇ ಹೇಳಬಹುದು.

ಮನು ಪಟ್ಟಿಮಾಡುವ ದಾಸ್ಯ ಜಾತಿಗಳಲ್ಲಿ ಬಹುಜನರು ಅಸ್ಪೃಶ್ಯರಾಗಿದ್ದರು. ನಿಷಾದರು, ಅಯೋಗವರು, ಮೇಡರು, ಆಂಧ್ರರು, ಚುಂಚುಗಳು ಮುಂತಾದವರ ಕರ್ತವ್ಯಗಳನ್ನು ಹೇಳಿಯಾದ ಮೇಲೆ ಆ ಜನರು ಊರ ಹೊರಗೆ ಸ್ಮಶಾನ ಭೂಮಿಗಳ ಹತ್ತಿರ ಮತ್ತು ತೋಪುಗಳಲ್ಲಿ ವಾಸಿಸಬೇಕೆಂದು ಅವರ ನೆಲೆಗಳನ್ನೂ ನಿರ್ಧಾರ ಮಾಡುತ್ತಾನೆ. ಅವರ ಪೈಕಿ ಚಾಂಡಾಲರು, ಶ್ವಪಚರು ನಿಶ್ಚಯವಾಗಿ ಇಂದಿಗೂ ಉತ್ತಮರ ಓಣಿಗಳಿಂದ ದೂರ. ಊರ ಹೊರಗೆ ಪ್ರತ್ಯೇಕ ಕೇರಿಗಳಲ್ಲಿ ನೆಲೆಸುತ್ತ ಬಂದಿರುವುದನ್ನು ನೋಡುತ್ತೇವೆ. ಈ ಸಮುದಾಯಗಳು ಪ್ರತ್ಯೇಕ ವಾಸಸ್ಥಳ, ನಿರ್ದಿಷ್ಟ ಉಡುಗೆ ತೊಡುಗೆ, ಊಟೋಪಚಾರ, ಕಾನೂನು ಕಟ್ಟಳೆಗಳು, ವಿಧಿನಿಯಮಗಳು, ಸಂಪ್ರದಾಯಗಳು, ಸಂಸ್ಕೃತಿ ಹೊಂದಿದ್ದರಿಂದ ಅವರು ಸಾಮಾನ್ಯ ಶೂದ್ರರಿಗಿಂತ ಭಿನ್ನದವರೆಂದು ಗುರುತಿಸಲ್ಪಟ್ಟರು.

ಬ್ರಿಟಿಷರ ಕಾಲದಲ್ಲಿ ದಲಿತರು ಪಲ್ಲಟಗೊಂಡಿದ್ದು ಬ್ರಿಟಿಷ ಆಡಳಿತದ ಪರಿಣಾಮಕಾರಿ ಬದಲಾವಣೆ ಎಂದು ಹೇಳಬಹುದು. 19ನೇ ಶತಮಾನದಲ್ಲಿ ಭಾರತಕ್ಕೆ ಬಂದ ಪ್ರಿಂಟಿಂಗ್ ಪ್ರೆಸ್, ರೈಲು, ಅಂಚೆ ಮತ್ತು ಟೆಲಿಗ್ರಾಫ್ ಹೋಟಲು ಕೈಗಾರಿಕೆ ಮುಂತಾದವುಗಳು ಸಮಾಜದಲ್ಲಿ ಹೊಸ ವ್ಯವಸ್ಥೆಯನ್ನು ನಿರ್ಮಿಸಿದವು. ಕೆಲವೊಂದು ಕ್ಷೇತ್ರಗಳಲ್ಲಿ ದಲಿತರು ವೃತ್ತಿಯಲ್ಲಿ ತೊಡಗಿದರು. ಜೊತೆಗೆ ಈ ಶತಮಾನದಲ್ಲಿ ಸತಿಸಹಗಮನ, ಬಾಲ್ಯವಿವಾಹ, ವಿಧವಾ ವಿವಾಹ, ದೇವದಾಸಿ

ಪದ್ಧತಿಗಳ ಬಗೆಗೆ ರಾಜಾರಾಮ ಮೋಹನರಾಯ್, ದಯಾನಂದ ಸರಸ್ವತಿ, ಮಹಾತ್ಮಾಗಾಂಧಿ, ರಾಮಸ್ವಾಮಿ ಪೆರಿಯಾರ್, ಜ್ಯೋತಿಬಾ ಪುಲೆ, ಅಂಬೇಡ್ಕರ್ ಮೊದಲಾದವರು ಸಾಮಾಜಿಕ, ಆರ್ಥಿಕವಾಗಿ ದಲಿತರ ಸುಧಾರಣೆಯ ಬಗ್ಗೆ ಶ್ರಮಿಸಿದರು. ಹಿಂದು ಸಮಾಜ ವ್ಯವಸ್ಥೆಯಲ್ಲಿನ ವರ್ಣ ಮತ್ತು ಜಾತಿಯು ಕೇವಲ ಪರಾಮರ್ಶನ ವಿಷಯವಾಗಿಸದೆ, ಅದನ್ನು ಪಲ್ಲಟಗೊಳಿಸುವ ಹೋರಾಟಕ್ಕೆ ಈ ಎಲ್ಲ ಮಹನೀಯರು ಇಳಿದರು. ಹಿಂದೂ ಪುನರುಜ್ಜೀವನ ಆಗಬೇಕಾದರೆ ಅದು ದಲಿತರ ಮೂಲಕವೇ ಆಗಬೇಕು. ಇಲ್ಲವಾದರೆ ಚರಿತ್ರೆಯೇ ಅಪೂರ್ಣ ಎಂಬುದು ಇವರುಗಳ ವಿಚಾರಧಾರೆಯಾಗಿತ್ತೆಂದು ಹೇಳಬೇಕು. ಆಧುನಿಕತೆಗೆ ಸಮಾಜವನ್ನು ಕೊಂಡೊಯ್ಯುವಲ್ಲಿ ಮಹಾನ್ ತತ್ವಜ್ಞಾನಿಗಳು, ಸಮಾಜ ಸುಧಾರಕರು ಆದ ಪುಲೆ, ಪೆರಿಯಾರ್ ರಾಮಸ್ವಾಮಿ, ನಾರಾಯಣಗುರು ಮತ್ತು ಅಂಬೇಡ್ಕರ್ ಈ ಕುರಿತು ಪ್ರಾಮಾಣಿಕ ಪ್ರಯತ್ನ ಮಾಡಿದರು.

ಡಾ. ಅಂಬೇಡ್ಕರ್‌ವರು ವರ್ಣ, ಜಾತಿ ವ್ಯವಸ್ಥೆಯ ಕುರಿತು ತಮ್ಮ ವಾದವನ್ನು ಚಾರಿತ್ರಿಕವಾಗಿ ವಿಶ್ಲೇಷಣೆ ಮಾಡಿದ್ದುಂಟು. ಸಮಾಜ ವ್ಯವಸ್ಥೆಯ ವರ್ಣಾಶ್ರಮ ತಂದೆಯಾದರೆ, ಜಾತಿ ಅದರ ತಾಯಿ ಎಂದು ಹೇಳಬಹುದು. ಹಿಂದೂ ಧರ್ಮದಿಂದ ಪೋಷಣೆಗೊಂಡ ವರ್ಣಾಶ್ರಮಧರ್ಮ ಮತ್ತು ಜಾತಿ ವ್ಯವಸ್ಥೆಯನ್ನು ಖಡಾಖಂಡಿತವಾಗಿ ವಿರೋಧಿಸಿದರು. ಬ್ರಾಹ್ಮಣ, ಕ್ಷತ್ರೀಯ, ವೈಶ್ಯ ಮತ್ತು ಶೂದ್ರ ವರ್ಗೀಕರಣ ಕುರಿತು ಡಾ. ಅಂಬೇಡ್ಕರ್‌ರು "ಇಂಥ ವರ್ಗೀಕರಣದ ಗುರಿಯು ಒಂದು ವರ್ಗದವರು ಅನ್ಯಾಯವಾಗಿ ಪಡೆದ ಲಾಭವನ್ನು ಮತ್ತೊಂದು ವರ್ಗದವರ ಮೇಲೆ ಎಸಗಿದ ನ್ಯಾಯಬಾಹಿರ ಆಕ್ರಮಣವನ್ನು ಸತತವಾಗಿ ಮುಂದುವರಿಸುವಂಥದ್ದಾಗಿದೆ"[21] ಎಂದಿದ್ದಾರೆ. ಡಾ. ಅಂಬೇಡ್ಕರ್‌ರು ಬ್ರಾಹ್ಮಣ್ಯವನ್ನು ಹಿಂದೂ ಧರ್ಮ ಪೋಷಿಸಿದ್ದನ್ನು ಖಂಡಿಸುತ್ತಾರೆ. ಅವರು ಶೂದ್ರು ಯಾರು? ಎಂಬ ಲೇಖನದಲ್ಲಿ ಭಾರತಿಯ ಅಸ್ಪೃಶ್ಯತೆಯ ಇತಿಹಾಸವನ್ನು ಕುರಿತು ವಿಶ್ಲೇಷಿಸಿದ್ದಾರೆ.

ಸ್ವಾತಂತ್ರ್ಯಾನಂತರ ಕರ್ನಾಟಕದಲ್ಲಿ ಅಸ್ಪೃಶ್ಯತಾ ನಿವಾರಣೆ ಕುರಿತು ಪರಿಗಣಿಸಬಹುದಾದ ಘಟನಾವಳಿಗಳೆಂದರೆ, ಅನ್‌ಟಚೆಬಲಿಟಿ ಅಫೆನ್ಸಸ್ ಆ್ಯಕ್ಟ್ 1955, ಮತ್ತು 1970ರಲ್ಲಿ ಮಂತ್ರಿಯಾಗಿದ್ದ ಬಿ. ಬಸವಲಿಂಗಪ್ಪನವರ ಬೂಸಾ ಪ್ರಕರಣ, ಅಸ್ಪೃಶ್ಯರು ತಲೆಯ ಮೇಲೆ ಮಲ ಹೊರುವ ಪದ್ಧತಿ ನಿಷೇದ ಕಾಯಿದೆ ಅತ್ಯಂತ ಐತಿಹಾಸಿಕವೆನಿಸಿವೆ. ಅಲ್ಲದೆ ಎಪ್ಪತ್ತರ ದಶಕದಲ್ಲಿ ಕರ್ನಾಟಕದಲ್ಲಿ ಆರಂಭಿಸಿದ ದಲಿತ ವಿಮೋಚನಾ ಚಳವಳಿ ಸಮಾಜದಿಂದ ತಿರಸ್ಕರಿಸಿದ್ದ ದಲಿತರಿಂದ ಈ ದೇಶದ ಸಂಪತ್ತಿನ ಉತ್ಪಾದನೆ ಅಡಗಿದೆ ಎಂಬ ಅರಿವನ್ನು ಮೂಡಿಸಿದ ಚಾರಿತ್ರಿಕ ಬೆಳವಣಿಗೆ ಎನ್ನಬೇಕು.

ಈ ಅರಿವು ಆಂದೋಲನ ರೂಪವಾಗಿ ಹಳೆ ಮೈಸೂರು ಪ್ರಾಂತ, ಮುಂಬೈ ಕರ್ನಾಟಕ ಮತ್ತು ಹೈದರಾಬಾದ ಕರ್ನಾಟಕದಲ್ಲೆಲ್ಲ ವ್ಯಾಪಿಸಿ ಬೆಳೆಯಿತು ಎಂದು ಹೇಳಲೇಬೇಕು.

2.5 ವರ್ಣ-ಜಾತಿ ವ್ಯವಸ್ಥೆ

ಇಡೀ ಜಗತ್ತಿನಲ್ಲಿಯೇ ಭಾರತೀಯ ಸಾಮಾಜಿಕ ವ್ಯವಸ್ಥೆ ತುಂಬ ಸಂಕೀರ್ಣವೂ, ವಿಶಿಷ್ಟವುಳ್ಳದ್ದೂ ಆಗಿದೆ. ಸುಮಾರು ಐದು ಸಾವಿರ ವರ್ಷಗಳಷ್ಟು ಸುದೀರ್ಘ ಐತಿಹಾಸಿಕ ಪರಂಪರೆಯನ್ನು ಹೊಂದಿರುವ ಈ ದೇಶದ ಮೇಲೆ ಹೊರಗಿನಿಂದ ಆಕ್ರಮಣ ಮಾಡಿದ ಆರ್ಯರು, ಗ್ರೀಕರು, ಮಂಗೋಲಿಯನ್, ಕುಶಾಣರು, ಮುಸ್ಲಿಮರು, ಯುರೋಪಿಯನ್ನರು ಇಲ್ಲಿಯೇ ನೆಲೆ ನಿಂತು ತಮ್ಮ ತಮ್ಮ ಧರ್ಮ, ಭಾಷೆ, ಸಂಸ್ಕೃತಿಗಳನ್ನು ಭಾರತೀಯ ಸಮಾಜದ ಮೇಲೆ ಹೇರಿ ಸಂಕೀರ್ಣಗೊಳಿಸಿದ್ದರೆನ್ನಬಹುದು.

ಆದರೆ ಭಾರತೀಯ ಮೂಲ ನಿವಾಸಿಗಳ ಸಾಮಾಜಿಕ ವ್ಯವಸ್ಥೆಯ ಮೇಲೆ ತಮ್ಮ ಅಚ್ಚಳಿಯದ ಪ್ರಭಾವವನ್ನು ಬೀರಿದವರಲ್ಲಿ ಆರ್ಯರು ಪ್ರಮುಖರಾಗುತ್ತಾರೆ. ಆರ್ಯರು ಪ್ರಚಲಿತದಲ್ಲಿ ತಂದ ವರ್ಣ ವ್ಯವಸ್ಥೆಯು ಸಮಾಜವನ್ನು ವಿಚ್ಛೇದಿಸಿತು. ಸಮಾಜವು ಇಲ್ಲಿ ವರ್ಣ ಏಣಿ ಶ್ರೇಣಿಕ್ರಮದಲ್ಲಿ ವಿಭಾಗಿಸಲ್ಪಟ್ಟಿತು. ಆರ್ಯರ ಹಿಂದು ಧರ್ಮದ ಪ್ರಕಾರ ಸಮಾಜದ ಉನ್ನತ ಸ್ತರದಲ್ಲಿ ಬ್ರಾಹ್ಮಣ ನಂತರದಲ್ಲಿ ಕ್ಷತ್ರೀಯ, ವೈಶ್ಯ ಮತ್ತು ಶ್ರೇಣಿಯ ತಳಸ್ತರದಲ್ಲಿ ಶೂದ್ರ ಇರುತ್ತಾರೆ. ಇಲ್ಲಿ ಉಚ್ಚ ಸ್ತರದಲ್ಲಿರುವ ಬ್ರಾಹ್ಮಣರು ಸಮಾಜದಲ್ಲಿ ಬಿಂಬಿಸಲಾಗುತ್ತದೆ. ಕ್ಷತ್ರೀಯರು ರಾಜ್ಯ ಅಥವಾ ದೇಶದ ಪಾಲನೆಯಲ್ಲಿ, ವೈಶ್ಯನು ವ್ಯಾಪಾರದಲ್ಲಿ ತೊಡಗಿಸಿಕೊಳ್ಳಬೇಕು. ಆದರೆ ತೀರ ಕೆಳ ಹಂತದಲ್ಲಿರುವ ಶೂದ್ರರು ಮೇಲಿನ ಮೂರೂ ಶ್ರೇಣಿಯಲ್ಲಿನವರ ಸೇವೆ ಮಾಡಬೇಕಾಗಿತ್ತು. ಅವರಿಗೆ ಅವರದೇ ಆದ ಸ್ವಂತ ನೆಲೆ, ಭೂಮಿ ಇರಲಿಲ್ಲ. ಅಷ್ಟೇ ಅಲ್ಲ ಅವರು ಹುಟ್ಟಿದ್ದೇ ಮೇಲು ವರ್ಗದವರ ಸೇವೆಗಾಗಿ ಎಂದು ಹೇಳಲಾಗಿತ್ತು. ಶೂದ್ರರನ್ನು ಇವರೆಂದೂ ಮನುಷ್ಯರಂತೆ ಪರಿಗಣಿಸುತ್ತಿರಲಿಲ್ಲ. ಅವರು ಮೋಕ್ಷಕ್ಕೆ ಅರ್ಹರಲ್ಲ. ಅವರ ಮುಖದರ್ಶನವಾಗಲಿ, ಪುರ ಪ್ರವೇಶಕ್ಕಾಗಲಿ ನಿಷೇದವಿತ್ತು. ಅವರ ಉಡುಗೆ ತೊಡುಗೆಗಳು ತೀರ ಭಿನ್ನವಾಗಿದ್ದವು. ಹೀಗೆ ಸಾಮಾಜಿಕವಾಗಿ ಶೋಷಿತರಾಗಿದ್ದ ಇವರು ಭಾರತದ ಮೂಲ ನಿವಾಸಿಗಳು. ಇವರ ಮೇಲೆ ಪರಕೀಯ ಸಂಸ್ಕೃತಿಯ ದಾಳಿಯಿಂದ ಜೀವನ ಸ್ಥಿತಿ ಅಸ್ತವ್ಯಸ್ತವಾದವು. ಆರ್ಯರೊಡನೆಯ

ಹೋರಾಟದಲ್ಲಿ ಸೋತು ಸೆರೆಯಾದ ಅನಾರ್ಯರು ಅವರಿಗೆ ಗುಲಾಮರಾಗಿ ಸೇವೆಯಲ್ಲಿ ತೊಡಗಿಸಿಕೊಳ್ಳಲ್ಪಟ್ಟದ್ದು ತಿಳಿದು ಬರುತ್ತದೆ. ಭಾರತದ ಪೂರ್ವ ಇತಿಹಾಸವನ್ನು ಅವಲೋಕಿಸಿದಾಗ ಭಾರತದಲ್ಲಿ ವರ್ಣ, ವರ್ಗ ಮತ್ತು ಜಾತಿ ವ್ಯವಸ್ಥೆಗಳು ಬೆಳೆದು ಬಂದದ್ದು ತಿಳಿಯುತ್ತದೆ.

ಭಾರತೀಯ ಸಮಾಜವು ಧರ್ಮಾಧಾರಿತ ತಳಹದಿಯ ಮೇಲೆ ನಿಂತಿದೆ. ಅದರಲ್ಲೂ ಪ್ರಧಾನವಾದ ಹಿಂದೂ ಧರ್ಮವು ಚಾತುರ್‌ವರ್ಣಕ್ಕೆ ಹೆಚ್ಚಿನ ಪ್ರಾಧಾನ್ಯತೆ ನೀಡಿದೆ. ಪ್ರಾಚೀನ ಧರ್ಮ ಗ್ರಂಥವಾದ "ಭಗವದ್ಗೀತೆಯ ಶ್ಲೋಕದ ಪ್ರಕಾರ ಚಾತುರ್ವರ್ಣಂ ಮಯಾ ಸೃಷ್ಟಿ ಗಮರ್ಕ ವಿಭಾಗ"[3] ಎಂದು ಹೇಳಲಾಗಿದೆ. ಅಂದರೆ ಇದು ಮನುಷ್ಯನ ಗುಣ ಕರ್ಮಗಳ ಆಧಾರದ ಮೇಲಿಂದ ಚಾತುರ್‌ವರ್ಣಗಳು ಜನಿಸಿದವೆಂದು ಹೇಳುತ್ತದೆ.

ಧರ್ಮಾಧಾರಿತ ಸಮಾಜದ ವಿಭಜನೆಯು ಪ್ರಗತಿಗೆ ಅಡಚಣೆಯಾಗಿದೆ. ಅಲ್ಲದೆ ಧರ್ಮ, ದೇವರು, ನಂಬಿಕೆ, ಸಂಪ್ರದಾಯಗಳ ಹೆಸರಿನಲ್ಲಿ ನಡೆಯುವ ಆಚರಣೆಗಳು ಸಾಮಾಜಿಕ ಹಾಗೂ ಆರ್ಥಿಕ ದೃಷ್ಟಿಯಿಂದ ಮತ್ತಷ್ಟು ಶೋಷಣೆಗೂ ಕಾರಣವಾಗುತ್ತವೆ. ಸಮಾಜದಲ್ಲಿ ಶೂದ್ರರು, ಅಸ್ಪೃಶ್ಯರು ಧರ್ಮದ ಹೆಸರಿನಲ್ಲಿ ಅನಾದಿ ಕಾಲದಿಂದ ತುಳಿಯಲ್ಪಟ್ಟು ಶೋಷಣೆಗೆ ಒಳಗಾಗಿ ಮಮ್ಮಲ ಮರುಗುತ್ತಿರುವುದು ವ್ಯಾಪಕವಾಗಿ ಕಂಡುಬರುತ್ತದೆ. ವೈದಿಕ ಧರ್ಮವು "ಗುಣ, ಕರ್ಮ, ವೃತ್ತಿ ಮತ್ತು ಶ್ರಮಗಳೆಂಬ ಗುಣಗಳನ್ನು ಆಧರಿಸಿ ಸಮಾಜವನ್ನು ವಿಭಜನೆ ಮಾಡಿದೆ. ಶ್ರಮಜೀವಿಯಾದ ದಲಿತನು ಚಾಂಡಾಲನೆನಿಸಿದ್ದು ಭಾರತೀಯ ಧರ್ಮದ ವಿಪರ್ಯಾಸವೇ ಎನ್ನಬೇಕು. ಋಗ್ವೇದದ ಪುರುಷ ಸೂಕ್ತದಲ್ಲಿ ಈ ನಾಲ್ಕು ವರ್ಣಗಳನ್ನು ಭಗವಂತನ ವಿರಾಟ ಸ್ವರೂಪದ ನಾಲ್ಕು ಅಂಗಗಳಿಂದ ಹುಟ್ಟಿ ಬಂದವು ಎಂದು ಉಲ್ಲೇಖಿಸಲಾಗಿದೆ. ಆ ಸೂತ್ರ ಹೀಗಿದೆ:

"ಬ್ರಾಹ್ಮಣೋಸ್ಯ ಮುಖಮಾಸೀದ್ಬಾಹೂ ರಾಜನ್ಯ ಕೃತಃ।
ಊರು ತದಸ್ಯಯದ್ವೈತ್ಯ: ಪದ್ಭಾಂ ಶೂದ್ರೋ ಆ ಜೀತಾಯ॥[3]

ಅಂದರೆ ಬ್ರಾಹ್ಮಣನು ಮುಖದಿಂದಲೂ, ಕ್ಷತ್ರೀಯನು ಬಾಹುಗಳಿಂದಲೂ, ವೈಶ್ಯನು ತೊಡೆಗಳಿಂದಲೂ ಹಾಗೂ ಶೂದ್ರನು ಪಾದಗಳಿಂದಲೂ ಹುಟ್ಟಿದರೆಂಬ ವಿವರಣೆ ಇದೆ. ಮೇಲಿನ ನಾಲ್ಕು ಅಂಗಾಂಗಗಳು ಅವರ ಗುಣ ಮತ್ತು ಕಾರ್ಯಗಳ ಸಂಕೇತವಾಗಿ ಬಳಸಲಾಗಿದೆಯೆಂದು ಹೇಳಬಹುದು.

ಪ್ರಾಚೀನ ಭಾರತೀಯ ಸಾಮಾಜಿಕ ರಚನೆಯ ನಾಲ್ಕು ಘಟಕಗಳಾದ ಬ್ರಾಹ್ಮಣ, ಕ್ಷತ್ರೀಯ, ವೈಶ್ಯ ಮತ್ತು ಶೂದ್ರ ಎಂಬ ಚತುವರ್ಣಗಳನ್ನು ಅವುಗಳ ಲಕ್ಷಣ ಮತ್ತು ಕಾರ್ಯಗಳನ್ನು ಈ ಕೆಳಗಿನಂತೆ ವಿಂಗಡಿಸಬಹುದಾಗಿದೆ.

ಅ) ಬ್ರಾಹ್ಮಣ: ವರ್ಣ ವಿಭಜನೆಯಲ್ಲಿ ಪ್ರಥಮ ಶ್ರೇಣಿಯಲ್ಲಿರುವ ಬ್ರಾಹ್ಮಣ ವರ್ಗದವರನ್ನು ಆರ್ಯ ಸಂತತಿಯವರು, ಶ್ರೇತವರ್ಣಿಯರು, ಸುಸಂಸ್ಕೃತರು, ನಾಗರಿಕರು, ಸುಶಿಕ್ಷಿತರು, ಪಂಡಿತರು ಹಾಗೂ ಬುದ್ಧಿಜೀವಿಗಳೆಂದು ವರ್ಣಿಸಲಾಗಿದೆ. ವೇದ ಉಪನಿಷತ್ತು, ಸ್ಮೃತಿಗಳ ಸಂಪೂರ್ಣ ಪರಿಜ್ಞಾನವನ್ನು ಹೊಂದಿರುವುದರಿಂದ ಬ್ರಾಹ್ಮಣರಿಗೆ ಪಂಡಿತರು ಹಾಗೂ ಜ್ಞಾನಿಗಳೆಂದು ಕರೆಯಲಾಗಿದೆ. ಜ್ಞಾನಾನ್ವೇಷಣೆ ಮುಂತಾದ ಸ್ವಭಾವಗಳಿಂದ ಬ್ರಾಹ್ಮಣರು ಅನೇಕರಿಂದ ಹೊಗಳಲ್ಪಟ್ಟಿರುವರು. ಧಾರ್ಮಿಕ ಸಮಾರಂಭಗಳಾದ ಹಬ್ಬ, ಹುಣ್ಣಿಮೆ, ವಿವಾಹಕಾರ್ಯಗಳು, ಅಂತ್ಯಸಂಸ್ಕಾರ ಮುಂತಾದವುಗಳಲ್ಲಿ ಬ್ರಾಹ್ಮಣರು ವೇದ ಮಂತ್ರಗಳಿಂದ ಅವುಗಳನ್ನು ನೆರವೇರಿಸುವರು. ಆದ್ದರಿಂದಲೇ ಅವರಿಗೆ ಆಚಾರ್ಯ ವರ್ಗವೆಂದು ಸಮಾಜದಲ್ಲಿ ಶ್ರೇಷ್ಠ ಸ್ಥಾನಮಾನಗಳನ್ನು ಕಲ್ಪಿಸಿಕೊಟ್ಟಿದೆ.

ಚರಿತ್ರೆಯ ಪುಟಗಳನ್ನು ತಿರುವಿ ಹಾಕಿದರೆ ಪ್ರಾಚೀನ, ಮಧ್ಯ ಯುಗ ಹಾಗೂ ಆಧುನಿಕ ಯುಗದಲ್ಲಿಯೂ ಬ್ರಾಹ್ಮಣರು ಸಮಾಜದಲ್ಲಿ ಅಗ್ರಸ್ಥಾನ ಹೊಂದಿರುವುದು ಕಂಡುಬರುತ್ತದೆ. ಪ್ರಾಚೀನ ರಾಜ ಮಹಾರಾಜರ ಆಸ್ಥಾನಗಳಲ್ಲಿಯೂ ಆಸ್ಥಾನ ಪಂಡಿತರು, ರಾಜಗುರುಗಳು, ಆಸ್ತಾನ ಕವಿಗಳೆಂದು ಹೆಚ್ಚಿನ ಮಾನ್ಯತೆ ನೀಡಿದ್ದು ಕಂಡುಬರುತ್ತದೆ.

ಆ) ಕ್ಷತ್ರೀಯ: ಸೃಷ್ಟಿಕರ್ತನ ಬಾಹುಗಳಿಂದ ಜನಿಸಿದ ಕ್ಷತ್ರೀಯ ಶೌರ್ಯ ಮತ್ತು ಪರಾಕ್ರಮದ ಪ್ರತೀಕವೆಂದು ಹೇಳಲಾಗಿದೆ. ಇವರನ್ನು ಆಡಳಿತ (ಆಳುವ) ವರ್ಗದವರೆಂದು ಹೇಳಲಾಗುವುದು. ಒಂದು ದೇಶ, ರಾಜ್ಯ ಅಥವಾ ಪ್ರದೇಶಕ್ಕೆ ಅಧಿಪತಿಯಾಗಿ ರಾಜ್ಯವನ್ನು ಮತ್ತು ಪ್ರಜೆಗಳ ಯೋಗಕ್ಷೇಮವನ್ನು ನೋಡಿಕೊಳ್ಳುವುದು ಪ್ರಜಾ ವರ್ಗಗಳ ನಡುವೆ ಜರುಗುವ ಜಗಳ, ಕದನ, ವೈಮನಸ್ಸುಗಳನ್ನು ಬಗೆಹರಿಸಿ ರಾಜ್ಯದಲ್ಲಿ ಶಾಂತಿ ಹಾಗೂ ಸುಗಮ ವಾತಾವರಣವನ್ನು ಕಾಪಾಡಿಕೊಂಡು ಬರುವುದು ಕ್ಷತ್ರೀಯರ ಕರ್ತವ್ಯವೆಂದು ಪ್ರಾಚೀನ ವೇದ, ಪುರಾಣ, ಶಾಸ್ತ್ರ,

ಗ್ರಂಥಗಳು ಉಲ್ಲೇಖಿಸಲ್ಪಟ್ಟಿರುವವು. ಅಲ್ಲದೆ, ಹೊರಗಿನ ಶತ್ರುಗಳ ದಾಳಿ, ಭೀಕರ ಬಂಡಾಯ ಹಾಗೂ ಅನಾಚಾರ ಹತ್ಯಾಕಾಂಡಗಳನ್ನು ಎದುರಿಸುವವರು ಕ್ಷತ್ರೀಯರೇ ಆಗಿದ್ದರು. ಸಾಮಾನ್ಯವಾಗಿ ರಾಜ–ಮಹಾರಾಜರೆಲ್ಲ ಕ್ಷತ್ರೀಯ ವರ್ಗದವರಾಗಿರತ್ತಿದ್ದರು.

ದುಷ್ಟ ಶಿಕ್ಷೆ, ಶಿಷ್ಟ ಪರಿಪಾಲನೆ ತಮ್ಮ ಕರ್ತವ್ಯವೆಂದು ಕ್ಷತ್ರೀಯರು ನಂಬಿದ್ದರು. ಪರಾಕ್ರಮಿಗಳು, ದೇಶಾಭಿಮಾನಿಗಳು, ಬಾಹುಬಲ ಮುಂತಾದ ಗುಣ ಸ್ವಭಾವಗಳಿಂದ ಕ್ಷತ್ರೀಯರಿಗೆ ಸಮಾಜದಲ್ಲಿ ಹೆಚ್ಚಿನ ಸ್ಥಾನ ಕಲ್ಪಿಸಲಾಗಿತ್ತಾದರೂ ವರ್ಣ ಶ್ರೇಣಿಯಲ್ಲಿ ಅವರು ಬ್ರಾಹ್ಮಣರ ನಂತರದಲ್ಲಿಯೇ ಎರಡನೆಯ ಶ್ರೇಣಿಯವರಾಗಿ ಗುರುತಿಸಲ್ಪಟ್ಟತೆಂದು ಮಾತ್ರ ಹೇಳಬಹುದಾಗಿದೆ.

ಇ) **ವೈಶ್ಯ:** ವಸ್ತು ಸಂಗ್ರಹ, ವಾಣಿಜ್ಯ ಮತ್ತು ವ್ಯವಹಾರ ಈ ವರ್ಣದವರ ಪ್ರಮುಖ ಉದ್ಯೋಗವಾಗಿತ್ತು. ಸಮಾಜದಲ್ಲಿ ಯಾವುದೇ ವಸ್ತು, ಒಡವೆ, ಆಹಾರ ಧಾನ್ಯಗಳ ಕೊರತೆ ಉಂಟಾದಾಗ ಅವನ್ನು ಬೇರೆ ಸ್ಥಳಗಳಿಂದ ಕೊರತೆಯ ಸ್ಥಳಗಳಿಗೆ ಆಯತ ಮಾಡಿಕೊಳ್ಳುವುದು ಅಲ್ಲದೆ ಹೆಚ್ಚುವರಿ ವಸ್ತುಗಳನ್ನು ಇತರೆಡೆಗಳಿಗೆ ನಿರ್ಯಾತ ಮಾಡಿ ಕಳಿಸುವುದು ಇವರ ಕಾರ್ಯಗಳಾಗಿದ್ದವು.

"ವೈಶ್ಯರಲ್ಲಿ ಗ್ರಹಪತಿ ಮತ್ತು ಶೆಟ್ಟಿ ಎಂಬ ಎರಡು ಪಂಗಡಗಳಿದ್ದವೆಂದು ಬೌದ್ಧ ಗ್ರಂಥಗಳಲ್ಲಿ ಉಲ್ಲೇಖಿಸಲಾಗಿದೆ." ಇವರಲ್ಲಿ ಗ್ರಹಪತಿ ಪಂಗಡಕ್ಕೆ ಸೇರಿದವರು ವ್ಯವಸಾಯ, ಪಶುಸಂಗೋಪನೆ, ಸ್ಥಳೀಯ ಊರಾಡಳಿತ ಕೆಲಸಗಳನ್ನು ನಿರ್ವಹಿಸಿದರೆ, 'ಶೆಟ್ಟಿ' ಪಂಗಡದವರು ವಾಣಿಜ್ಯ ಮತ್ತು ವ್ಯವಹಾರ ಉದ್ಯೋಗವನ್ನು ಮಾಡುತ್ತಿದ್ದರು. ಶೆಟ್ಟಿಯು ರಾಜಕೀಯ ಮಂತ್ರಾಲೋಚನೆಯ ಸಭೆಯ ಸದಸ್ಯನಾಗಿಯೂ, ಸಾಮಾಜಿಕ ಮತ್ತು ಆರ್ಥಿಕಕ್ಕೆ ಸಂಬಂಧಿಸಿದ ಸಲಹೆಗಾರನೂ ಆಗಿ ಕೆಲವೊಂದು ಕಡೆ ಕಾರ್ಯ ನಿರ್ವಹಿಸುತ್ತಿದ್ದನೆಂದು ಹೇಳಲಾಗುತ್ತದೆ.

ಪ್ರಾಚೀನ ಶಾಸನಗಳಲ್ಲಿ ಶೆಟ್ಟಿ ಬಣಜಿಗರನ್ನು ಕುರಿತು ಉಲ್ಲೇಖಿಸಲಾಗಿದೆ. ಕ್ರಿ.ಶ. 625ರ ಐಹೊಳೆ ಶಾಸನದಲ್ಲಿ ಇಂಥ ಬಣಜಿಗರನ್ನು ಕುರಿತು ವರ್ಣಿಸಲಾಗಿದೆ. "ಈ ಶಾಸನದಲ್ಲಿ ಐದು ನೂರು ವರ್ತಕರನ್ನು ಉಲ್ಲೇಖಿಸಲಾಗಿದ್ದು, ಅದೊಂದು ಇಡೀ ದಕ್ಷಿಣ ಭಾರತದಲ್ಲಿಯೇ ಬೃಹತ್ ವಣಿಕ (ವ್ಯಾಪಾರಿ) ಸಂಘವಾಗಿತ್ತು. ಅವು ದೇಶ ವಿದೇಶಗಳಲ್ಲಿ ವಾಣಿಜ್ಯ ವ್ಯಾಪಾರ ಸಂಪರ್ಕವನ್ನು ಹೊಂದಿದ್ದರು"[22] ಎಂದು ಹೇಳಿದೆ. "ಇವರು ಅನೇಕ ರಾಷ್ಟ್ರಗಳಲ್ಲಿ ವ್ಯವಹರಿಸುತ್ತಿದ್ದರು. ಎಲ್ಲಾ

ತರಹದ ವಾಹನಗಳನ್ನು ಉಪಯೋಗಿಸುತ್ತಿದ್ದರು ಮತ್ತು ಎಲ್ಲಿ ಲಾಭವಿದೆಯೋ ಅಲ್ಲಿಗೆ ಹೋಗಿ ಹೋದಲ್ಲೆಲ್ಲಾ ದಾನ ಧರ್ಮಗಳನ್ನು ಮಾಡಿ ಸ್ಥಳೀಯ ವ್ಯಾಪಾರಿಗಳಿಗೆ ಮಾದರಿಯಾಗಿದ್ದರು."[11] ಹೀಗೆ ಐಯಾವೊಳೆ ದೊಡ್ಡ ವ್ಯಾಪಾರ ಕೇಂದ್ರವೂ, ಅಲ್ಲಿನ ಬಣಜಿಗರು ದೊಡ್ಡ ವರ್ತಕರೂ ಆಗಿದ್ದರು ಎಂದು ಹೇಳಬೇಕು.

ವ್ಯಾಪಾರಿಗಳಲ್ಲಿ ಬೌದ್ಧರು, ಜೈನರು, ಬಣಜಿಗರು ಪಂಗಡಗಳಿಗೆ ಸೇರಿದವರು ಇದ್ದರೆಂದು ತಿಳಿದುಬರುತ್ತದೆ. "ವೈಶ್ಯರಲ್ಲಿಯೂ ವಿವಿಧ ಪಂಗಡಗಳಿದ್ದವೆಂದು ಭಾಸ್ಕರಾಚಾರ್ಯನ ತೆಲುಗು ಕನ್ಯಕಾ ಪುರಾಣ ಹಾಗೂ ದೇವಾಂಗ ಪುರಾಣಗಳಿಂದ ಕಂಡುಬರುತ್ತದೆ."[23] ಕರ್ನಾಟಕದಲ್ಲಿ ಬಣಜಿಗರು, ಆಂಧ್ರಪ್ರದೇದಲ್ಲಿ ಕೊಮಟಿಗರು, ಉತ್ತರ ಭಾರತದಲ್ಲಿ ಸೇಠಿ ಅಥವಾ ಸೇಠ್‌ರು ವೈಶ್ಯ ಉದ್ಯೋಗವನ್ನು ಕೈಗೊಂಡಿದ್ದರೆಂದು ಹೇಳಲಾಗುತ್ತದೆ.

ಈ) ಶೂದ್ರ: ಶೂದ್ರರು ವರ್ಣ ಶ್ರೇಣಿಯ ಅತ್ಯಂತ ಕೆಳ ಹಂತದಲ್ಲಿರುವವರು. ಬ್ರಹ್ಮನ ಪಾದದಂದ ಜನಿಸಿದವರು. ಕರ್ಮಸಿದ್ಧಾಂತದಂತೆ ಇವರು ಹಿಂದಿನ ಜನ್ಮದಲ್ಲಿ ಪಾಪ ಮಾಡಿ ಈ ಜನ್ಮದಲ್ಲಿ ಚಾಂಡಾಲರಾಗಿ ಜನಿಸಿರುವರು. ಇವರದು ಸೇವಾವೃತ್ತಿ ಮೇಲಿನ ಮೂರು ವರ್ಣದವರ ಸೇವೆಯನ್ನು ಮಾಡಿಕೊಂಡಿರಬೇಕು ಎಂದು ಧರ್ಮ ಸೂತ್ರಗಳಲ್ಲಿ ಈ ವರ್ಣದವರಿಗೆ ನಿರ್ದೇಶನ ಮಾಡಲಾಗಿತ್ತು. ಶೂದ್ರರಿಗೆ ಕೆಲವು ಕಟ್ಟುಪಾಡುಗಳನ್ನು ವಿಧಿಸಲಾಗಿತ್ತು.

ಶೂದ್ರರು, ದಲಿತರಿಗೆ ವೇದ ಹಾಗೂ ಉಪನಿಷತ್ತುಗಳ ಅಧ್ಯಯನ, ತಪಸ್ಸು ಮಾಡುವುದಕ್ಕೆ ಅಧಿಕಾರವಿರಲಿಲ್ಲ. ಅಷ್ಟೇ ಅಲ್ಲದೆ ಬ್ರಾಹ್ಮಣನು ವೇದ ಮಂತ್ರಗಳನ್ನು ಹೇಳುವಾಗ ಅದನ್ನು ಕೇಳಿಸಿಕೊಳ್ಳಲೂಬಾರದು. ಒಂದು ವೇಳೆ ಕೇಳಿಸಿಕೊಂಡಿದ್ದೇ ಆದರೆ ಅಂಥವರ ಕಿವಿಯಲ್ಲಿ ಸೀಸವನ್ನು ಕಾಸಿ ತುಂಬುತ್ತಿದ್ದರು. ಇವರಿಗೆ ಊರ ಪ್ರವೇಶಕ್ಕೆ ಕೆಲವು ನಿರ್ದಿಷ್ಟ ಕಾಲ ಮತ್ತು ಸಮಯವನ್ನು ನಿರ್ದಿಷ್ಟಪಡಿಸಲಾಗಿತ್ತು. ದನಗಳು ಸತ್ತರೆ ಇಲ್ಲವೇ ಮಲ ಅಥವಾ ನೈರ್ಮಲ್ಯವನ್ನು ಸ್ವಚ್ಛಗೊಳಿಸುವುದಕ್ಕೆ ಮಾತ್ರ ಊರಲ್ಲಿ ಬರಬೇಕಾಗುತ್ತಿತ್ತು. ಅದು ಬೆಳಗಿನ ಮತ್ತು ಇಳಿ ಹೊತ್ತಿನಲ್ಲಿ ಊರಲ್ಲಿ ಬರುವಂತಿಲ್ಲ. ಹಾಗೆ ಬಂದರೆ ಅವರ ನೆರಳು ಉತ್ತಮರ ಓಣಿಯ ನೆಲದ ಮೇಲೆ ಬಿದ್ದು ಅದು ಅಪವಿತ್ರವಾಗುತ್ತದೆ. ಅದಕ್ಕಾಗಿ ಅವರು ಮಧ್ಯಾಹ್ನದ ಹೊತ್ತಿನಲ್ಲಿ ಸೂರ್ಯ ನೆತ್ತಿಯ ಮೇಲೆ ಇದ್ದಾಗ ಬರಬೇಕು. ಅಂದರೆ ಅವರ ನೆರಳು ಭೂಮಿಯ ಮೇಲೆ ಬೀಳದೆ, ಅವರ ಮೇಲೆಯೇ

ಬೀಳುವುದು. ಊರಲ್ಲಿ ಅಂತ್ಯಜರು ಬರಬೇಕಾದರೆ ಕಾಲಿಗೆ ಕಸಬಾರಿಗೆ, ಕೊರಳಲ್ಲಿ ಮಣ್ಣಿನ ಮಡಿಕೆ ಕಟ್ಟಿಕೊಂಡು, ಕೈಯಲ್ಲಿ ಬೆತ್ತ ಹಿಡಿದು 'ಸಂಭೋಳಿ' ಎಂದು ಕೂಗುತ್ತ ಬರಬೇಕು. ಇದರಿಂದ ಉತ್ತಮ ವರ್ಣದವರು ಅಂತ್ಯಜನ ಮುಖದರ್ಶನ ಮಾಡದೆ ಮರೆಯಾಗಲು ಅನುಕೂಲವಾಗುತ್ತಿತ್ತು. ಅಂದರೆ ಅಂತ್ಯಜರ ಮುಖದರ್ಶನವೂ ಉಚ್ಚ ವರ್ಣದವರ ದೃಷ್ಟಿ ಪಾಪವೆಂದೇ ಪರಿಗಣಿಸಲಾಗಿತ್ತೆಂದು ಹೇಳಬಹುದು.

ಶೂದ್ರ ಅಥವಾ ಅಂತ್ಯಜರಿಗೆ ಇಂಥದೇ ನಿರ್ದಿಷ್ಟ ಉದ್ಯೋಗವಿರಲಿಲ್ಲ. ಅವರಲ್ಲಿ ಕೆಲವರು ಹೊಲಗದ್ದೆಗಳಲ್ಲಿ ಜೀತದಾಳುಗಳಾಗಿ ದುಡಿದರೆ, ಕೆಲವರು ಊರ ಸ್ವಚ್ಛತೆಗೆ ತೊಡಗಿಸಿಕೊಂಡರು. ಮತ್ತೆ ಕೆಲವರು ಬೇಟೆಯಾಡುವುದಕ್ಕೆ ಸೈನ್ಯರುಗಳಲ್ಲಿ ಸೈನಿಕರಾಗಿ ಸೇರಿದರು. ಹಲವರು ವಿವಿಧ ಶ್ರಮಿಕ ಉದ್ಯೋಗಗಳನ್ನು ಅನುಸರಿಸಿದ್ದರಿಂದ ಅವರುಗಳಲ್ಲಿ ಅನೇಕ ಪಂಗಡಗಳಾದವೆಂದು ಸಮಾಜ ವಿಜ್ಞಾನಿಗಳು ಅಭಿಪ್ರಾಯಪಡುತ್ತಾರೆ. ಬೇಟೆಯಾಡುವವರನ್ನು ಬೇಡ, ಕಿರಾತಕ, ಮೀನು ಹಿಡಿಯುವ ಹಾಗೂ ಡೋಣಿ ನಡೆಸುವವರನ್ನು ಬೆಸ್ತ, ಅಂಬಿಗ, ಪಶುಪಾಲನೆಯನ್ನು ಮಾಡುವವ ದನಗಾಹಿ, ಬಟ್ಟೆ ನೇಯುವವ ನೇಕಾರ, ಜಾಡ, ಬಟ್ಟೆ ಹೊಲಿಯುವವ ಸಿಂಪಿಗ, ಬಟ್ಟೆಗೆ ಬಣ್ಣ ಹಾಕುವವ ಬಣಗಾರ, ಮಡಿಕೆ ಮಾಡುವವ ಕುಂಬಾರ, ಕಬ್ಬಿಣ ಲೋಹ ಕೆಲಸಗಾರ ಕಂಬಾರ, ಚಿನ್ನದ ಕೆಲಸಗಾರ ಅಕ್ಕಸಾಲಿಗ, ಬಟ್ಟೆ ತೊಳೆಯುವವ ಮಡಿವಾಳ ಅಥವಾ ಅಗಸ ಕ್ಷೌರ ಮಾಡುವವ ಕ್ಷೌರಿಕ, ಹಡಪಿಗ, ಚರ್ಮದ ಕೆಲಸ ಮಾಡುವವ ಡೋಹರ, ಸಮ್ಮಗಾರ, ಮಾದಿಗ, ಹೊಲೆಯ, ಮಲವನ್ನು ಎತ್ತಿ ಊರ ಹೊರಗೆ ಸಾಗಿಸುವ ಭಂಗಿ ಹೀಗೆ ಮುಂತಾದ ಹೆಸರುಗಳಿಂದ ಕರೆಯಲಾಗಿ ಬೇರೆ ಬೇರೆ ಜಾತಿ ಹಾಗೂ ಉಪಜಾತಿಗಳು ಹುಟ್ಟಿಕೊಂಡವು. ಅವರವರ ಉದ್ಯೋಗಗಳು ಅವರ ಜೀವನಕ್ಕೆ ಕಟ್ಟುಪಾಡುಗಳಾಗಿ, ಅವುಗಳನ್ನು ಮೀರಲಾರದ ಸ್ಥಿತಿಗಳಾಗಿ ಆಧುನಿಕ ಕಾಲದಲ್ಲಿಯೂ ಮುಂದುವರೆದಿರುವುದನ್ನು ನೋಡುತ್ತೇವೆ.

ಶತಶತಮಾನಗಳಿಂದ ಅನುಸರಿಸಿಕೊಂಡು ಬಂದಿದ್ದ ವರ್ಣ ವ್ಯವಸ್ಥೆ ಮತ್ತು ಜಾತಿ ವ್ಯವಸ್ಥೆಗೆ ಕೊಡಲಿಪೆಟ್ಟು ಬಿದ್ದಿದ್ದು ಮಾತ್ರ ಹನ್ನೆರಡನೆಯ ಶತಮಾನದಲ್ಲಿ ಎನ್ನಬೇಕು. ಹನ್ನೆರಡನೇ ಶತಮಾನವನ್ನು ಕರ್ನಾಟಕದ ಸಾಮಾಜಿಕ ಇತಿಹಾಸದಲ್ಲಿ ಕ್ರಾಂತಿಕಾರಕವಾದ ಕಾಲವೆಂದು ಕರೆಯಲಾಗುತ್ತದೆ. ಹೀಗೆ ಕರೆಯಲಿಕ್ಕೆ ಅನೇಕ ಕಾರಣಗಳಿವೆ. ಅವುಗಳಲ್ಲಿ ಮುಖ್ಯವಾದುದು ಇದು ಸನಾತನ ಕಾಲದಿಂದ ಚಾಚೂ ತಪ್ಪದೆ ಪಾಲಿಸಿಕೊಂಡು ಬಂದಿದ್ದ ವರ್ಣ, ಜಾತಿ, ಲಿಂಗ ತಾರತಮ್ಯದ ವಿರುದ್ಧ ಕೈಕೊಂಡ ಚಳವಳಿಯಾಗಿತ್ತು. ಅಂದಿನ ಚಳವಳಿಯಲ್ಲಿ ನೇರವಾಗಿ

ಪಾಲ್ಗೊಂಡಿದ್ದ ಶಿವಶರಣರನ್ನು ನೋಡಿದರೆ, ಅವರೆಲ್ಲರು ಜಾತಿ ವ್ಯವಸ್ಥೆಯ ಮತ್ತು ಉದ್ಯೋಗಗಳ ವಿಭಿನ್ನ ಸ್ಥರಗಳಿಂದ ಬಂದವರಾಗಿದ್ದರು. ಅವರಲ್ಲಿ ಕಂಬಾರ, ಕುಂಬಾರ, ಅಂಬಿಗ, ದನಗಾಹಿ, ರೈತ, ಹೆಂಡದವರು, ವೇಶಗಾರರು, ವೈದ್ಯ, ಡೋಹರ, ಅಕ್ಕಸಾಲಿಗ, ಹಗ್ಗ ಹೊಸೆಯುವರು, ಕಸಗುಡಿಸುವವರು, ಆಯಗಾರದವರು, ಚಪ್ಪಲಿ ಮಾಡುವವರು, ನೇಕಾರರು, ಸಿಂಪಿಗರು, ಹಡಪಿಗರು, ಸೂಳೆಕಾಯಕದವರು, ನೂಲುವವರು, ಬಣ್ಣ ಕಟ್ಟುವವರು, ಜಂಗಮರು, ಮತದಯ್ಯಗಳು, ಆಯ್ದಕ್ಕಿಯವರು, ಕಟ್ಟಿಗೆ ಮಾರುವವರು ಹೀಗೆ ಪಟ್ಟಿ ಬೆಳೆಯುತ್ತದೆ. ಸಮಾಜದ ಎಲ್ಲ ಜಾತಿ, ವರ್ಗದ ಗಂಡಸರು, ಹೆಂಗಸರು ಇದ್ದರು. ಇವರು ಅಂದಿನ ಕಲ್ಯಾಣವನ್ನು ಕೇಂದ್ರವಾಗಿಸಿಕೊಂಡು ಸಮಾಜಕ್ಕೆ ಅನಿಷ್ಟ ಪಿಡುಗಾಗಿದ್ದ ಜಾತಿ ವ್ಯವಸ್ಥೆ, ಗಂಡು ಹೆಣ್ಣು ಎಂಬ ಭೇದಗಳ ವಿರುದ್ಧ ಧ್ವನಿಯೆತ್ತಿದರು. ಸಾಮಾಜಿಕ, ಧಾರ್ಮಿಕ ಕಂದಾಚಾರ, ಮೂಢ ನಂಬಿಕೆಗಳು ಮತ್ತು ಉಚ್ಚ ವರ್ಣದವರ ಆಷಾಢಭೂತಿತನಗಳನ್ನು ಬಯಲಿಗೆಳೆಯುವುದು, ಹಾಗೆ ಕೆಟ್ಟದ್ದನ್ನು ಎತ್ತಿ ತೋರಿಸುತ್ತಲೇ ಬದುಕಿನ ಮೌಲ್ಯಗಳ ಅನ್ವೇಷಣೆಗೆ ತೊಡಗಿದರು. ಈ ಹುಡುಕಾಟದ ಚಳವಳಿಗೆ ಬಸವಣ್ಣ ಅಲ್ಲಮ ಪ್ರಭುರಂಥವರು ನಾಯಕರಾಗಿ ದೊರಕಿದ್ದು ದೊಡ್ಡ ಪವಾಡವೇ ಎನ್ನದೆ ವಿಧಿಯಿಲ್ಲ. ಈ ಚಳವಳಿ ಇಡೀ ಭಾರತೀಯ ಸನಾತನ ಧಾರ್ಮಿಕ ಹಾಗೂ ಸಾಮಾಜಿಕ ವ್ಯವಸ್ಥೆಯನ್ನು ಅಮೂಲಾಗ್ರವಾಗಿ ಪ್ರಶ್ನಿಸಿತು. ಅಷ್ಟೇ ಅಲ್ಲ ವರ್ಣ, ವರ್ಗ, ಜಾತಿರಹಿತವಾದ ಸರ್ವರು ಸಮಾನರು, ಯಾವುದೇ ಕಾಯಕ ಮಾಡಲಿ ಅವುಗಳೆಲ್ಲವು ಸಮಾನವಾದವುಗಳು. ಎಲ್ಲ ಕಾಯಕ ಮಾಡಲಿ ಅವುಗಳೆಲ್ಲವು ಸಮಾನವಾದವುಗಳು. ಎಲ್ಲ ಕಾಯಕ ಜೀವಿಗಳ ಬದುಕು ಸಮಾನವಾದುದೆಂದು ಸಾರಿ ಅಂಥ ಸಮಾಜವನ್ನು ನಿರ್ಮಾಣ ಮಾಡುವುದಕ್ಕೆ ತೊಡಗಿದ್ದರು. ಹನ್ನೆರಡನೇ ಶತಮಾನವನ್ನು ಹೊರತುಪಡಿಸಿದರೆ ಇಂಥದೊಂದು ಘಟನೆ ಇತಿಹಾಸದ ಯಾವ ಕಾಲದಲ್ಲೂ ನೆರವೇರಲಿಲ್ಲ ಎನ್ನಬೇಕು.

ಹನ್ನೆರಡನೆಯ ಶತಮಾನದಲ್ಲಿ ಶಿವಶರಣರ ನೇತೃತ್ವದಲ್ಲಿ ಕಲ್ಯಾಣದಲ್ಲಿ ನಡೆದ ಕ್ರಾಂತಿ ವರ್ಣ ಸಂಕರದ ಮೂಲಕ ತನ್ನ ಪರಾಕಾಷ್ಟ ಸ್ಥಿತಿಗೆ ತಲುಪಿತಾದರೂ, ಮೂಲಭೂತ ಜಾತಿವಾದಿ ವೈದಿಕರು ಅಂದು ರಾಜನಾಗಿದ್ದ ಬಿಜ್ಜಳನ ತಲೆಕೆಡಿಸಿ ಕ್ರಾಂತಿಯನ್ನು ವಿಫಲಗೊಳಿಸುವಲ್ಲಿ ಯಶಸ್ವಿಯಾದರು. ಕಲ್ಯಾಣ ಕ್ರಾಂತಿಯ ನಂತರ ಕಾಯಕ ಜೀವಿಗಳು ದೇಶದೆಲ್ಲೆಡೆಗಳಲ್ಲಿ ಚಲ್ಲಾಪಿಲ್ಲೆಯಾಗಿ ಹೋಗಿದ್ದು ಇತಿಹಾಸದ ದುರಂತವಾಗಿದೆ.

ಕಲ್ಯಾಣ ಕ್ರಾಂತಿಯೋತ್ತರ ಮತ್ತೆ ಸಮಾಜವು ತನ್ನ ಜಂಗಮ ಸ್ಥಿತಿಯಿಂದ ಸ್ಥಾವರಾವಸ್ಥೆಯಡೆಗೆ ಹೊರಳಲಾರಂಭಿಸಿತು. ವೈದಿಕರು ಮತ್ತು ಸಮಾಜದಲ್ಲಿ ವರ್ಣ ವ್ಯವಸ್ಥೆಯನ್ನು ಪುನರುಜ್ಜೀವನಗೊಳಿಸಲಿಕ್ಕೆ ತೊಡಗಿದರು. ಉಡುಪಿಯಲ್ಲಿ ದ್ವೈತ ಮತ ಸ್ಥಾಪಕರಾದ ಮದ್ವಾಚಾರ್ಯರು ವೈದಿಕ ಧರ್ಮದ ಜೀರ್ಣೋದ್ಧಾರಕ್ಕೆ ತೊಡಗಿಸಿಕೊಂಡರು. ಸಂಕರಗೊಂಡ ಸಮುದಾಯಗಳು ಅವರವರು ಕೈಕೊಂಡಿದ್ದ ಉದ್ಯೋಗಗಳದ್ದೇ ಜಾತಿಗಳಾಗಿ ಪರಿಣಮಿಸಿದವು. ಮಧ್ಯಕಾಲೀನದಲ್ಲಿ ಈ ವ್ಯವಸ್ಥೆ ಮತ್ತಷ್ಟು ಜಟಿಲಗೊಂಡಾಗ ಅನೇಕ ಶೋಷಿತ ಸಮುದಾಯಗಳು ಇಸ್ಲಾಂ ಧರ್ಮಕ್ಕೆ ಮತಾಂತರ ಹೊಂದುವುದಕ್ಕೆ ತೊಡಗಿದರು. ಇದರಿಂದ ಸಂಕರಗೊಂಡ ಸಮುದಾಯಗಳದ್ದೇ ಜಾತಿಗಳಾದವು.

ಉದಾ: ಪಿಂಜಾರ, ಫಕೀರ, ದರವೇಷಿ, ಜಾತಗಾರರು ಮುಂತಾದ ಜಾತಿ ಸಮುದಾಯಗಳು ಸಮಾಜದಲ್ಲಿ ಹುಟ್ಟಿಕೊಂಡವು. ಇಲ್ಲಿಯೂ ಶೋಷಿತ ಸಮುದಾಯಗಳಿಗೆ ಸಾಮಾಜಿಕ ನ್ಯಾಯ ಮರೀಚಿಕೆಯೇ ಆಯಿತೆಂದರೆ ತಪ್ಪಾಗಲಾರದು.

ಹದಿನೆಂಟನೆಯ ಶತಮಾನದ ಪೇಶ್ವೆಗಳ ಆಡಳಿತ ಕಾಲದಲ್ಲಿ ಮತ್ತೆ ಭಾರತೀಯ ಸಮಾಜದಲ್ಲಿ ಜಾತಿವ್ಯವಸ್ಥೆ ವಿಜೃಂಭಿಸಿತೆಂದು ಹೇಳಲೇಬೇಕು. ಶೂದ್ರ ವರ್ಗಕ್ಕೆ ಸೇರಿದ ಅಸ್ಪೃಶ್ಯರ ಸ್ಥಿತಿ ಇನ್ನೂ ನರಕ ಸದೃಶ್ಯವಾಗಿತ್ತು. ಅಂತ್ಯಜರಿಗೆ ಸಾಮಾಜಿಕ, ಧಾರ್ಮಿಕ, ರಾಜಕೀಯ, ಆರ್ಥಿಕ ಮುಂತಾದ ಸವಲತ್ತುಗಳಿಂದ ಬಹು ದೂರವೇ ಉಳಿದರು. ಈ ಕಾಲವು ಮತ್ತೆ ವೇದ, ಸ್ಮೃತಿಗಳ ಕಾಲವನ್ನು ನೆನಪಿಗೆ ತರುತ್ತದೆ. ಪೇಶ್ವೆಗಳ ಕಾಲದ ಆಡಳಿತ ಅಸ್ಪೃಶ್ಯರ ಪಾಲಿಗೆ ಅತ್ಯಂತ ಕರಾಳವಾಗಿತ್ತು. ಹಿಂದೂ ಸಮಾಜ ವ್ಯವಸ್ಥೆಯ ವರ್ಣಾಶ್ರಮ ತಂದೆಯಾದರೆ, ಜಾತಿ ಅದರ ತಾಯಿಯಾಗಿದ್ದವು. ಜಾತೀಯತೆ ಜೀವಂತ ಸಾಮಾಜಿಕ ಪರಿಕರವಾಗಿತ್ತು. ಸೂತಕದ ಪರಿಸರ ಮಾನವ ಸಂಬಂಧಗಳ ನಡುವೆ ಭಾರಿ ಕಂದಕವನ್ನೇ ಸೃಷ್ಟಿಸಿತು. ಇದರಿಂದ ಜಾತಿವ್ಯವಸ್ಥೆಗೆ ಸಿಕ್ಕಿಕೊಂಡ ಬಹುಸಂಖ್ಯಾತ ಅಸ್ಪೃಶ್ಯರು, ಹಿಂದುಳಿದ, ಅಲ್ಪಸಂಖ್ಯಾತರೆಲ್ಲರೂ ಸಂವೇದನೆಯಿಲ್ಲದೆ ಇಂದಿಗೂ ಬಾಳುತ್ತಿದ್ದಾರೆ.

ಜಾತಿ ಸೂತಕದ ಶೂದ್ರನಾದ ಅಸ್ಪೃಶ್ಯನು ಬ್ರಾಹ್ಮಣನಿಂದ 99 ಅಡಿ ದೂರದಲ್ಲಿ ನಿಂತು ಮಾನವ ಸಂಬಂಧದ ವ್ಯವಹಾರಗಳನ್ನು ಬಗೆಹರಿಸಿಕೊಳ್ಳಬೇಕೆಂಬ ನಿಯಮವನ್ನು ಈ ಕಾಲದ

ವೈದಿಕರು ರೂಪಿಸಿದ್ದರೆಂದರೆ ಪೇಶ್ವೆಗಳ ಕಾಲದ ಜಾತಿ ವ್ಯವಸ್ಥೆಯ ಕರಾಳತೆ ಎಷ್ಟೊಂದು ಭಯಾನಕವಾಗಿತ್ತೆಂಬುದು ಅರಿವಿಗೆ ಬರದೆಯಿರದು.

"ಹಿಂದು ಧರ್ಮದ ವಿಷವರ್ತುಲದಲ್ಲಿ ಒಂದು ಜಾತಿಯ ಸದಸ್ಯರು ಸಾಮಾನ್ಯವಾಗಿ ಒಂದು ಸಂಸ್ಕೃತಿಯನ್ನು ಹಂಚಿಕೊಳ್ಳುತ್ತಾರೆ, ಆಲೋಚಿಸುತ್ತಾರೆ ಮತ್ತು ನಡವಳಿಕೆಗಳಲ್ಲಿ ಸಾಂಪ್ರದಾಯಿಕ ವಿನ್ಯಾಸವನ್ನು ಹೊಂದಿರುವ ಜೀವನವಿರುತ್ತದೆ."[23] ನಂಬಿಕೆಗಳು, ಮೌಲ್ಯಗಳು, ನಡವಳಿಕೆ, ನಿಯಮಾವಳಿ, ಆರ್ಥಿಕ, ರಾಜಕೀಯ, ಧಾರ್ಮಿಕ ಮತ್ತು ಸಾಮಾಜಿಕ ವ್ಯವಸ್ಥೆ ಮೊದಲಾದವೆಲ್ಲಾ ಇದರಲ್ಲಿ ಸೇರಿರುತ್ತವೆ.

ಜಾತಿ ಪದ್ಧತಿಯು ಭಾರತದ ಎಲ್ಲ ಗ್ರಾಮ, ಪಟ್ಟಣ, ನಗರಗಳಲ್ಲಿನ ಸಾಮಾಜಿಕ ನಿಯಂತ್ರಣ ಮತ್ತು ನ್ಯಾಯಿಕ ನಿಯಂತ್ರಣ ಸಾಧನವಾಗಿ ಕಾಣಿಸಿಕೊಂಡಿದೆ. ಇಂತಹ ಅಸಾಧಾರಣ ವ್ಯವಸ್ಥೆಯೊಳಗೆ ಅಸ್ಪೃಶ್ಯರು ಅನೈರ್ಮಲ್ಯದ ವೃತ್ತಿಗಳಾದ ಚರಂಡಿ ಸ್ವಚ್ಛಗೊಳಿಸುವುದು. ಅಸ್ಪೃಶ್ಯರ ಮನೆಯಲ್ಲಿ ಸತ್ತ ಪ್ರಾಣಿಗಳಾದ ಹಸು, ಎಮ್ಮೆಗಳನ್ನು ತಂದು ತಿನ್ನುತ್ತಾರೆ. ಮಲವನ್ನು ತಲೆಯ ಮೇಲೆ ಸಾಗಿಸುತ್ತಾರೆ. ಇವೆಲ್ಲವೂ ಅವರ ದೈನಂದಿನ ಬದುಕಿನೊಳಗೆ ಖಾಯಂ ವೃತ್ತಿಗಳಾಗಿ ಬಂದಿವೆ ಎನ್ನಬೇಕು.

ಗುಲಬರ್ಗಾ ಜಿಲ್ಲೆಯ ಸಾಮಾಜಿಕ ವ್ಯವಸ್ಥೆಯು ಭಾರತೀಯ ಸಮಾಜದ ಎಲ್ಲ ಲಕ್ಷಣಗಳನ್ನು ಮೈಗೂಡಿಸಿಕೊಂಡಿರುವುದು. ಇಲ್ಲಿಯೂ ಸಾವಿರಾರು ವರ್ಷಗಳಿಂದ ಜನರು ತಮ್ಮ ತಮ್ಮ ಧರ್ಮ, ಜಾತಿ, ಜೀವನ ವಿಧಾನಗಳನ್ನು ಹೊಂದಿ ಬಾಳುತ್ತ ಬಂದಿರುವುದನ್ನು ಚರಿತ್ರೆಯುದ್ದಕ್ಕೂ ನಾವು ಕಾಣುತ್ತೇವೆ. ಗುಲಬರ್ಗಾ ಜಿಲ್ಲೆಯ ಸಮಾಜವನ್ನು ನಾವು ಮುಖ್ಯವಾಗಿ ಎರಡು ಸ್ತರಗಳಲ್ಲಿ ಕಾಣುತ್ತೇವೆ. ಅವುಗಳಲ್ಲಿ ಒಂದು; ಗ್ರಾಮೀಣ ಸಮಾಜವಾದರೆ ಎರಡು, ನಗರ ಸಮಾಜವಾಗಿದೆ. ಇವುಗಳ ಸ್ವರೂಪ, ಲಕ್ಷಣ, ಕಾರ್ಯ ವಿಧಾನಗಳಲ್ಲಿ ವ್ಯತ್ಯಾಸವಿದೆ. ಅವುಗಳಿಗೆ ಅದರದೇ ಆದ ಅನುಕೂಲತೆಗಳೂ, ಸಮಸ್ಯೆಗಳೂ ಇವೆ.

ಹಲವಾರು ಕಾರಣಗಳಿಂದ ಗ್ರಾಮಗಳು ಬೆಳೆದು ಪುರಗಳಾಗಿ ಹಾಗೂ ನಗರಗಳಾಗಿ ರೂಪಗೊಂಡಿರುವುದನ್ನು ಇತಿಹಾಸದುದ್ದಕ್ಕೂ ಗಮನಿಸಬಹುದು. ಪ್ರಾಚೀನ ಹಾಗೂ ಮಧ್ಯಕಾಲದಲ್ಲಿ ವರ್ತಕರ ಸಮುದಾಯಗಳು ಈ ನಿಟ್ಟಿನಲ್ಲಿ ಹೆಚ್ಚು ಆಸಕ್ತವಾಗಿದ್ದವು ಮತ್ತು ಇದಕ್ಕೆ ರಾಜಾಶ್ರಯವೂ ಇತ್ತು. ಪಟ್ಟಣ ಮತ್ತು ನಗರಗಳ ಬೆಳವಣಿಗೆಗೆ ನಗರೀಕರಣ ಎನ್ನುತ್ತಾರೆ. ನಗರೀಕರಣವು

ಇಪ್ಪತ್ತನೆಯ ಶತಮಾನದ ಒಂದು ಸಾಮಾಜಿಕ ಪ್ರಕ್ರಿಯೆಯಾಗಿದೆ. ಪಟ್ಟಣಗಳನ್ನು ಗ್ರಾಮೀಣ ಪ್ರದೇಶದಿಂದ ಪ್ರತ್ಯೇಕಿಸಲು ಕೆಲವು ಲಕ್ಷಣಗಳನ್ನು ಸೂಚಿಸಲಾಗಿದೆ. ಅದರಂತೆ "ಪಟ್ಟಣ ಪ್ರದೇಶಗಳಲ್ಲಿ ಕನಿಷ್ಟ ಜನಸಂಖ್ಯೆ ಐದು ಸಾವಿರ ಇರಬೇಕು. ಶೇ. 75 ರಷ್ಟು ಜನ ಕೃಷಿಯಲ್ಲದ ಉದ್ಯೋಗವನ್ನು ಅವಲಂಬಿಸಿರಬೇಕು ಮತ್ತು ಜನಸಾಂದ್ರತೆಯು ಚ.ಕಿ.ಮೀಗೆ 400 ರಷ್ಟಾದರೂ ಇಬೇಕು. ಸಾಮಾನ್ಯವಾಗಿ ಪುರಸಭೆ, ನಗರಸಭೆ, ದಂಡು ಪ್ರದೇಶ (ಕಂಟೋನ್ಮೆಂಟ) ಅನುಸೂಚಿತ (ನೋಟಿಫೈಡರ) ಪ್ರದೇಶಗಳು ಪಟ್ಟಣಗಳ ವ್ಯಾಪ್ತಿಗೊಳಪಡುತ್ತದೆ[14]. ಜಿಲ್ಲೆಯು ರಾಜ್ಯದ ಪಟ್ಟಣಗಳ ಜನಸಂಖ್ಯೆಗೆ ಸಂಬಂಧಿಸಿದಂತೆ 11ನೇ ಸ್ಥಾನದಲ್ಲಿತ್ತು. 1991ರ ಜನಗಣತಿಯಂತೆ ಇದು ರಾಜ್ಯದ ಏಳನೇ ಸ್ಥಾನವನ್ನು ಹೊಂದಿದೆ. ಅದೇರೀತಿ 2001ರ ಜನಗಣತಿಯ ಪ್ರಕಾರ ಜಿಲ್ಲೆಯ ಕೃಷ್ಣಾಪುರ (ಕೃಷ್ಣಾ ಮೇಲ್ದಂಡೆ ಯೋಜನೆ ಕಾಲನಿ) ಹುಣಸಗಿ ಕೃಷ್ಣಾ ಮೇಲ್ದಂಡೆ ಯೋಜನೆ ಕ್ಯಾಂಪಸ್, ಸೇಡಂ ತಾಲೂಕಿನ ಕುರ್ಕುಂಟ, ಚಿತ್ತಾಪುರ ತಾಲೂಕಿನ ವಾಡಿ ಮತ್ತು ಶಹಾಬಾದಗಳನ್ನು ಶಾಸನಬದ್ಧ ಪಟ್ಟಣಗಳೆಂದು ಕರೆಯಲಾಗಿದೆ. ಜಿಲ್ಲೆಯಲ್ಲಿ ಗುಲಬರ್ಗಾ ನಗರವು ಮಹಾನಗರಪಾಲಿಕೆ ಸ್ಥಾನಮಾನ ಹೊಂದಿದೆ. ಅದರಂತೆ ಶಹಾಬಾದ ನಗರ ಸಭೆಯಾಗಿದೆ. ಇನ್ನುಳಿದಂತೆ ಆಳಂದ, ಚಿತ್ತಾಪುರ, ವಾಡಿ, ಜೇವರಗಿ, ಸೇಡಂ ಇವು ಪುರಸಭೆಗಳನ್ನು ಹೊಂದಿವೆ. ಅಫಜಲಪೂರ ಮತ್ತು ಚಿಂಚೋಳಿ ತಾಲೂಕು ಪಂಚಾಯಿತಿಗಳಾಗಿವೆ.

2.5.1 ಗುಲಬರ್ಗಾ ಜಿಲ್ಲೆಯ ಅನುಸೂಚಿತ ಜಾತಿಗಳು

ಭಾರತದ ರಾಜ್ಯಾಂಗದ 341ನೇ ವಿಧಿಯಲ್ಲಿ ಸೂಚಿಸಿರುವಂತೆ ನಿರ್ದಿಷ್ಟಗೊಳಿಸಿರುವ ಎಲ್ಲಾ ಜಾತಿಗಳನ್ನು ಅಥವಾ ಅವುಗಳ ಭಾಗಗಳನ್ನು ಅನುಸೂಚಿತ ಜಾತಿ ಇಲ್ಲವೇ ಪರಿಶಿಷ್ಟ ಜಾತಿಗಳೆಂದು ಗುರುತಿಸಲಾಗಿದೆ. "ಗುಲಬರ್ಗಾ ಜಿಲ್ಲೆಯಲ್ಲಿ 1991ರ ಜನಗಣತಿಯಂತೆ ಇವರ ಸಂಖ್ಯೆ 4,55,462 ಇದೆ. ಇದು ಕ್ರಮವಾಗಿ ಒಟ್ಟು ಜಿಲ್ಲೆಯ ಜನಸಂಖ್ಯೆ ಶೇ. 21.89 ಹಾಗೂ ಶೇ. 23.65 ರಷ್ಟಿತ್ತು."[24]

ಜಿಲ್ಲೆಯಲ್ಲಿ ವಿವಿಧ ಜಾತಿಗಳಿಗೆ ಸೇರಿದ 100ಕ್ಕೂ ಹೆಚ್ಚು ಜನಸಂಖ್ಯೆ ಇರುವ ಪರಿಶಿಷ್ಟ ಜಾತಿಗಳನ್ನು ಹೀಗೆ ಗುರುತಿಸಲಾಗಿದೆ. "ಬಂಜಾರ (ಲಂಬಾಣಿ) 1,21,842, ಭೋವಿ 27,344, ಬ್ಯಾಗಾರ್ 918, ಚಲವಾದಿ, ಚಲವಾದಿ ಚೆನ್ನಯ್ಯ, 751, ಚೆನ್ನದಾಸರ, ಹೊಲೆಯದಾಸರ 1279, ಡೋರ ಕಕ್ಕಯ್ಯ 4095, ಹೊಲೆಯ, ಹೊಲೇರ 1,51,109, ಹೊಲೆಯದಾಸರಿ 849, ಕೊರಮ

2893, ಮಾದಿಗ 87,755, ಮಹರ್, ತರಲ್ 1163, ಮಾಲಾ 3406, ಮಾಂಗ, ಮಾತಂಗ, ಮಿಣಿಮಾದಿಗ 3,086, ಮಾಂಗಾಗರುಡಿಗ 612, ಸಮಗಾರ 6,114 ಹಾಗೂ ಸಫಾಯಿ ಕರ್ಮಚಾರಿ (ಭಂಗಿ) 1466 ಸಮುದಾಯಗಳು ಜಿಲ್ಲೆಯಲ್ಲಿ ನೆಲೆಸಿರುವವು"[25]. ಒಂದರ್ಥದಲ್ಲಿ ಹೈದರಾಬಾದ ಕರ್ನಾಟಕದ ಗುಲಬರ್ಗಾ, ಬೀದರ ಮತ್ತು ರಾಚೂರು ಜಿಲ್ಲೆಗಳಲ್ಲಿ ದಲಿತರು ಹೆಚ್ಚಿನ ಪ್ರಮಾಣದಲ್ಲಿರುವುದಕ್ಕೆ ಅದರದೇ ಆದ ಅನೇಕ ಕಾರಣಗಳಿವೆ. ಅವುಗಳಲ್ಲಿ ಮುಖ್ಯವಾದುದು ಈ ಪ್ರದೇಶದ ಪ್ರಾದೇಶಿಕ, ಚಾರಿತ್ರಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಗತಿಗಳು ಸೇರಿವೆ.

ಕ್ರಿ.ಪೂ.ದಲ್ಲಿ ಈ ಪ್ರದೇಶವನ್ನಾಳಿದ ಮೌರ್ಯರು ಮತ್ತು ಶಾತವಾಹನರು ಬೌದ್ಧ ಧರ್ಮಕ್ಕೆ ನೀಡಿದ ಪ್ರೋತ್ಸಾಹವಾದರೆ, ಹನ್ನೆರಡನೆಯ ಶತಮಾನದಲ್ಲಿ ಬಸವಾದಿ ಶರಣರು ಕೈಕೊಂಡ ಸಮಾಜೋಧಾರ್ಮಿಕ ಆಂದೋಲನವೂ ಕಾರಣಗಳಲ್ಲಿ ಸೇರಿವೆ. ಇನ್ನು ಆಧುನಿಕ ಕಾಲದಲ್ಲಿ ಮಹಾತ್ಮಾ ಜ್ಯೋತಿಬಾ ಫುಲೆ, ಡಾ. ಅಂಬೇಡ್ಕರ್, ಬಿ. ಶಾಮಸುಂದರ್ ಅವರಂಥ ಸಮಾಜ ಚಿಂತಕರ ಹೋರಾಟಗಳ ಪ್ರಭಾವ ಈ ಪ್ರದೇಶದ ಮೇಲೆ ಆಗಿರುವುದು. ಈ ಪ್ರದೇಶದ ದಲಿತರ ಕುರಿತು ಏಳಿಗೆಗೆ ಪ್ರತಿ ಹಂತದಲ್ಲೂ ಚಿಂತನೆಗೈದ ಬಿ. ಶಾಮಸುಂದರ್ ಅವರ ಕೊಡುಗೆ ಅಪಾರ. "ಬಿ. ಶಾಮಸುಂದರ್ ಅವರು ಹೈದರಾಬಾದ ಕರ್ನಾಟಕದ ಗುಲಬರ್ಗಾದಲ್ಲಿ ಬದಕಿ ದಲಿತ ಚಳವಳಿಗೆ ನಾಂದಿ ಹಾಡಿದವರು."[23] ಶಾಮಸುಂದರ್ ಅವರು ಡಾ. ಅಂಬೇಡ್ಕರ್ ಅವರ ಕಟ್ಟಾ ಅನುಯಾಯಿಯಾಗಿ ಅವರ ತತ್ವ ಚಿಂತನೆಗಳನ್ನು ಪ್ರಚುರಪಡಿಸಿದರು. ಸಾಂಪ್ರದಾಯಿಕ ವ್ಯವಸ್ಥೆಯನ್ನು ಧಿಕ್ಕರಿಸುವುದರ ಮೂಲಕ ಜಾತಿಪದ್ಧತಿ, ಶೋಷಣೆಯನ್ನು ನಿರ್ಮೂಲನೆ ಮಾಡುವಲ್ಲಿ ಹೋರಾಟ ಮಾಡಿದರು.

ಜ್ಯೋತಿಬಾ ಫುಲೆ, ಶಾಹೂಮಹಾರಾಜ, ಅಂಬೇಡ್ಕರ್, ಬಿ. ಶಾಮಸುಂದರ್ ಈ ಮುಂತಾದ ಸಮಾಜ ಸುಧಾರಕರ ಹೋರಾಟದಿಂದಾಗಿ ದಲಿತ, ಶೋಷಿತ ಜಾತಿ ಉಪಜಾತಿಗಳಲ್ಲಿ ಸ್ವಲ್ಪಮಟ್ಟಿನ ಬದಲಾವಣೆ ಬಂದಿದ್ದರೂ ಪರಿಪೂರ್ಣವಾದ ಸುಧಾರಣೆಯಾಗಿಲ್ಲವೆನ್ನುವುದು ಸ್ವಲ್ಪಮಟ್ಟಿಗಿನ ನೋವಿನ ಸಂಗತಿಯಾಗಿದೆ. ಜಾತಿ, ಉಪಜಾತಿಗಳ ನಡುವೆ ಭಿನ್ನಭೇದ, ಜಾತಿ ಮಡಿವಂತಿಕೆ ಹಾಗೂ ಒಳಪಂಗಡಗಳ ಬಿರುಕಿನಿಂದಾಗಿ ಸಂಘಟನೆಗೆ ಬಲ ಇಲ್ಲದಂತಾಗಿ ವ್ಯವಸ್ಥೆಯ ಹುನ್ನಾರಕ್ಕೆ ಬಲಿಯಾಗುವುದು ಹೆಚ್ಚಾಯಿತು. ಹೀಗೆ ವ್ಯವಸ್ಥೆಯ ಹುನ್ನಾರಕ್ಕೆ ಬಲಿಯಾದ ಅಸ್ಪೃಶ್ಯ ಸಮುದಾಯಗಳಲ್ಲಿ ಭಂಗಿಗಳೂ (ಸಫಾಯಿ ಕರ್ಮಚಾರಿಗಳು) ಸೇರಿರುವುದನ್ನು ಗಮನಿಸಬೇಕು.

ಅಡಿಟಿಪ್ಪಣಿಗಳು

1. ಗುಲಬರ್ಗಾ ಜಿಲ್ಲೆ ಗೆಜಿಟೀರ್ (ಪ್ರ.ಸಂ.) ಎಂ.ಬಿ. ಪಾಟೀಲ, ಪು. 128, ಕರ್ನಾಟಕ ಸರಕಾರ, ಬೆಂಗಳೂರು 1997.
2. ಅದೇ ಪು. 129.
3. ಅಮರೇಶ ನುಗಡೋಣಿ ಹೈದರಾಬಾದ, ಕರ್ನಾಟಕ ಹಾಡುಪಾಡು ಪು. 1, ಕನ್ನಡ ವಿಶ್ವವಿದ್ಯಾಲಯ, ಹಂಪಿ 2003.
4. ಅದೇ ಪು. 1.
5. ಅದೇ ಪು. 2.
6. ಡಾ. ಗುರುಮೂರ್ತಿ ಕೆ.ಜಿ., ಜನಪದ ಸಮಾಜ ಮತ್ತು ಸಂಸ್ಕೃತಿ, ಪು. 1, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ 1997.
7. ಹಿರೇಮಠ ಎಸ್.ಜಿ., ಭಾರತೀಯ ಸಮಾಜದ ಅಧ್ಯಯನ ಪು. 21, ಪ್ರದೀಪ ಪ್ರಕಾಶನ, ಸಿಂದಗಿ 2010.
8. ಭೈರಪ್ಪ ಕೆ., ಸಮಗ್ರ ಸಮಾಜಶಾಸ್ತ್ರ ಪು. 112, ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಗುಲಬರ್ಗಾ 2006.
9. ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪು. 225, ಸಪ್ನ ಬುಕ್‌ಹೌಸ್, ಬೆಂಗಳೂರು 2006.
10. ದೀಕ್ಷಿತ ಜಿ.ಎನ್. (ಲೇ) ಐಯಾವೊಳೆ ಐನೂರ್ವ ವರ್ತಕ ಸಂಘದ ಇತಿಹಾಸದಲ್ಲಿಯ ಕೆಲವು ಸಮಸ್ಯೆಗಳು (ಪ್ರ.ಸಂ.) ಡಾ. ಎಂ. ಮುರಿಗೆಪ್ಪ, ಬಾದಾಮಿ ಚಾಲುಕ್ಯರು, ಪು. 403, ಕನ್ನಡ ವಿಶ್ವವಿದ್ಯಾಲಯ, ಹಂಪಿ 2009.
11. ಹಿರೇಮಠ ಎಸ್.ಜಿ., ಭಾರತೀಯ ಸಮಾಜದ ಅಧ್ಯಯನ ಪ. 23, ಪ್ರದೀಪ ಪ್ರಕಾಶನ, ಸಿಂದಗಿ 2010.
12. ದಾಸನೂರು ಕೂಸಣ್ಣ, ಶೋಷಿತ ಜಂಗಮರ ಮೀಸಲಾತಿ, ಪು. 4, ಮಾತಂಗ ಪ್ರಕಾಶನ, ಮೈಸೂರು 1999.
13. ಉದ್ಧೃತ: ಎಸ್.ಜಿ. ಹಿರೇಮಠ, ಭಾರತೀಯ ಸಮಾಜದ ಅಧ್ಯಯನ ಪು. 119, ಪ್ರದೀಪ ಪ್ರಕಾಶನ, ಸಿಂದಗಿ 2010.
14. ಅದೇ ಪು. 119, 2010
15. ಉದ್ಧೃತ: ಎಸ್.ಜಿ. ಹಿರೇಮಠ, ಭಾರತೀಯ ಸಮಾಜದ ಅಧ್ಯಯನ ಪು. 120, ಪ್ರದೀಪ ಪ್ರಕಾಶನ, ಸಿಂದಗಿ 2010.
16. ಪೋತೆ ಎಚ್.ಟಿ., ದಲಿತಲೋಕ, ಪುಟ 29 ಕುಟುಂಬ ಪ್ರಕಾಶನ, ವರ್ಷಾ ನಿಲಯ, ಪ್ಲಾಟ್ ನಂ. 81–82, ಪ್ರಬುದ್ಧ ನಗರ, ವಿಶ್ವವಿದ್ಯಾಲಯ ಅಂಚೆ, ಕುಸನೂರ ರಸ್ತೆ, ಗುಲಬರ್ಗಾ 2013.

17. ಶರ್ಮಾ ಆರ್.ಎಸ್., ಪ್ರಾಚೀನ ಭಾರತದಲ್ಲಿ ಶೂದ್ರರು, ಪು. 103, ನವಕರ್ನಾಟಕ ಪ್ರಕಾಶನ, ಬೆಂಗಳೂರು 2004.

18. ಅದೇ ಪು. 117.

19. ಅದೇ ಪು. 117

20. ಪೂಜಾರಹಳ್ಳಿ ವಿರೂಪಾಕ್ಷಿ, ದಲಿತರು ಮತ್ತು ಚರಿತ್ರೆ ಪು. 13, ಕನ್ನಡ ವಿಶ್ವವಿದ್ಯಾಲಯ, ಹಂಪಿ 2005.

21. ಅದೇ ಪು. 2.

22. ಪಾಟೀಲ ಎಂ.ಬಿ. (ಪ್ರ.ಸಂ.) ಗುಲಬರ್ಗಾ ಜಿಲ್ಲೆ ಗೆಜಿಟೀಯರ್ ಪು. 130, ಕರ್ನಾಟಕ ಸರಕಾರ, ಬೆಂಗಳೂರು 1997.

23. ಪಾಟೀಲ ಎಂ.ಬಿ. (ಪ್ರ.ಸಂ.) ಗುಲಬರ್ಗಾ ಜಿಲ್ಲೆ ಗೆಜಿಟೀಯರ್ ಪು. 132, ಕರ್ನಾಟಕ ಸರಕಾರ, ಬೆಂಗಳೂರು 1997.

24. ಪಾಟೀಲ ಎಂ.ಬಿ. (ಪ್ರ.ಸಂ.) ಗುಲಬರ್ಗಾ ಜಿಲ್ಲೆ ಗೆಜಿಟೀಯರ್ ಪು. 133, ಕರ್ನಾಟಕ ಸರಕಾರ, ಬೆಂಗಳೂರು 1997.

25. ಪೋತೆ ಎಚ್.ಟಿ., ದಲಿತ ಲೋಕ ಪು. 32, ಕುಟುಂಬ ಪ್ರಕಾಶನ, ವರ್ಷಾ ನಿಲಯ, ಪ್ಲಾಟ್ ನಂ. 81–82, ಪ್ರಬುದ್ಧ ನಗರ, ವಿಶ್ವವಿದ್ಯಾಲಯ ಅಂಚೆ, ಕುಸನೂರ ರಸ್ತೆ, ಗುಲಬರ್ಗಾ 2013.

ಅಧ್ಯಾಯ–3

ಸಫಾಯಿ ಕರ್ಮಚಾರಿಗಳ ಸಾಮಾಜಿಕ ಸ್ಥಿತಿಗತಿ

3.1 ಸಮಾಜಿಕ ಹಿನ್ನೆಲೆ

3.2 ಸಫಾಯಿ ಕರ್ಮಚಾರಿಗಳ ಸ್ವರೂಪ

3.3 ಸಾಮಾಜಿಕ ಸ್ಥಿತಿಗತಿ
- 1 ಕೌಟುಂಬಿಕ ಜೀವನ
- 2 ವಿವಾಹ ಪದ್ಧತಿ
- 3 ಆಹಾರ ಪದ್ಧತಿ
- 4 ಉಡುಗೆ ತೊಡಿಗೆ
- 5 ಕುಲಬೆಡಗು, ಒಳಬೆಡಗು
- 6 ವಸತಿ

ಅಧ್ಯಾಯ-3

ಸಫಾಯಿ ಕರ್ಮಚಾರಿಗಳ ಸಾಮಾಜಿಕ ಸ್ಥಿತಿಗತಿ

'ಸಮಾಜ'ವೆಂದರೆ ವ್ಯಕ್ತಿಗಳು ಪರಸ್ಪರ ಸಂಬಂಧಗಳ ಸೂತ್ರಗಳ ಸಂಕೀರ್ಣಕ್ಕೆ ಒಳಪಟ್ಟು ಕೂಡಿ ಬಾಳುವುದಾಗಿದೆ. ಹೀಗೆ ಬಾಳಲು ಸಮಾಜದಲ್ಲಿ ಕೆಲವು ವಿಧಿನಿಯಮಗಳು, ರೀತಿ ರಿವಾಜುಗಳು ಮತ್ತು ಕ್ರಿಯೆಗಳು ಇರುತ್ತವೆ. ಯಾವುದೇ ಸಮಾಜವಾಗಲಿ ಅದು ಸಕ್ರಿಯ ವ್ಯಕ್ತಿಗಳಿಂದ ಕೂಡಿರುತ್ತದೆ. ಇಲ್ಲಿನ ವ್ಯಕ್ತಿಗಳು ಒಂದೇ ರೀತಿಯ ಹಿನ್ನೆಲೆ ದೈಹಿಕ ಲಕ್ಷಣ ಒಂದೇ ರೀತಿಯ ಪರಿಸರವನ್ನು ಹೊಂದಿರುತ್ತಾರೆ. "ಸಮಾಜವೆಂದರೆ ಸಾಮಾಜಿಕ ಸಂಬಂಧಗಳನ್ನು, ಹೊಂದಾಣಿಕೆಗಳನ್ನು ಹೊಂದಿರುವಂತಹ ವ್ಯಕ್ತಿಗಳ ಗುಂಪು"[1] ಎಂದು ವ್ಯಾಖ್ಯಾನವಾಗಿದೆ.

ಮಾನವನಂತೆ ಇತರ ಪ್ರಾಣಿಗಳೂ ಸಹ ಕೆಲವು ಉದ್ದೇಸವನ್ನು ಹೊಂದಿ ಬಾಳುತ್ತವೆ. ಅದಕ್ಕೂ ಸಮಾಜವೆನ್ನಬಹುದೇ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಆದರೆ ಅವು ಮಾನವನ ರೀತಿಯ ಸಾಮಾಜಿಕ ಜೀವನವನ್ನು ನಡೆಸಲಾರವು. ಏಕೆಂದರೆ ಅವುಗಳಿಗೆ ಕೇವಲ ಕೂಡಿ ಆಹಾರವನ್ನು ಸಂಗ್ರಹಿಸುವ ಮತ್ತು ಸಂತಾನೋತ್ಪತ್ತಿಗಷ್ಟೇ ಸೀಮಿತವಾಗಿರುತ್ತವೆ. ಇದು ಸಂಪೂರ್ಣ ಸಾಮಾಜಿಕವಾಗಲಾರದು. ಮನುಷ್ಯ ಮತ್ತು ಇತರ ಪ್ರಾಣಿಗಳಿಗೆ ಇರುವ ವ್ಯತ್ಯಾಸವೆಂದರೆ ಸಂಸ್ಕೃತಿ ಎಂಬ ಅಭಿಪ್ರಾಯವಿದೆ. ಮಾನವನ ಸಂಸ್ಕೃತಿ ಅವನ ಸಮಾಜದ ಹುಟ್ಟಿನಿಂದಲೇ ಪ್ರಾರಂಭವಾಗಿದೆಯೆಂಬುದನ್ನು ನಾವು ಈಗಾಗಲೇ ತಿಳಿದಿದ್ದೇವೆ. ಈ ಸಂಸ್ಕೃತಿಯು ಮಾನವನ ಸೃಷ್ಟಿಯಾದರೂ ಅದು ಮಾನವನ ಮೇಲೆ ಹೆಚ್ಚು ಪರಿಣಾಮವನ್ನು ಬೀರುತ್ತದೆ. ಮಾನವನ ಕುಟುಂಬ ಜೀವನ, ಬಂಧುತ್ವ,ಕುಟುಂಬ ಕರಳುಬಳ್ಳಿ, ಸಂಘ ಸಂಸ್ಥೆಗಳು ಸಮುದಾಯ ಜೀವನ ಎಲ್ಲವೂ ಸಂಸ್ಕೃತಿಯಿಂದ ನಿರ್ಣಯಿಸಲ್ಪಡುವವು. ಇವುಗಳ ಸಂಘಟನೆ, ರಚನೆ ಇರುವಿಕೆ ಕಾರ್ಯ ನಿರ್ವಹಣೆ ಮುಂತಾದವು ಆ ಸಮಾಜದ ಸಂಸ್ಕೃತಿಯಿಂದ ಪ್ರಭಾವಿತವಾಗಿರವವು. ಹೀಗಾಗಿ ಪ್ರಸ್ತುತ ಅಧ್ಯಾಯದಲ್ಲಿ ಸಫಾಯಿ ಕರ್ಮಚಾರಿ ಜನರ ಸಾಮಾಜಿಕ ರಚನೆ, ಸ್ವರೂಪವನ್ನು ಕುರಿತು ನೋಡಲಾಗುತ್ತಿದೆ.

3.1 ಸಾಮಾಜಿಕ ಹಿನ್ನೆಲೆ

ಮಾನವನಿಗೆ ಸಮಾಜ ಮತ್ತು ಸಂಸ್ಕೃತಿಗಳ ನಡುವೆ ನಿಕಟವಾದ ಸಂಬಂಧವಿದೆ. ಮಾನವ ಯಾವಾಗ ಭೂಮಿಯ ಮೇಲೆ ಕಾಣಿಸಿಕೊಂಡನೋ ಆವಾಗಿನಿಂದಲೇ ಸಮಾಜ ಮತ್ತು ಸಂಸ್ಕೃತಿಗಳು ಅಸ್ತಿತ್ವಕ್ಕೆ ಬಂದವು ಎನ್ನಬಹುದು. ಹೀಗೆ ಅಸ್ತಿತ್ವಕ್ಕೆ ಬಂದ ಸಮಾಜವು ಬೆಳೆದು ಮುಂದೆ ಕಾಲಕ್ರಮೇಣ ತನ್ನ ಪರಿಸರಕ್ಕೆ ಅನುಗುಣವಾಗಿ ಬದಲಾಗುತ್ತಾ, ಬೆಳೆಯತ್ತಾ ಬಂದಿದೆ. ಹಾಗೆ ನೋಡಿದರೆ ಸಮಾಜಕ್ಕೆ ಜಂಗಮ ಗುಣವಿದೆ. ಸಮಾಜಕ್ಕೆ ಈ ಜಂಗಮ ಗುಣವಿರುವ ಕಾರಣದಿಂದಾಗಿಯೇ ಅದು ಕಾಲಕಾಲಕ್ಕೆ ಲಾವಣಿ ಹೊಂದುತ್ತ ಬಂದಿದೆ. ಈ ಬದಲಾವಣೆಗೆ ಅಂದಂದಿನ ಕಾಲದ ರಾಜಕೀಯ,ಧಾರ್ಮಿಕ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮುಂತಾದವುಗಳು ಮತ್ತು ಇವೆಲ್ಲವುಗಳಿಗೆ ಹೊಂದಿಕೊಂಡು ಬಂದ ಜನತೆಯೂ ಕಾರಣವಾಗಿದ್ದಾರೆ ಎನ್ನಬೇಕು. ಸಮಾಜವು ಬೆಳೆದಂತೆ, ಬದಲಾದಂತೆ ಅದಕ್ಕೆ ಹೊಂದಿಕೊಂಡು ಬಂದ ಸಂಸ್ಕೃತಿಯೂ ಬದಲಾವಣೆಗೊಳಗಾಯಿತೆಂಬುದನ್ನು ಮರೆಯಲಾಗದು. ಸಾಮಾಜಿಕ ಮತ್ತು ಸಾಂಸ್ಕೃತಿಕ

ಬದಲಾವಣೆಯನ್ನು ಕುರಿತು ಅಭಿಪ್ರಾಯಪಡುತ್ತ ಬರಗೂರು ರಾಮಚಂದ್ರಪ್ಪನವರು "ಸ್ಥಗಿತ ಮತ್ತು ಚಲನಶೀಲ ಸ್ಥಿತಿಗಳ ವೈರುಧ್ಯದಲ್ಲಿ ಸಂಕಟಪಡುವ ಸ್ಥಿತಿ ಇರುವುದರಿಂದಲೇ ಮನುಷ್ಯ ಸಮಾಜವು ಬಾಹ್ಯದಲ್ಲಾದರೂ ಪ್ರಾಣಿ ಸಮಾಜವಾಗಿಲ್ಲ. ವ್ಯಕ್ತಿಯೊಬ್ಬನ ಅಂತರಂಗದ ಪ್ರಶ್ನೆ ಇಲ್ಲಿ ಉದ್ಭವವಾಗುವುದಿಲ್ಲ. ಅನೇಕ ವ್ಯಕ್ತಿಗಳ ಜೀವನ ವಿಧಾನ ಮತ್ತು ಸಾಮಾಜಿಕ ನೆಲೆಗಳು ಒದಗಿಸಿಕೊಡುವ ವರ್ಗ ನೆಲೆ ಮುಖ್ಯವಾಗಿದ್ದು, ಸಂಸ್ಕೃತಿಯೆನ್ನುವುದು ವ್ಯಕ್ತಿಗಿಂತ ಸಮಾಜದ ಭಾಗವಾಗಿದೆ. ವ್ಯಕ್ತಿಯು ಈ ಸಮಾಜದ ಈ ಸಂಸ್ಕೃತಿಯ ಒಂದು ಘಟಕವಾಗಿ, ಒಳಗಾಗುವ ಹೊರಗಾಗುವ, ಒಡನಾಟ ಮತ್ತು ಹೋರಾಟಗಳಲ್ಲಿ ಮಗ್ನನಾಗುತ್ತಾನೆ."[2] ಇಲ್ಲಿಯೇ ಮನುಷ್ಯ ಸಮಾಜವು ಚಲನಶೀಲತೆಯಾಗುತ್ತದೆ. ಅದುವೇ ಬದಲಾವಣೆಯೆನಿಸಿಕೊಳ್ಳುತ್ತದೆ.

ಸಮಾಜ ಮತ್ತು ಸಂಸ್ಕೃತಿಯ ಸ್ವರೂಪವನ್ನು ಕುರಿತ ಚರ್ಚೆಯಲ್ಲಿ ವೈರುಧ್ಯಗಳನ್ನು ಪ್ರಸ್ತಾಪಿಸಲೇಬೇಕಾಗುತ್ತದೆ. ಯಾಕೆಂದರೆ, ಸಮಾಜ ಮತ್ತು ಸಂಸ್ಕೃತಿಗಳು ತನ್ನಿಂದ ತಾನೇ ಸರಳವಾಗಿರುವುದಿಲ್ಲ. ಮತ್ತು ಏಕ ಮುಖವಾಗಿರುವುದಿಲ್ಲ. ಸಮಾಜ ಮತ್ತು ಸಂಸ್ಕೃತಿಗಳ ಸ್ವಭಾವವೇ ಇದಾಗಿರುವುದರಿಂದ ಅದರೊಳಗಿನ ಒಂದು ಸ್ಥಿತಿಯ ಅಧ್ಯಯನವು ತನಗೆ ತಾನೇ ಇನ್ನೊಂದು ಸ್ಥಿತಿಯ ಅಧ್ಯಯನಕ್ಕೂ ಚಾಚಿಕೊಳ್ಳುತ್ತದೆ. ಅಥವಾ ಹಾಗೆ ಚಾಚಿಕೊಳ್ಳಬೇಕು.

ಹಾಗೆ ನೋಡಿದರೆ ಮನುಷ್ಯನೇ ಸಮಾಜ ಮತ್ತು ಸಂಸ್ಕೃತಿಗಳ ನಿರ್ಮಾಪಕ, ನಿರ್ದೇಶಕನು. ಸಮಾಜಸಾಶ್ತ್ರಜ್ಞನಾದ ವೈಲ್ಡ್‌ನು ಹೇಳುವಂತೆ "ಮನುಷ್ಯನ ಶ್ರಮ ಎಷ್ಟೆಷ್ಟು ಬಳಕೆಯಾಗುತ್ತದೆಯೋ ಅಷ್ಟಷ್ಟು ಸಂಸ್ಕೃತಿಯು ವಿಕಾಸವಾಗುತ್ತದೆ. ಮನುಷ್ಯನ ದೈಹಿಕ ಹಾಗೂ ಬೌದ್ಧಿಕ ಶ್ರಮ ಬಳಕೆಯಾದಂತೆಲ್ಲ ಬದಲಾವಣೆಗಳು ಆಗುತ್ತವೆ. ಹೊಸ ಹೊಸ ಸಿದ್ಧಾಂತಗಳು ರೂಪುಗೊಳ್ಳುತ್ತವೆ. ಎತ್ತಿನ ಬಂಡಿಯು, ಬಸ್ಸಾಗಿ, ರೈಲಾಗಿ, ವಿಮಾನವಾಗಿ ವಿಕಾಸಗೊಳ್ಳುತ್ತದೆ. ಇಂಥ ಬೆಳವಣಿಗೆಯನ್ನನುಸರಿಸಿ ಸಂಸ್ಕೃತಿಯೂ ವಿಕಾಸವಾಗುತ್ತದೆ. ಈ ಚಲನಶೀಲ ಸ್ಥಿತಿಯು ಮೂಲ ಶ್ರಮವಾಗಿದ್ದು, ಮನುಷ್ಯನು ಕೇಂದ್ರ ಸ್ಥಾನದಲ್ಲಿರುತ್ತಾನೆ."[3] ಸಮಾಜ ಮತ್ತು ಸಂಸ್ಕೃತಿಯ ಸ್ವರೂಪವನ್ನು ವ್ಯಕ್ತಿಯ ದೈಹಿಕ ಮತ್ತು ಬೌದ್ಧಿಕ ತಳಹದಿಯ ಮೇಲೆ ಗುರುತಿಸುತ್ತ ಬರಲಾಗಿದೆ. ಮನುಷ್ಯ ಎಲ್ಲೆಲ್ಲಿ ಇದ್ದಾನೆಯೋ ಅಲ್ಲೆಲ್ಲ ಸಮಾಜ ಮತ್ತು ಸಂಸ್ಕೃತಿಯಿದೆ. ಅಲ್ಲದೆ, ಮನುಷ್ಯನ ಶ್ರಮ ಮತ್ತು ಕ್ರಿಯೆಗಳೇ ಸಮಾಜ ವಿಕಾಸದ ದಿಕ್ಕನ್ನು ನಿರ್ಧರಿಸುತ್ತವೆ. ಈ ಹಿನ್ನೆಲೆಯಲ್ಲಿ ಸಮಾಜವು ವಿಶ್ವವ್ಯಾಪಕತೆಯನ್ನು ಹೊಂದಿದೆ ಎಂದು ಹೇಳಿರುವುದು.

ಭಾರತವು ಪ್ರಪಂಚದ ಅತ್ಯಂತ ಪ್ರಾಚೀನ ಸಾಮಾಜಿಕ ರಚನೆಯನ್ನು ಹೊಂದಿರುವ ದೇಶವಾಗಿದೆ. ಭಾರತದ ಇಂದಿನ ಸಾಮಾಜಿಕ ಸನ್ನಿವೇಶವು ಎಷ್ಟೇ ಆಧುನಿಕತೆಯನ್ನು ಹೊಂದಿದ್ದರೂ "ಸಾವಿರಾರು ವರ್ಷಗಳ ಹಿಂದಿನ ಎಲ್ಲ ಸಾಮಾಜಿಕ ವಿಷಮತೆಗಳನ್ನು ತನ್ನ ಒಡಲಲ್ಲಿ ಇನ್ನಷ್ಟು ಗಾಢವಾಗಿ, ಸೂಕ್ಷ್ಮವಾಗಿ ಇರಿಸಿಕೊಂಡಿದೆ. ಧಾರ್ಮಿಕ ಅಸಹನೆ ಎಷ್ಟೊಂದು ಅಧಿಕವಾಗಿದೆಯೆಂದರೆ ಅದು ಚರಿತ್ರೆಯ ಅತ್ಯಂತ ಕರಾಳ ಪುಟಗಳನ್ನು ನಾಚಿಸುತ್ತದೆ. ಜಾತಿಸೂಚಕ, ಲಿಂಗಸೂಚಕಗಳನ್ನು ನಿರಾಕರಿಸಿ ಸ್ವಾತಂತ್ರ್ಯ ಸಮಾನತೆಗಾಗಿ ಹಂಬಲಿಸುತ್ತಿರುವ ಹೋರಾಟ ಮಾಡುತ್ತಿರುವ ಜನಸಮುದಾಯಗಳ ಬಗ್ಗೆ ಸ್ಥಾಪಿತ ಹಿತಾಸಕ್ತಿಗಳಿಗೆ ಅಸಹನೆ ಹೆಚ್ಚುತ್ತಿದೆ. ಇದು ಸಂಘರ್ಷವನ್ನು ಮತ್ತಷ್ಟು ಹೆಚ್ಚಿಸುತ್ತದೆ."[4] ಹಾಗೆಯೇ ಆಧುನಿಕತೆ, ಜಾಗತೀಕರಣ, ಸರಕು ಸಂಸ್ಕೃತಿಗಳು ಭಾರತೀಯ ಸಾಮಾಜಿಕ ಸ್ವರೂಪದ ಮೇಲೆ ತನ್ನ ಪರಿಣಾಮಗಳು ಬೀರಿ ಅವುಗಳು ನಲುಗುವಂತೆ ಮಾಡುತ್ತಿರುವ ದಾವಂತವೂ ನಮ್ಮೆದುರಿಗಿದೆ.

ಬಹು ಹಿಂದಿನಿಂದಲೂ ಭಾರತದ ಸಮಾಜ ವ್ಯವಸ್ಥೆಯು ಜಾತಿಪದ್ಧತಿಯ ಏಣಿಶ್ರೇಣಿ ಸ್ವರೂಪ ಹೊಂದಿರುವಂತಹದು. ಬ್ರಾಹ್ಮಣ, ಕ್ಷತ್ರೀಯ, ವೈಶ್ಯ ಮತ್ತು ಶೂದ್ರ ಎಂಬ ಚತುರ್ವಣಗಳಿಂದ ಭಾರತೀಯ ಸಮಾಜವನ್ನು ಗುರುತಿಸುತ್ತೇವೆ. ಅಸ್ಪೃಶ್ಯವೆನಿಸಿದ ಶೂದ್ರ ಪಂಚಮನು ಈ ವ್ಯವಸ್ಥೆಯ ಪಾದವಾದರೆ, ಬ್ರಾಹ್ಮಣ ಶಿರವಾಗಿದ್ದಾನೆ. ಈ ಎರಡು ತುದಿಗಳ ನಡುವೆ ಹಲವಾರು ಸ್ತರಗಳಿದ್ದು ನೂರಾರು ಕಸುಬುಗಳಲ್ಲಿ ತೊಡಗಿಸಿಕೊಂಡಿರುವ ಸಾವಿರಾರು ಜಾತಿಗಳಿವೆ. ಈ ಒಂದೊಂದು ಜಾತಿಯೂ ತನ್ನದೇ ಅದ ವಿಶಿಷ್ಟವೆನಿಸುವ ಸಾಮಾಜಿಕ ರಚನೆ, ಸ್ವರೂಪವನ್ನು ಹೊಂದಿದೆ. ಅಲ್ಲದೆ ಆ ಸಮಾಜದ ಜನರು ತಮ್ಮದೇ ಆದ ನಂಬಿಕೆ, ನಡವಳಿಕೆ, ಆಚಾರ ವಿಚಾರ, ಊಟೋಪಚಾರ, ಉಡುಗೆ ತೊಡುಗೆಗಳು, ದೈವ ಮೊದಲಾದವುಗಳನ್ನು ಹೊಂದಿದ್ದು ಸಾಮಾಜಿಕವಾಗಿ ಅವರದೇ ಆದ ಸ್ಥಾನಮಾನಗಳನ್ನು ಹೊಂದಿವೆ.

ಈ "ಸಾಮಾಜಿಕ ಸ್ಥಾನಮಾನವನ್ನು ಹುಟ್ಟಿನಿಂದಲೇ ನಿರ್ಧರಿಸಲಾಗುತ್ತದೆ. ಯಾವುದೇಕಾರಣದಿಂದ ಮತ್ತು ಯಾವುದರಿಂದಲೂ ಅಳಿಸಲಾಗದ ಕಲೆಯದು. ಊಟ ವಿವಾಹಗಳೆಲ್ಲ ಆಯಾ ಜಾತಿಯ ಒಳಗೆ ಮಾತ್ರ ನಡೆಯಬೇಕು. ಎಲ್ಲ ಜಾತಿಗಳಿಗೂ ಅವುಗಳ ಸಾಮಾಜಿಕ ಸ್ಥಾನಮಾನಕ್ಕೆ ತಕ್ಕ ಕಸುಬುಗಳಿದ್ದು, ಆ ಕಸುಬುಗಳಿಗಿರುವ ಶ್ರೇಷ್ಠಾ-ಶ್ರೇಷ್ಠತೆಗನುಗುಣವಾಗಿಯೇ ಜಾತಿಗಳು ಮೇಲೋ ಕೀಳೊ ಎಂಬುದು ನಿರ್ಧಾರವಾಗುತ್ತದೆ. ಇಲ್ಲಿ ಶ್ರಮ ವಿಭಜನೆಯನ್ನು ಮಾತ್ರವೇ ಕಾಣಬಹುದೇ ಹೊರತು ಶ್ರಮ ಗೌರವವನ್ನಲ್ಲ. ಅಂದರೆ ವೃತ್ತಿ

ಸಮಾನತೆಯು ಇಲ್ಲಿ ಇಲ್ಲವೇ ಇಲ್ಲ. ಅವಮಾನ ವೃತ್ತಿ ಮೂಲದಿಂದ ಹುಟ್ಟಿದ ಜಾತಿಗಳಲ್ಲಿ ಅದೇ ಅಸಮಾನತೆಯು ಮುಂದುವರಿಯಿತು"[5] ಎಂದು ಹೇಳಬೇಕು.

ಸಮಾನತೆಯಿಲ್ಲದ ಈ ಸಾಮಾಜಿಕ ಜಾತಿಗಳಲ್ಲಿ ಹುಟ್ಟಿದ ಮಾನವರು ಸಮಾನರಲ್ಲವೆಂಬ ಮನೋಧರ್ಮವು ಹಿಂದಿನಿಂದ ಇಂದಿನ ಆಧುನಿಕ ಕಾಲದಲ್ಲಿಯೂ ಮುಂದುವರೆದಿರುವುದು. ಇದರಂತೆ ಜಾತಿಸೂತಕದ ಜೊತೆಗೆ ಲಿಂಗಸೂತಕವೂ ಇರುವುದು. ಹುಟ್ಟಿನಿಂದ ಬರುವ ಜಾತಿ ಸೂತಕವು ಮನುಷ್ಯ ಮನುಷ್ಯರ ನಡುವೆ ತಾರತಮ್ಮಕ್ಕೆ ಕಾರಣವಾದಂತೆ ಆ ಮನುಷ್ಯರು ಗಂಡೋ, ಹೆಣ್ಣೋ ಎಂಬುದೂ ಮುಖ್ಯವಾಯಿತು. ವೈದಿಕ ಪರಂಪರೆಯ ಕರಿನೆರಳು ಗಂಡು-ಹೆಣ್ಣುಗಳ ಸಮಾನತೆಯನ್ನು ನಾಶಮಾಡಿತು.

ನಮ್ಮ ಭಾರತೀಯ ಚರಿತ್ರೆಯೂ ತುಂಬ ವಿಚಿತ್ರವಾಗಿದೆ. ಸಾಮಾಜಿಕ ಧಾರ್ಮಿಕ ಚರಿತ್ರೆಯಲ್ಲಿ ದಲಿತರನ್ನು ಅತ್ಯಂತ ನಿಕೃಷ್ಟವಾದ ರೀತಿಯಲ್ಲಿ ಕಂಡರೆ, ರಾಜಕೀಯ ಚರಿತ್ರೆಯಲ್ಲಿ ಅವರುಗಳನ್ನು ಹೆಸರೇ ಇಲ್ಲದಂತೆ ನಿರ್ಲಕ್ಷಿಸಲಾಗಿದೆ. ಸಾವಿರಾರು ವರ್ಷಗಳ ಈ ದೇಶದ ಚರಿತ್ರೆಯು ಮೇಲ್ವರ್ಗದ ಮತ್ತು ಉಳ್ಳವರ ಪರವಾಗಿದೆ. ಈ ದೇಶವನ್ನು ರಾಜಕೀಯವಾಗಿ ಮತ್ತು ಧಾರ್ಮಿಕವಾಗಿ ಆಳಿದ ಆರ್ಯರು, ವೈದಿಕರ, ಚರಿತ್ರೆಯನ್ನೇ ಪ್ರಧಾನಗೊಳಿಸಲಾಗಿದೆ. ಇಲ್ಲಿ ದಲಿತರ ಪಾತ್ರವನ್ನು ಎಲ್ಲೂ ದಾಖಲಿಸಲಿಲ್ಲ. "ದಲಿತರು ಈ ದೇಶದ ಮೂಲ ನಿವಾಸಿಗಳೆಂಬುದರಲ್ಲಿ ಎರಡು ಮಾತಿಲ್ಲ. ಈ ದೇಶದ ಸಂಸ್ಕೃತಿಯೊಂದಿಗೆ ತಮ್ಮದೇ ಆದ ಛಾಪನ್ನು ಉಳಿಸಿಕೊಂಡಿದ್ದಾರೆ ಇವರು."[6] ಮೂಲ ನಿವಾಸಿಗಳಾದ ದ್ರಾವಿಡರ ಮೇಲೆ ಆರ್ಯರ ದಾಳಿ ಅವರ ಚರಿತ್ರೆಯನ್ನೇ ಪಲ್ಲಟಗೊಳಿಸಿತು.

ಶೂದ್ರರು, ಚಾಂಡಾಲರು, ಪಂಚಮರು, ಅಂತ್ಯಜರು, ಮ್ಲೇಚ್ಛರು ತುಳಿತಕ್ಕೊಳಪಟ್ಟವರು. ಬಂಗಿಗಳು ಭಾರತದ ಚರಿತ್ರೆಯ ವಿವಿಧ ಕಾಲಘಟ್ಟಗಳಲ್ಲಿ ಕಂಡುಬರುತ್ತಾರೆ. ಇಂದು ಅಸ್ಪೃರ್ಶಯತೆಯ ಭೂತಕ್ಕೆ ಬಲಿಯಾಗಿ ನರಳುತ್ತಿದ್ದಾರೆ. ಈ ಬಗೆಯಲ್ಲಿ ಅನೇಕರು ಸಾಮಾಜಿಕವಾಗಿ ಅಶಕ್ತರು ಅಲಕ್ಷಿತರಾದ ಬಂಗಿಗಳ ಬಗ್ಗೆ ಇಂದು ಗಮನಿಸಬೇಕಾಗಿದೆ.

ದಲಿತರ, ಅಸ್ಪೃಶ್ಯರ, ದಮನಿತರ ಚರಿತ್ರೆ, ಪರಂಪರೆ ಮತ್ತು ಈ ಸಮುದಾಯಗಳ ಸಾಮಾಜಿಕ ಸ್ಥಿತಿಗಳ ಕುರುಹುಗಳನ್ನು ಚರಿತ್ರೆಯೆಂಬ ಕನ್ನಡಿಯಲ್ಲಿ ಕಾಣುವ ಪ್ರಯತ್ನ ಅಲ್ಲಲ್ಲಿ ಸ್ವಲ್ಪವಾಗಿಯಾದರೂ ನಡೆಯುತ್ತಿರುವುದು ಪ್ರಶಂಶನೀಯವೆನಿಸಿದೆ. ತಲೆಮಾರುಗಳಿಂದ ದಾಸ್ಯದ

ನೊಗವನ್ನು ಹೊತ್ತು ಬಾಳಿದ ಈ ಜನಾಂಗವು ಇಂದಿಗೂ ಅದರಿಂದ ಮುಕ್ತಿ ಹೊಂದಿಲ್ಲ. ಬಂಗಿಗಳು ಇಂಥ ವಿಷಮ ಪರಸ್ಥಿತಿಯನ್ನು ಎದುರಿಸುತ್ತಲೇ ತಮ್ಮ ಸ್ಥಿತಿಗಳನ್ನು ಜೀವಂತವಾಗಿಸಿಕೊಂಡ ಈ ಜನಾಂಗವನ್ನು ಕುರಿತು ಚರ್ಚಿಸುವ, ಚಿಂತಿಸುವ ಜರೂರಿದೆ.

3.2 ಸಫಾಯಿ ಕರ್ಮಚಾರಿ : ಪದ ನಿಷ್ಪತ್ತಿ ಅರ್ಥ

ಭಾರತೀಯ ಸಮಾಜಿಕ, ಸಾಂಸ್ಕೃತಿಕ ಚರಿತ್ರೆಯಲ್ಲಿ ಸಫಾಯಿ ಕರ್ಮಚಾರಿ ಸಮುದಾಯ ತನ್ನದೇ ಆದ ವೈಶಿಷ್ಟ್ಯತೆ ಹೊಂದಿದೆ. ಇತರ ಸಮುದಾಯಗಳ ಜೊತೆಯಲ್ಲಿದ್ದರೂ ಯಾವುದೇ ಸಮುದಾಯದ ಪ್ರಭಾವಕ್ಕೊಳಗಾಗದೆ, ಯಾವುದೇ ಸಮುದಾಯಗಳ ಜೊತೆಗೆ ಹಾಸು ಹೊಕ್ಕಾಗಿ ಬೆರೆತುಕೊಳ್ಳದೆ, ತನ್ನದೇ ಸಾಂಸ್ಕೃತಿಕ ಚಹರೆಗಳನ್ನು ವೃತ್ತಿಯನ್ನು ಉಳಿಸಿಕೊಂಡು ಬಂದಿದೆ. ನಾಗರಿಕ ಸಮಾಜದ ಅಭಿವೃದ್ಧಿಗಾಗಿ ತಮ್ಮನ್ನೇ ಸಮರ್ಪಸಿಕೊಂದರೂ ನಾಗರಿಕ ಸಮಾಜದಿಂದಲೇ ಅವಹೇಳನಕ್ಕೊಳಗಾಗಿ ಬದುಕಿಕೊಂಡು ಬಂದಿದೆ.

ಸಫಾಯಿ ಕರ್ಮಚಾರಿ ಎಂಬುದು ಜಾತೀ ಸೂಚಕವೇ? ವೃತ್ತಿ ಸೂಚಕವೇ? ಅದರ ಪ್ರಾಚೀನತೆ ಎಷ್ಟು? ಮೂಲ ನೆಲೆ ಯಾವುದು? ಅಲೆಮಾರಿಗಳೇ? ಅರೆಅಲೆಮಾರಿಗಳೇ? ಇವೇ ಮುಂತಾದವು ಈ ಸಮುದಾಯದ ಕುರಿತಾಗಿ ಜಿಜ್ಞಾಸೆಗಳು ನಡೆದಿರುವುದು ಕಂಡು ಬರುತ್ತದೆ. ಸಫಾಯಿ ಕರ್ಮಚಾರಿ ಸಮುದಾಯದ ಕುರಿತು ಅನೇಕ ಮಾಹಿತಿಗಳು ಬೇರೆ ಬೇರೆ ಕೃತಿ, ಲೇಖನ, ವರದಿಗಳಲ್ಲಿ ದೊರಕುತ್ತವೆ. ಅವುಗಳಲ್ಲಿ ಪ್ರಮುಖವಾದ ಕೆಲವು ಉಲ್ಲೇಖಗಳನ್ನು ಇಲ್ಲಿ ನೋಡಬಹುದಾಗಿದೆ.

ಸಫಾಯಿ ಕರ್ಮಚಾರಿ ಸಮುದಾಯವು ಭಾರತೀಯ ಇತಿಹಾಸದಷ್ಟೇ ಪ್ರಾಚೀನದ್ದಾಗಿದೆ. ಭಾರತದಲ್ಲಿ ನಗರಗಳು ಹುಟ್ಟಿಕೊಂಡ ಸಂದರ್ಭದಲ್ಲಿ ಸಮಾಜದ ಶ್ರಮಿಕ ವರ್ಗಗಳಿಗೆ ಶ್ರಮವನ್ನು ಹಂಚಿಕೆ ಮಾಡುವಾಗ ಈ ವಿಭಜನೆ ಎರಡು ನೆಲೆಯಲ್ಲಿ ಆಯಿತು. ಒಂದು ಉಚ್ಚ ಕೆಲಸಗಳಾಗಿ ಮತ್ತೊಂದು ನೀಚ ಅಥವಾ ಹೀನ ಕೆಲಸವಾಗಿ ಈ ನೀಚ ಅಥವಾ ಹೀನ ಕೆಲಸದ ವಿಭಜನೆಯಲ್ಲಿ ಸಫಾಹಿ ಕರ್ಮಚಾರಿ ಸಮುದಾಯವು ಸೇರಿಕೊಂಡಿತು.

ಸಫಾಯಿ ಕರ್ಮಚಾರಿ ಸಮುದಾಯ ಅತ್ಯಾಂತ ಪ್ರಾಚೀನದ್ದಾಗಿದ್ದರೂ ಈ ಸಮುದಾಯಕ್ಕೆ ಈ ಹೆಸರು ಬಂದದ್ದು ಇಪ್ಪತ್ತನೆಯ ಶತಮಾನದ 70 ರ ದಶಕದಲ್ಲಿ ಎಂದು ಹೇಳಲಾಗುತ್ತದೆ. ಈ ಕರ್ಮಚಾರಿಗಳ ಸಮುದಾಯ ವಿಶ್ವದಾದ್ಯಾಂತ ಕಾಣುತ್ತವೆ. ಭಾರತದ ಎಲ್ಲ ರಾಜ್ಯ ನಗರ, ಪಟ್ಟಣಗಳಲ್ಲಿ ಇವರು ನೆಲೆಸಿ ಇಡೀ ದೇಶದಾದ್ಯಾಂತ ಇವರ ಉದ್ಯೋಗವೆಂದರೆ ಉಚ್ಚ ಜಾತಿಯ ಶ್ರೀಮಂತರು, ಅಧಿಕಾರಿಗಳ ಮನೆಯ ಮಲ ಸ್ವಚ್ಛಗೊಳಿಸುವುದು ಆಗಿದೆ. ಮಲ ಸ್ವಚ್ಛಗೊಳಿಸುವ ಬೇರೆ ಬೇರೆ ಹೆಸರುಗಳಿರುವನ್ನು ಕಾಣುತ್ತವೆ. ಅವುಗಳಲ್ಲಿ ಸಫಾಯಿ ಕರ್ಮಚಾರಿ, ಹಲಾಲ್ ಕೋರ್, ಮೆಹತರ್ ಭಂಗಿ, ದಕ್ಕಲಿಗ, ಸಿಕ್ಕಲಿತ, ದಕ್ಕರು ಎಂದಿವೆ. ಕರ್ನಾಟಕದಲ್ಲಿ ಇವರನ್ನು ಬಂಗಿಗಳೆಂದು ಕರೆಯುತ್ತಾರೆ. ಅದೇ ಹೈದ್ರಾಬಾದ ಕರ್ನಾಟಕದಲ್ಲಿ ಮೆಹತರ್ ಎಂಬ ಹೆಸರಿನಿಂದ ಕರೆಯಲಾಗುತ್ತದೆ. ಬಹುಶಃ ಈ ಹೆಸರು ಬಹಮನಿ ಅರಸರ, ಆದಿಲ್ ಶಾಹಿ ಅರಸರ ಕಾಲದಲ್ಲಿ ಈ ಸಮುದಾಯದಯಕ್ಕೆ ಬಂದಿರಬಹುದು, ಇದು ಉರ್ದು, ಪರ್ಶಿಯನ್ ಮೂಲದ ಶಬ್ದವಾಗಿದೆ.

ಸಫಾಯಿ ಕರ್ಮಚಾರಿ ಸಮುದಾಯ ಕುರಿತು ಕೆ.ಎಸ್. ಸಿಂಗ್ ಅವರ The Scheduled Caste's ಎಂಬ ಕೃತಿ. ಯಾದಗಿರಿ ಶರ್ಮಾ ಅವರು ಹೈದ್ರಾಬಾದ ಉಸ್ಮಾನಿಯಾ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ ಅಪ್ರಕಟಿತ ಸಂಶೋಧನ ಪ್ರಬಂಧ ಜನಪದ ಭಿಕ್ಷಕ ಗಾಯಕಲುದಲ್ಲಿ ವಿವರಗಳು ದೊರಕುತ್ತವೆ. ಈ ಸಮುದಾಯ ಹೆಚ್ಚಾಗಿ ಅಸ್ಪೃಶ್ಯ ಸಮುದಾಯಕ್ಕೆ ಸೇರಿದೆ. ಈ ಸಮುದಾಯವು ತಮ್ಮದೇ ಆದಂತಹ ಸಾಮಾಜಿಕ ಜೀವನ ಸಮೂಹದಲ್ಲಿ ವಾಸಿಸುತ್ತಿದ್ದಾರೆ. ಇವರು ತುತ್ತು ಅನ್ನಕ್ಕೊಸ್ಕರ ಇತರ ಸಮುದಾಯಗಳ ಮೇಲೆ ಅವಲಂಬಿತರಾಗಿರಬೇಕಾಗಿದೆ.

ಭಾರತೀಯ ಅತ್ಯಂತ ಪ್ರಾಚೀನ ಸಮುದಾಯಕ್ಕೆ ಸೇರಿದ. ಅಸ್ಪೃಶ್ಯರು, ಚಾಂಡಾಲರು ಎನ್ನಿಸಿಕೊಂಡ ಬಂಗಿಗಳು ಮೂಲತಃ ಅಸ್ಪೃಶ್ಯ ದಲಿತ ವರ್ಗಕ್ಕೆ ಸೇರಿದವರಾಗಿದ್ದಾರೆ. ನಮ್ಮ ಚರಿತ್ರೆಯ ಪುಟಗಳಲ್ಲಿ ಈ ಸಮುದಾಯದ ಬಗೆಗೆ ಎಲ್ಲಿಯೂ ದಾಖಲೆಗಳಿಲ್ಲದಿರುವುದು ನಮ್ಮ ಇತಿಹಾಸದ ಕನ್ನಡಿಗೆ ಕವಿದ ಮಸುಕೆನಿಸಿದೆ. ಈಗ ಬಳಕೆಯಲ್ಲಿರುವ ಸಫಾಯಿ ಕರ್ಮಚಾರಿ ಎಂಬ ಪದವನ್ನು ವಿವರಿಸುವುದು ಅಷ್ಟೊಂದು ಸುಲಭ ಸಾಧ್ಯವಲ್ಲ. ಆ ಪದವು ತುಂಬ ಸಂಕೀರ್ಣವೂ, ಪರಸ್ಪರ ವಿರೋಧವೂ ಅನ್ನಬಹುದಾದ ಕೆಲವು ಅರ್ಥಗಳನ್ನು ತನ್ನ ಒಡಲಲ್ಲಿರಿಸಿಕೊಂಡಿದೆ. ಇತ್ತೀಚಿನ ವರ್ಷಗಳಲ್ಲಂತೂ ಸಫಾಯಿ ಕರ್ಮಚಾರಿ ಪದದ ಅರ್ಥದ ಬಗೆಗೆ ಕರ್ನಾಟಕದಾದ್ಯಂತ ಚರ್ಚೆಗಳು ಹುಟ್ಟಿಕೊಂಡಿವೆ."[7]

ಇಲ್ಲಿ ಮುಖ್ಯವಾಗಿ ಸಫಾಯಿ ಕರ್ಮಚಾರಿ ಎಂದರೆ ಯಾರು? ಅದೊಂದು ಜಾತಿಯೇ! ವರ್ಗವೇ? ಜನಾಂಗವೇ? ಎಂಬ ಪ್ರಶ್ನೆಗಳು ಏಳುವವು 'ಸಫಾಯಿ ಕರ್ಮಚಾರಿ' ಎಂಬ ಪದದ ಅರ್ಥವನ್ನು ಸಾಮಾನ್ಯವಾಗಿ ಎರಡು ರೀತಿಯಲ್ಲಿ ಅರ್ಥೈಸಲಾಗುತ್ತದೆ. ಅವುಗಳಲ್ಲಿ ಒಂದು ಅರ್ಥವು "ಎಲ್ಲಾ ಜಾತಿ ಸಮುದಾಯಗಳಲ್ಲಿರುವ ಶೋಷಿತ ಜನರು ದಲಿತರು ಎಂದು, ಇನ್ನೊಂದು ಯಾರು ಊರನ್ನು ಸ್ವಚ್ಛಗೊಳಿಸುವ ಮೇಲ್ವರ್ಗದವರ ಮನೆಯ ಮಲ ಬಳೆಯುವ ಕೆಲಸದಲ್ಲಿ ತೊಡಗಿರುವರೋ ಅವರು ಮಾತ್ರ ಸಫಾಯಿ ಕರ್ಮಚಾರಿಗಳು"[8] ಎಂದಾಗಿದೆ. ಇವರು ಸಾಮಾಜಿಕವಾಗಿ, ಆರ್ಥಿಕವಾಗಿ ಶೋಷಣೆಗೊಳಗಾದವರು ಮಾತ್ರ ಇವತ್ತಿನವರೆಗೂ ಸಮಾಜದ ಮೇಲ್ಜಾತಿ ಮತ್ತು ಮೇಲ್ವರ್ಗದವರ ಅವಕೃಪೆಗೆ ಗುರಿಯಾಗಿ, ಅಸ್ಪೃಶ್ಯತೆಯನ್ನು ಅನುಭವಿಸುತ್ತ ತುಳಿತಕ್ಕೆ, ಶೋಷಣೆಗೆ ಒಳಗಾದವರು ಆಗಿದ್ದಾರೆ.

"ಸಫಾಯಿ ಕರ್ಮಚಾರಿ ದಮನಕ್ಕೊಳಗಾದವರು, ಸಾಮಾಜಿಕವಾಗಿ, ಆರ್ಥಿಕವಾಗಿ ಕೆಳಮಟ್ಟದಲ್ಲಿದ್ದವರು"[9] ಎಂಬ ಅರ್ಥಗಳಿವೆ. ಡಾ. ಬಿ.ಆರ್. ಅಂಬೇಡ್ಕರವರು ಈ ಪದಕ್ಕೆ ಡಿಪ್ರೆಸ್ಡ್ ಕ್ಲಾಸ್ ಎಂಬುದನ್ನು ಹೆಸರಿಸಿದ್ದಾರೆ. ಸಫಾಯಿ ಕರ್ಮಚಾರಿ ಎಂದರೆ ಅನುಸೂಚಿತ ಜಾತಿ, ಉಪಜಾತಿ, ದುಡಿಯುವ ಜನ ಶ್ರಮಿಕರು, ಕರ್ಮಚಾರಿಗಳು, ಅನಾದಿ ಸಮುದಾಯ ಇತ್ಯಾದಿ ಅರ್ಥವನ್ನು ಹೇಳಲಾಗುತ್ತದೆ. ಸಾವಿರಾರು ವರ್ಷಗಳಿಂದ ಮೇಲ್ವರ್ಣ, ಮೇಲ್ವರ್ಗದವರ ತುಳಿತಕ್ಕೊಳಗಾಗಿ ಸಾಮಾಜಿಕವಾಗಿ, ಅಸ್ಪೃಶ್ಯರೆನಿಸಿಕೊಂಡ ಸಮುದಾಯವು ದಲಿತ ವರ್ಗಕ್ಕೆ ಸೇರುತ್ತದೆ.

ಸಫಾಯಿ ಕರ್ಮಚಾರಿ ಪದದ ಅರ್ಥ ಲಕ್ಷಣವನ್ನು ಕುರಿತು ಅನೇಕರು ವಿಶ್ಲೇಷಿಸಿದ್ದಾರೆ. ಅದರಲ್ಲಿ ಮುಖ್ಯವಾಗಿ ಡಾ. ಅರವಿಂದ ಮಾಲಗತ್ತಿಯವರ ಲಕ್ಷಣವನ್ನು ಹೀಗೆ ಸಂಗ್ರಹಿಸಬಹುದಾಗಿದೆ.

1. ಆರ್ಥಿಕ-ಸಾಮಾಜಿಕ-ರಾಜಕೀಯ ರಂಗದಲ್ಲೆಲ್ಲಾ ಶೋಷಣೆಗೆ ಒಳಗಾದ ಜನರು ಆಗಿರುತ್ತಾರೆ.
2. ಪಂಚಮರು ಅಥವಾ ಬಹಿಷ್ಕೃತರು ಎಂದು ಕರೆಯಿಸಿಕೊಳ್ಳುವ ಅಸ್ಪೃಶ್ಯರೆಲ್ಲರು ಸಫಾಯಿ ಕರ್ಮಚಾರಿ"[10] ಎಂದು ಕರೆದಿದ್ದಾರೆ.

ಸಫಾಯಿ ಕರ್ಮಚಾರಿಗಳು ಹೆಚ್ಚಾಗಿ ಹಿಂದುಳಿದವರು, ದಮನಕ್ಕೊಳಗಾದವರು, ಆರ್ಥಿಕವಾಗಿ, ಸಾಮಾಜಿಕವಾಗಿ ಕೆಳಮಟ್ಟದವರು ಎಂಬ ಅರ್ಥವನ್ನು ಇಟ್ಟುಕೊಂಡು ಅದರ

ಅರ್ಥ, ಲಕ್ಷಣವನ್ನು ಹೇಳುವ ಪ್ರಯತ್ನ ಚಿಂತಕರಲ್ಲಿ ಕಾಣುತ್ತೇವೆ. 'ಸಫಾಯಿ ಕರ್ಮಚಾರಿ'ಗಳು ಹೆಚ್ಚಾಗಿ ದಲಿತ ಜಾತಿಗೆ ಸೇರಿದವರಾಗಿರುತ್ತಾರೆ.

ಭಾರತೀಯ ಸಮಾಜದಲ್ಲಿ ಸಂಪೂರ್ಣವಾಗಿ ಮೈಲಿಗೆಯೆಂದು ಪರಿಗಣಿಸಲಾದ ಪಂಚಮರು ಅಥವಾ ಅಸ್ಪೃಶ್ಯರು ಈ ದಲಿತ ಪದದಲ್ಲಿ ಸೇರಿಕೊಳ್ಳುತ್ತಾರೆ. ಶ್ರೇಣೀಕರಣದ ದೃಷ್ಟಿಯಿಂದ ಇವರು ತೀರ ಕೆಳಸ್ತರದಲ್ಲಿರುವ ಸಮುದಾಯವಾಗಿದೆ. ಅಸ್ಪೃಶ್ಯರನ್ನು ಗಾಂಧೀಜಿಯವರು 'ಹರಿಜನರು' ಎಂದು ಕರೆದರು. ಆದರೆ ಈ ಪದವು ಈ ಸಮುದಾಯಕ್ಕೆ ಸಂವಾದಿಯಾಗಲಾರದು. ಇವರು ಸವರ್ಣೀಯರಿಂದ ಅಸ್ಪೃಶ್ಯಯತೆಯನ್ನು ಅನುಭವಿಸಿ ತುಳಿತಕ್ಕೊಳಗಾದವರು ಎಂದು ಹೇಳಬೇಕಾಗುತ್ತದೆ.

ಸಫಾಯಿ ಕರ್ಮಚಾರಿ ದಲಿತ ಸಮುದಾಯು ಅತ್ಯಂತ ಪ್ರಾಚೀನವಾಗಿದೆ ಯಾದರೂ ಸಫಾಯಿ ಕರ್ಮಚಾರಿ ಎಂಬ ಪದವು ಈಚೆಗೆ ಕಳೆದ ಇಪ್ಪತ್ತನೆಯ ಶತಮಾನದ ಸಂದರ್ಭದಲ್ಲಿ ಬಳಕೆಗೆ ಬಂದಿತೆನ್ನಬಹುದು. ಸವರ್ಣಿಯರಿಂದ ದೂರ ಇಡಲಾದ ಜನಗಳು, ತುಳಿತಕ್ಕೊಳಗಾದವರು.

"ದಲಿತರನ್ನು ಅಸ್ಪೃಶ್ಯರು, ಅಂತ್ಯಜರು, ಅಂತ್ಯವಸಾಯಿ, ದಸ್ಯು ಆದಿಮ ಜನಾಂಗ, ತಿರುಕಲತ್ತರ, ಪಂಚಮರು, ಬಹಿಷ್ಕೃತರು, ಆದಿ ಕರ್ನಾಟಕ, ಆದಿದ್ರಾವಿಡ, ಅನುಸೂಚಿತ, ಪರಿಶಿಷ್ಟ ಜಾತಿ ಹರಿಜನ"[11] ಎಂದು ಕರೆಯುತ್ತಾರೆ. ಈ ಹೆಸರುಗಳು ಕರ್ನಾಟಕದ ಬೇರೆ ಬೇರೆ ಜಿಲ್ಲೆ ಪ್ರದೇಶಗಳಲ್ಲಿ ಚಲಾವಣೆಯಲ್ಲಿವೆ.

ಇನ್ನು ಉತ್ತರ ಕರ್ನಾಟಕ ಮತ್ತು ಹೈದರಾಬಾದ ಕರ್ನಾಟಕದಲ್ಲಿ ನೆಲೆಸಿರುವ ದಲಿತ ವೃಂದಗಳಲ್ಲಿ ಕೆಲವಷ್ಟನ್ನು ಇಲ್ಲಿ ಹೆಸರಿಸಬಹುದಾಗಿದೆ. ಅವುಗಳೆಂದರೆ ಹೊಲೆಯರು, ಮಾದಿಗರು, ಸಮಗಾರರು, ಡೋರರು, ಡೊಕ್ಕಲಿಗರು, ದಾಸರು, ಡೊಂಬರು ಕಳ್ಳಿಕ್ಯಾತರು, ಭೋವಿಗಳು, ಕೊರವರು, ಸುಡಗಾಡು ಸಿದ್ಧರು, ಪಾರದಿಯರು, ಲಂಬಾಣಿಗಳು, ಮಾಂಗಾರುಡಿಗಳು, ಮಾಂಗ, ದಾಸರು, ದುರಗಮುರಗಿವರು, ದಲಿತ ಸಮೂಹದಲ್ಲಿ ಗುರುತಿಸಲ್ಪಡುವರು.

ಒಂದೊಂದು ಜನಪದವು ಅವರ ವೃತ್ತಿ, ಜೀವನ ವಿಧಾನ, ಪರಿಸರ, ಸಂಸ್ಕೃತಿ ಹೀಗೆ ಹಲವಾರು ವೈಶಿಷ್ಟ್ಯಗಳನ್ನೊಳಗೊಂಡಿರುತ್ತದೆ. ನಮ್ಮ ದೇಶದಲ್ಲಿ ಸುಮಾರು ಮೂರು ಸಾವಿರಕ್ಕೂ ಹೆಚ್ಚಿನ ಆದಿವಾಸಿ ಬುಡಕಟ್ಟು, ದಲಿತ ಜಾತಿಗಳಿವೆ ಎಂದು ಗುರುತಿಸಲಾಗಿದೆ. ಪ್ರತಿ ಬುಡಕಟ್ಟು

ಜಾತಿ ಸಮುದಾಯವು ತನ್ನದೇ ಆದ ಜೀವನ ವಿಧಾನ, ವೃತ್ತಿ, ಸಂಪ್ರದಾಯ ಮುಂತಾದವುಗಳನ್ನು ಹೊಂದಿವೆ. ದಲಿತ ಜಾತಿ ವೃಂದಗಳಲ್ಲಿ ಬರುವ ಸಫಾಯಿ ಕರ್ಮಚಾರಿಗಳ ಸಾಮಾಜಿಕ ಜೀವನದಲ್ಲಿ ಅಳವಡಿಸಿಕೊಂಡಿರುವ ರೀತಿ ರಿವಾಜು, ಅವರ ಜೀವನ ವಿಧಾನ, ಆಹಾರ ವಿಧಾನ, ಉಡುಗೆ ತೊಡುಗೆ, ಸಂಪ್ರದಾಯ, ನಂಬಿಕೆ, ಆಚರಣೆ, ವಾಸದ ನೆಲೆಗಳು, ಕೌಟುಂಬಿಕ ಜೀವನ, ಕಳ್ಳುಬಳ್ಳಿ, ಬಂಧುತ್ವ ಸಾಮಾಜಿಕ ಸಹಕಾರ, ಸಾಂಘಿಕ ಕಾರ್ಯಗಳು ಸಾಮಾಜಿಕ ನ್ಯಾಯಪಕ್ಷದ ಕಲೆ, ಮನರಂಜನೆ, ಭಾಷ ಮುಂತಾದವುಗಳನ್ನು ಕುರಿತು ಇಲ್ಲಿ ವಿಶ್ಲೇಷಿಸಲಾಗುತ್ತಿದೆ.

ಭಾರತೀಯ ಅತ್ಯಂತ ಪ್ರಾಚೀನ ಸಮುದಾಯಗಳಲ್ಲಿ ಸಫಾಯಿ ಕರ್ಮಚಾರಿ ಸಮುದಾಯವೂ ಒಂದಾಗಿದೆ. · ಈ ಸಮುದಾಯದ ಮೂಲ ಪ್ರಾಚೀನ ಇತಿಹಾಸ ಕುರಿತಾಗಿ ಯಾವುದೇ ಲಿಖಿತ ದಾಖಲೆಗಳು ಸಿಗಲಾರವು. ಈ ಸಮುದಾಯವನ್ನು ತೀರ ಅಲಕ್ಷಿಸಿಕೊಂಡು ಬಂದುದ್ದೇ ದಾಖಲೆಗಳ ಕೊರತೆಗೆ ಕಾರಣವಾಗಿದೆ ಎನ್ನಬಹುದು.

ಸಫಾಯಿ ಕರ್ಮಚಾರಿಗಳು ಮೂಲತಃ ಕಾರ್ಮಿಕರು ಇವರನ್ನು ಪ್ರಾದೇಶಿಕವಾಗಿ ಬೇರೆ ಬೇರೆ ಹೆಸರುಗಳಿಂದ ಕರೆಯಲಾಗುತ್ತದೆ. ಅಂತಹ ಬೇರೆ ಬೇರೆ ಹೆಸರುಗಳು ಕರ್ನಾಟಕದಲ್ಲಿಯೂ ಇರುವವು.

ಮಲ ತೊಳೆಯುವ ವೃತ್ತಿಯನ್ನು ಮಾಡಿಕೊಂಡು ಬಂದ ಸಫಾಯಿ ಕರ್ಮಚಾರಿಗಳು ಎಷ್ಟು ಪ್ರಾಚೀನರು? ಅವರ ಮೂಲ ಯಾವುದು? ಇವರು ಆರ್ಯರೆ? ದ್ರಾವಿಡರೇ? ಎಂಬುವುಗಳ ಬಗೆಗೆ ನಿರ್ದಿಷ್ಟ ಆಕರಗಳು ದೊರಕುವುದಿಲ್ಲ. ಭಾರತೀಯ ವರ್ಣ ವ್ಯವಸ್ಥಿತ ಸಮಾಜದಲ್ಲಿ ನಾಲ್ಕನೇ ವರ್ಣವಾದ ಶೂದ್ರ ವರ್ಗಕ್ಕೆ ಇವರು ಸೇರಿದವರೆಂದು ಹೇಳಬಹುದು. ಡಾ. ಅಂಬೇಡ್ಕರ್ ಅವರು ಶೂದ್ರ ವರ್ಗ ಮತ್ತು ಅವರ ಉಗಮದ ಕುರಿತು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಅವರು "ಶೂದ್ರರ ಮೂಲಕ್ಕೆ ಶಾಂತಿ ಪರ್ವದಲ್ಲಿ ದಾಖಲೆಯನ್ನು ಉಲ್ಲೇಖಿಸಿ ಶಾಂತಿಪರ್ವದಲ್ಲಿ ಶೂದ್ರರು ಯಜ್ಞ ಮಾಡಿದರು. ಹೀಗಾಗಿಅವರ ಮೂಲ ಕ್ಷತ್ರೀಯ ವರ್ಗ ಇರಬೇಕು ಎನ್ನುತ್ತಾರೆ."[12] ಶೂದ್ರರು ಭಾರತೀಯ ಮೂಲ ನಿವಾಸಿಗಳೇ ಆಗಿದ್ದು ಆನಂತರದಲ್ಲಿ ಭಾರತಕ್ಕೆ ಪ್ರವೇಶಿಸಿದ ಆರ್ಯರೊಂದಿಗೆ ಅವರು ಯುದ್ಧ ಮಾಡಿ ಅವರಿಂದ ಸೋತು ಗುಲಾಮರಾಗಿ ಪರಿವರ್ತನೆಯಾಗಿರಬೇಕು. ಸಾಮಾಜಿಕವಾಗಿ ಬಹಿಷ್ಕಾರ ಶಿಕ್ಷೆಯಾಗಿ ಒಳಗಾಗಿ ಹೀನ ಕೆಲಸಗಳನ್ನು ಮಾಡುತ್ತ ಬಂದಿರಬೇಕೆಂಬ ಅಭಿಪ್ರಾಯಗಳೂ ಇವೆ.

ಭಾರತೀಯ ಪ್ರಾಚೀನ ಜಾತಿ ಸಮುದಾಯಗಳ ಬಗ್ಗೆ 19ನೇ ಶತಮಾನದ ಕೊನೆಯ ಮತ್ತು 20ನೇ ಶತಮಾನದ ಆರಂಭದಲ್ಲಿ ಪಾಶ್ಚಾತ್ಯ ಮತ್ತು ಭಾರತೀಯ ಸಮಾಜ ಚಿಂತಕರಿಂದ ಅಭ್ಯಾಸಗಳು ನಡೆದವು. ಅವರುಗಳಲ್ಲಿ 1847ರಲ್ಲಿ ರಾತ್ ಎಂಬುವವರು ಶೂದ್ರ ಸಮುದಾಯಗಳ ಬಗ್ಗೆ ಸರ್ವೆ ನಡೆಸಿದರು. 1881ರಲ್ಲಿ ಹಾಪ್‌ಕಿನ್ಸ್ ಅವರು ಭಾರತದ ಮೂಲ ನಿವಾಸಿಗಳೇ ಈ ಶೂದ್ರರೆಂದು. 1911ರಲ್ಲಿ ಕೇತ್‌ಕರ್‌ರು ಸಮಾಜದಲ್ಲಿ ಗೂಲಾಮಿ ವೃತ್ತಿ ಮಾಡುವರು ಶೂದ್ರರೆನಿಸಿದರು ಎಂದರು. 1922ರಲ್ಲಿ ವ್ಹಿ.ಎಸ್. ಶಾಸ್ತ್ರಿಯವರು ಶೂದ್ರರು ಹಾಗೂ ಅವರಿಗೆ ಸಂಬಂಧಿಸಿದ ಇತರ ಪರ್ಯಾಯ ಹೆಸರುಗಳನ್ನು ತಮ್ಮ ಬರಹಗಳಲ್ಲಿ ಉಲ್ಲೇಖಿಸಿರುವರು. ಇವೆಲ್ಲ ಉಲ್ಲೇಖಗಳಿಂದ ವರ್ಣ ವಯವಸ್ಥೆ ನಾಲ್ಕನೇ ವರ್ಣಕ್ಕೆ ಸೇರಿದ ಶೂದ್ರರ ಅನೇಕ ಒಳಪಂಗಡಗಳಿಗೆ ಈ ಸಫಾಯಿ ಕರ್ಮಚಾರಿಗಳೂ ಸೇರಿದವರಾಗಿರಬೇಕೆಂದು ಊಹಿಸಲಾಗಿದೆ. ಶೂದ್ರರು ಮತ್ತು ಸಫಾಯಿಗಳ ವೃತ್ತಿಗಳು ಉಚ್ಚವರ್ಣದವರ ಸೇವೆಗೆ ಸಂಬಂಧಿಸಿರುವುದನ್ನು ಗಮನಿಸಬಹುದು.

3.4.3 ಕರ್ನಾಟಕದ ಸಫಾಯಿ ಕರ್ಮಚಾರಿಗಳ ಮೂಲ

ಕರ್ನಾಟಕದ ಎಲ್ಲ ಜಿಲ್ಲೆ, ಪ್ರದೇಶಗಳಲ್ಲಿ ಸಫಾಯಿ ಕರ್ಮಚಾರಿಗಳು ಸಾವಿರಾರು ವರ್ಷಗಳಿಂದ ನೆಲೆಸಿದ್ದಾರೆ. ಹೀಗಾಗಿ ಅವರ ಮೂಲವನ್ನು ಅರಿಯಬೇಕಾದರೆ ಮತ್ತೆ ಇತಿಹಾಸವನ್ನೇ ಅವಲಂಭಿಸಬೇಕಾಗುತ್ತದೆ. ಸಫಾಯಿ ಕರ್ಮಚಾರಿಗಳು ಬೇರೆ ಬೇರೆ ಪ್ರದೇಶಗಳಲ್ಲಿ ಅಲ್ಲಿನ ಸಾಮಾಜಿಕ, ಸಾಂಸ್ಕೃತಿಕ ರೂಪರೇಷೆಗಳನ್ನು ಅಳವಡಿಸಿಕೊಂಡು ಬದುಕುತ್ತಿದ್ದಾರೆ. ಹೀಗಾಗಿ ಅವರೆಲ್ಲರ ಮೂಲ ಇದುವೇ ಎಂದು ಹೇಳುವುದು ಕಷ್ಟಕರವಾದುದು.

ಸಫಾಯಿಗಳಿಗೆ ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಕರಿಯುತ್ತಾರೆ. "ಬುಡಕಟ್ಟು ಪಂಗಡಗಳ ಬಗೆಗೆ ಮೊಟ್ಟ ಮೊದಲ ಬಾರಿಗೆ ಸಂಶೋಧನೆ ಮಾಡಿ ಮಾಹಿತಿ ನೀಡಿದವರು. ಇ. ಥರ್ಸ್ಟನ್ ಅವರ Castes and Tribes of Southern Indian 11 Vol."[13] ಗ್ರಂಥದಲ್ಲಿ ಅನೇಕ ಸಮುದಾಯದ ಹೆಸರುಗಳನ್ನು ನೀಡಿ ವಿವರಿಸಿದ್ದಾರೆ. ಇವರನ್ನು ಬಂಗಿಗಳು ಎಂದು ಕರೆಯಲಾಗಿದೆ. ಇವರ ವೃತ್ತಿ ಮಲ ಬಳಿಯುವುದಾಗಿದೆ. ಕರ್ನಾಟಕದಲ್ಲಿ ಬೇರೆ ಬೇರೆ ಪ್ರದೇಶದಲ್ಲಿ ನೆಲೆಸಿರುವ ಬಂಗಿಗಳ ಉದ್ಯೋಗ ಮಾತ್ರ ಒಂದೇ ಆಗಿರುವುದು. ಇವರ ಜೀವನ ವಿಧಾನ, ಸ್ವರೂಪ, ಸ್ವಭಾವಗಳು ಒಂದೇ ರೀತಿಯಿರುತ್ತವೆ.

ಹೈದರಾಬಾದ ಕರ್ನಾಟಕದ ಬೀದರ, ಕಲಬುರಗಿ, ರಾಯಚೂರು, ಯಾದಗಿರಿ, ಕೊಪ್ಪಳ ಜಿಲ್ಲೆಗಳಲ್ಲಿ ಸಫಾಯಿ ಕರ್ಮಚಾರಿಗಳು ತಲತಲಾಂತರಗಳಿಂದ ವಾಸವಾಗಿದ್ದಾರೆ. ಗುಲಬರ್ಗಾ ಮತ್ತು ಬೀದರ ಜಿಲ್ಲೆಗಳು ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶಗಳಿಗೆ ಅಂಟಿಕೊಂಡ ಜಿಲ್ಲೆಗಳಾಗಿವೆ. ಈ ಪ್ರದೇಶದ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ರಂಗಗಳ ಮೇಲೆ ಈ ಎರಡೂ ರಾಜ್ಯಗಳ ಪ್ರಭಾವವಿದೆ. ಅಲ್ಲದೆ 14ನೇ ಶತಮಾನದಲ್ಲಿ ಈ ಜಿಲ್ಲೆಗಳಲ್ಲಿ ಬಹಮನಿ ಸಾಮ್ರಾಜ್ಯ ಬಹುಕಾಲ ತಲೆಯೆತ್ತಿ ತನ್ನ ವೈಭವವನ್ನು ಮೆರೆಯಿತು. ಒಂದು ಅಂದಾಜಿನ ಪ್ರಕಾರ ಗುಲಬರ್ಗಾ ಜಿಲ್ಲೆಗೆ 14ನೇ ಶತಮಾನದಲ್ಲಿಯೇ ಬಹಮನಿ ಸೈನ್ಯದೊಂದಿಗೆ ಉತ್ತರದಿಂದ ಅನೇಕ ಜಾತಿ, ಪಂಗಡಗಳ ಕಸುಬುದಾರರು ಬಂದು ನೆಲೆಸತೊಡಗಿದರು. ರಾಜಪರಿವಾರ, ಅಧಿಕಾರಿಗಳು, ಶ್ರೀಮಂತರು ಘೋಷಾ ಪದ್ಧತಿಯನ್ನು ಅನುಸರಿಸುತ್ತಿದ್ದ ವಿಚಾರ ಇತಿಹಾಸದಿಂದ ಬಲ್ಲೆವು. ಈ ಐಷಾರಾಮಿ ಜೀವನ ಹೊಂದಿದ ಶ್ರೀಮಂತ ವರ್ಗದವರ ಸೇವೆಗೆ ಅನೇಕ ಕೆಳವರ್ಗದ ಜಾತಿ, ಕುಲದವರು ಇರುತ್ತಿದ್ದರು. ಅಂಥ ಸೇವೆಯ ಜಾತಿಯವರಲ್ಲಿ ಬಂಗಿಗಳೂ ಸೇರಿರಬೇಕು ಎನ್ನಬಹುದು.

ಬಹಮನಿ ಸುಲ್ತಾನರ ಕಾಲದಲ್ಲಿ ನಂತರ ಮಹಾರಾಷ್ಟ್ರದ ಪೇಶ್ವೆಗಳ ಕಾಲದಲ್ಲಿ ಹಾಗೂ ಹೈದರಾಬಾದ ನಿಜಾಮರ ಆಳ್ವಿಕೆ ಕಾಲದಲ್ಲಿ ಹಂತ ಹಂತವಾಗಿ ಇಲ್ಲಿ ಉದ್ಯೋಗವನ್ನು ಅರಸಿಕೊಂಡು ಜೀವನ ನಿರ್ವಹಣೆಗಾಗಿ ಈ ಸಮುದಾಯಗಳು ವಲಸೆ ಬಂದಿರಲೂಬಹುದು. ಆದರೆ ಹೀಗೆಯೇ ಎಂದು ಹೇಳುವುದಕ್ಕೆ ಆಕರಗಳ ಕೊರತೆಯಿದೆ. ಇಷ್ಟು ಮಾತ್ರ ಹೇಳಬಹುದು ಸಫಾಯಿ ಕರ್ಮಚಾರಿಗಳ ನೆಲೆಗಳೆಲ್ಲವು ನಗರ ಇಲ್ಲವೇ ಪಟ್ಟಣಗಳು ಆಗಿವೆ. ಅಂದರೆ ಮಧ್ಯಕಾಲೀನದ ಹೊತ್ತಿಗೆ ಈ ಪ್ರದೇಶದ ಅನೇಕ ಊರುಗಳು ನಗರ ಪಟ್ಟಣಗಳಾಗಿ ಪರಿವರ್ತನೆ ಹೊಂದಿದವು. ವ್ಯಾಪಾರ, ವಾಣಿಜ್ಯ ಇತರೆ ವೃತ್ತಿಗಳಿಂದ ಜನಸಂಖ್ಯೆಯೂ ವೃದ್ಧಿಯಾಯಿತು. ಊರುಗಳು ವಿಸ್ತಾರವಾಗಿ ಬೆಳೆದವು. ಸೌಲಭ್ಯ ಸೌಕರ್ಯಗಳು ಹೆಚ್ಚಿದವು. ಇದರಿಂದ ಜೀವನ ನಿರ್ವಹಣೆಯನ್ನು ಅವಲಂಭಿಸಿದ ಅನೇಕ ಸೇವಕ ವರ್ಗಗಳು ನಗರವನ್ನು ನೆಚ್ಚಿಕೊಂಡು ಬಂದಂತೆ ಬಂಗಿಗಳೂ (ಸಫಾಯಿ ಕರ್ಮಚಾರಿಗಳು) ಉದ್ಯೋಗವನ್ನು ನೆಚ್ಚಿಕೊಂಡು ಬಂದಿರಬೇಕು ಎನ್ನಲಾಗುತ್ತದೆ. ನಾನು ಗುಲಬರ್ಗಾ ನಗರ ಮತ್ತು ಆಳಂದ, ಅಫಜಲಪುರ ಪಟ್ಟಣಗಳಲ್ಲಿ ಕ್ಷೇತ್ರಕಾರ್ಯ ಕೈಕೊಂಡು ಸಮಾಜದ ಹಿರಿಯರನ್ನು ಸಂದರ್ಶಿಸಿದಾಗ ಅವರ ಪೂರ್ವಿಕರಲ್ಲಿ ಕೆಲವರು ಮಹಾರಾಷ್ಟ್ರದಿಂದ ಮತ್ತೆ ಕೆಲವರು ಹೈದರಾಬಾದಗಳಿಂದ ಬಂದು ನೆಲೆಸಿದ್ದಾಗಿ ಹೇಳಿಕೆಗಳನ್ನು ಕೊಟ್ಟರು. ಇವರುಗಳು ಸುಮಾರು 200 ವರ್ಷಗಳಷ್ಟು ಹಿಂದಿನಿಂದ ಗುಲಬರ್ಗಾ

ಮತ್ತು ಇತರ ವರ್ಗಗಳಿಗೆ ವಲಸೆ ಬಂದು ಸ್ಥಳೀಯರೇ ಆಗಿ ಜೀವಿಸುತ್ತಿರುವುದು ತಿಳಿದು ಬರುತ್ತದೆ. ಇವರು ಮರಾಠಿ, ಹಿಂದಿ, ಉರ್ದು, ತೆಲುಗು ಮಿಶ್ರಿತ ಭಾಷೆಯನ್ನು ಆಡುವುದು ಊಹೆಗೆ ಪುಷ್ಟಿಕೊಡುತ್ತದೆ.

3.4.4 ಸಮೀಕ್ಷೆಯ ಉದ್ದೇಶ ಮತ್ತು ಕಾರ್ಯವ್ಯಾಪ್ತಿ

- ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಕೆಲಸಗಳಲ್ಲಿ ಇನ್ನೂ ತೊಡಗಿಸಿಕೊಂಡಿರುವ ವ್ಯಕ್ತಿಗಳು ಮ್ತು ಅವರ ಅವಲಂಬಿತರನ್ನು (ವಯಸ್ಕರು ಮತ್ತು ಅಪ್ರಾಪ್ತರು) ಗುರುತಿಸುವುದು.
    - SRMS (Self Employment Scheme for Rehabilitation of Manual Scavengers ಯೋಜನೆಗಳಿಗೆ ಒಳಪಟ್ಟಿದ್ದು ಇನ್ನೂ ಮ್ಯಾನುಯಲ್ ಸ್ಕ್ಯಾವೆಂಜಿಂಗ್ ವೃತ್ತಿಯನ್ನು ಬಿಡದಿರುವವರು.
    - SRMS ಯೋಜನೆಗೆ ಒಳಪಡದಿರುವವರು.
- ನಿಜವಾದ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಗುರುತಿಸುವಿಕೆಯನ್ನು ಖಾತ್ರಿ ಪಡಿಸಿಕೊಳ್ಳುವುದು ಹಾಗೂ ನಿಜವಾಗಿಯೂ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಲ್ಲದವರ ಸೇರ್ಪಡೆ ಸಾಧ್ಯತೆಗಳು ಸಂಪೂರ್ಣವಾಗಿ ತೊಡೆದುಹಾಕಲಾಗಿದ್ದರೂ ಅದನ್ನು ಕಡಿಮೆಗೊಳಿಸುವುದು.
- ಸಮೀಕ್ಷೆಯಲ್ಲಿ ಗುರುತಿಸಲಾದ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಆರೋಗ್ಯ ಮತ್ತು ಕುಶಲಕಲೆಗಳ ಸ್ಥಿತಿ–ಗತಿ ಬಗ್ಗೆ ಹಾಗೂ ಪರ್ಯಾಯ ಸ್ವಯಂ–ಉದ್ಯೋಗಗಳಲ್ಲಿ ತೊಡಗಿಸಿಕೊಳ್ಳಲು ಅವರಿಗೆ ಸಮ್ಮತಿಯಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.
- ಸಮೀಕ್ಷೆಯಲ್ಲಿ ಗುರುತಿಸಲಾದ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳು ಸ್ವಚ್ಛಗೊಳಿಸುತ್ತಿರುವ ಇನ್‌ಸ್ಯಾನಿಟರಿ ಲೆಟ್ರಿನ್‌ಗಳು ಮತ್ತು ತೆರೆದ ಚರಂಡಿಗಳ ಬಗ್ಗೆ ವಿವರಗಳನ್ನು ಖಚಿತಪಡಿಸಿಕೊಳ್ಳುವುದು.

ಸಫಾಯ ಕರ್ಮಚಾರಿಗಳು ಹಾಗೂ ಮ್ಯಾನ್ಯಯಲ್ ಸ್ಕ್ಯಾವೆಂಜರ್‌ಗಳ ನಡುವೆ ಇರುವ ವ್ಯತ್ಯಾಸ

ಸಫಾಯಿ ಕರ್ಮಚಾರಿಗಳು

ಸಫಾಯಿ ಕರ್ಮಚಾರಿಗಳೆಂದರೆ, ನಗರ ಜಿಲ್ಲೆಯ ಸಂಸ್ಥೆಗಳಲ್ಲಿ, ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಲ್ಲಿ ಖಾಯಂ ಅಥವಾ ಗುತ್ತಿಗೆ ಆಧಾರದ ಮೇಲೆ ರಸ್ತೆ ಗುಡಿಸಲು ಅಥವಾ ನೈರ್ಮಲ್ಯ ಮತ್ತು ಸ್ವಚ್ಚತಾ ಕೆಲಸಗಳನ್ನು ನಿರ್ವಹಿಸಲು ನೇಮಕ ಮಾಡಿಕೊಳ್ಳಲಾದ ವ್ಯಕ್ತಿಗಳು ಸಫಾಯಿ ಕರ್ಮಚಾರಿಗಳೆಂದರೆ ಮೂಲತಃ ಮ್ಯಾನ್ಯಯಲ್ ಸ್ಕ್ಯಾವೆಂಜರ್‌ಗಳಲ್ಲ.

ಮ್ಯಾನ್ಯಯಲ್ ಸ್ಕ್ಯಾವೆಂಜರ್‌ಗಳು

ಮ್ಯಾನ್ಯಯಲ್ ಸ್ಕ್ಯಾವೆಂಜರ್‌ಗಳು ಸಾಮಾನ್ಯವಾಗಿ ಸ್ವಯಂ ಉದ್ಯೋಗ ಅಥವಾ ಗುತ್ತಿಗೆ ಆಧಾರದ ಮೇಲೆ ಕೆಲಸಗಳನ್ನು ನಿರ್ವಹಿಸುವವರಾಗಿರುತ್ತಾರೆ. ಸ್ವಯಂ ಉದ್ಯೋಗದಲ್ಲಿ ತೊಡಗಿರುವ ಮ್ಯಾನ್ಯಯಲ್ ಸ್ಕ್ಯಾವೆಂಜರ್‌ಗಳೆಂದರೆ, ಮನೆಗಳ ಸಮೂಹದ ಮಾಲೀಕರಿಂದ ಖಾಸಗಿ/ಪ್ರತ್ಯೇಕ ಅಥವಾ ಸಾಮೂಹಿಕ ಒಣಶೌಚಾಲಯಗಳ ಮತ್ತು ಮಲಮೂತ್ರ ವಿಸರ್ಜನೆಗೊಳ್ಳುತ್ತಿರುವ ತೆರೆದ ಚರಂಡಿಗಳನ್ನು ಸ್ವಚ್ಛಗೊಳಿಸಲು ಗುತ್ತಿಗೆದಾರರ ಮೂಲಕ ನೇಮಿಸಿಕೊಳ್ಳಲಾದ ಕೆಲಸಗಾರರಿರುತ್ತಾರೆ.

ಪದಗಳ ವ್ಯಾಖ್ಯಾನಗಳು

ಮ್ಯಾನ್ಯಯಲ್ ಸ್ಕ್ಯಾವೆಂಜರ್‌ಗಳು: ಮ್ಯಾನ್ಯಯಲ್ ಸ್ಕ್ಯಾವೆಂಜರ್‌ಗಳೆಂದರೆ ಇನ್‌ಸ್ಯಾನಿಟರಿ ಶೌಚಾಲಯಗಳಲ್ಲಿ, ಮಲಮೂತ್ರಗಳನ್ನು ವಿಸರ್ಜಿಸುವ ತೆರೆದ ಚೆರಂಡಿಗಳು ಅಥವಾ ಗುಂಡಿಗಳಿಂದ, ರೈಲ್ವೇ ಹಳಿಗಳಿಂದ ಮಾನವ ಮಲಮೂತ್ರಗಳನ್ನು ಸಂಪೂರ್ಣ ಕೊಳೆಯುವ ಮೊದಲೇ ಸ್ವಚ್ಛಗೊಳಿಸಲು, ತೆಗೆದುಕೊಂಡು ಹೋಗಲು, ವಿಲೇವಾರಿ ಮಾಡಲು ಅಥವಾ ಇನ್ನಾವುದೇ ರೀತಿಯಲ್ಲಿ ನಿರ್ವಹಿಸಲು ಯಾವುದೇ ವ್ಯಕ್ತಿಯಿಂದ, ಸ್ಥಳೀಯ ಸಂಸ್ಥೆಗಳಿಂದ ಅಥವಾ ಸರ್ಕಾರಿ ಅಥವಾ ಖಾಸಗಿ ಸಂಸ್ಥೆಗಳಿಂದ ನೇಮಿಸಿಕೊಳ್ಳಲ್ಪಟ್ಟ ವ್ಯಕ್ತಿ ಎಂದರ್ಥ.

ವಿವರಣೆ

- ನೇಮಿಸಿಕೊಳ್ಳುವುದು ಎಂದರೆ ಖಾಯಂ ಅಥವಾ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳುವುದು ಎಂದರ್ಥ.
- ಕೇಂದ್ರ ಸರ್ಕಾರವು ಪ್ರಕಟಿಸಿದ ಸಾಧನ-ಸಲಕರಣೆಗಳು ಹಾಗೂ ಸುರಕ್ಷತಾ ಧಿರಸುಗಳ ಸಹಾಯದೊಂದಿಗೆ ಮಾನವ ಮಲ ಮೂತ್ರಗಳನ್ನು ಸ್ವಚ್ಛಗೊಳಿಸಲು ಕೆಲಸಕ್ಕೆ ತೆಗೆದುಕೊಂಡ ಹರಿಯಬಿಡುತ್ತಿದ್ದು ಅದನ್ನು ಸಂಪೂರ್ಣವಾಗಿ ಕೊಳೆಯುವ ಮೊದಲೇ ಕೆಲಸಗಾರರ ಮೂಲಕ ಸ್ವಚ್ಛಗೊಳಿಸಲಾಗುತ್ತಿರುವ ಶೌಚಾಲಯಗಳು ಎಂದರ್ಥ.

ಸೂಕ್ತ ಸಲಕರಣೆಗಳು (ಹೈ. ಪ್ರೆಷರ್ ವಾಟರ್ ಜೆಟ್ ಇತ್ಯಾದಿಗಳಂತಹ) ಹಾಗೂ ಸುರಕ್ಷತಾ ಧಿರಿಸುಗಳನ್ನು ಬಳಸಿ ಕೆಲಸಗಾರರಿಂದ ಸ್ವಚ್ಛಗೊಳಿಸಲಾಗುತ್ತಿರುವ ರೈಲ್ವೇ ಪ್ಯಾಸೆಂಜರ್ ಭೋಗಿಗಳಲ್ಲಿರುವ ವಾಟರ್ ಪ್ಲಶ್ ಶೌಚಾಲಯಗಳನ್ನು ಅನೈರ್ಮಲ್ಯ ಶೌಚಾಲಯಗಳೆಂದು ಪರಿಗಣಿಸಬಾರದು.

ಸಫಾಯಿ ಕರ್ಮಚಾರಿಗಳನ್ನು ಗುರುತಿಸುವ ಸರಕಾರ ತೆಗೆದುಕೊಂಡ ಕ್ರಮ ವಿವರ

ಮೇಲೆ ತಿಳಿಸಿದಂತೆ ಸಮೀಕ್ಷೆಯ ಕುರಿತಾಗಿ ಸಾಕಷ್ಟು ಪ್ರಚಾರ ಕೈಗೊಂಡ ನಂತರ ಹಾಗೂ ಸಮೀಕ್ಷೆಯ ಅವಧಿಯಲ್ಲಿ ಮ್ಯಾನ್ಯಯಲ್ ಸ್ಕ್ಯಾವೆಂಜರ್‌ಗಳು ನಿಗದಿಪಡಿಸಿದ ಕೇಂದ್ರಗಳಲ್ಲಿ ಮುಂದೆ ಬಂದ ತಾವು ಮ್ಯಾನ್ಯಯಲ್ ಸ್ಕ್ಯಾವೆಂಜರ್‌ಗಳೆಂದು ಸ್ವಯಂ ಘೋಷಿಸುವ ನಿರೀಕ್ಷೆಯಿರುತ್ತದೆ. ಸಾಧ್ಯವಾದಷ್ಟು ಮಟ್ಟಿಗೆ ಈ ಕೇಂದ್ರಗಳು ಮ್ಯಾನ್ಯಯಲ್ ಸ್ಕ್ಯಾವೆಂಜರ್‌ಗಳು ವಾಸಿಸುವ ವಾರ್ಡುಗಳಿಗೆ ಅಥವಾ ಬಸ್ತಿಗಳಿಗೆ ಹತ್ತಿರವಿರಬೇಕು.

ಮ್ಯಾನ್ಯಯಲ್ ಸ್ಕ್ಯಾವೆಂಜರ್‌ಗಳ ಸ್ವಯಂ ಘೋಷಣೆಯ ಜೊತೆಗೆ ಅಗತ್ಯವಿರುವ ಪ್ರಕರಣಗಳಲ್ಲಿ ಮ್ಯಾನ್ಯಯಲ್ ಸ್ಕ್ಯಾವೆಂಜರ್‌ಗಳ ಪ್ರದೇಶ ಅಥವಾ ಬಸ್ತಿಗಳಿಗೆ ತೆರಳಿ ಮನೆ-ಮನೆಗೆ ಭೇಟಿಯಿತ್ತು ಅವರ ಹೇಳಿಕೆಗಳನ್ನು ದಾಖಲಿಸಬೇಕಿರುತ್ತದೆ.

ಒಂದು ವೇಳೆ ಸಮೀಕ್ಷೆಯಲ್ಲಿ ಯಾವುದೇ ಮ್ಯಾನ್ಯಯಲ್ ಸ್ಕ್ಯಾವೆಂಜರ್‌ಗಳು ಸ್ವಯಂ-ಘೋಷಣೆಗೆ ಮುಂದೆ ಬರದಿದ್ದರೆ ಮತ್ತು ಮನೆ-ಮನೆಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿಯೂ

ಸಹ ಯಾರೂ ಪತ್ತೆಯಾಗದಿದ್ದರೆ, ಸ್ಥಳೀಯ ಸಂಸ್ಥೆಗಳು ಸಮಯೋಚಿತ ಪ್ರಕರಣಗಳಲ್ಲಿ ಇನ್‌ಸ್ಯಾನಿಟರಿ ಲೆಟ್ರನ್‌ಗಳನ್ನು ಹೊಂದಿರುವ ಮನೆಗಳನ್ನು ಗುರುತಿಸಲು ಹಾಗೂ ಅಂತಹ ಮನೆಯವರಿಂದ ಇನ್‌ಸ್ಯಾನಿಟರಿ ಲೆಟ್ರನೆಗಳನ್ನು ಸ್ವಚ್ಛ ಮಾಡಲು ನೇಮಿಸಿಕೊಂಡಿರುವ ಮ್ಯಾನ್ಯಯಲ್ ಸ್ಕ್ಯಾವೆಂಜರ್‌ಗಳ ಹೆಸರು ಮತ್ತು ವಿಳಾಸಗಳನ್ನು ಪಡೆದುಕೊಳ್ಳಲು ನಗರ, ಸ್ಥಳೀಯ ಸಂಸ್ಥೆಗಳು ಕ್ರಮಕೈಗೊಳ್ಳುವುದು. ಗಣತಿದಾರರು ತದನಂತರ ಅಂತಹ ಮ್ಯಾನ್ಯಯಲ್ ಸ್ಕ್ಯಾವೆಂಜರ್‌ಗಳ ಮನೆಗೆ ಭೇಟಿ ನೀಡಿ ಅವರು ನೀಡಿರುವ ಮಾಹಿತಿಗಳನ್ನು ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿಕೊಳ್ಳಬೇಕು. ಜೊತೆಗೆ ಮ್ಯಾನ್ಯಯಲ್ ಸ್ಕ್ಯಾವೆಂಜರ್‌ಗಳ ಬಗ್ಗೆ ಮಾಹಿತಿಗಳನ್ನು ಸ್ಥಳೀಯ ಸರ್ಕಾರೇತರ ಸಂಸ್ಥೆಗಳಿಂದ ಸಹ ಪಡೆದುಕೊಳ್ಳಬಹುದಾಗಿದೆ. ಅಲ್ಲದೇ ರಾಜ್ಯ ಸರ್ಕಾರೇತರ ಸಂಸ್ಥೆಗಳು ನೀಡಿರುವ ಮತ್ತು ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಒದಗಿಸಲಾಗಿರುವ ಮ್ಯಾನ್ಯಯಲ್ ಸ್ಕ್ಯಾವೆಂಜರ್‌ಗಳ ಪಟ್ಟಿಯನ್ನು ಸಹ ಗಣತಿದಾರರು ಪರಿಶೀಲಿಸಬೇಕಿರುತ್ತದೆ. ಪರಿಶೀಲನೆ ಸಂದರ್ಭದಲ್ಲಿ ಅಂತಹ ವ್ಯಕ್ತಿಗಳು ಮ್ಯಾನ್ಯಯಲ್ ಸ್ಕ್ಯಾವೆಂಜಿಗ್ ವೃತ್ತಿಯಲ್ಲಿ ತೊಡಗಿಲ್ಲವೆಂದು ಕಂಡುಬಂದಲ್ಲಿ ಅಂತಹ ವ್ಯಕ್ತಿಗಳ ಬಗ್ಗೆ ವಿವರಗಳನು ಸಹ ದಾಖಲಿಸಿ ಸ್ಥಳೀಯ ಸಂಸ್ಥೆಗಳಲ್ಲಿ ಅವುಗಳನ್ನು ಸಂಗ್ರಹಿಸಿಡಬೇಕು.

ಗಣತಿದಾರರಿಂದ ಶೇ 100 ರಷ್ಟು ಪರಿಶೀಲನೆ

ನಿಗದಿಪಡಿಸಿದ ಕೇಂದ್ರಗಳಲ್ಲಿ ಸ್ವಯಂ ಘೋಷಣೆ ಮಾಡಿದ ಮ್ಯಾನ್ಯಯಲ್ ಸ್ಕ್ಯಾವೆಂಜರ್‌ಗಳ ವಿವರಗಳನ್ನು ಕಂಪ್ಯೂಟರ್ ಅಥವಾ Hand held device ಗಳಲ್ಲಿ ಭರ್ತಿ ಮಾಡಿಕೊಂಡ ನಂತರ ಗಣತಿದಾರರು ಆಯಾ ಸ್ಕ್ಯಾವೆಂಜರ್‌ಗಳ ಮನಗಳಿಗೆ ಭೇಟಿ ನೀಡಿ ವಿವರಗಳನ್ನು ಪರಿಶೀಲಿಸಬೇಕು. ಅಂತಹ ಸಂದರ್ಭದಲ್ಲಿ ಭರ್ತಿ ಮಾಡಿದ ವಿವರಗಳಲ್ಲಿ ತಪ್ಪಿರುವುದು ಕಂಡುಬಂದಲ್ಲಿ, ಸರಿಯಾದ ಮಾಹಿತಿಗಳನ್ನು ಸ್ಥಳದಲ್ಲಿಯೇ ಪರಿಶೀಲಿಸಿ ದಾಖಲಿಸಿಕೊಳ್ಳಬೇಕು. ಘೋಷಿಸಿದ ವ್ಯಕ್ತಿಗೆ ಯಾವುದೇ ಕಾರಣಕ್ಕೂ ದಾಖಲಿಸಿಕೊಂಡ ಮಾಹಿತಿಯನ್ನು ಗಣತಿದಾರರು ಬಹಿರಂಗಪಡಿಸಬಾರದು.

ಮೇಲ್ವಿಚಾರಣೆ ಮಾದರಿ ಪರೀಕ್ಷೆ (Sample check)

ಗಣತಿದಾರರು ನಿರ್ವಹಿಸಿದ ಕೆಲಸಗಳ ಮಾದರಿ ಪರೀಕ್ಷೆಯನ್ನು ನಗರ ಸ್ಥಳೀಯ ಸಂಸ್ಥೆಗಳು ನೇಮಿಸಲ್ಪಟ್ಟ ಮೇಲ್ವಿಚಾರಕರು ಈ ಕೆಳಕಂಡ ವಿಸ್ತಾರದವರೆಗೆ ಕೈಗೊಳ್ಳಬೇಕಿರುತ್ತದೆ.

1) ಇನ್‌ಸ್ಯಾನಿಟರಿ ಲೆಟ್ರಿನ್‌ಗಳಿರುವ 1000 ಕ್ಕಿಂತ ಕಡಿಮೆ ಮನೆಗಳಿಂದ ಪಟ್ಟಣ/ನಗರಗಳಲ್ಲಿ ಶೇ 100 ರಷ್ಟು ಮಾದರಿ ಪರೀಕ್ಷೆಯನ್ನು ನಡೆಸಬೇಕು.

2) ಇನ್‌ಸ್ಯಾನಿಟರಿ ಲೆಟ್ರಿನ್‌ಗಳನ್ನು ಹೊಂದಿರುವ 1000–9999 ಮನೆಗಳಿರುವ 184 ನಗರ/ಪಟ್ಟಣಗಳಲ್ಲಿ ಗಣತಿದಾರರು ಪರಿಶೀಲಿಸಿದ ಘೋಷಣೆಗಳ ಶೇ 50ರಷ್ಟನ್ನು ಪರೀಕ್ಷಿಸುವುದು.

3) ಇನ್‌ಸ್ಯಾನಿಟರಿ ಲೆಟ್ರಿನ್‌ಗಳನ್ನು ಹೊಂದಿರುವ 10,000 ಅಥವಾ ಅದಕ್ಕಿಂತ ಮೇಲ್ಪಟ್ಟ ಮನೆಗಳಿರುವ 11 ನಗರ/ಪಟ್ಟಣಗಳಲ್ಲಿ ಗಣತಿದಾರರು ಪರಿಶೀಲಿಸಿದ ಘೋಷಣೆಗಳ ಶೇ. 33 ರಷ್ಟನ್ನು ಪರೀಕ್ಷಿಸುವುದು.

2ನೇ ಮತ್ತು 3ನೇ ವರ್ಗಗಳಲ್ಲಿ ಗಣತಿದಾರರು ಕೈಗೊಂಡ ಸಮೀಕ್ಷಯಲ್ಲಿ ಶೇ. 10ಕ್ಕಿಂತ ಹೆಚ್ಚಾಗಿ ಲೋಪ–ದೋಷಗಳಿರುವುದು ಮಾದರಿ ಪರೀಕ್ಷೆಯಲ್ಲಿ ಗಣತಿದಾರರು ಕೈಗೊಂಡ ಎಲ್ಲಾ ಕೆಲಸಗಳ ಶೇ. 100 ರಷ್ಟು ಪರೀಕ್ಷೆಯನ್ನು ಮೇಲ್ವಿಚಾರಕರು ನಡೆಸಬೇಕು.

ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ರಿಂದ ಕರಡು ಪಟ್ಟಿಯನ್ನು ಸಿದ್ಧಪಡಿಸುವುದು ಮತ್ತು ಅದನ್ನು ಪ್ರಚುರಪಡಿಸುವುದು

ಪ್ರತಿಯೊಂದು ನಗರ, ಸ್ಥಳೀಯ ಸಂಸ್ಥೆಗಳು ಅಥವಾ ನಗರ/ಪಟ್ಟಣಗಳಲ್ಲಿ ಗುರುತಿಸಲಾದ ಹಾಗೂ ಮೇಲ್ವಿಚಾರಕರಿಂದ ಪರಿಶೀಲಿಸಲಾದ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಕರಡು ಪಟ್ಟಿಯನ್ನು ಸಿದ್ಧಪಡಿಸಿ ಸ್ಥಳೀಯ ದಿನ ಪತ್ರಿಕೆಗಳಲ್ಲಿ, ಸ್ಥಳೀಯ ಸಂಸ್ಥೆಯ ಕಛೇರಿಯಲ್ಲಿ, ತಹಸೀಲ್ದಾರವರ ಕಛೇರಿಯಲ್ಲಿ ಹಾಗೂ ಉಪ–ವಿಭಾಗೀಯ ಅಧಿಕಾರಿಗಳ ಕಛೇರಿಯಲ್ಲಿ (ಜಿಲ್ಲಾ ಕೇಂದ್ರಗಳಾಗಿದ್ದಲ್ಲಿ ಜಿಲ್ಲಧಿಕಾರಿಗಳ ಕಛೇರಿಯಲ್ಲಿಯೂ ಸಹ) ಪ್ರಕಟಿಸಬೇಕು. ಅದರ ಒಂದು ಪ್ರತಿಯನ್ನು ಪಟ್ಟಣ ಮಟ್ಟದ ಸಮೀಕ್ಷೆ ಸಮಿತಿಗೆ ಹಾಗೂ ಸ್ಥಳೀಯ ಪ್ರಾಧಿಕಾರದ ಸದಸ್ಯರುಗಳಿಗೆ ಕೂಡ ಒದಗಿಸಬೇಕು.

ಸದರಿ ಕರಡು ಪಟ್ಟಿಯನ್ನು ಪ್ರಕಟಿಸುವ ಸಂದರ್ಭದಲ್ಲಿ ಸ್ಥಳೀಯ ಪ್ರಾಧಿಕಾರವು ಕರಡು ಪಟ್ಟಿ ಕುರಿತಂತೆ ಸಂಬಂಧಪಟ್ಟವರಿಂದ ಯಾವುದೇ ಆಕ್ಷೇಪಣೆ ಮತ್ತು ಭಾದ್ಯತೆಗಳಿದ್ದಲ್ಲಿ ಅವುಗಳನ್ನು 2 ವಾರದೊಳಗಾಗಿ ನಿಗದಿತ ನಮೂನೆಯಲ್ಲಿ ಸಲ್ಲಿಸುವ ಬಗ್ಗೆ ಕ್ರಮಕೈಗೊಳ್ಳಬೇಕು.

ಕರಡು ಪಟ್ಟಿಗೆ ಸ್ವೀಕೃತಗೊಂಡಿರುವ (Claims) ಹಕ್ಕು-ಭಾದ್ಯತೆ ಮತ್ತು ಆಕ್ಷೇಪಣೆಗಳನ್ನು (Objections) ದಾಖಲಿಸುವುದು

ಮೇಲೆ ತಿಳಿಸಿದಂತೆ ಕರಡು ಪಟ್ಟಿ ಕುರಿತಂತೆ ಹಕ್ಕು ಭಾದ್ಯತೆ ಮತ್ತು ಆಕ್ಷೇಪಣೆಗಳನ್ನು 2 ವಾರದೊಳಗಾಗಿ ಸ್ವೀಕರಿಸಬೇಕು. ಹಕ್ಕು ಭಾದ್ಯತೆಗಳನ್ನು ಅಥವಾ ಆಕ್ಷೇಪಣಾಕಾರರು ಸೂಕ್ತ ಸಾಕ್ಷ್ಯಾಧಾರಗಳು ಸಮೇತ ತಮ್ಮ ಹಕ್ಕು ಭಾದ್ಯತೆಗಳನ್ನು ಸಮರ್ಥಿಸಿಕೊಳ್ಳಬಹುದು. ಹಕ್ಕು ಭಾದ್ಯತೆ ಮತ್ತು ಆಕ್ಷೇಪಣೆಗಳನ್ನು ಭರ್ತಿ ಮಾಡಲು ಅರ್ಜಿದಾರರಿಗೆ ಅಗತ್ಯವಿರುವ ಅರ್ಜಿಗಳನ್ನು ನಿಗದಿತ ಕೇಂದ್ರಗಳಲ್ಲಿ ಬೇಡಿಕೆಯ ಆಧಾರದ ಮೇಲೆ ಉಚಿತವಾಗಿ ಒದಗಿಸಲು ಹಾಗೂ ಜಿಲ್ಲಾಡಳಿತ ಹಾಗೂ ಸ್ಥಳೀಯ ಪ್ರಾಧಿಕಾರಗಳ ಅಂತರ್ಜಾಲದಲ್ಲಿ (Website) ಒದಗಿಸಲು ಕ್ರಮಕೈಗೊಳ್ಳಬೇಕು. ಸ್ವೀಕೃತಗೊಂಡಿರುವ ಹಕ್ಕು ಭಾದ್ಯತೆ ಹಾಗೂ ಆಕ್ಷೇಪಣೆಗಳ ವಿಚಾರಣೆ ನಡೆಸಲು ಹಾಗೂ ವಿಚಾರಣೆಯ ನಿರ್ಣಯಗಳನ್ನು ನೀಡಲು ತಹಶೀಲ್ದಾರ್ ಅಥವಾ ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್ ದರ್ಜೆಗಿಂತ ಕಡಿಮೆಯಿಂದ ಅಧಿಕಾರಿಗಳನ್ನು ಜಿಲ್ಲಾಧಿಕಾರಿಗಳು ನೇಮಿಸಬೇಕು. ಸದರಿ ಅಧಿಕಾರಿಗಳು ಪ್ರತಿಯೊಂದು ಆಕ್ಷೇಪಣೆಗಳ ವಿಚಾರಣೆಯನ್ನು ನಡೆಸಬೇಕು. ಅಗತ್ಯವಿದ್ದಲ್ಲಿ, ಸೂಕ್ತ ಅಧಿಕಾರಿಗಳ ಮೂಲಕ ಆಕ್ಷೇಪಣೆಗಳನ್ನು ಹೊಸದಾಗಿ ಪರಿಶೀಲಿಸಲು ಆಜ್ಞಾಪಿಸಬಹುದು. ಎಲ್ಲಾ ಆಕ್ಷೇಪಣೆಗಳ ವಿಚಾರಣೆ ಹಾಗೂ ತದನಂತರದ ಮರುಪರಿಶೀಲನೆ (ಆದೇಶ ಮಾಡಿದ್ದಲ್ಲಿ) ಮುಗಿದ ನಂತರ ಆಕ್ಷೇಪಣೆ ಅಥವಾ ಹಕ್ಕು ಭಾದ್ಯತೆಗಳನ್ನು ಒಪ್ಪಿರುವ ಅಥವಾ ತಿರಸ್ಕರಿಸಿರುವ ಬಗ್ಗೆ ಅಧಿಕಾರಿಯು ಸೂಕ್ತ ಆದೇಶವನ್ನು ಜಾರಿಗೊಳಿಸಬೇಕು. ಸಂಬಂಧಪಟ್ಟ ವ್ಯಕ್ತಿಗಳಿಗೆ ಆದೇಶದ ಒಂದು ಪ್ರತಿಯನ್ನು ಸಹ ನೀಡಬೇಕು.

ಮ್ಯಾನ್ಯಯಲ್ ಸ್ಕ್ಯಾವೆಂಜರ್‌ಗಳ ಅಂತಿಮ ಪಟ್ಟಿಯನ್ನು ಪ್ರಕಟಿಸುವುದು

ಸಕ್ಷಮ ಪ್ರಾಧಿಕಾರಿಯು ಪ್ರತಿಯೊಂದು ಹಕ್ಕು ಭಾದ್ಯತೆ ಅಥವಾ ಆಕ್ಷೇಪಣೆಗಳ ಬಗ್ಗೆ ತೀರ್ಮಾನ ಕೈಗೊಂಡ ಮೇಲೆ ಸ್ಥಳೀಯ ಪ್ರಾಧಿಕಾರವು ಕರಡು ಪಟ್ಟಿಯಲ್ಲಿ ಅಗತ್ಯ ಬದಲಾವಣೆಗಳನ್ನು ಮಾಡಿ ಪಟ್ಟಣ ಮಟ್ಟದ ಸರ್ವೆ ಸಮಿತಿಗೆ ಅದನ್ನು ಪರಿಗಣಿಸಲು ಕಳುಹಿಸಿಕೊಡಬೇಕು. ಪಟ್ಟಣದ ಮಟ್ಟದ ಸರ್ವೆ ಸಮಿತಿಯು ಕೈಗೊಳ್ಳಲಾದ ಸಮೀಕ್ಷೆಯ ಹಾಗೂ ಅದರ ಆಧಾರದ ಮೇಲೆ ಸಿದ್ಧಪಡಿಸಿರುವ ಅಂತಿಮ ಪಟ್ಟಿಯು ತೃಪ್ತಿಕರವಾಗಿ ಕಂಡುಬಂದಲ್ಲಿ ಪಟ್ಟಿಯನ್ನು ಪ್ರಚುರಪಡಿಸಲು ಅನುಮೋದನೆಗಾಗಿ ಅದನ್ನು ಜಿಲ್ಲಾ ಮಟ್ಟದ ಸರ್ವೆ ಸಮಿತಿಗೆ ಕಳುಹಿಕೊಡಬೇಕು. ಜಿಲ್ಲಾ ಮಟ್ಟದ ಸಮಿತಿಯು ಪಟ್ಟಿಗೆ ಅನುಮೋದನೆ ನೀಡಿದ ನಂತರ ಅದನ್ನು ಮುನಿಸಿಪಾಲಿಟಿ ಕಛೇರಿ, ತಹಶೀಲ್ದಾರ್‌ರವರ ಕಛೇರಿ, ಸಂಬಂಧಪಟ್ಟ ಉಪ–ವಿಭಾಗ ಹಾಗೂ ಜಿಲ್ಲಾ ಮಟ್ಟದ ಕಛೇರಿಗಳು, ಸ್ಥಳೀಯ ದಿನಪತ್ರಿಕೆಗಳು ಮುಂತಾದವುಗಳಲ್ಲಿ ಪ್ರಕಟಿಸಬೇಕು. ಹಾಗೂ ಅಂತಿಮ ಪಟ್ಟಿಯನ್ನು ಜಿಲ್ಲಾ ಹಾಗೂ ರಾಜ್ಯ ಸರ್ಕಾರದ ಅಂತರ್ಜಾಲಗಳಲ್ಲಿ ಸಹ ಪ್ರಕಟಿಸಬೇಕು.

ಜಿಲ್ಲಾ, ರಾಜ್ಯ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ಮ್ಯಾನ್ಯಯಲ್ ಸ್ಕ್ಯಾವೆಂಜರ್‌ಗಳ ಅಂತಿಮ ಪಟ್ಟಿಯನ್ನು ಸಿದ್ಧಪಡಿಸುವ ಬಗ್ಗೆ

ಪಟ್ಟಣ ಮಟ್ಟದ ಸಮೀಕ್ಷೆ ಸಮಿತಿಯು ಅಂತಿಮವಾಗಿ ಪ್ರಕಟಿಸಿದ ಗುರುತಿಸಲಾದ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಪಟ್ಟಿಯನ್ನು ಜಿಲ್ಲಾ ಮಟ್ಟದ ಸಮೀಕ್ಷೆ ಸಮಿತಿಗೆ ಸಲ್ಲಿಸಬೇಕು. ಜಿಲ್ಲಾ ಮಟ್ಟದ ಸಮೀಕ್ಷೆ ಸಮಿತಿಯು ಜಿಲ್ಲೆಯಲ್ಲಿರುವ ಪ್ರತಿಯೊಂದು ಸಂಬಂಧಿಸಿದ ಪಟ್ಟಣಗಳಿಂದ ಸ್ವೀಕಾರವಾಗಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಪಟ್ಟಿಯನ್ನು ಕ್ರೋಢೀಕರಿಸಿ ಜಿಲ್ಲಾ ಮಟ್ಟದ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಪಟ್ಟಿಯನ್ನು ಸಿದ್ಧಪಡಿಸಿ, ಜಿಲ್ಲಾಧಿಕಾರಿಗಳ ಮೂಲಕ ರಾಜ್ಯ ಮಟ್ಟದ ಸಮೀಕ್ಷೆಯ ನೋಡಲ್ ಇಲಾಖೆಗೆ ಕಳುಹಿಸಿಕೊಡಬೇಕು.

ರಾಜ್ಯ ನೋಡಲ್ ಇಲಾಖೆಯ ವಿವಿಧ ಜಿಲ್ಲೆಗಳಿಂದ ಸ್ವೀಕರಿಸಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಪಟ್ಟಿಯನ್ನು ಕ್ರೂಢೀಕರಿಸಿ ರಾಜ್ಯ ಮಟ್ಟದ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಪಟ್ಟಿಯನ್ನು ಸಿದ್ಧಪಡಿಸಿ ಅದನ್ನು ರಾಜ್ಯ ಸಮೀಕ್ಷಾ ಸಮಿತಿಗೆ ಪರಿಗಣನೆ ಹಾಗೂ ಅನುಮೋದನೆಗಾಗಿ ಸಲ್ಲಿಸುವುದು. ಸದರಿ ಪಟ್ಟಿಯನ್ನು ರಾಜ್ಯ ಸಮೀಕ್ಷಾ ಸಮಿತಿಯು ಅನುಮೋದಿಸಿದ ನಂತರ, ರಾಜ್ಯ ನೋಡಲ್ ಇಲಾಖೆಯು ರಾಜ್ಯದ ಪಟ್ಟಿಯನ್ನು ಸಾಮಾಜಿಕ

ನ್ಯಾಯ ಮತ್ತು ಸಬಲೀಕರಣ ಸಚಿವಾಲಯಕ್ಕೆ ಕಳುಹಿಸಬೇಕು, ಅವರು ರಾಷ್ಟ್ರೀಯ ಮಟ್ಟದ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಪಟ್ಟಿಯನ್ನು ಸಿದ್ಧಪಡಿಸಿ ರಾಷ್ಟ್ರೀಯ ಮಟ್ಟದ ಸಮೀಕ್ಷೆ ಸಮಿತಿಯ ಅನುಮೋದನೆ ಪಡೆದುಕೊಂಡು ನಂತರ ಅದನ್ನು ಪ್ರಚುರಪಡಿಸಬೇಕು.

ಸ್ಥಳೀಯ, ಜಿಲ್ಲಾ, ರಾಜ್ಯ ರಾಷ್ಟ್ರೀಯ ಮಟ್ಟದಲ್ಲಿ ವಿಶ್ಲೇಷಣಾ ವರದಿಗಳನ್ನು ಸಿದ್ಧಪಡಿಸುವದು

ಸ್ಥಳೀಯ ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ, ಹಾಗೂ ರಾಷ್ಟ್ರೀಯ ಮಟ್ಟದಲ್ಲಿ, ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಪಟ್ಟಿಯನ್ನು ಅಂತಿಮಗೊಳಿಸಿದ ಮೇಲೆ, ನಗರ ಸ್ಥಳೀಯ ಸಂಸ್ಥೆಗಳು, ಜಿಲ್ಲಧಿಕಾರಿಗಳು, ರಾಜ್ಯಾಡಳಿತ ಹಾಗೂ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯವು ನಿರ್ದಿಷ್ಟ ಅವಧಿಯಲ್ಲಿ (Due course) / ಕಾಲಕ್ರಮದಲ್ಲಿ ವಿವಿಧ ಕೋನಗಳಿಂದ ಉದಾ: ಲಿಂಗ, ಭೌಗೋಳಿಕ ಹಂಚಿಕೆ, ಸಮಾಜಿಕ-ಆರ್ಥಿಕ, ಶೈಕ್ಷಣಿಕ ಹಾಗೂ ಕುಶಲಕಲೆ, ಬದಲಿ ಉದ್ಯೋಗದಲ್ಲಿ ಆಸಕ್ತಿ ಮುಂತಾದವುಗಳ ಕುರಿತಂತೆ ವಿಶ್ಲೇಷಣಾ ವರದಿಗಳನ್ನು ಸಿದ್ಧಪಡಿಸಿ ಪ್ರಚುರ ಪಡಿಸಬೇಕು. ಈ ಕೆಲಸವನ್ನು ಸ್ವತಃ ಅಥವಾ ಸೂಕ್ತ ಏಜೆನ್ಸಿಗಳ ಮೂಲಕ ಮಾಡಬಹುದಾಗಿರುತ್ತದೆ.

ಸಮೀಕ್ಷೆಯನ್ನು ಕೈಗೊಳ್ಳಲು ಸಾಂಸ್ಥಿಕ ವ್ಯವಸ್ಥೆಯನ್ನು ಸ್ಥಾಪಿಸುವುದು

ಸಮೀಕ್ಷೆಯನ್ನು ಕೈಗೊಳ್ಳಲು ವಿವಿಧ ಹಂತಗಳಲ್ಲಿ ಕಾರ್ಯನಿರ್ವಹಣೆಯ ಬವಾಬ್ದಾರಿಯು ಈ ಕೆಳಗಿನಂತಿದೆ.

ಕ್ರಸಂ	ಮಟ್ಟ	ಜವಾಬ್ದಾರಿ
1	ರಾಷ್ಟ್ರ	ಕೇಂದ್ರ ಸರ್ಕಾರ (ನೋಡಲ್ ಸಂಸ್ಥೆ ಸಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ ಅಂಕಿ-ಅಂಶ ಮತುತ ಯೋಜನೆ ಅನುಷ್ಠಾನ ಮತ್ತು ಆರ್‌ಜಿಐ ರಿಜಿಸ್ಟ್ರಾರ್ ಜನರಲ್ ಮತ್ತು ಸೆನ್ಸಸ್ ಕಮಿಷನರ್, ಇಂಡಿಯಾ ಎರಡು ಸಂಸ್ಥೆಗಳು ತಾಂತ್ರಿಕ ಜೊತೆಗಾರರಿರುತ್ತಾರೆ.)

2	ರಾಜ್ಯ	ರಾಜ್ಯ ಸರ್ಕಾರ (ಪ್ರತಿ ರಾಜ್ಯ ಸರ್ಕಾರವು ಸೂಕ್ತ ನೋಡಲ್ ಇಲಾಖೆ ಹಾಗೂ ಇತರೆ ಸಹಯೋಗಿ ಇಲಾಖೆ/ಸಂಸ್ಥೆಯನ್ನು ನೇಮಿಸಬೇಕು)
3	ಜಿಲ್ಲೆ	ಜಿಲ್ಲಧಿಕಾರಿಗಳು (ಸಂಬಂಧಪಟ್ಟ ಇಲಾಖಾಯ ಜಿಲ್ಲಾ ಮಟ್ಟದ ಅಧಿಕಾರಿಗಳ ಸಹಯೋಗದೊಂದಿಗೆ)
4	ನಗರ/ಪಟ್ಟಣ	ನಗರ ಸ್ಥಳೀಯ ಸಂಸ್ಥೆಗಳ ಮುಖ್ಯಸ್ಥರು (ಆಯುಕ್ತರು, ಪೌರಾಯುಕ್ತರು, ಮುಖ್ಯಾಧಿಕಾರಿಗಳು)

ಪ್ರತಿಯೊಂದು ಕಾರ್ಯನಿವಾಹಣಾ ಸಂಸ್ಥೆಯು ಈ ಕೆಳಕಂಡ ಕರ್ತವ್ಯಗಳನ್ನು ನಿರ್ವಹಿಸಬೇಕು

1) ಜಾಗೃತಿ ಅಭಿಯಾನ.
2) ವಿವಿಧ ಕೆಲಸಗಳನ್ನು ನಿರ್ವಹಿಸಲು ಅಧಿಕಾರಿ/ಸಿಬ್ಬಂದಿಗಳನ್ನು ನೇಮಕ ಮಾಡುವುದು.
3) ಅಧಿಕಾರಿಗಳು, ಸಿಬ್ಬಂದಿಗೆ ತರಬೇತಿಯನ್ನು ನೀಡುವುದು.
4) ನಮೂನೆಗಳನ್ನು ಸಿದ್ಧಪಡಿಸುವುದು, ಮುದ್ರಿಸುವದು. ವಿವರಗಳ ಸಂಗ್ರಹಣೆ ಮತ್ತು ಅದರ ಸ್ಥರೀಕರಣ (Validation) ಹಾಗೂ ಸಂಕಲನ, ಕ್ರೋಢೀಕರಣ.
5) ನಿಗದಿತ ಅವಧಿಯೊಳಗೆ ಸಮೀಕ್ಷೆಯನ್ನು ಸಂಪೂರ್ಣಗೊಳಿಸುವುದು ಮತ್ತು ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಅಂತಿಮ ಪಟ್ಟಿಯನ್ನು ಪ್ರಚುರಪಡಿಸುವುದು.

ಈ ಕೆಳಕಂಡ ಕೆಲಸಗಳ ನಿರ್ವಹಣೆಗಾಗಿ ಸಮೀಕ್ಷೆ ಸಮಿತಿಯನ್ನು ರಚಿಸುವುದು

1) ಕಾರ್ಯನಿರ್ವಹಣಾ ಏಜೆನ್ಸಿಗಳು ನಿರ್ವಹಿಸುವ ವಿವಿಧ ಕೆಲಸಗಳ ಉಸ್ತುವಾರಿ.
2) ಸಮೀಕ್ಷೆಗೆ ಸಂಬಂಧಪಟ್ಟ ಎಲ್ಲಾ ಇಲಾಖೆ, ಸಂಸ್ಥೆಗಳ ನಡುವೆ ಸಮನ್ವಯತೆ ಸಾಧಿಸುವುದು.
3) ಸಾರ್ವಜನಿಕರು, ಭಾಗೀದಾರರು ಸಮೀಕ್ಷೆಯ ಕೆಲಸಗಳಲ್ಲಿ ಭಾಗವಹಿಸುವುದನ್ನು ಖಾತ್ರಿ ಪಡಿಸುವುದು.

4) ಸಮೀಕ್ಷೆಯ ವಿವರಗಳನ್ನು ಸ್ಥಿರೀಕರಿಸುವುದು, ಊರ್ಜಿತಗೊಳಿಸುವುದು (Validation).

5) ಸರ್ವೆ ಸಮಿತಿಗಳನ್ನು ಅನುಬಂಧ–III ರಲ್ಲಿರುವಂತೆ ರಚಿಸಬೇಕು.

ಈ ಮೇಲ್ಕಂಡ ಮ್ಯಾನ್ಯುವೆಲ್ ಸ್ಕ್ಯಾವೆಂಜರ್ಸ್ ನಿರ್ಮೂಲನೆ ಮಾಡುವ ಸಲುವಾಗಿ ಸೂಕ್ತವಾದ ಕ್ರಮ ತೆಗೆದುಕೊಂಡಿದ್ದರ ಬಗ್ಗೆ ನಿದರ್ಶನವಿರುತ್ತದೆ.

3.3 ಸಾಮಾಜಿಕ ಸ್ಥಿತಿಗತಿ

ಸಫಾಯಿ ಕರ್ಮಚಾರಿಗಳ ಒಂದು ಮುಖ್ಯ ಲಕ್ಷಣವೆಂದರೆ ಇವರು ತಳವರ್ಗಕ್ಕೆ ಸೇರಿದವರಾಗಿರುತ್ತಾರೆ. ಸಾಮಾನ್ಯವಾಗಿ ಊರುಗಳಿಂದ ದೂರವೇ ಇದ್ದು ಇವರದೇ ಆದ ನಿಯಮ ನಿಬಂಧ ನೆಲೆಗಳಲ್ಲಿ ಜೀವಿಸಲು ಇಷ್ಟಪಡುತ್ತಾರೆ. ಇವರು ಆಚಾರ, ಸಂಪ್ರದಾಯಗಳಿಗೆ ಹೆಚ್ಚಿನ ಪ್ರಾಧಾನ್ಯತೆ ನೀಡುವರು. ಅಲ್ಲದೇ ಕೇರಿಯ ಎಲ್ಲರೂ ಒಂದೇ ಜೀವನ ವಿಧಾನವನ್ನು ನಡೆಸುವುದಕ್ಕೆ ಇಷ್ಟಪಡುತ್ತಾರೆ. ಆದ್ದರಿಂದ ಆಚಾರ–ವಿಚಾರಗಳು, ಸಂಪ್ರದಾಯಗಳು, ಭಾಷೆ, ಸಾಹಿತ್ಯ, ಆಹಾರ ಪದ್ಧತಿ ಸಹ ಭಿನ್ನವಾಗಿರುತ್ತದೆ.

ಅನ್ಯ ಉದ್ಯೋಗಗಳು ಮಾಡುವುದಕ್ಕೆ ಅವಕಾಶ ಇಲ್ಲದಿರುವುದು. ವಿದ್ಯೆಯಿಲ್ಲದಿರುವುದು. ಇನ್ನು ಕೆಲವು ಅತೀತ ಶಕ್ತಿಗಳನ್ನು ನಂಬಿಕೊಂಡು ಅದೇ ತಮ್ಮನ್ನು ರಕ್ಷಿಸುತ್ತಿರುವವೆಂದು ನಂಬಿರುವುದು ಮುಂತಾದವುಗಳಿಂದ ಇನ್ನೂ ಇವರು ಆರ್ಥಿಕವಾಗಿ, ಶೈಕ್ಷಣಿಕವಾಗಿ ತೀರ ಹಿಂದೆ ಬಿದ್ದಿದ್ದಾರೆ. ಈ ಲಕ್ಷಣಗಳು ಎಲ್ಲಾ ಕಡೆಗಳಲ್ಲಿ ವಾಸಿಸುವ ಸಫಾಯಿ ಕರ್ಮಚಾರಿ ಜನರಲ್ಲಿರುವ ಪ್ರಮುಖವಾಗಿ ಕಾಣುತ್ತೇವೆ. ಈ ಸಮುದಾಯಗಳ ಆಚಾರ–ವಿಚಾರಗಳು, ಸಂಪ್ರದಾಯಗಳು ಜೀವನ ವಿಧಾನ ಮುಖ್ಯವಾದ ಸಮಾಜದ ಜೊತೆ ಮಿಳಿತವಾಗದೆ ಪ್ರತ್ಯೇಕ ವೈಶಿಷ್ಟ್ಯವನ್ನು ಉಳಿಸಿಕೊಂಡಿರುವಂಥದ್ದಾಗಿರುತ್ತದೆ.

ಮಾನವ ಮೂಲತಃ ಸಂಘಜೀವಿ, ಸಮಾಜಜೀವಿ. ಆತನು ಏಕಾಂಗಿಯಾಗಿ ಜೀವಿಸುವುದು ಕಷ್ಟ ಸಾಧ್ಯದ ಮಾತು. ಹೀಗಾಗಿ ತಮ್ಮ ತಮ್ಮ ಜಾತಿಗಳಲ್ಲಿಯೇ ಒಂದೊಂದು ಸಮಾಜವನ್ನು ಕಟ್ಟಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಸಫಾಯಿ ಕರ್ಮಚಾರಿಗಳೂ ಕೂಡಾ ಹೀಗೆಯೇ ಸಮಾಜವನ್ನು ಕಟ್ಟಿಕೊಂಡಿದ್ದಾರೆ.

ಸಫಾಯಿ ಕರ್ಮಚಾರಿಯರಲ್ಲಿ ಸಾಮಾಜಿಕ ವ್ಯವಸ್ಥೆ ತುಂಬ ಅಚ್ಚುಕಟ್ಟಾಗಿದೆ. ಹೆಂಗಸರು ಗಂಡಸರು ಯಾರೇ ಆಗಿರಲಿ ನೀತಿಬಾಹಿರವಾದ ಕೆಲಸ ಮಾಡಿದರೆ ಅವರನ್ನು ನ್ಯಾಯಕ್ಕೆ ಗುರಿಪಡಿಸಿ ಸಮಾಜದಿಂದ ಬಹಿಷ್ಕರಿಸುತ್ತಾರೆ. ಇಲ್ಲವೇ ದಂಡವನ್ನು ವಿಧಿಸಲಾಗುತ್ತದೆ. ಸಮಾಜದಿಂದ ಬಹಿಷ್ಕರಿಸಿದವರನ್ನು ಕೇರಿಯ ಯಾವುದೇ ಶುಭಾಶುಭ ಕಾರ್ಯಗಳಲ್ಲಿ ಪಾಲ್ಗೊಳ್ಳುವುದಕ್ಕೆ ಇಲ್ಲವೇ ಅವರುಗಳಲ್ಲಿ ಹೋಗುವುದಕ್ಕೆ ಅವಕಾಶವನ್ನು ಕೊಡಲಾರರು. ಅಷ್ಟು ಕಟ್ಟುನಿಟ್ಟಾಗಿ ಸಾಮಾಜಿಕ ವ್ಯವಸ್ಥೆಯನ್ನು ಈ ಸಮುದಾಯವು ಪಾಲಿಸಿಕೊಂಡು ಬಂದಿರುತ್ತಾರೆ.

ಸಫಾಯಿ ಕರ್ಮಚಾರಿಗಳು ಯಾವುದೇ ಸಮಾಲೋಚನೆ ಸಭೆ, ಸಮಾರಂಭ, ನ್ಯಾಯ, ಪಂಚಾಯತಿ ನಿಗದಿಗಳ ವಿಚಾರಣೆಗಳು ನಡೆಯುವುದು ಗುಡಿ ಇಲ್ಲವೇ ಸಮಾಜ ಮಂದಿರದಲ್ಲಿ ಕೇರಿಯ ಹಿರಿಯರನ್ನು ಸಮಾಜದವರು, ಕಿರಿಯರು, ಪಂಚರು, ಮುಖಂಡರು ಎಂಬ ಮುಂತಾದ ಹೆಸರುಗಳಿಂದ ಕರೆಯಲಾಗುತ್ತದೆ. ಇವರುಗಳ ಮಾತನ್ನು ಕೇರಿಯ ಜನರು ಯಾರೂ ಮೀರುವುದಿಲ್ಲ. ಕೇರಿಯಲ್ಲಿ ನಡೆಯುವ ಜನನ-ಮರಣ, ಮದುವೆ, ದೇವರ ಜಾತ್ರೆ, ಉತ್ಸವಗಳೆಲ್ಲವೂ ಸಮಾಜದ ಹಿರಿಯರ ಆದೇಶದಂತೆ, ಅವರುಗಳ ಸಮಕ್ಷಮದಲ್ಲಿ ನಡೆಯುತ್ತವೆ. ಹೀಗಾಗಿ ಸಮಾಜದಲ್ಲಿಯ ಮುಖಂಡರಿಗೆ ಬಹಳ ಗೌರವ ಇರುತ್ತದೆ.

ಪ್ರಾಚೀನ ಕಾಲದಿಂದಲೂ ಸಫಾಯಿಕರ್ಮಿಗಳನ್ನು ಅಸ್ಪೃಶ್ಯರೆಂದು ಸವರ್ಣೀಯರು ಸಾಮಾಜಿಕವಾಗಿ ಕಾಣುತ್ತ ಬಂದಿದ್ದಾರೆ. ಇವರ ಮುಖದರ್ಶನ ಮಾಡುವುದು ಒತ್ತಟ್ಟಿಗಿರಲಿ, ಹೆಸರನ್ನು ಕೇಳಲು ಸಹ ಇಷ್ಟಪಡುವುದಿಲ್ಲ. ಸರಕಾರದ ಕಾನೂನಿನ' ಕ್ರಮದಿಂದ ಕಾಲಕ್ರಮೇಣ ಈ ವ್ಯವಸ್ಥೆಯಲ್ಲಿ ಕೆಲವಷ್ಟು ಬದಲಾವಣೆಯೇನೋ ಬಂದಿದೆ. ಆದರೆ ಇದು ಸಂಪೂರ್ಣವಾಗಿ ಎಲ್ಲ ಕಡೆಗಳಲ್ಲಿ ಆಗಬೇಕಾಗಿದೆ.

1. ಕೌಟುಂಬಿಕ ಜೀವನ

"ಗಂಡ ಹೆಂಡತಿ ಅವರ ಮಕ್ಕಳು, ಮೊಮ್ಮಕ್ಕಳು ಮತ್ತು ಅವರ ಆಶ್ರಿತರು ಹೀಗೆ ಹತ್ತಿರದ ಸಂಬಂಧಿಕರ ಒಂದು ಗುಂಪಿಗೆ ಕುಟುಂಬವೆನ್ನಬಹುದು. ಸಾಮಾನ್ಯವಾಗಿ ಕುಟುಂಬಕ್ಕೆ ಸೇರಿದ ಸದಸ್ಯರು ಒಂದೇ ಕಡೆ, ಒಂದೇ ಚಾವಣಿಯ ಕೆಳಗೆ, ಒಂದೇ ಒಲೆಯ ಮೇಲೆ ತಮ್ಮ ಅನ್ನವನ್ನು

ಬೇಯಿಸಿ ತಿನ್ನುತ್ತ ಒಂದೇ ಕೋಶದಿಂದ ಕುಟುಂಬದ ಖರ್ಚನ್ನು ನಿರ್ವಹಿಸುವರು."[14] ಕುಟುಂಬವು ಭಾವನಾತ್ಮಕ ಸಂಬಂಧಗಳ ಭಾಗವಾಗಿರುತ್ತದೆ.

ಕುಟುಂಬದ ಕೆಲಸ ಕಾರ್ಯಗಳು ಅದರ ಬಗೆಗಳು ಮತ್ತು ಅಲ್ಲಿ ನೆಲೆಸಿರುವ ಸದಸ್ಯರ ಸಂಖ್ಯೆಯನ್ನು ಅವಲಂಭಿಸಿರುತ್ತವೆ. "ಹಿಂದೆ ಸಮಾಜದ ಸದಸ್ಯರು ಅತ್ಯಂತ ಕಡಿಮೆ ಸಂಖ್ಯೆಯಲ್ಲಿ ಇದ್ದ ಕಾರಣ ಎಲ್ಲರೂ ಒಂದೇ ಮನೆಯಲ್ಲಿ ಕೂಡಿ ಇರುತ್ತಿದ್ದರು ಮತ್ತು ವಯಸ್ಸಿನ ಎಲ್ಲರೂ ವಂಶಪಾರಂಪರ್ಯದಿಂದ ಬಂದ ಉದ್ಯೋಗವನ್ನು ಮಾಡಿ ಕುಟುಂಬವನ್ನು ನಿರ್ವಹಿಸುತ್ತಿದ್ದರು. ಇದರಿಂದ ಕುಟುಂಬದ ಆರ್ಥಿಕ ಚಟುವಟಿಕೆಗೆ ನೆರವಾಗುತ್ತಿತ್ತು ಎಂದು ಸಮಾಜದ ಹಿರಿಯ ಕುಟುಂಬ ಸದಸ್ಯರು ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ."[15]

ಇಂದಿನ ಆಧುನಿಕತೆ, ನಗರೀಕರಣದಿಂದಾಗಿ ಅವಿಭಕ್ತ ಕುಟುಂಬಗಳ ಸಂಖ್ಯೆ ಕಡಿಮೆಯಾಗುತ್ತವೆ. ಹೀಗೆ ಕಾಲಕಾಲಕ್ಕೆ ಕುಟುಂಬದಲ್ಲಿಯ ಸದಸ್ಯರ ಸಂಖ್ಯೆ ಮತ್ತು ಕಾರ್ಯಗಳು ಬದಲಾಗುತ್ತ ಬಂದಿವೆ. ಸಫಾಯಿ ಕರ್ಮಚಾರಿ ಸಮಾಜದಲ್ಲಿಯೂ ವಿಭಕ್ತ ಕುಟುಂಬಗಳ ಸಂಖ್ಯೆ ಈಗ ಹೆಚ್ಚಾಗುತ್ತಿರುವುದು ಕಂಡುಬರುತ್ತದೆ. ಕುಟುಂಬಗಳ ಸಂಖ್ಯ ಹೆಚ್ಚಾಗಿವೆ ವಿನಃ ಅವರ ಆರ್ಥಿಕ ಸಂಪನ್ಮೂಲತೆಯಲ್ಲಿ ಅಂತಹ ಹೆಚ್ಚಿನ ಬದಲಾವಣೆಯನ್ನು ಕಾಣಲಾರೆವು. ಕುಟುಂಬವು ಯಾವ ರೀತಿಯದಿದ್ದರೂ, ಯಾವುದೇ ಕಾಲಕ್ಕೆ ಸೇರಿದ್ದರೂ ಅದು ತನ್ನದೇ ಆದ ಕಾರ್ಯಗಳನ್ನು ಹೊಂದಿದೆ. ಇವುಗಳಲ್ಲಿ ಮುಖ್ಯವಾಗಿ "(1) ವಂಶಾಭಿವೃದ್ಧಿ ಮತ್ತು ಮಕ್ಕಳ ಬೆಳವಣಿಗೆ (2) ಆರ್ಥಿಕ ಕಾರ್ಯಗಳು (3) ಧಾರ್ಮಿಕ ಕಾರ್ಯಗಳು (4) ಸಂಸ್ಕೃತಿಯ ವಿನಿಮಯ (5) ಸದಸ್ಯರ ಮೇಲೆ ನಿಯಂತ್ರಣ (6) ಸದಸ್ಯರ ಸಂರಕ್ಷಣೆ (7) ಸದಸ್ಯರ ದೈಹಿಕ ಮತ್ತು ಸಾಮಾಜಿಕ ಕಾರ್ಯಗಳನ್ನು ನಿರ್ವಹಿಸುತ್ತದೆ."[16] ಇದಕ್ಕೆ ಇನ್ನೂ ಅನೇಕ ಕಾರ್ಯಗಳನ್ನು ಸೇರಿಸಿ ದೊಡ್ಡ ಪಟ್ಟಿಯನ್ನು ಮಾಡಬಹುದಾದರೂ ಇಂದು ಅನೇಕ ಕುಟುಂಬಗಳು ಕುಟುಂಬದ ಕ್ರಿಯಾವಲಯದಿಂದ ಹೊರಗೆ ನೆಲೆಸುತ್ತಲಿರುವುದರಿಂದ ಅವು ಮಹತ್ವವನ್ನು ಕಳೆದುಕೊಂಡಿವೆ. ಆದರೆ ಅತ್ಯಂತ ಅವಶ್ಯಕವಾದ ಮತ್ತು ತಾನೇ ಮಾಡಬೇಕಾದ ಕಾರ್ಯಗಳನ್ನು ಮಾತ್ರ ಅದು ಉಳಿಸಿಕೊಂಡಿದೆ.

ಹಿಂದು ಕುಟುಂಬ ಪದ್ಧತಿಯಂತೆ ಸಫಾಯಿ ಕರ್ಮಚಾರಿ ಕೌಟುಂಬಿಕ ವ್ಯವಸ್ಥೆಯೂ ಪಿತೃಪ್ರಧಾನ ಕುಟುಂಬವನ್ನು ಒಳಗೊಂಡಿದೆ. ಸಫಾಯಿಗಳ ಕುಟುಂಬದಲ್ಲಿ ಮನೆಯ ಹಿರಿಯನಿಗೆ

ಅತ್ಯಂತ ಮಹತ್ವದ ಸ್ಥಾನವಿದೆ. ಕುಟುಂಬದ ಎಲ್ಲ ಆಗುಹೋಗಗಳಿಗೆ ಅವನ ನಿರ್ಧಾರವೇ ಕೊನೆಯದಾಗಿರುತ್ತದೆ. ಹೀಗಿದ್ದೂ ಕುಟುಂಬದಲ್ಲಿ ಆತನು ಯಾವುದೇ ನಿರ್ಧಾರಗಳನ್ನು ತೆಗೆದುಕೊಳ್ಳುವಾಗಲೂ ಸದರ ಅಭಿಪ್ರಾಯಗಳಿಗೂ ಗೌರವಿಸಲಾಗುತ್ತದೆ.

ಬಂಜೆ ಇದ್ದವರಿಗೆ ಸಮಾಜದಲ್ಲಿ ಸೂಕ್ತ ಸ್ಥಾನವಿಲ್ಲ.ಅವರಲ್ಲಿ ಯಾವುದೋ ಹಿಂದಿನ ಜನ್ಮದ ಕರ್ಮ ಪಾಪದಿಂದ ಬಂಜೆತನ ಬಂದಿದೆ ಎಂಬ ನಂಬಿಕೆಯೂ ಇವರಲ್ಲಿ ಕಾಣುತ್ತೇವೆ. ಹಿಂದೂ ಧರ್ಮದಂತೆ ಸ್ವರ್ಗ ಪ್ರಾಪ್ತವಾಗಲು, ಕನ್ಯಾದಾನ ಮಾಡಲು, ವಂಶಾಭಿವೃದ್ಧಿಯಾಗಲು ತಂದೆ ತಾಯಿಗಳಾಗುವುದು ಅಗತ್ಯ. ಇದೇ ರೀತಿಯಾಗಿ ದಂಪತಿಗಳಿಗೆ ಮಗುವಾದರೆ ಸಾಮಾಜಿಕವಾಗಿ ಅವರ ಗೌರವ ಹೆಚ್ಚು ಹಕ್ಕುಗಳೂ ಸಿಗುತ್ತವೆ. ಇಲ್ಲಿಯವರೆಗೆ ಗಂಡ-ಹೆಂಡಿರಾಗಿದ್ದ ದಂಪತಿಗಳು ಆ ನಂತರ ತಂದೆ-ತಾಯಿಗಳೂ ಆಗುತ್ತಾರೆ. ಅಲ್ಲದೆ ತಮ್ಮ ತಂದೆ ತಾಯಿಯರನ್ನು ಅಜ್ಜ, ಅಜ್ಜಿಯರನ್ನಾಗಿ ಮಾಡುತ್ತಾರೆ. ಇದರಿಂದ ಚಿಕ್ಕಪ್ಪ (ಕಾಕಾ) ಚಿಕ್ಕಮ್ಮ (ಕಾಕೀ) ದೊಡ್ಡಪ್ಪ (ಬಾಬಾ) ದೊಡ್ಡಮ್ಮ, ಸೋದರತ್ತೆ, ಸೋದರ ಮಾವ ಹೀಗೆ ಹೊಸ ಹೊಸ ಸಂಬಂಧಿಕರ ಸರಣಿಯೇ ಏರ್ಪಡುತ್ತದೆ. ಇವೆಲ್ಲ ಬಂಧುತ್ವಕ್ಕೆ ಮಗುವಿನ ಜನನವೇ ಕಾರಣವೆಂದು ಈ ಜನಾಂಗದಲ್ಲಿದೆ.

ಪ್ರತಿ ಸಮಾಜಕ್ಕೂ ತನ್ನದೇ ಆದ ಸಂಸ್ಕೃತಿ ಇರುತ್ತದೆ ಎಂಬುದಾಗಿ ಹಿಂದೆ ಹೇಳಲಾಗಿದೆ. ಅಂತೆಯೇ ಸಫಾಯಿಗಳಿಗೂ ಅವರದೇ ಆದ ಸಂಸ್ಕೃತಿ ಇದೆ. ಇದನ್ನು ಇವರು ಸರಿಯಾಗಿ ಪಾಲಿಸಿಕೊಂಡು, ಅಭಿವೃದ್ಧಿಪಡಿಸಿಕೊಂಡು ಬಂದಿದ್ದಾರೆ. "ಸಂಸ್ಕೃತಿಯು ಸಮಾಜದ ಸೃಷ್ಟಿ ಮತ್ತು ಅಂಗವಾದರೂ ಇದು ಸಮಾಜವನ್ನು ನಿಯಂತ್ರಿಸುವ ಹೊಣೆಯನ್ನು ಹೊಂದಿರುತ್ತದೆ. ದಿನನಿತ್ಯ ಜೀವನದ ಕೆಲವು ಕಾರ್ಯಗಳು ಜನರಲ್ಲಿನ ಆಚಾರ ವಿಚಾರಗಳು ಮೌಲ್ಯಗಳು ಎಲ್ಲವೂ ಈ ಸಂಸ್ಕೃತಿಯ ಕಕ್ಷೆಯಲ್ಲಿ ಬರುತ್ತವೆ."[17] ಸಫಾಯಿ ಕರ್ಮಚಾರಿಗಳಲ್ಲಿ ತಮ್ಮ ಸಂಸ್ಕೃತಿಯನ್ನು ರಕ್ಷಿಸುವ ಮತ್ತು ಅಭಿವೃದ್ಧಿಗೊಳಿಸುವ ಸಾಮರ್ಥ್ಯವನ್ನು ಕಾಣುವೆವು.

ಕುಟುಂಬದ ಹಿರಿಯ ತನ್ನದೆನ್ನುವ ವೃತ್ತಿ, ಧರ್ಮ, ಆಚಾರ-ವಿಚಾರ, ಮೌಲ್ಯ, ವಿದ್ಯೆ, ನಡೆನುಡಿ, ಭಾಷೆ ಹೀಗೆ ಎಲ್ಲವನ್ನು ತನ್ನ ಸದಸ್ಯರಿಗೆ ಕಲಿಸಿಕೊಡುವುದರಿಂದ ತನ್ನ ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ಅರಿವು ಮೂಡಿಸುವುದು ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ತನ್ನ ಸಂಸ್ಕೃತಿಯನ್ನು ತಿಳಿಸಿಕೊಡುವ ಹೊಣೆ ನಂತರ ಬರಬಹುದಾದ ವಿಚಾರಗಳನ್ನು

ಸರಿಪಡಿಸಿಕೊಂಡು ತನ್ನಲ್ಲಿ ಅಳವಡಿಸಿಕೊಳ್ಳುವಂತೆ ಮಾಡುವ ಜವಾಬ್ದಾರಿ ಪ್ರತಿ ಕುಟುಂಬಕ್ಕೂ ಸೇರಿರುತ್ತದೆ.


ಕುಟುಂಬದ ಮತ್ತೊಂದು ಮುಖ್ಯ ಕರ್ತವ್ಯವೆಂದರೆ, ಅದರ ಆರ್ಥಿಕ ಕಾರ್ಯ. ಪ್ರತಿ ಕುಟುಂಬವು ತಾನು ವಾಸವಾಗಿರುವ ಪರಿಸರ, ವಾತಾವರಣ ಮುಂತಾದವುಗಳಿಗೆ ಅನುಗುಣವಾಗಿ ಮುಖ್ಯ ಕಸುಬನ್ನು ಮತ್ತು ಒಂದು ಅಥವಾ ಅನೇಕ ಉಪಕಸುಬುಗಳನ್ನು ಹೊಂದಿರುತ್ತವೆ. ಇವೆಲ್ಲವೂ ಆಯಾ ಸಾಮಾಜಿಕ ಪರಿಸರವನ್ನು ಅವಲಂಬಿಸಿರುತ್ತದೆ. ಸಫಾಯಿಗಳು ಮುಖ್ಯ ಉದ್ಯೋಗವನ್ನಾಗಿ ಮಲ ಸ್ವಚ್ಛಗೊಳಿಸುವ ಕೆಲಸವನ್ನು ಹೊಂದಿರುವರು. ಉಪಕಸುಬಾಗಿ ಸಣ್ಣಪುಟ್ಟ ಚಾಕರಿ, ಉದ್ಯೋಗಗಳನ್ನು ಹೊಂದಿ ತಮ್ಮ ಆರ್ಥಿಕ ಅಡಚಣೆಗಳನ್ನು ಸರಿಪಡಿಸಿಕೊಳ್ಳುವರು. ಅಲ್ಲದೆ ಪ್ರತಿ ಸಮಾಜವೂ ಇಂತಹ ವೃತ್ತಿಯನ್ನು ಇಂತಹ ಗುಂಪಿಗೆ ಸೇರಿದವರೇ ಮಾಡಬೇಕೆಂಬ ನಿಯಮವಿರುತ್ತದೆ. ಹೀಗೆ ಮಾಡುವುದರಿಂದ ಸಮಾಜದಲ್ಲಿ ಬೇಕಾದ ಕಾರ್ಯಗಳು ತಮಗೆ ತಾವೇ ಸುಸೂತ್ರವಾಗಿ ನಡೆಯುತ್ತವೆ. ಇದರಿಂದ ಸಮಾಜದಲ್ಲಿ ಆರ್ಥಿಕ ಭದ್ರತೆಯೂ ಬರುತ್ತದೆ. ಮತ್ತು ಎಲ್ಲೂ ಅಭಾವ ಪರಸ್ಥಿತಿ ಬರುವುದಿಲ್ಲ. ಪ್ರತಿಯೊಬ್ಬರು ತಮ್ಮ ಕುಲ ಅಥವಾ ಕುಟುಂಬದ ವೃತ್ತಿಯನ್ನು ಅನುಸರಿಸುವುದು, ಅದನ್ನೇ ಉತ್ತಮವಾಗಿ ಮಾಡುವುದು ತಮ್ಮ ಕರ್ತವ್ಯವೆಂಬುದರ ಜೊತಗೆ ಅದನ್ನು ಧರ್ಮವೆಂದೇ ಪರಿಗಣಿಸುತ್ತಾರೆ. ಇದನ್ನು ಬಿಡುವುದು, ಬೇರೆಯವರ ವೃತ್ತಿಯನ್ನು ಅನುಸರಿಸುವುದು ಅಧರ್ಮವಾಗುತ್ತದೆ. ಈ ಎಲ್ಲಾ ಹೊಣೆಯು ಕುಟುಂಬಕ್ಕೆ ಸೇರಿರುತ್ತದೆ. ತನ್ನ ಸದಸ್ಯರನ್ನು ಕಾರ್ಯನಿರತರಾಗುವಂತೆ ಮಾಡಲು ತಮ್ಮ ವೃತ್ತಿಯಲ್ಲಿ ಪರಿಣಿತಿ ಪಡೆಯಲು ಕುಟುಂಬವು ನೇರವಾಗಿ ಸಮಾಜಕ್ಕೆ ಸಹಾಯ ಮಾಡುತ್ತದೆ.

ವ್ಯಕ್ತಿಗೆ ತನ್ನ ಕರ್ತವ್ಯ, ಹೊಣೆಗಾರಿಕೆ, ನಡವಳಿಕೆ, ಕಾನೂನು ಮುಂತಾದವುಗಳನ್ನು ತಿಳಿಯ ಹೇಳಿ ಅವನು ತಪ್ಪಿದಲ್ಲಿ ಕೂಡಲೇ ಅವನನ್ನು ತಿದ್ದಿ, ಸಾಧ್ಯವಾದರೆ ಶಿಕ್ಷಿಸುವ ಜವಾಬ್ದಾರಿ ಕುಟುಂಬಕ್ಕೆ ಸೇರಿರುತ್ತದೆ. ಏಕೆಂದರೆ ಕುಟುಂಬದ ಯಾವುದೇ ಸದಸ್ಯನಾಗಲಿ ಈ ತಪ್ಪನ್ನು ಮಾಡಿದರೆ ಅದು ಇಡೀ ಕುಟುಂಬದ ಮೇಲೆ ಬರತ್ತದೆ. ಆದ್ದರಿಂದ ತನ್ನ ಸ್ಥಾನಮಾನ ಮತ್ತು ಘನತೆಯನ್ನು ಕಾಪಾಡಿಕೊಳ್ಳಲು ಕುಟುಂಬವು ತನ್ನ ಸದಸ್ಯರ ಮೇಲೆ ನಿಯಂತ್ರಣವನ್ನಿಟ್ಟುಕೊಂಡು ಅವರು ಸರಿಯಾಗಿ ನಡೆದುಕೊಳ್ಳುವಂತೆ ಮಾಡುವರು. ಇದರಿಂದ ಇಡೀ ಸಮಾಜಕ್ಕೆ ಒಳ್ಳೆಯದಾಗುತ್ತದೆ. ಕುಟುಂಬವು ತನ್ನ ಸದಸ್ಯರ ಮೇಲೆ ನಿಯಂತ್ರಣವನ್ನು ಹೊಂದುವುದರ ಜೊತೆಗೆ ಇತರರಿಂದ ಅನೇಕ ರೀತಿಗಳಲ್ಲಿ ರಕ್ಷಿಸುತ್ತದೆ ಎಂದು ಹೇಳಬಹುದು.

ಕೋಷ್ಟಕ–5

ಅಧ್ಯಯನ ಕ್ಷೇತ್ರದ ಸಫಾಯಿ ಕರ್ಮಚಾರಿ ಕುಟುಂಬ ಲಿಂಗವಾರು ಜನಸಂಖ್ಯೆ 2001ರ ಜನಗಣತಿ

ಕ್ರ. ಸಂ.	ನಗರ/ತಾಲೂಕುಗಳು	ಕುಟುಂಬಗಳು	ಗಂಡು	ಹೆಣ್ಣು	ಒಟ್ಟು	ಶೇಕಡಾವಾರು
1	ಗುಲಬರ್ಗಾ	270	753	706	1459	19.37%
2	ಆಳಂದ	219	636	569	1205	15.95%
3	ಅಫಜಲ್‌ಪುರ	176	496	420	916	12.16%
4	ಚಿತ್ತಾಪುರ	156	452	418	870	11.54%
5	ಚಿಂಚೋಳಿ	146	333	275	608	08.07%
6	ಜೇವರಗಿ	164	426	362	788	10.78%
7	ಸೇಡಂ	152	450	382	832	11.28%



ಪ್ರಸ್ತುತ ಅಧ್ಯಯನ ಕ್ಷೇತ್ರದ ಏಳು ತಾಲೂಕುಗಳ ಕುಟುಂಬಗಳ ಲಿಂಗವಾರು ಜನಸಂಖ್ಯೆಯನ್ನು ಕುರಿತು ಸಮೀಕ್ಷಿಸಲಾದ ಅಂಕಿ ಸಂಖ್ಯೆಗಳ ವಿವರವನ್ನು ಈ ಮೇಲಿನ ಕೋಷ್ಟದಲ್ಲಿ ಪಟ್ಟಿ ಮಾಡಲಾಗಿದೆ.

ಮೇಲಿನ ಕೋಷ್ಟಕವನ್ನು ನೋಡಿದಾಗ, ಸಫಾಯಿ ಕರ್ಮಚಾರಿ ಸಮೂದಾಯದ ಕುಟುಂಬಗಳ ತಾಲೂಕವಾರು ಲಿಂಗವಾರು ಜನಸಂಖ್ಯೆಯನ್ನು ಅವಲೋಕಿಸಲಾಗಿ, ಶೇಕಡಾ 53.06% (3546) ಪುರುಷರು ಹಾಗೂ ಶೇಕಡಾ 46.94% (3132) ಸ್ತ್ರೀಯರು ಇದ್ದಾರೆ.

ತಾಲೂಕವಾರು ನೋಡಿದಾಗ ಅತಿಹೆಚ್ಚು ಅಂದರೆ ಗುಲಬರ್ಗಾ ತಾಲೂಕ (ಅದರಲ್ಲಿ ವಿಶೇಷವಾಗಿ ನಗರ)ದಲ್ಲಿ 270 ಕುಟುಂಬಗಳಿವೆ. ಅದರಲ್ಲಿ 753 (9.99%) ಪುರುಷರು, 706 (9.39%) ಸ್ತ್ರೀಯರು ಇರುವರು ಅತಿ ಕಡಿಮೆ ಕುಟುಂಬಗಳು 146 ಚಿಂಚೋಳಿ ತಾಲೂಕಿನಲ್ಲಿರುವವು ಅವರುಗಳಲ್ಲಿ ಪುರುಷ 333 (4.49%) ಹಾಗೂ 275 (3.65%) ಸ್ತ್ರೀಯರು ಇರುವರು. ನಂತರ ಕ್ರಮವಾಗಿ ಆಳಂದನಲ್ಲಿ 219 ಕುಟುಂಬಗಳು, ಅವರಲ್ಲಿ 636 ಪುರುಷರು, 569 ಸ್ತ್ರೀಯರು (15.99%) ಅಫಜಲ್‌ಪುರನಲ್ಲಿ 176 ಕುಟುಂಬಗಳು, ಅವರಲ್ಲಿ 496 ಪುರುಷರು, 420 ಸ್ತ್ರೀಯರು (12.16%) ಚಿತ್ತಾಪುರನಲ್ಲಿ 156 ಕುಟುಂಬಗಳು, ಅವರಲ್ಲಿ 452 ಪುರುಷರು, 418 ಸ್ತ್ರೀಯರು (11.54%) ಜೇವರಗಿಯಲಿ 164 ಕುಟುಂಬಗಳು, ಅವರಲ್ಲಿ ಪುರುಷ 426, ಸ್ತ್ರೀಯರು 362 (10.78%) ಸೇಡಂನಲ್ಲಿ 152 ಕುಟುಂಬಗಳು ಅವರಲ್ಲಿ ಪುರುಷ 450, ಸ್ತ್ರೀಯರು 382 (11.28%) ನ್ನು ಹೊಂದಿದೆ. ಸಫಾಯಿ ಕರ್ಮಚಾರಿ ಸಮುದಾಯದ ಜನಸಂಖ್ಯೆಯು ಇತರೆ ಜಿಲ್ಲೆ ಹಾಗೂ ತಾಲೂಕುಗಳಲ್ಲಿ ಹೆಚ್ಚು ಕಡಿಮೆ ಇರಬಹುದು. ಆದರೆ ಅಧ್ಯಯನ ಕ್ಷೇತ್ರಕ್ಕೆ ಆಯ್ಕೆ ಮಾಡಿಕೊಂಡ ಗುಲಬರ್ಗಾ ಜಿಲ್ಲೆಯ ತಾಲೂಕುಗಳಲ್ಲಿ ಇವರ ಜನಸಂಖ್ಯೆ ಹಾಗೂ ಕುಟುಂಬ ಸಂಖ್ಯೆಯ ಪ್ರಮಾಣವನ್ನು ಲೆಕ್ಕಿಸಲಾಗಿದೆ.

2. ಕುಟುಂಬದ ಸ್ವರೂಪ

ಸಾಮಾನ್ಯವಾಗಿ ಕೌಟಂಬಿಕ ಪದ್ಧತಿಯನ್ನು ಅವಿಭಕ್ತ ಹಾಗೂ ವಿಭಕ್ತ ಅಥವಾ ಪಿತೃ ಪ್ರಧಾನ ಹಾಗೂ ಮಾತೃ ಪ್ರಧಾನ ಕುಟುಂಬಗಳೆಂದು ವರ್ಗೀಕರಿಸಲಾಗಿದೆ. ಸಫಾಯಿ ಕರ್ಮಚಾರಿ ಸಮುದಾಯದಲ್ಲಿ ಅವಿಭಕ್ತ ಕುಟುಂಬ ಪದ್ಧತಿ ತಾಲೂಕು ಪ್ರದೇಶಗಳಲ್ಲಿ ಹೆಚ್ಚಾಗಿ ಕಂಡು ಬರುತ್ತದೆ.


ಅದೇ ಪರಿಸ್ಥಿತಿಯು ಗುಲಬರ್ಗಾ ನಗರದಲ್ಲಿ ಈಗ ಕಾಣುವುದು ಕಷ್ಟ ಸಾಧ್ಯ. ಇದಕ್ಕೆ ಅದರದೇ ಆದ ಹಲವು ಕಾರಣಗಳಿವೆ. ಬಹಳ ಮುಖ್ಯವಾಗಿ ನಗರ ಪ್ರದೇಶದಲ್ಲಿ ಸ್ಥಳಾವಕಾಶ ಅತ್ಯಂತ ಕಡಿಮೆ ಇರುವುದು ಅಲ್ಲದೆ, ಉದ್ಯೋಗವೂ ಸಹ ಅವಿಭಕ್ತ ಕುಟುಂಬಗಳು ವಿಭಕ್ತ ಕುಟುಂಬಗಳಾಗುವುದಕ್ಕೂ ಕಾರಣವಾಗಿರುತ್ತದೆ. ಮತ್ತು ಜಾಗತೀಕರಣ, ಪಾಶ್ಚಾತೀಕರಣ ಸಾಕಷ್ಟು ಸಾಕಷ್ಟು ಬದಲಾವಣೆಗಳಿಗೆ ಕಾರಣವಾಗಿವೆ.

ವಿಭಕ್ತ ಕುಟುಂಬ ಗಂಡ ಹೆಂಡತಿ ಮಕ್ಕಳನ್ನು ಒಳಗೊಂಡ ಜೈವಿಕ ಸಮೂಹವಾಗಿವೆ. ಕುಟುಂಬದಲ್ಲಿಯೆ ಔಪಚಾರಿಕ ಅಧಿಕಾರ ವ್ಯವಸ್ಥೆಯನ್ನು ಧರಿಸಿ ಮಾತೃ ಪ್ರಧಾನ ಮತ್ತು ಪಿತೃ ಪ್ರಧಾನ ಕುಟುಂಬವೆಂತಲೂ ವರ್ಗೀಕರಿಸಲಾಗಿದೆ. ಸಫಾಯಿ ಕರ್ಮಚಾರಿ ಸಮುದಾಯದಲ್ಲಿ ಪಿತೃ ಪ್ರಧಾನ (96.97%) ಕುಟುಂಬಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಕಾಣುತ್ತೇವೆ. ಕುಟುಂಬದ ನಿರ್ವಹಣೆ ಮಾಡುವುದು ಪಿತೃವಿನ ಜವಾಬ್ದಾರಿಯಾಗಿದೆ.

ಅಧ್ಯಯನ ಕ್ಷೇತ್ರದ ಕುಟುಂಬದ ಗಾತ್ರವನ್ನಾಧರಿಸಿ ಸಂಗ್ರಹಿಸಿದ ದತ್ತಾಂಶಗಳನ್ನು ಐದು ಗುಂಪುಗಳಲ್ಲಿ ವಿಂಗಡಿಸಲಾಗಿದೆ. ಅವುಗಳ ಸಂಖ್ಯೆ ಹಾಗೂ ಪ್ರತಿಶತ ಪ್ರಮಾಣವನ್ನು ಈ ಕೆಳಗಿನ ಪಟ್ಟಿಯಲ್ಲಿ ವಿವರಿಸಲಾಗಿದೆ.

ಕ್ರಸಂ.	ಕುಟುಂಬದ ಸಂಖ್ಯೆಯ ಗಾತ್ರ	ಕುಟುಂಬಗಳ ಸಂಖ್ಯೆ	ಪ್ರತಿಶತ
1	3 ಕ್ಕಿಂತ ಕಡಿಮೆ ಸದಸ್ಯರು	210	14.39%
2	4 ರಿಂದ 3 ಸದಸ್ಯರು	323	22.14%
3	7 ರಿಂದ 9 ಸದಸ್ಯರು	336	25.09%
4	10 ರಿಂದ 12 ಸದಸ್ಯರು	127	9.04%
5	12 ಕ್ಕೂ ಮೇಲ್ಪಟ್ಟ ಸದಸ್ಯರು	105	7.39%
	ಒಟ್ಟು	**1459**	**100%**

ಕೋಷ್ಟಕ–5




ಮೇಲಿನ ಕೋಷ್ಟಕದಿಂದ ಹೊರ ಬಂದ ಸಂಗತಿಗಳನ್ನು ಅವಲೋಕಿಸಲಾಗಿದೆ. ಸಮೂದಾಯದ ಕುಟುಂಬದ ಗಾತ್ರವು ಅತಿ ಹೆಚ್ಚಿನ ಪ್ರಮಾಣದಲ್ಲಿ ಅಂದರೆ 25.09% (336) ಹೊಂದಿದ್ದು 7 ರಿಂದ 9 ಸದಸ್ಯರ ಗಾತ್ರದ್ದಾಗಿದೆ. ಹಾಗೂ 3 ಕ್ಕಿಂತ ಕಡಿಮೆ ಸದಸ್ಯರ ಕುಟುಂಬದ ಗಾತ್ರ 14.39% (210) ಆಗಿದೆ. ನಂತರ ಕ್ರಮವಾಗಿ 22.14% (295) ಕುಟುಂಬದ ಸದಸ್ಯರ ಸಂಖ್ಯೆ 4 ರಿಂದ 6 9.04% (127) ಕುಟುಂಬವು 10 ರಿಂದ 12 ಸದಸ್ಯರು ಹಾಗೂ 7.39% 12ಕ್ಕೂ ಮೇಲ್ಪಟ್ಟ ಸದಸ್ಯರು ಇರುವ ಕುಟುಂಬಗಳಾಗಿವೆ ಇಲ್ಲಿ ಪ್ರದೇಶಿಕ ಕುಟುಂಬಗಳಲ್ಲಿ ಹೆಚ್ಚಿನ ಸದಸ್ಯರು ಒಂದೇ ಕುಟುಂಬದಲ್ಲಿ ವಾಸಿಸುತ್ತಿರುವುದು ಕಂಡುಬರುತ್ತದೆ.


ಅಧ್ಯಯನ ಕ್ಷೇತ್ರದಲ್ಲಿ ಸಮುದಾಯದ ಕುಟುಂಬದ ಸದಸ್ಯರ ವಯೋಮಾನ ಕುರಿತು ಇಲ್ಲಿ ವಿವರಿಸಿಲಾಗಿದೆ.

ಕೋಷ್ಟಕ–6

ಕ್ರಸಂ.	ವಯೋ ಗುಂಪು ವರ್ಷಗಳಲ್ಲಿ	ಹಂಡು%	ಹೆಣ್ಣು%	ಪ್ರತಿಶತ್
1	0 ರಿಂದ 6	435 (5.77)	381 (5.06)	816 (10.83)
2	7 ರಿಂದ 17	834 (11.07)	743 (9.86)	1577 (20.93)
3	18 ರಿಂದ 40	1765 (23.41)	1582 (20.99)	3347 (44.43)
4	41 ರಿಂದ 60	751 (9.97)	663 (8.80)	1414 (18.770
5	61 ರ ಮೇಲ್ಪಟ್ಟು	212 (2.81)	168 (2.23)	380 (5.04)
	ಒಟ್ಟು	**3997 (53.16)**	**3537 (46.94)**	**7534 (100%)**



ಕ್ರ.ಸಂ.	ವಯೋ ಗುಂಪು	ಪ್ರತಿಶತ್
1	0 ರಿಂದ 4	6.58%
2	5 ರಿಂದ 17	25.18%
3	18 ರಿಂದ 40	44.43%
4	41 ರಿಂದ 60	18.77%
5	61 ರ ಮೇಲ್ಪಟ್ಟು	5.04%



ಸಫಾಯಿ ಕರ್ಮಚಾರಿ ಸಮುದಾಯದವರಲ್ಲಿ ಶೇಕಡಾ 44.43% (3347) ಸದಸ್ಯರನ್ನೊಳಗೊಂಡು 18 ರಿಂದ 40 ರ ವರೆಗಿನ ವಯೋಗುಂಪುಗಳನ್ನು ಹೊಂದಿದ್ದು, ಶೇಕಡಾ 5.04% (380) 61 ವರ್ಷಕ್ಕಿಂತ ಮೇಲ್ಪಟ್ಟ ವಯೋಮಾನದವರು ಅತ್ಯಂತ ಕಡಿಮೆ ಪ್ರಮಾಣದಲ್ಲಿದ್ದಿರುವುದು ಕಾಣುತ್ತವೆ. ಸಫಾಯಿ ಕರ್ಮಚಾರಿಗಳು ಅತ್ಯಂತ ಗಲೀಜು, ಅನಾರೋಗ್ಯರ ಸ್ಥಳದಲ್ಲಿ ಕೆಲಸ ಮಾಡುವವರಾಗಿದ್ದರಿಂದ ಬೇಗನೆ ಅನಾರೋಗ್ಯಕ್ಕೆ ತುತ್ತಾಗುತ್ತಾರೆ. ಇದು ಅಲ್ಲದೆ ಅಪೌಷ್ಟಿಕ ಆಹಾರ ಸೇವನೆಯೂ ಕೂಡ ಅವರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುವುದು ಹಿಗಾಗಿ ಇವರಲ್ಲಿ ಚರ್ಮರೋಗ ಶ್ವಾಸಕೋಶ ಕ್ಯಾನ್ಸರ್, ಕರಳು ಬೇನೆಗಳಂತಹ ಮಾರಕ ರೋಗಗಳಿಗೆ ತುತ್ತಾಗಿ ಅವರಲ್ಲಿ ಮರಣ ಪ್ರಮಾಣ ಹೆಚ್ಚಾಗಿರುತ್ತದೆ.

ಪ್ರಸ್ತುತ ಅಧ್ಯಯನದಲ್ಲಿ ಅತ್ಯಂತ ಹೆಚ್ಚು ಸಂಖ್ಯೆ ಶೇಕಡಾ 44.43% ವಯೋಮಾನ 18 ರಿಂದ 40 ವರ್ಷಗಳಾಗಿರುವುದರಿಂದ ಇದು ಉತ್ಪಾದನಾ ಸಾಮರ್ಥ್ಯ ಹೊಂದಿರುವ ಗುಂಪಾಗಿವೆ. ಪರಿಣಾಮವಾಗಿ ಕುಟುಂಬದ ಆದಾಯವನ್ನು ಹೆಚ್ಚಿಸಿ ಮೂಲಭೂತ ಸೌಲಭ್ಯಗಳನ್ನು ಪಡೆದುಕೊಳ್ಳುವ ಜೀವನ ಶೈಲಿಯನ್ನು ಹೊಂದಲು ಈ ಸಾಮರ್ಥ್ಯ ಸಹಾಯಕವಾಗಿರುವುದನ್ನು ನಿಖರವಾಗಿ ಗುರುತಿಸಲಾಗಿದೆ. 0 ದಿಂದ 6 ವರ್ಷ ವಯೋಮಾನ ಶೇಕಡಾ 10.83% ಹಾಗೂ 61 ವರ್ಷಕ್ಕಿಂತಲೂ ಮೇಲ್ಪಟ್ಟ ವಯೋಮಾನ ಶೇಕಡಾ 5.04% ಅತ್ಯಂತ ಕಡಿಮೆ ಪ್ರಮಾಣದಲ್ಲಿ ಇದ್ದು ಇವರು ಉತ್ಪಾದನಾ ಸಾಮರ್ಥ್ಯ ಹೊಂದಿರುವುದು ಕಂಡು ಬರುವುದಿಲ್ಲ. ಆದರೂ ಈ ಸಮುದಾಯವು ಭಾರತೀಯ ಸಾಂಪ್ರಾದಾಯಕ ಕೌಟುಂಬಿಕ ಮೌಲ್ಯಗಳನ್ನು ಗೌರವಿಸುವ ಹಾಗೂ ಕಿರಿಯರನ್ನು ಪೋಷಿಸುವ ಜವಾಬ್ದಾರಿ ಹೊಂದಿರುವುದು ಈ ಕುಟುಂಬಗಳ ಸಹಜೀವನದಿಂದ ಕಾಣುತ್ತೇವೆ.

2. ವಿವಾಹ ಪದ್ಧತಿ

ಅ) ಏಕಪತ್ನಿ ವಿವಾಹ

ಏಕಪತ್ನಿ ವಿವಾಹವು ಈ ಜನರಲ್ಲಿ ಅತಿ ಮುಖ್ಯ ಹಾಗೂ ಮೌಲ್ಯಯುತ ವಿವಾಹ ಪದ್ಧತಿಯಾಗಿದೆ. ಸಾಮಾನ್ಯವಾಗಿ ಬಹುತೇಕ ಪುರುಷರು ಏಕಪತ್ನಿವ್ರತಸ್ಥರಾಗಿರುತ್ತಾರೆ. ಏಕಪತ್ನಿ ವಿವಾಹ ಪದ್ಧತಿಯು ಈ ಸಮುದಾಯದಲ್ಲಿ ಹಿಂದಿನಿಂದಲೂ ನಡೆದು ಬಂದಿದೆ. ಈ ಪದ್ಧತಿಯ ವಿವಾಹದಲ್ಲಿ ಗಂಡ ಹೆಂಡತಿಯರ ನಡುವೆ ಸಹಬಾಳ್ವೆ ಇರುತ್ತದೆ ಎಂಬ ನಂಬಿಕೆ ಇದೆ. ಸಂಸಾರದಲ್ಲಿ ಹೆಚ್ಚಾಗಿ ಕಲಹಗಳಾಗಲೀ, ಅಶಾಂತಿಯಾಗಲೀ ಕಂಡುಬರದೆ ಇರುವುದರಿಂದ ಈ ಏಕಪತ್ನಿ ವಿವಾಹ ಪದ್ಧತಿ ಜನಪ್ರಿಯ ವಿವಾಹ ಪದ್ಧತಿಯಾಗಿದೆ.

ಆ) ಬಹುಪತ್ನಿ ವಿವಾಹ

ಹೆಚ್ಚಾಗಿ ಏಕಪತ್ನಿ ವಿವಾಹ ಪದ್ಧತಿ ಆಚರಣೆಯಲ್ಲಿದೆಯಾದರೂ ಅಲ್ಲಲ್ಲಿ ಬಹುಪತ್ನಿ ವಿವಾಹವು ನಡೆದ ನಿದರ್ಶನಗಳು ಈ ಸಮುದಾಯದಲ್ಲಿ ಕಂಡುಬರುತ್ತವೆ. ಇಂತಹ ವಿವಾಹಗಳು

ಆಕಸ್ಮಿಕವೆಂದೇ ಹೇಳಲಾಗುತ್ತದೆ. ಮದುವೆಯಾದ ಗಂಡನಿಗೆ ಬಹಳ ಕಾಲ ಮಕ್ಕಳು ಆಗದೆ ಇದ್ದರೆ, ಮೊದಲ ಪತ್ನಿ ತೀರಿದ್ದರೆ ಅಥವಾ ಆಕೆಗೆ ದೈಹಿಕ ರೋಗವಿದ್ದರೆ ಅಂತಹ ಸಮಯದಲ್ಲಿ ಮತ್ತೊಂದು ವಿವಾಹವಾಗುವುದಕ್ಕೆ ಸಾಮಾಜಿಕ ನಿಯಮ ಒಪ್ಪಿಗೆ ನೀಡುವುದು. ಮೊದಲ ಹೆಂಡತಿ ಚನ್ನಾಗಿಯೇ ಇದ್ದು ಆಕೆಯ ವಿರೋಧದ ಹೊರತಾಗಿಯೂ ಗಂಡಸು ಮದುವೆಯಾದರೆ ಸಮಾಜದಿಂದ ಊರ್ಜಿತವಾಗುವುದಿಲ್ಲ. ಆಗ ಸಮಾಜದ ಹಿರಿಯರ ಸಮಕ್ಷಮ ನ್ಯಾಯ ಪಂಚಾಯತಿ ಜರುಗಿ ಬಿಡುಗಡೆಗೆ ಪ್ರಯತ್ನಿಸುವರು ಅಥವಾ ದಂಡ ಹಾಕುವರು.

ಇ) ವಿಧವಾ ವಿವಾಹ

ಸಫಾಯಿ ಕರ್ಮಚಾರಿ ಸಮುದಾಯದಲ್ಲಿ ಗಂಡನನ್ನು ಕಳೆದುಕೊಂಡು ವಿಧವೆಯಾದವಳಿಗೆ ಪುನರ್ ವಿವಾಹವಾಗುವುದಕ್ಕೆ ಸಮಾಜದ ಸಮ್ಮತಿಯಿದೆ. ಇದಕ್ಕೆ ಕೂಡಿಕೆ ಎನ್ನುವರು. ಈ ಮದುವೆಗೆ ಮೊದಲನೆ ಮದುವೆಯ ಯಾವ ಶಾಸ್ತ್ರೋಕ್ತ ಆಚರಣೆಗಳು ಇರುವುದಿಲ್ಲ. ಕೆಲವೇ ಹಿರಿಯರ ಸಮ್ಮುಖದಲ್ಲಿ ಅದೂ ರಾತ್ರಿ ಹೊತ್ತಿನಲ್ಲಿ ವಿಧವಾ ವಿವಾಹ ನಡೆಯುತ್ತದೆ. ಕೂಡಿಕೆ ವಿವಾಹಕ್ಕೆ ಗಂಡ ಹೆಂಡತಿಯನ್ನು, ಹೆಣ್ಣು ಗಂಡನನ್ನು ಕಳೆದುಕೊಂಡಿದ್ದರೆ ಮಾತ್ರ ಸಮ್ಮತಿಯಿರುವುದನ್ನು ಈ ಸಮುದಾಯದಲ್ಲಿ ಕಾಣುವೆವು.

ಈ) ವಿವಾಹ ವಿಚ್ಛೇದನೆ

ಮದುವೆ, ಇತರ ಯಾವುದೇ ವ್ಯಾಜ್ಯಗಳಿರಲಿ, ಅದು ಸಫಾಯಿ ಕರ್ಮಚಾರಿ ಸಮಾಜದ ಮುಖ್ಯಸ್ಥರ ಸಮ್ಮುಖದಲ್ಲೇ ನಡೆಯಬೇಕು. ಹಿರಿಯರು ನೀಡುವ ನಿರ್ಣಯವನ್ನು ಆ ಸಮಾಜದ ಎಲ್ಲ ಗಂಡು-ಹೆಣ್ಣುಗಳು ಪಾಲಿಸಲೇಬೇಕು. ಹಿರಿಯರು ನೀಡಿದ ನ್ಯಾಯ ನಿರ್ಣಯವನ್ನು ಯಾರೊಬ್ಬರೂ ವಿರೋಧಿಸುವಂತಿಲ್ಲ. ಹಾಗೊಂದು ವೇಳೆ ಯಾರಾದರೂ ವಿರೋಧಿಸಿದರೆ, ಸಮಾಜದ ಮುಖಂಡರು ಅಂಥವರಿಗೆ ತಪ್ಪುದಂಡ ಕಟ್ಟುವರು. ಇಲ್ಲವೇ ಕುಲದಿಂದ ಬಹಿಷ್ಕಾರ ಹಾಕಲಾಗುತ್ತದೆ. ತಪ್ಪು ಮಾಡಿದವರು ತಮ್ಮ ಅಪರಾಧವನ್ನು ಒಪ್ಪಿಕೊಂಡು ಪ್ರಾಯಶ್ಚಿತ ಮಾಡಿಕೊಂಡರೆ ಅವರಿಗೆ ತಪ್ಪುದಂಡ ವಸೂಲು ಮಾಡಿ ಪುನಃ ಕುಲದಲ್ಲಿ ಇಡೀ ಕುಲಸ್ಥರಿಗೆ

ಊಟ ಹಾಕಬೇಕು. ಅಲ್ಲದೆ ಭವಾನಿ ದೇವಿ ಗುಡಿಯ ತೀರ್ಥ ನೀಡಿ ಅವರನ್ನು ಶುದ್ಧೀಕರಿಸಲಾಗುತ್ತದೆ.

ವಿವಾಹಕ್ಕೆ ಸಂಬಂಧಿಸಿದ ತಕರಾರುಗಳಿಗೆ ಸಮಾಜದ ಮುಖಂಡರೇ ನ್ಯಾಯ ನೀಡುವರು. ಅಕಸ್ಮಾತ ಗಂಡ ಹೆಂಡರಲ್ಲಿ ಜಗಳಗಳಾಗಿ ಅದು ದೊಡ್ಡದಾಗಿ ವಿಚ್ಛೇದನ ಹಂತಕ್ಕೆ ತಲುಪಿದರೂ ಬಂಗಿಗಳು ನ್ಯಾಯಾಲಯ, ಪೋಲೀಸ್ ಠಾಣೆ ಕಟ್ಟೆಯನ್ನು ಹತ್ತುವುದಿಲ್ಲ. ವಿಚ್ಛೇದನಕ್ಕೆ ಸಂಬಂಧಿಸಿದ ವ್ಯಾಜ್ಯ ಸಮಾಜದ ಮುಖಂಡರ ಮುಂದೆಯೇ ಇತ್ಯರ್ಥವಾಗುವುದು. ಇದನ್ನು ಬಂಗಿಗಳು ಚಾಚೂ ತಪ್ಪದೆ ಅನುಸರಿಸಿಕೊಂಡು ಬಂದಿರುವರು.

ಹೆಂಡತಿ ಗಂಡನನ್ನು, ಗಂಡ ಹೆಂಡತಿಯನ್ನು ಬಿಡಬೇಕಾದಾಗಲೂ ಇದರ ಇತ್ಯರ್ಥ ಸಮಾಜದ ದೈವಸ್ಥರ (ಪಂಚರ) ಮುಂದೆಯೇ ನಡೆಯುತ್ತದೆ. ಇಬ್ಬರಿಗೂ ಸಾಕಷ್ಟು ತಿಳಿ ಹೇಳಿ ಕೆಲವು ದಿನಗಳವರೆಗೆ ತಮ್ಮ ನಿರ್ಣಯವನ್ನು ಕಾಯ್ದಿಡುತ್ತಾರೆ. ಈಗಲೂ ಗಂಡ ಹೆಂಡರಿಬ್ಬರೂ ಕೂಡಿ ಬಾಳಲು ಸಾಧ್ಯವಿಲ್ಲವೆಂದಾಗ ಹಿರಿಯರು ವಿವಾಹ ವಿಚ್ಛೇದನಕ್ಕೆ ಸಮ್ಮತಿ ಕೊಡುತ್ತಾರೆ. ಇದಕ್ಕೆ ಸ್ಥಳೀಯವಾಗಿ "ಸೋಡಚೀಟಿ ಅಥವಾ ಪಾರಿಕಾತೆ"[18] ಎನ್ನುವರು. ಗಂಡನೇ ಹೆಂಡತಿಗೆ ವಿಚ್ಛೇದನೆ ನೀಡಿದರೆ, ಆತನು ವಿಚ್ಛೇದಿತ ಹೆಂಡತಿಗೆ ಜೀವನಾಂಶ ನೀಡಬೇಕು. ಜೀವನಾಂಶ ಪಡೆಯುವ ಆಕೆ ಪುನರ್ ಮದುವೆ ಆಗುವಂತಿಲ್ಲ. ಅವಳ ಹೊಟ್ಟೆಯಲ್ಲಿ ಜನಿಸಿದ ಮಕ್ಕಳ ಜವಾಬ್ದಾರಿ ತಂದೆಯ ಮೇಲೆ ಹೊರಿಸುತ್ತಾರೆ. ಒಂದು ವೇಳೆ ವಿಚ್ಛೇದನ ಪಡೆದ ಹೆಂಡತಿ ಮತ್ತೊಂದು ಮದುವೆ ಮಾಡಿಕೊಂಡರೆ ಆಕೆಯ ಜೀವನಾಂಶ ರದ್ದಾಗುತ್ತದೆ. ಆಗ ಪುನಃ ಸಮಾಜದವರು ಸಭೆ ಸೇರಿ ಅವಳ ಜೀವನಾಂಶವನ್ನು ರದ್ದುಗೊಳಿಸಿ ತಪ್ಪು ದಂಡದ ರೂಪವಾಗಿ ಅವಳನ್ನು ಕೂಡಿಕೆ ಮಾಡಿಕೊಳ್ಳುವ ಗಂಡು ದೈವಕ್ಕೆ ಊಟ ಹಾಕಿಸಿ ದೇವಿಗೆ ಕಾಣಿಕೆ ಸಮರ್ಪಿಸಬೇಕೆಂಬ ನಿಯಮವಿದೆ. ಇದನ್ನು ಅಂಥವರು ಪಾಲಿಸಬೇಕು ಅಲ್ಲದೆ, ಮಕ್ಕಳ ಮೇಲಿನ ಅವಳ ಸಂಪೂರ್ಣ ಹಕ್ಕನ್ನು ಕಡಿತಗೊಳಿಸುವರು.

"ಸಫಾಯಿ ಕರ್ಮಚಾರಿಗಳಲ್ಲಿ ವಿಚ್ಛೇದನ ಪಡೆದ ಹೆಣ್ಣು ಪುನಃ ಮದುವೆಯಾದರೆ, ಅವಳು ಮೊದಲಿನ ಗಂಡನಿದ್ದ ಊರಲ್ಲಾಗಲಿ ಅಥವಾ ತಂದೆ ತಾಯಿಗಳ ಮನೆಯಲ್ಲಿ ಇರುವಂತಿಲ್ಲ. ಕೂಡಿಕೆ ಮಾಡಿಕೊಂಡ ಗಂಡನ ಮನೆಗೆ ಹೋಗಿ ನೆಲೆಸಬೇಕು. ತಪ್ಪಿಯೂ ಅವರು ತವರು ಮನೆಗೆ ಬರುವ ಹಾಗಿಲ್ಲ. ಇಂತಹ ಕಟ್ಟುನಿಟ್ಟಿನ ಕ್ರಮವನ್ನು ಈ ಸಮಾಜದಲ್ಲಿ ಕಾಣುತ್ತೇವೆ. ಇದು

ಒಂದು ರೀತಿಯಲ್ಲಿ ವಿಚ್ಛೇದನ ನೀಡುವವರಿಗೆ ಅಂಜಿಕೆ ಇರಲಿ ಎಂಬುದಾಗಿದೆ ಎನ್ನುತ್ತಾರೆ ಆ ಸಮಾಜದ ಮುಖಂಡರು."[19]

"ಸಫಾಯಿ ಕರ್ಮಚಾರಿ ಸಮುದಾಯದಲ್ಲಿ ಏಕಪತ್ನಿ, ಬಹುಪತ್ನಿ, ಕೂಡಿಕೆ (ಪುನರ್ ವಿವಾಹ) ಅಥವಾ ವಿಧವಾ ವಿಹಾಹ ಹಾಗೂ ವಿವಾಹ ವಿಚ್ಛೇದನಕ್ಕೆ ಅವಕಾಶವಿದೆ ಎಂಬುದು ಅಧ್ಯಯನದ ಸಂದರ್ಭದಲ್ಲಿ ತಿಳಿದುಬಂದಿರುವುದನ್ನು ಇಲ್ಲಿ ಗಮನಿಸಬೇಕು. ಅಂದರೆ ಅವರದೇ ಆದ ಸಾಮಾಜಿಕ, ಸಾಂಸ್ಕೃತಿಕ ಕಟ್ಟಳೆಯ ನಡುವೆಯೂ ಸ್ವತಂತ್ರವಾಗಿ ಬದುಕುವುದಕ್ಕೆ ಈ ಸಮಾಜದಲ್ಲಿ ಹೆಚ್ಚಿನ ಅವಕಾಶವನ್ನು ಕಾಣುವೆವು.

3. ಆಹಾರ ಪದ್ಧತಿ

ಉತ್ತರ ಕರ್ನಾಟಕ ಮತ್ತು ಹೈದರಾಬಾದ ಕರ್ನಾಟಕ ಪ್ರದೇಶಗಳಲ್ಲಿ ವಾಸ ಮಾಡುವ ಸಫಾಯಿ ಕರ್ಮಚಾರಿಗಳ ಆಹಾರ ಪದ್ಧತಿಯು ಹೆಚ್ಚು ಕಡಿಮೆ ಒಂದೇ ರೀತಿಯದ್ದಾಗಿದೆ. ಇವರೆಲ್ಲರೂ ಕೂಡ ಇತರ ಜಾತಿಗಳಲ್ಲಿರುವಂತೆಯೇ ಸಸ್ಯಹಾರಿ ಮತ್ತು ಮಾಂಸಾಹಾರಿಗಳು ಇದ್ದಾರೆ. ದಿನನಿತ್ಯದ ಆಹಾರವು ಸಸ್ಯಹಾರವಾಗಿದ್ದರೆ, ಕೆಲವು ನಿರ್ದಿಷ್ಟ ದಿನಗಳಲ್ಲಿ ವಿಶೇಷ ಸಂದರ್ಭದ ದಿನಗಳಲ್ಲಿ, ಮಾಂಸಹಾರವನ್ನು ಸೇವಿಸುವರು. ಇವರು ಆರ್ಥಿಕವಾಗಿ ತೀರ ಹಿಂದುಳಿದವರಾಗಿದ್ದರಿಂದ ಆಹಾರ ವಿಧಾನದಲ್ಲಿಯೂ ತುಂಬಾ ಸರಳತೆಯನ್ನು ಕಾಣುವೆವು. ಸಫಾಯಿ ಕರ್ಮಚಾರಿಗಳ ಆಹಾರ ವಿಧಾನವನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ಆಹಾರ, ಬಟ್ಟೆ, ವಸತಿ ಇವು ಮನುಷ್ಯನ ಮೂಲಭೂತ ಅವಶ್ಯಕತೆಗಳಾಗಿವೆ. ಮಾನವ ಹುಟ್ಟಿನಿಂದ ಈತನಕ ಆತನು ಈ ಮೂರು ಅವಶ್ಯಕತೆಗಳಿಗಾಗಿ ಸಾಕಷ್ಟು ಹೋರಾಟಗಳನ್ನೇ ಮಾಡುತ್ತ ಬಂದಿರುವನು ಎಂಬುದು ಸುಳ್ಳಲ್ಲ. ಸಮಾಜವು ಆಯಾ ಧರ್ಮ, ಜಾತಿ, ಸಮುದಾಯಗಳ ಆಹಾರ ಪದ್ಧತಿಯನ್ನು ನಿಗದಿಗೊಳಿಸಿರುವುದು ಸಫಾಯಿ ಕರ್ಮಚಾರಿಗಳು ಮೂಲತಃ ಪಂಚಮರು, ಚಾಂಡಾಲರೂ ಆಗಿರುವುದರಿಂದ ಅವರು ಮಾಂಸಾಹಾರಿಗಳೂ ಹೌದು. ನಿರ್ದಿಷ್ಟ ದುಡಿಮೆಯಿಂದ ಬರುವ ಆದಾಯದಲ್ಲಿ ದುಬಾರಿಯಾದ ಆಹಾರವನ್ನು ಸೇವಿಸುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ನಿತ್ಯದ ಆಹಾರವನ್ನು ಅತ್ಯಂತ ಸರಳವಾಗಿ ರೂಢಿಸಿಕೊಂಡಿರುವಂತೆ ಕಾಣುತ್ತದೆ. ಮತ್ತು ಆಯಾ ಪ್ರದೇಶಗಳಲ್ಲಿ ದೊರಕುವ ದಿನಸು, ಕಾಳು ಕಡಿಗಳನ್ನು ತಮ್ಮ ಆಹಾರಕ್ಕಾಗಿ ಬಳಸುವರು. ಅಂತೆಯೇ ಇವರು ತನ್ನ ನಿತ್ಯದ ಆಹಾರವನ್ನು ಜೋಳದ ರೊಟ್ಟಿ,

ಕಾಯಿ, ತರಕಾರಿ, ಬೇಳೆಗಳನ್ನು ಹೊಂದಿರುತ್ತಾರೆ. ಕೆಲವರು ತೀರ ಬಡವರು ಜೋಳದ ಹಿಟ್ಟಿನ ಅಂಬಲಿ, ನುಚ್ಚನ್ನು ಬಳಸುವರು. ಈಗ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯು ಪಡಿತರವನ್ನು ವಿತರಿಸುತ್ತಿರುವುದರಿಂದ ಇವರು ಗೋಧಿ ರೊಟ್ಟಿ ಅನ್ನವನ್ನು ಆಹಾರವಾಗಿ ಮಾಡಿಕೊಂಡಿದ್ದಾರೆ ಅಲ್ಲದೆ ಊರ ಮನೆಗಳ ಮಲ ತೊಳೆಯುವ ಕೆಲಸ ಮಾಡುವುದರಿಂದ ಕೆಲವರು ತಮ್ಮಲ್ಲಿ ಮಿಕ್ಕಿದ ಆಹಾರವನ್ನು ನೀಡುವರು. ಅದನ್ನು ಉಪಯೋಗಿಸುತ್ತಾರೆ.

ಸಾಮಾನ್ಯವಾಗಿ ತಿಳಿದಿರುವಂತೆ ಎಲ್ಲರಂತೆ ಇವರಲ್ಲೂ ಕೆಲವು ವಿಶೇಷ ಹಬ್ಬ, ಉತ್ಸವ, ಜಾತ್ರೆ, ಹಿರಿಯರ ದಿನ, ಮದುವೆ, ಮುಂಜಿ ಇತ್ಯಾದಿಗಳ ಸಂದರ್ಭದಲ್ಲಿ ನಿತ್ಯದ ಆಹಾರದ ಬದಲಾಗಿ ವಿಶಿಷ್ಟ ಅಡುಗೆಯನ್ನು ಮಾಡಿ ಉಣ್ಣುವರು. ವಿಶೇಷ ಆಹಾರದಲ್ಲಿ ಬಹು ಮುಖ್ಯವಾಗಿ ಮಾಂಸಾಹಾರವೇ ಆಗಿರುತ್ತದೆ.

ಸಫಾಯಿಗಳು ಹೆಚ್ಚಾಗಿ ಕುರಿ, ದನದ ಮಾಂಸವನ್ನು ಆಹಾರವಾಗಿ ಉಪಯೋಗಿಸುತ್ತಾರೆ. ಮದುವೆ ಸಂದರ್ಭದಲ್ಲಿ ಮತ್ತು ಹಿರಿಯರ, ಹಬ್ಬ, ಜಾತ್ರೆಗಳಲ್ಲಿ ಕಡ್ಡಾಯವಾಗಿ ಮಾಂಸಾಹಾರವನ್ನು ಮಾಡುವರು. ಜಾತ್ರೆ ಉತ್ಸವಗಳ ಕಾಲದಲ್ಲಿ ಸಮಾಜದವರು ಕುರಿಯನ್ನು, ದನವನ್ನು ಕಡಿದು ತಲಾ ಇಷ್ಟಿಷ್ಟು ಎಂದು ನಿಗದಿಪಡಿಸಿ ಮನೆಮನೆಗೆ ಮಾಂಸವನ್ನು ಸರಬರಾಜು ಮಾಡುತ್ತಾರೆ. ಮಾಂಸದ ಅಡುಗೆ ಮಾಡಿ ದೇವರಿಗೆ ನೈವೇದ್ಯ ರೂಪದಲ್ಲಿ ಸಮರ್ಪಿಸಿ ಆನಂತರ ಎಲ್ಲರೂ ಸೇವಿಸುತ್ತಾರೆ.

ಸಫಾಯಿಗಳಲ್ಲಿ ಸೆರೆ (ಮದ್ಯಪಾನ) ಸೇವನೆ ಸಾಮಾನ್ಯ. ಅವಕಾಶವಾದಾಗ ಭಟ್ಟಿ ಸಾರಾಯಿ ಬಳಕೆ ಉಂಟು. ದಿನನಿತ್ಯದಲ್ಲಾದರೆ ಮನೆಯ ಯಜಮಾನ (ದೊಡ್ಡವರು) ಸಂಜೆ ಊಟದಲ್ಲಿ ಮದ್ಯವನ್ನು ಕುಡಿದು ಜಾತ್ರೆ, ಉತ್ಸವ ಸಂದರ್ಭಗಳಲ್ಲಿ ಗಂಡಸರು, ಹೆಂಗಸರು ಸೇರಿ ಸಾರಾಯಿ ಕುಡಿದು ತಮ್ಮ ಸಂತೋಷವನ್ನು ಹಂಚಿಕೊಳ್ಳುತ್ತಾರೆ. ಆಹಾರ ಸಂಗ್ರಹಣೆಗಳಲ್ಲಿ ಜೋಳ, ಗೋಧಿ, ಕಾಳುಕಡಿ, ತರಕಾರಿ, ಮೀನು, ಮಾಂಸ ಇತ್ಯಾದಿಗಳೆಲ್ಲ ಅವರ ಬದುಕಿನಲ್ಲಿವೆ. ಕಾಳುಕಡಿಗಳನ್ನು ಗುಮ್ಮಿಯಲ್ಲಿ ಹಿಂದಿನ ಕಾಲದಲ್ಲಿ ಇಡುತ್ತಿದ್ದು ಈಗ ಮಡಿಕೆ ಕುಡಿಕೆಗಳಲ್ಲಿ ಸಂಗ್ರಹಿಸಿ ಇಡುತ್ತಿದ್ದರು. ಈಗೀಗ ಅಲುಮಿನಿಯಮ್ ಪಾತ್ರೆ ತಗಡಿನ ಡಬ್ಬಗಳನ್ನು ಬಳಸುತ್ತಿದ್ದಾರೆ.

ಮಳೆಗಾಲದಲ್ಲಿ ಸಣ್ಣಪುಟ್ಟ ಹಳ್ಳ, ತೊರೆಗಳಲ್ಲಿ ಮೀನುಗಳನ್ನು ಹಿಡಿಯಲು ಹೋಗುವರು. ಒಮ್ಮೊಮ್ಮೆ ಅಡವಿಗಳಿಗೆ ಹೋಗಿ ಮೊಲ, ಕಾಡು ಕೋಳಿ, ಚಿಗರೆ (ಜಿಂಕೆ) ಕಾಡು ಮೇಕೆಗಳನ್ನು ಬೇಟೆಯಾಡಿ ತಂದು ಬೇಯಿಸಿ ತಿನ್ನುವರು. ದೀಪಾವಳಿ ಮತ್ತು ಸಂಕ್ರಾಂತಿಯ ಮರುದಿವಸ

ಕರಿಯನ್ನು ಆಚರಿಸುವರು. ಆ ದಿನ ಅವರು ಬೇಟೆಯಾಡಿ ತಂದ ಪ್ರಾಣಿಯನ್ನು ಸುಟ್ಟು ತಿನ್ನುವರು. ಮಾಂಸದ ಅಡುಗೆಗೆ ಕರಿ ಅಥವಾ ಕಪ್ಪು ಅಡುಗೆ ಎಂದು ಕರೆಯುವರು.

ಅಡುಗೆ ತಯಾರಿಸುವುದಕ್ಕಾಗಿ ಸಣ್ಣ ದೊಡ್ಡ ಮಣ್ಣಿನ ಮಡಿಕೆಗಳನ್ನು ಬಳಸುತ್ತಾರೆ. ಆದರೆ ಇತ್ತೀಚೆಗೆ ಅನೇಕರು ಅಲ್ಯುಮೀನಿಯಂ ಪಾತ್ರೆಗಳನ್ನು ಬಳಸುತ್ತಿರುವರು. ಮನೆಯಲ್ಲಿ ನೀರು ಸಂಗ್ರಹಕ್ಕೆ, ಸಾಮಾನ್ಯವಾಗಿ ಬಾನಿ ಅಲ್ಯುಮೀನಿಯಂ ಪಾತ್ರೆ, ಪ್ಲಾಸ್ಟಿಕ್ ಬಿಂದಿಗೆ, ತಂಬಿಗೆಗಳನ್ನು ಇವರು ಬಳಸುತ್ತಾರೆ. ಹಿತ್ತಾಳೆ ಬಿಂದಿಗೆ ಬಳಕೆ ಇಲ್ಲ. ಊಟಕ್ಕೆ ಅಲ್ಯುಮೀನಿಯಂ, ಸ್ಟೀಲ್ ತಟ್ಟೆ (ಗಂಗಾಳ) ಕುಡಿಯಲು ಸ್ಟೀಲ್ ತಂಬಿಗೆ ಗ್ಲಾಸುಗಳನ್ನು ಬಳಸುವರು.

ಮನೆಯಲ್ಲಿ ಈ ಪಾತ್ರೆ ಪಗಡಗಳನ್ನು ಇಡಲು ಅಡುಗೆ ಮನೆಯ ಮೂಲೆಯಲ್ಲಿ ಕಿರು ಕಟ್ಟೆ ಕಟ್ಟಿರುತ್ತಾರೆ. ಮಳೆಗಾಲದಲ್ಲಿ ಮನೆಯ ಒಲೆಯ ಮೇಲೆ ನೇಲು ಪಟ್ಟಿಗಳನ್ನು ಕಟ್ಟಿ ಹಸಿಸೌದೆ ತುಂಡು ಪುರಲೆಗಳನ್ನು ಒಣಗಿಸುವರು. ಸುಟ್ಟ ಮಣ್ಣಿನಿಂದ ಮಾಡಿದ ಕುಂಬಾರ ಒಲೆಗಳನ್ನು ಅಡುಗೆಗೆ ಬೇಯಿಸಲು ಬಳಸುವರು. ಆಧುನಿಕತೆಯ ಪ್ರಭಾವದಿಂದಾಗಿ ಈಗೀಗ ಹಾರೆ, ಸಿಮೆಂಟಿನಿಂದ ಮಾಡಿದ ಒಲೆಗಳನ್ನು ಬಳಸುವುದುಂಟು. ಕ್ಷೇತ್ರಕಾರ್ಯಾಧ್ಯಯನದಲ್ಲಿ ಸಫಾಯಿಗಳ ಮನೆಯಲ್ಲಿ ಗ್ಯಾಸ ಸ್ಟೋವ್ ಬಳಕೆ ಕಂಡುಬರಲಿಲ್ಲ. ತೀರ ದುಬಾರಿಯಾದ ಗ್ಯಾಸನ್ನು ಆರ್ಥಿಕ ಕಾರಣದಿಂದ ಇವರಲ್ಲಿ ಬಳಕೆ ಮಾಡಲಾಗುತ್ತಿಲ್ಲವೆನ್ನಬಹುದು. ಸಾಮಾನ್ಯವಾಗಿ ನಿತ್ಯದ ಆಹಾರವನ್ನು ತಮ್ಮ ತಮ್ಮ ಮನೆಗಳಲ್ಲಿ ಸಾಮೂಹಿಕವಾಗಿ ಅಡುಗೆ ಮಾಡುವ ಪದ್ಧತಿ ಇದೆ.

ಸಫಾಯಿ ಕರ್ಮಚಾರಿಗಳು ಸಸ್ಯಹಾರಿಗಳೂ ಹೌದು, ಮಾಂಸಾಹಾರಿಗಳೂ ಹೌದು. ಹೆಚ್ಚಿನ ಪ್ರಮಾಣದಲ್ಲಿ ಇವರು ಮಾಂಸಾಹಾರಿಗಳೆಂದು ಕಂಡುಬರುತ್ತಾರೆ. ಆದರೆ ದಿನನಿತ್ಯದಲ್ಲಿ ರೊಟ್ಟಿ, ಚಪಾತಿ, ತರಕಾರಿ, ಕಾಳುಗಳಿಂದ ಆಹಾರವನ್ನು ಸೇವಿಸಿದರೆ, ಶನಿವಾರ ಮತ್ತು ಮಂಗಳವಾರದಂದು ಮಾಂಸವನ್ನು ಇವರು ಊಟ ಮಾಡುವುದಿಲ್ಲ. ಉಳಿದ ದಿನಗಳಂದು ಮಾಂಸದ ಅಡಿಗೆ ಮಾಡಿ ಊಟ ಮಾಡುವರು. ಮಾಂಸಾಹಾರವಾಗಿ ಕುರಿ, ಹುಂಜ, ಕೋಳಿ, ಮೊಲ, ದನ ಮೊದಲಾದವನ್ನು ತಿನ್ನುತ್ತಾರೆ. ಮಾಂಸಾಹಾರ ಮತ್ತು ಹಬ್ಬದೂಟಗಳ ಸಂದರ್ಭದಲ್ಲಿ ಸಿಂದಿ–ಸೆರೆ ಸೇವಿಸುತ್ತಾರೆ.

ಸಫಾಯಿ ಕರ್ಮಚಾರಿಗಳು ಹೇಳಿಕೊಳ್ಳುವಂಥ ವಿಶೇಷ ಉಡುಗೆ–ತೊಡುಗೆಗಳನ್ನು ಧರಿಸುವುದಿಲ್ಲ. ಇವರ ವೇಷ–ಭೂಷಣಗಳು ತುಂಬಾ ಸರಳ. ಗಂಡಸರು ಫೈಜಾಮ ಖಿರ್ತಾ

ಅಥವಾ ಪ್ಯಾಂಟ್ ಧರಿಸಿದರೆ ಹೆಣ್ಣುಮಕ್ಕಳು ಹೆಚ್ಚಾಗಿ ಶೆಲ್ವಾರ ಕಮೀಜ್‌ಗಳನ್ನು ಧರಿಸಿ ಮೇಲೆ ಮುಖ ಮುಚ್ಚುವಂತೆ ಓಡಣಿ (ದುಪ್ಪಟ್ಟಾ) ಧರಿಸುತ್ತಾರೆ. ಹಣೆಗೆ ಕುಂಕುಮ, ಕಣ್ಣಿಗೆ ಕಾಡಿಗೆ, ಕಿವಿಯಲ್ಲಿ ಓಲೆ, ಜುಮಕಾ, ಲೋಲಕ ತೊಡುವರು. ಮದುವೆಯಾದ ಹೆಣ್ಣುಮಕ್ಕಳು ಕೊರಳಲ್ಲಿ ತಾಳಿ ಧರಿಸುವರು.

4. ಉಡಿಗೆ–ತೊಡುಗೆ

ಸಫಾಯಿ ಕರ್ಮಚಾರಿಗಳು ಮೂಲತಃ ಕಾರ್ಮಿಕರು. ದುಡಿಮೆಗಾರರಾದ ಮೇಲೆ ಅದಕ್ಕೆ ಅನುಗುಣವಾಗಿ ಉಡುಗೆ ತೊಡುಗೆಗಳನ್ನು ಅವರು ಹಾಕಿಕೊಳ್ಳುವರು. ಅವರ ಆರ್ಥಿಕ ಚೈತನ್ಯ ದುಡಿಮೆಯ ಬಗೆ, ಸಂಪ್ರದಾಯ ಪಾಲನೆ, ಸಾಂಸ್ಕೃತಿಕ ಪ್ರಭಾವ ಇವೆಲ್ಲವೂ ಅಡಕಗೊಂಡಂತೆ ಅವರ ಉಡುಗೆ ತೊಡುಗೆಗಳಿವೆ.

ಸಫಾಯಿ ಕರ್ಮಚಾರಿಗಳಲ್ಲಿ ಗಂಡಸರು, ಹೆಣ್ಣುಮಕ್ಕಳು ಹಾಗೂ ಸಣ್ಣ ಮಕ್ಕಳ ಉಡುಗೆತೊಡುಗೆಗಳನ್ನು ಗಮನಿಸಬೇಕಾಗಿದೆ. ಗಂಡಸರು ಮತ್ತು ಹೆಣ್ಣು ಮಕ್ಕಳು ದುಡಿಮೆಯ ಸಮಯದಲ್ಲಿ ಮಾಸಿದ ಬಟ್ಟೆಗಳನ್ನು ಧರಿಸುತ್ತಾರೆ. ಗಂಡಸರು ಪ್ಯಾಂಟು ಇಲ್ಲವೇ ಪಾಯಿಜಾಮಾಗಳನ್ನು ಹಾಕಿ ಮೇಲೆ ಅಂಗಿ ಧರಿಸುತ್ತಾರೆ. ಕೆಲಸಕ್ಕೆ ಹೋಗುವಾಗ ಪ್ಯಾಂಟನ್ನು ಕಾಲಿನಿಂದ ಮೇಲಕ್ಕೆ ನಾಲ್ಕಾರು ಮಡಿಕೆಗಳನ್ನು ಮಾಡಿ ಮೇಲಕ್ಕೇರಿಸಿರುತ್ತಾರೆ. ಮಲ ತೊಳೆಯುವಾಗ ಬಟ್ಟೆಗೆ ಸಿಡಿಯಬಾರದೆಂಬುದಕ್ಕೆ ಅವರು ಹಾಗೆ ಮಾಡುವರು. ಕೆಲಸದ ನಂತರ ಮನೆಗೆ ಬಂದು ಸ್ನಾನ ಮಾಡಿ ಬೇರೆ ಇತರ ಒಗೆದ ಬಟ್ಟೆ ಧರಿಸುತ್ತಾರೆ. ಇನ್ನು ಹೆಣ್ಣುಮಕ್ಕಳು ಹೆಚ್ಚಾಗಿ ಪಾಯಿಜಾಮಾ, ಕುರ್ತಾ ಧರಿಸುತ್ತಾರೆ. ಮೇಲೆ ದುಪ್ಪಟಾ (ಶಲ್ಯ) ಹಾಕಿಕೊಳ್ಳುವರು. ಕೆಲಸದ ವೇಳೆ ಮತ್ತು ಇತರ ಸಮಯದಲ್ಲಿ ಹೆಣ್ಣುಮಕ್ಕಳು ಚೂಡಿದಾರವನ್ನು ಉಡುವ ಸಂಪ್ರದಾಯವಿದೆ.

ಸಣ್ಣ ಮಕ್ಕಳಲ್ಲಿ ಗಂಡು ಹುಡುಗರು ಪ್ಯಾಂಟ್ ಪಾಯಿಜಾಮಾ ಮೇಲೆ ನೆಹರು ಶರ್ಟ ಅಥವಾ ಬುಶರ್ಟ ಹಾಕುವರು. ಹೆಣ್ಣುಮಕ್ಕಳು ಚೂಡಿದಾರ ಹಾಕಿಕೊಳ್ಳುವರು. ಆಭರಣವನ್ನು ಕುರಿತು ಹೇಳಬೇಕಾದರೆ, ಗಂಡಸರು ಕೊರಳಲ್ಲಿ ಕರಿದಾರದಿಂದ ಮಾಡಿದ ತಾಯಿತ ಧರಿಸುವರು. ಕೈಗೆ ಹಿತ್ತಾಳೆ ಅಥವಾ ಪಂಚಲೋಹದ ಕಡಗ ಹಾಕುವರು. ಹೆಣ್ಣುಮಕ್ಕಳು ಕಿವಿಗೆ ಓಲೆ, ಜುಮಕಿ,

ಕೊರಳಲ್ಲಿ ಮುತ್ತಿನ ಹಾರ, ಕೈಗೆ ಬಳೆ, ಕಾಲಿಗೆ ಕಾಲುಂಗುರ ಹಾಕುವರು. ಮದುವೆಯಾದ ಸ್ತ್ರೀಯರು ಕೊರಳಲ್ಲಿ ಮಾಂಗಲ್ಯ (ತಾಳಿ) ಧರಿಸುತ್ತಾರೆ. ಇವರ ಉಡುಗೆ ತೊಡುಗೆಗಳು ಸರಳವಾಗಿವೆ.

5. ಕುಲ ಬೆಡಗು, ಒಳಪಂಗಡಗಳು

ಸಫಾಯಿ ಕರ್ಮಚಾರಿ ಕೆಲಸ ಮಾಡುವ ಬೇರೆ ಬೇರೆ ಸಮುದಾಯಗಳಲ್ಲಿ ಜಾತಿಯ ಬೇರೆ ಬೇರೆ ಕುಲ-ಗೋತ್ರ, ಬೆಡಗುಗಳು ಕಂಡುಬರುವಂತೆ ಸಫಾಯಿ ಕರ್ಮಚಾರಿಗಳಲ್ಲಿಯೂ ಇವು ಕಂಡುಬರುತ್ತವೆ. ಸಾಮಾನ್ಯವಾಗಿ ಈ ಕುಲ, ಗೋತ್ರ, ಬೆಡಗುಗಳ ಅವಶ್ಯಕತೆ ಸಂಬಂಧವನ್ನು ಬೆಳೆಸಿಕೊಳ್ಳುವಾಗ ಅಂದರೆ, ಮದುವೆಯ ಸಂದರ್ಭದಲ್ಲಿ ಇವುಗಳ ಪಾತ್ರ ಹೆಚ್ಚು.

ಒಂದೇ ಬೆಡಗಿನ ಹೆಣ್ಣುಮಗಳನ್ನು ತಂದುಕೊಳ್ಳುವ ಕಾರ್ಯವನ್ನು ಇವರು ಮಾಡುವುದಿಲ್ಲ. ಯಾಕೆಂದರೆ ಒಂದೇ ಬೆಡಗಿನವರು ಸಹೋದರರು, ಸಹೋದರಿಯರು ಆಗುತ್ತಾರೆ. ಇದರಿಂದಾಗಿ ತಮ್ಮ ಸಮಾನವಾಗಿದ್ದ ಬೇರೆ ಬೆಡಗಿನವರೊಂದಿಗೆ ಸಂಬಂಧ-ಸಂಪರ್ಕ ಹೆಚ್ಚಾಗಿ ಬೆಳೆಸುತ್ತಾರೆ. ಇಂತಹ ಪದ್ಧತಿ ಸಫಾಯಿ ಕರ್ಮಚಾರಿಗಳಲ್ಲಿ ಮಾತ್ರ ಇದೆ ಎಂದಲ್ಲ. ಪ್ರತಿಯೊಂದು ಜಾತಿ-ಜನಾಂಗದಲ್ಲಿಯೂ ಇದೆ. ಸಫಾಯಿ ಕರ್ಮಚಾರಿಗಳಲ್ಲಿ ಕಂಡುಬರುವ ಬೆಡಗುಗಳು ಹೀಗಿವೆ. "ಐವಳ್ಳಿ, ಅಂಕೇಲು, ಆದಿ ಬೆಡಗಿನವರು ಬನ್ನಿ ಗಿಡವನ್ನು ಪೂಜಿಸುವರು. ಇವರು ಬನ್ನಿಗಿಡವನ್ನು ಕಡಿಯುವುದಿಲ್ಲ. ಬೆಳ್ಳಿ, ಭಂಡಾರಿ, ಭೌಗಮ, ಬಿಲ್ಲು, ಛತ್ರಿ, ಭಿಮಲು, ಚಿನ್ನದ ಛಿತ್ತಾಲ ಇವರು ಉರುವಲು ಕಟ್ಟಿಗೆ ಬೆಡಗಿನವರು. ಎಮ್ಮೆ, ಎನ್ನ, ಗೋನಬಾ ಗುಜ್ಜಲು, ಹುಡ, ಹೆಗ್ಗಡೆ (ಮುಖಂಡ) ಹೊನ್ನು, ಹುನ್ನ (ಇರುವೆ) ಹೂವು, ಕಮಗಟ್ಟಿ, ಕಂಬಳಿ (ಕಂಬಿ) ಕರಡಿ, ಕೆಂಗಾರೆ, ಕೋರಿ (ಚೆಂದಿ) ಕೂರ್ಮ (ಆಮೆ) ಕುಸುಮೆ (ಗಿಡ) ಲಕ್ಕಿ ಪಮಡ, ಮಾನಿ, ಮಲ್ಲಿಗೆ ಮುನಗಾ ಅಥವಾ ಮಂಡಲಾ (ಕಟ್ಟಿಗಿ) ಸೊಗೆ (ತಾಳೆ ಎಲೆ) ಯಲಬಿ, ಯಕಿಲಾ ಇತ್ಯಾದಿಗಳು"[20] ಇತ್ಯಾದಿ ಬೆಡಗಳು ಇವರಲ್ಲಿವೆ.

ಇವಲ್ಲದೆ ಸಫಾಯಿಗಳಲ್ಲಿ ಮಂಡ್ಲಾ, ತಕ್ಲಿ, ಮುಂಗಾಣಿಕೆ ಬೀರುಣಿಗೆಯವರು, ಮಾಳಿಗೆಯವರು ಇತ್ಯಾದಿ ಬೆಡಗುಗಳು ಕಂಡುಬರುತ್ತವೆ. ಈ ಬೆಡಗುಗಳನ್ನು ಸೂಕ್ಷ್ಮವಾಗಿ ನೋಡಿದಾಗ ಇವು ನಿಸರ್ಗದ ಪ್ರಾಣಿ ಪಕ್ಷಿ, ಗಿಡ, ಮರ ಸೂಚಿಸುವ ವಸ್ತುವಿನ ಬಗ್ಗೆ ಅವರಲ್ಲಿ ತುಂಬ ಪೂಜ್ಯತೆ ಇದೆ ಅನ್ನಿಸುತ್ತದೆ.

ಸಫಾಯಿ ಕರ್ಮಚಾರಿಗಳಲ್ಲಿಯೂ ಕೂಡ ಇತರ ಜಾತಿಗಳಲ್ಲಿರುವಂತೆ ಅನೇಕ ಒಳಪಂಗಡಗಳಿದ್ದುದು ಕಂಡುಬರುತ್ತದೆ. ಈ ರೀತಿಯ ಪಂಗಡಗಳು ಬಹುಶಃ ಅವರಾಡುವ ಭಾಷೆ, ಮಾಡುತ್ತಿರುವ ವೃತ್ತಿ ಬದುಕುತ್ತಿರುವ ರೀತಿ ನೀತಿ ನಡಾವಳಿಕೆಯ ಮೇಲೆ ರಚನೆಯಾಗಿರಬಹುದು ಎನ್ನಿಸುತ್ತದೆ. ಇಲ್ಲವೆ ಇಂಥಿಂಥ ಕೆಲಸ ಮಾಡುವವರು ಇಂಥಿಂಥ ಪಂಗಡದವರೆಂದು ಹಿಂದಿನಿಂದಲೂ ವಿಂಗಡಿಸಿಕೊಂಡು ಬಂದಿರಬಹುದು.

ಸಫಾಯಿ ಕರ್ಮಚಾರಿಗಳು ಆಡುತ್ತಿರುವ ಭಾಷೆಯನ್ನಾಧಾರಿಸಿ ರಚಿತಗೊಂಡ ಒಳಪಂಗಡಗಳು ಪ್ರಮುಖವಾಗಿ ಮೂರು. ಅವುಗಳೆಂದರೆ

1) ಕನ್ನಡ ಮಾತನಾಡುವವರು ಕನ್ನಡ ಸಫಾಯಿ ಕರ್ಮಚಾರಿಗಳ ಗುಂಪು ಅಥವಾ ಪಂಗಡಗಳು ಆಗಿರುತ್ತವೆ. ಸಾಮಾನ್ಯವಾಗಿ ಈ ಪಂಗಡದವರು ಗುಲಬರ್ಗಾ ನಗರ ಚಿತ್ತಾಪುರ, ವಾಡಿ, ಶಹಾಬಾದ, ಮಹಾಗಾಂವ ಮತ್ತು ಕಮಲಾಪುರ, ಅಫಜಲಪುರ, ಜೇವರಗಿ ಊರುಗಳಲ್ಲಿ ಕಾಣಲು ಸಿಗುತ್ತಾರೆ.

2) ತೆಲುಗು ಸಫಾಯಿ ಕರ್ಮಚಾರಿಗಳು ಗುಂಪು ಅಥವಾ ಪಂಗಡಗಳು. ಸಾಮಾನ್ಯವಾಗಿ ಇವರುಗಳು ಚಿಂಚೋಳಿ, ಸುಲೇಪೇಟ, ಚಿತ್ತಾಪುರ, ಸೇಡಂ ಮುಂತಾದೆಡೆಗಳಲ್ಲಿ ಸಿಗುತ್ತಾರೆ.

3) ಮರಾಠಿ ಮತ್ತು ಹಿಂದಿ ಮಾತನಾಡುವ ಗುಂಪು ಅಥವಾ ಪಂಗಡಗಳು ಇವರು ಸಾಮಾನ್ಯವಾಗಿ ಗುಲಬರ್ಗಾ ನಗರ, ಆಳಂದ ಅಫಜಲಪುರ, ಕಮಲಾಪುರ, ಮಹಾಗಾಂವ ಸರ್ಕಲ್ ಮತ್ತು ಶಹಾಬಾದ ಮೊದಲಾದವುಗಳಲ್ಲಿ ಸಿಗುತ್ತಾರೆ.

ಕನ್ನಡ ಸಫಾಯಿಗಳಲ್ಲಿ ತನಿಗೆ ಬುವ್ವದವರು, ಹೆಡಿಗೆ ಬುವ್ವದವರು. ಒಂದು ಸಲ ಮರ ಕೇರುವವರು, ಎರಡು ಸಲ ಮರ ಕೇರುವವರು, ಕಸಬಾರಿಗೆಯವರು, ಕೋಲ (ಬೆತ್ತದವರು) ತೆಲುಗು ಸಫಾಯಿಗಳಲ್ಲಿ ಚಾಲಿಬುವ್ವ ಮುವ್ವಲು, ಗಂಪಬುವ್ವ ಪಂಗಡಗಳಿವೆ. ಮರಾಠಿ ಸಫಾಯಿಗಳಲ್ಲಿ ಜಾಡಮೂಲ, ಸಾಫವಾಲಿ ಮೊದಲದ ಪಂಗಡಗಳನ್ನು ಗುರುತಿಸಲಾಗುತ್ತದೆ.

6. ವಸತಿ

ಸಫಾಯಿ ಕರ್ಮಚಾರಿಗಳ ಮನೆಗಳು ಅತ್ಯಂತ ಸಾದಾ ಸರಳವಾಗಿರುವವು. ಇವರುಗಳಲ್ಲಿ ಕೆಲವರು ಒಂದು ಕೋಣೆಯ, ಎರಡು ಕೋಣೆಯ ಮನೆಗಳನ್ನು ಹೊಂದಿರುವರು. ಮನೆಗಳು ಕಲ್ಲು ಮತ್ತು ಮಣ್ಣುಗಳಿಂದ ಕಟ್ಟಿ, ಮೇಲೆ ಹೊದಿಕೆಗೆ ಸ್ಥಳೀಯವಾಗಿ ದೊರೆಯುವ ಶಹಾಬಾದ ಪರಸಿ ಕಲ್ಲುಗಳನ್ನು ಉಪಯೋಗಿಸುತ್ತಾರೆ. ಮನೆಗಳ ಒಟ್ಟು ವಿಸ್ತೀರ್ಣ 10x10 ಅಡಿ ಇಲ್ಲವೇ 10x25 ಅಡಿಯಷ್ಟಾಗಿರುವವು. ಇಷ್ಟರಲ್ಲಿಯೇ ತಂದೆ, ತಾಯಿ, ಹೆಂಡತಿ, ಸಹೋದರ, ಸಹೋದರಿಯರು, ಮಕ್ಕಳು ನೆಲೆಸುತ್ತ ಬಂದಿರುತ್ತಾರೆ.

ಮನೆಗೆ ಸುಣ್ಣ ಬಳಿದು ಅಲ್ಲಲ್ಲಿ ಅಲಂಕಾರಕ್ಕಾಗಿ ಜಾಜ (ಕೆಂಪು ಸುಣ್ಣ) ಇಲ್ಲವೇ ಮುಲ್ತನ ಮಟ್ಟಿ (ಮಣ್ಣು) ಬಳಿದಿರುವರು. ಸಫಾಯಿ ಕರ್ಮಚಾರಿಗಳಲ್ಲಿ ಕೆಲವರು ವಸತಿಹೀನರೂ ಇರುವುದು ಕ್ಷೇತ್ರಕಾರ್ಯದಲ್ಲಿ ಕಂಡುಬಂದಿತು. ಆಶ್ರಯ ಅಂಬೇಡ್ಕರ್ ಆವಾಜ ಯೋಜನೆಯಲ್ಲಿ ಇತ್ತಿಚೆಗೆ ಕೆಲವರಿಗೆ ಮಾತ್ರ ಆಶ್ರಯ ಮನೆಗಳನ್ನು ಸರಕಾರ ಕೊಡಮಾಡಿತ್ತಲಿದೆ. ಜೊತೆಗೆ ಭಾಗ್ಯಜ್ಯೋತಿ ಯೋಜನೆ ಅಡಿಯಲ್ಲಿ ಸರಕಾರವು ವಿದ್ಯುತ್ ಸೌಲಭ್ಯ ಕೆಲವರಿಗೆ ಮಾತ್ರ ನೀಡಿದೆ.

ಅಡಿಟಿಪ್ಪಣಿಗಳು

1. ಗುರುಮೂರ್ತಿ ಕೆ.ಜಿ., ಜನಪದ ಸಮಾಜ ಮತ್ತು ಸಂಸ್ಕೃತಿ ಪು.ಸಂ. 30–31, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ 1979.
2. ಬರಗೂರ ರಾಮಚಂದ್ರಪ್ಪ, ಉಪಸಂಸ್ಕೃತಿ, ಲೇಖನ ಮಾಲಿಕೆ, ಪು. 12, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು 1992.
3. ಅದೇ ಪು. 14.
4. ಚಂದ್ರಶೇಖರಯ್ಯ ಎಂ.ಜಿ., ಬಸವಣ್ಣ: ಜೀವನ ಸಾಧನೆ, ಪು. 1, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು 2009.
5. ಚಂದ್ರಶೇಖರಯ್ಯ ಎಂ.ಜಿ., ಬಸವಣ್ಣ: ಜೀವನ ಸಾಧನೆ, ಪು. 14, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು 2009.
6. ವಿರೂಪಾಕ್ಷಿ ಪೂಜಾರಹಳ್ಳಿ (ಸಂ) ದಲಿತರು ಮತ್ತು ಚರಿತ್ರೆ, ಪ್ರಸ್ತಾವನೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ 2005.
7. ಡಾ. ಅರ್ಜುನ ಗೊಳಸಂಗಿ, ದಲಿತರ ಬದುಕು ಮತ್ತು ಸಂಸ್ಕೃತಿ, ಜಾನಪದೀಯ ಅಧ್ಯಯನ ಪು. 7., ವಿಮೋಚನಾ ಪ್ರಕಾಶನ, ಅಥಣಿ, ಜಿ: ಬೆಳಗಾವಿ 2000.

8. ಅದೇ ಪು. 7, 2000.
9. ಕನ್ನಡ ಸಾಹಿತ್ಯ ಪರಿಷತ್ತು ನಿಗಂಟು, ಸಂಪುಟ–8, ಪು. 828, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು 1976.
10. ಡಾ. ಅರವಿಂದ ಮಾಲಗತ್ತಿ, ದಲಿತ ಸಾಹಿತ್ಯ ಚಳವಳಿಯ ತಾತ್ವಿಕ ಚಿಂತನೆ, ಪು. 3, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು 1992.
11. ಡಾ. ಪುರುಷೋತ್ತಮ ಬಿಳಿಮಲೆ, ದಲಿತ–ಬಂಡಾಯ ಸಾಹಿತ್ಯ ಪು. 15, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು 1993.
12. ಅರ್ಜುನ ಗೊಳಸಂಗಿ, ದಲಿತರ ಬುದುಕು ಮತ್ತು ಸಂಸ್ಕೃತಿ ಪ್ರಕಾಶನ, ಅಥಣಿ, ಜಿ. ಬೆಳಗಾವಿ 2000.
13. ಶರ್ಮಾ ಆರ್. ಎಸ್., ಪ್ರಾಚೀನ ಭಾರತದಲ್ಲಿ ಶೂದ್ರರು, ಪು. 6, ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು 2004.
14. ಡಾ. ನಾರಾಯಣ, ಯಾನಾದಿಗಳ ಸಂಸ್ಕೃತಿ, ಪು.1, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು 1993.
15. ಗುರುಮೂರ್ತಿ ಕೆ.ಜಿ., ಜನಪದ ಸಮಾಜ ಮತ್ತು ಸಂಸ್ಕೃತಿ, ಪು.31, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ 1979.
16. ಕ್ಷೇತ್ರಕಾರ್ಯ ದಿನಾಂಕ 28.5.2010 ಗುಲಬರ್ಗಾ ನಗರದ ಗಾಜಿಪುರ ಬಡಾವಣೆ.
17. ಗುರುಮೂರ್ತಿ ಕೆ.ಜಿ., ಜನಪದ ಸಮಾಜ ಮತ್ತು ಸಂಸ್ಕೃತಿ, ಪು. 35, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ 1979.
18. ಗುರುಮೂರ್ತಿ ಕೆ.ಜಿ., ಜನಪದ ಸಮಾಜ ಮತ್ತು ಸಂಸ್ಕೃತಿ, ಪು. 37, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ 1979.
19. ಕ್ಷೇತ್ರಕಾರ್ಯ, ದಿನಾಂಕ 8.12.210.
20. ಕ್ಷೇತ್ರಕಾರ್ಯ ದಿನಾಂಕ 15.03.2011.

ಅಧ್ಯಾಯ–4

ಸಫಾಯಿ ಕರ್ಮಚಾರಿಗಳ ಆರ್ಥಿಕ ಸ್ಥಿತಿಗತಿ

4.1 ಸಫಾಯಿ ಕರ್ಮಚಾರಿ ವೃತ್ತಿ ಮತ್ತು ಸವಾಲುಗಳು

4.2 ಸಫಾಯಿ ಕರ್ಮಚಾರಿಗಳ ಉದ್ಯೋಗ

4.3 ಪರ್ಯಾಯ ಉದ್ಯೋಗ

ಅಧ್ಯಾಯ–4

ಸಫಾಯಿ ಕರ್ಮಚಾರಿಗಳ ಆರ್ಥಿಕ ಸ್ಥಿತಿಗತಿ

ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಶ್ರಮ ವಿಭಜನೆಗೆ (Division of Labour) ಅಂದರೆ, ಇಂಥಿಂತವರು ಇಂಥದೇ ಕೆಲಸವನ್ನು ಮಾಡಬೇಕೆಂಬ ನಿಯಮ ಅಥವಾ ಪದ್ಧತಿಗಳಿರುವವು. ಇಂಥ ಶ್ರಮ ವಿಭಜನೆಯು ಜಾತಿ, ಲಿಂಗ, ವಯಸ್ಸು, ಪಂಗಡ ಮತ್ತು ಪರಿಣತಿ, ಕೌಶಲ್ಯಗಳ ಆಧಾರದ ಮೇಲೆ ನಿರ್ಧರಿಸಿಕೊಂಡು ಬರಲಾಗಿದೆ. ಭಾರತೀಯ ಸಮಾಜದಲ್ಲಿ ಈ ವಿಭಜನೆಯ ನಿಯಮಗಳನ್ನು ಬಿಡದೆ ಪಾಲಿಸಲಾಗುವುದು.

ಉದಾ: ದೇವರ ಪೂಜೆ, ಯಜ್ಞಯಾಗಾದಿಗಳು, ವೇದಾಧ್ಯಯನ, ಬೋಧನೆಗೆ ವೈದಿಕರು, ವ್ಯಾಪಾರ ಮಾಡುವುದು, ಹೊಲಗಳಲ್ಲಿ ದುಡಿಯುವುದು ವೈದಿಕೇತರರ ಕೆಲಸಗಳಾಗಿವೆ. ಊರಿನಲ್ಲಿನ ದನಕರುಗಳು ಇತರೆ ಪಶುಗಳು ಸತ್ತರೆ, ಊರನ್ನು ಕಸಗುಡಿಸಿ ಸ್ವಚ್ಛಗೊಳಿಸುವುದಕ್ಕೆ, ಮನೆಗೆಲಸ ಮಾಡುವುದಕ್ಕೆ ಶೂದ್ರರು, ದಲಿತರು ಹಾಗೆಯೇ ಸವರ್ಣಿಯರ ಮನೆಯಲ್ಲಿನ ಮಲವನ್ನು ಸ್ವಚ್ಛಗೊಳಿಸುವುದಕ್ಕೆ ಸಫಾಯಿ ಕರ್ಮಚಾರಿಗಳ ಕೆಲಸಗಳಾಗಿ ಪರಂಪರಾಗತವಾಗಿ ಸಮಾಜದಲ್ಲಿ ಅನನೂಚಾನವಾಗಿ ನಡೆದುಕೊಂಡು ಬಂದಿವೆ.

ಒಂದೊಂದು ಸಮುದಾಯು ಅವರವರ ಜೀವನ ವಿಧಾನ, ಪರಿಸರ, ವೃತ್ತಿ, ಸಂಸ್ಕೃತಿ ಹಲವಾರು ವೈಶಿಷ್ಟ್ಯಗಳನ್ನೊಳಗೊಂಡಿದೆ. ಬದುಕಿನ ಕ್ಷೇತ್ರಗಳು ಬದಲಾದಂತೆ ಜೀವನದ ಅನುಭವಗಳು ಬದಲಾಗುತ್ತವೆ. ಸಮುದಾಯ ಜೀವನ ಕ್ರಮಗಳೂ ಪರಿರ್ತನೆ ಹೊಂದುತ್ತ ಬಂದರೂ "ಇನ್ನೂ ಅನೇಕ ಜಾತಿ, ಸಮುದಾಯಗಳು ತಮ್ಮ ಸಂಸ್ಕೃತಿಯ ಚೌಕಟ್ಟನ್ನು ಮೀರಿಲ್ಲ. ತಾವು ಇನ್ನೂ ಪರಂಪರಾಗತವಾಗಿ ಅನುಸರಿಸುತ್ತ ಬಂದಿರುವ ನಂಬಿಕೆ, ಆಚರಣೆ, ರೂಢಿ, ಸಂಪ್ರದಾಯಗಳ ಶರಣರಾಗಿದ್ದಾರೆ."[1] ದಲಿತರು, ಬಂಗಿಗಳು, ಆರ್ಥಿಕತೆ ಕೆಳಮಟ್ಟದಲ್ಲಿದ್ದರೂ ಅವರ ಸಾಂಸ್ಕೃತಿಕ ಬದುಕು ಮಾತ್ರ ಶ್ರೇಷ್ಠವಾದದ್ದು. ಹೀಗಾಗಿ ಇಲ್ಲಿ ದಲಿತ ವೃಂದದ ಸಫಾಯಿ ಕರ್ಮಚಾರಿಗಳ ಬದುಕು ಮತ್ತು ಆರ್ಥಿಕ ಅಂಶಗಳನ್ನು ಅಧ್ಯಯನಿಸುವ ಪ್ರಯತ್ನವನ್ನು ಮಾಡಲಾಗಿದೆ.

ನಮ್ಮ ದೇಶದಲ್ಲಿ ಸುಮಾರು ಮೂರು ಸಾವಿರಕ್ಕೂ ಹೆಚ್ಚು ದಲಿತ, ಬುಡಕಟ್ಟು ಜಾತಿಗಳಿವೆ ಎಂದು ಗುರುತಿಸಲಾಗಿದೆ. ಪ್ರತಿಯೊಂದು ಬುಡಕಟ್ಟು ಜಾತಿಗಳ ಜೀವನ ವಿಧಾನ, ವೃತ್ತಿ, ಸಂಪ್ರದಾಯಗಳೆಲ್ಲ ದಟ್ಟವಾದ ಸಾಂಸ್ಕೃತಿಕ ಅಂಶಗಳು ಹುದುಗಿಕೊಂಡಿವೆ. ಅಷ್ಟೇ ಅಲ್ಲದೆ ಇವುಗಳು ವಿವಿಧ ಸಮಾಜಿಕ ಸಮುದಾಯಗಳ ಜೊತೆಗೆ ಹೊಂದಿರುವ ಸಂಬಂಧಗಳು ಅಷ್ಟೇ ಕುತೂಹಲವನ್ನು ಕೆರಳಿಸುವಂಥದ್ದಾಗಿವೆ.

ಪ್ರಾಚೀನ ಕಾಲದಿಂದಲೂ ಸಫಾಯಿಕರ್ಮಿಗಳನ್ನು ಅಸ್ಪೃಶ್ಯರೆಂದು ಸವರ್ಣೀಯರು ಸಾಮಾಜಿಕವಾಗಿ ಕಾಣುತ್ತ ಬಂದಿದ್ದಾರೆ. ಇವರನ್ನು ಮುಟ್ಟಿಸಿಕೊಳ್ಳುವುದು ಒತ್ತಟಿಗಿರಲಿ ಮಾತೊಂದೆಡೆ, ಅವರ ಮುಖದರ್ಶನ, ಹೆಸರನ್ನೂ ಸಹ ಕೇಳಲು ಇಷ್ಟಪಡುವುದಿಲ್ಲ. ಊರ ನೈರ್ಮಲ್ಯವನ್ನು ಕಾಪಾಡಲು ತನ್ನ ಜೀವನವನ್ನು ಮುಡುಪಾಗಿಟ್ಟ ಆತನೊಬ್ಬ ನಿಜವಾದ ಕಾಯಕ

ಯೋಗಿ. ಇವರು ಪ್ರಾಚೀನ ಕಾಲದಿಂದಲೂ ವಂಶ ಪಾರಂಪರ್ಯವಾಗಿ ಮಾಡುತ್ತ ಬಂದಿರುವ ವೃತ್ತಿ ಹೀನವೆನಿಸಿದರೂ ಅದು ಒಂದರ್ಥದಲ್ಲಿ ಶ್ರೇಷ್ಠವೇ ಆಗಿದೆ.

4.2 ಸಫಾಯಿ ಕರ್ಮಚಾರಿ ಸವಾಲುಗಳು

ಸಫಾಯಿ ಕರ್ಮಚಾರಿಗಳ ಬದುಕಿನ ರೀತಿಯನ್ನು ಅನುಸರಿಸಿ ಅವರ ವೃತ್ತಿಯನ್ನು ಈ ಕೆಳಗಿನಂತೆ ಗುರುತಿಸಬಹುದು.

1) ಪ್ರಮುಖ ವೃತ್ತಿ 2) ಉಪವೃತ್ತಿ

ಇವುಗಳಲ್ಲಿ ಮೊದಲನೆಯದು ವಂಶಪಾರಂಪರ್ಯವಾಗಿ ಬಂದಿದ್ದರೆ, ಮತ್ತೊಂದು ಆಯಾ ಕಾಲ, ಪರಿಸರ, ಸಂದರ್ಭಕ್ಕೆ ಅನುಗುಣವಾಗಿ ಕೈಕೊಳ್ಳುವ ವೃತ್ತಿಯಾಗಿದೆ.

ಹೊಟ್ಟೆಪಾಡಿಗಾಗಿ ಊರಿಂದೂರಿಗೆ ಸಂಚರಿಸುತ್ತ ಉದ್ಯೋಗವನ್ನು ಮಾಡಿಕೊಂಡು ಉಪಜೀವನ ಸಾಗಿಸುತ್ತ ಬಂದ ಸಫಾಯಿಕರ್ಮಿಗಳು ಇತ್ತೀಚೆಗೆ ಕೆಲವೊಂದು ಊರುಗಳಲ್ಲಿ ಅದರಲ್ಲೂ ಬಹು ಮುಖ್ಯವಾಗಿ ಪಟ್ಟಣ, ನಗರಗಳಲ್ಲಿ, ಸ್ಥಿರವಾಗಿ ಉಳಿದುಕೊಂಡು ಮಲ ತೊಳೆಯುವ ಕೆಲಸ ಮಾಡುತ್ತಿರುವುದು ಕಂಡುಬರುತ್ತದೆ.

ಹಿಂದಿನ ಕಾಲದಿಂದಲೂ ಕೂಲಿಕಾರರು, ನಗರ ಸ್ವಚ್ಛಗೊಳಿಸುವ ಕರ್ಮಚಾರಿಗಳು ಇದ್ದರೆಂಬುದಕ್ಕೆ ಇತಿಹಾಸದಲ್ಲಿ ಬೇಕಾದಷ್ಟು ನಿದರ್ಶನಗಳಿವೆ. ಪ್ರಾಚೀನ ಶಾಸನಗಳು, ಕೃತಿಗಳು ನ್ಯಾಯಶಾಸ್ತ್ರಗಳು ಇವುಗಳನ್ನು ಅಲ್ಲಲ್ಲಿ ಉಲ್ಲೇಖಿಸಿವೆ. ಆದರೆ "ಅವರಿಗೆ ಕೊಡುತ್ತಿದ್ದ ಕೂಲಿಯ ಪ್ರಮಾಣ ವಿವರಗಳು ದೊರೆಯುವುದಿಲ್ಲ."[2] ಪ್ರಾಚೀನ ಕಾಲದಲ್ಲಿ ಉಪಾಧ್ಯಾಯರಿಗೆ, ಶಿಲ್ಪಿಗಳಿಗೆ, ಇತರ ಅಧಿಕಾರಿಗಳಿಗೆ ಭೂಮಿ, ಕಾಣಿ ದತ್ತಿಗಳನ್ನು ಬಿಡಲಾಗುತ್ತಿದ್ದರೆ, ಇತರೆ ಕೂಲಿಕಾರ್ಮಿಕರಿಗೆ ಹಣ ಅಥವಾ ದವಸ ದಾನ್ಯ ರೂಪದಲ್ಲಿ ಕೂಲಿ ನೀಡುತ್ತಿದ್ದರೆಂಬುದು ಮಾತ್ರ ತಿಳಿದುಬರುವುದು.

ವೃತ್ತಿಕಾರರಲ್ಲಿ ಎರಡು ಪಂಗಡಗಳನ್ನು ಪ್ರಾಚೀನ ಉಲ್ಲೇಖಗಳು ಗುರುತಿಸುತ್ತವೆ. ಅವುಗಳೆಂದರೆ ಒಂದು ಗ್ರಾಮೀಣ ವೃತ್ತಿಕಾರರು ಇವರಲ್ಲಿ ಹೆಚ್ಚಾಗಿ ಕೃಷಿ ಕಾರ್ಮಿಕರು ಇಲ್ಲವೆ ಕೃಷಿ ಸಂಬಂಧಿ ಕಾರ್ಮಿಕರು ಆಗಿರುತ್ತಾರೆ. ಇನ್ನು ಎರಡನೆಯದಾದ ವರ್ಗದವರೆಂದರೆ ನಗರ ಕಾರ್ಮಿಕರು. ಇವರಲ್ಲಿ ಹೆಚ್ಚಿನವರು ಲೋಹಕಾರರು, ಕಟ್ಟಡ ನಿರ್ಮಾಣಕಾರರು, ನಗರ

ನೈರ್ಮಲ್ಯಕಾರರು. ಅಂದರೆ ಜಾಡ ಮಾಲಿಗಳು, ನೀರಗುಂಟಿ, ಕಸವಿಲೇವಾರಿ ಮಾಡುವವರು. ಮಲ ತೊಳೆಯುವವರು ಸೇರಿರುತ್ತಾರೆ. ಅಂದರೆ ಪ್ರಾಚೀನ ಕಾಲದಿಂದಲೂ ಮಲ ತೊಳೆಯುವ ಕಾರ್ಮಿಕರು ಇದ್ದರೆಂಬುದು ಇದರಿಂದ ತಿಳಿಯಲಾಗುತ್ತದೆ. "ಬರೋ ಮತ್ತು ಎಮೆನೋ ಅವರುಗಳು ತಮ್ಮ ಕೋಶಗಳಲ್ಲಿ ಕೆಲವು ಕಾರ್ಮಿಕರು ಮತ್ತು ಅವರ ಕೆಲಸ ಕಾರ್ಯಗಳನ್ನು ತಿಳಿಸಿರುವರು."[3]

ಕರ್ನಾಟಕದಲ್ಲಿ ಆಯಾ ಕೆಲಸಗಾರರ ಸಂಘಗಳು ಪ್ರಾಚೀನ ಕಾಲದಿಂದಲೂ ಇದ್ದವೆಂಬುದನ್ನು ಶಾಸನಗಳು ಹೇಳುತ್ತವೆ. ಅಂಥವುಗಳಲ್ಲಿ "ವಣಿಕ ಅಥವಾ ವೀರ ಬಣಂಜು ಸಂಘವು ಅಯ್ಯಾವಳೆ ಐನೂರ್ವಶದ್ದಾಗಿತ್ತು."[4] ಇನ್ನು ಪ್ರಾಚೀನ ಗ್ರೀಸ್‌ನಲ್ಲಿ "ಸಮಾನ ವೃತ್ತಿಯ ವರ್ತಕರು, ನೌಕಾ ಸ್ವಾಮಿಗಳು, ಕಸಬುದಾರರು, ಕೂಲಿ ಕೆಲಸಗಾರರು ತಮ್ಮದೇ ಆದ ಸಂಘಗಳನ್ನು ಮಾಡಿಕೊಂಡಿದ್ದರು"[5] ಎನ್ನಲಾಗುತ್ತದೆ. ಅಲ್ಲೆಲ್ಲ ತಮ್ಮ ಸಂಘದ ಸದಸ್ಯರು ಸೇರಿ ಕಾರ್ಯಕರ್ತರನ್ನು ಚುನಾಯಿಸುತ್ತಿದ್ದರು. ಸಂಘದ ಸಭೆಯು ನಿಯಮಾನುಸಾರ ರಚಿಸಲಾಗುತ್ತಿತ್ತು. ಸದಸ್ಯರು ಆರ್ಥಿಕ ಮತ್ತು ಸಾಮಾಜಿಕವಾಗಿ ಹೇಗೆ ಉನ್ನತ ಸ್ಥಿತಿಗೆ ತಲುಪಬೇಕು ಎಂಬುದರ ಬಗೆಗೆ ಸಮಾಲೋಚನೆಗಳನ್ನು ನಡೆಸುತ್ತಿದ್ದರು. ಸಂಘದಿಂದ ಉಚ್ಚಾಟಿಸುವ ಇಲ್ಲವೆ ಸಂಘಕ್ಕೆ ಸೇರಿಸಿಕೊಳ್ಳುವ ನಿರ್ಧಾರವು ಅದುವೇ ಕೈಕೊಳ್ಳುವ ಸ್ವಾಯತ್ತ ಸಂಸ್ಥೆಯಾಗಿತ್ತೆಂದು ತಿಳಿದು ಬರುತ್ತದೆ. ಅಂದರೆ ಅವು ಸ್ವಯಮಾಡಳಿತವನ್ನು ಹೊಂದಿದ್ದವೆಂದು ಹೇಳಬೇಕಾಗುತ್ತದೆ. ಹಾಗೆಯೇ ಭಾರತೀಯರಲ್ಲಿ ಸಂಘಗಳು ಯಾವ ತೆರನಾಗಿ ಅಧಿಕಾರ ಹಾಗೂ ಅವುಗಳ ಕಾರ್ಯವ್ಯಾಪ್ತಿ ಹೊಂದಿದ್ದವು ಎಂಬುದರ ಬಗೆಗೆ ಪ್ರಾಚೀನ ಉಲ್ಲೇಖಗಳು ಸ್ಪಷ್ಟವಾಗಿಲ್ಲ. ಆದರೆ ಇಲ್ಲಿಯೂ ಕೂಲಿಕಾರರ ಕಾರ್ಮಿಕರ ಸಂಘಟಿತ ಗುಂಪುಗಳು ಇದ್ದವೆಂಬುದು ಮಾತ್ರ ಪ್ರಾಚೀನ ಉಲ್ಲೇಖಗಳಿಂದ ತಿಳಿದುಕೊಳ್ಳಬಹುದಾಗಿದೆ. ಅದರಂತೆ ಪ್ರಾಚೀನ ಗಾಣಿಗರ ಸಂಘ, ಜಾಡಕುಲ ಸಂಘ ಇವುಗಳಿಗೆ ಹೊರತಾಗಿ ಸಮಾಜದ ಅನೇಕ ಜಾತಿ ಸಮುದಾಯದವರು ಸಂಘಗಳನ್ನು ಕಟ್ಟಿಕೊಳ್ಳದೆ ಅಸಂಘಟಿತರಾಗಿಯೇ ಇದ್ದು ಕೂಲಿ ಕೆಲಸಗಳಿಂದ ಉಪಜೀವನ ಸಾಗಿಸುತ್ತಿದ್ದರು. ಅಂಥವರಲ್ಲಿ ಸಫಾಯಿಕರ್ಮಿಗಳೂ ಸೇರಿರುವರು.

ಭಾರತದ ಮೂಲ ನಿವಾಸಿಗಳಾಗಿದ್ದೂ ಇಲ್ಲಿನ ಜನರಿಂದಲೇ ಹೊರದೂಡಿಸಿಕೊಂಡು ಬಹಿಷ್ಕೃತ ರೂಪದಲ್ಲಿ ಬದುಕುತ್ತಿರುವ ಎಷ್ಟೋ ಸೋದರ ಸಂಬಂಧಿಗಳು ಅಸ್ಪೃಶ್ಯರಾಗಿದ್ದಾರೆ. ಇದಕ್ಕೆ "ಸಾಂಸ್ಕೃತಿಕ ಮಾನವ ಶಾಸ್ತ್ರವೂ ಪುರಾವೆ ನೀಡುತ್ತದೆ. ಆದರೆ ಅವರ ಬದುಕಿನ ಉಲ್ಲೇಖ

ನಮ್ಮ ಸಂಸ್ಕೃತಿಯ ಅಕ್ಷರದ ದಾಖಲೆಗಳಲ್ಲಿ ರೂಪಗೊಳ್ಳಲಿಲ್ಲ"[6] ಎಂಬ ವಿಚಾರ ಸತ್ಯವಾಗಿದೆ. ಜೀತವೊಂದೇ ಇವರ ಬಾಳಿಗೆ ಅಂಟಿದ ನಂಟು. ಪ್ರಾಚೀನ ಕಾಲದಿಂದಲೂ ಭಾರತೀಯ ಬದುಕಿನಲ್ಲಿ ಈ ಜಾತಿ ಶಬ್ದವು ಮನೆಯ ಹೊರಗೆ ವೈರುದ್ಯಗಳನ್ನು ಸೃಷ್ಟಿಸಿತು. ಭಾರತದ ವಿವಿಧಡೆಗಳಲ್ಲಿ ದಾಸ ವ್ಯವಸ್ಥೆ ಮೂಲವಾಗಿ ಸಮಾಜ ಪಕ್ಷಪಾತದಿಂದ ಬಹಿಷ್ಕೃತರಾದವರನ್ನು ಜಾತಿ ಸಂಸ್ಕೃತಿಯ ಪ್ರಭಾವಿಯುತ ಕೀಳು ಮನಸ್ಸುಗಳು ಸೇರಿ ಅವರನ್ನು 'ಹೊಲೆ' ಮಾಡಿದವು. ಮೂಲದಲ್ಲಿ ಒಂದೇ ಸಮುದಾಯಕ್ಕೆ ಸೇರಿ, ವೃತ್ತಿಯ ವೈವಿಧ್ಯತೆಗಳಿಂದಾಗಿ ಇಂದು ಬೇರೆ ಬೇರೆ ಜಾತಿ, ಪಂಗಡ, ಸಮುದಾಯಗಳ ಹೆಸರುಗಳಲ್ಲಿ ಇವರು ಗುರುತಿಸಿಕೊಳ್ಳುತ್ತಿರುವುದು ಭಾರತೀಯ ಚರಿತ್ರೆಯ ವಿಪರ್ಯಾಸವೇ ಸರಿ.

ಭಾರತದ "ಸ್ವಾತಂತ್ರ್ಯಪೂರ್ವದ ಕೊನೆಯ ಎರಡೂವರೆ ದಶಕಗಳ ಅವಧಿಯಲ್ಲಿ ಆಳಿದ ನಿಜಾಮರ ಅಧೀನದ ಕರ್ನಾಟಕ ಪ್ರದೇಶವು ಹೈದರಾಬಾದ ಕರ್ನಾಟಕ ಎಂದು ಕರೆಯಿಸಿಕೊಂಡಿತು."[7] ನಿಜಾಮ ರಾಜ್ಯದಲ್ಲಿ ಗುಲಬರ್ಗಾವೂ ಒಂದು 'ಜಿಲ್ಲಾ' ಆಡಳಿತ ಕೇಂದ್ರವಾಗಿತ್ತು. ಅದಕ್ಕೂ ಪೂರ್ವದಲ್ಲಿ ಈ ಪ್ರದೇಶವು ಮೌರ್ಯರಿಂದ ಮೊದಲುಗೊಂಡು, ಶಾತವಾಹನರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಬಹಮನಿ, ಆದಿಲ್‌ಶಾಹಿ ಸಾಮ್ರಾಜ್ಯಗಳ ಕಾಲದಲ್ಲಿ ರಾಜಕೀಯ, ಧಾರ್ಮಿಕ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಪಲ್ಲಟಗಳಿಗೊಳಗಾಗಿದ್ದು ನಿಜವಿದೆ. ಈ ಪಲ್ಲಟಗಳು ಇಲ್ಲಿನ ಅನೇಕ ಜಾತಿ, ಪಂಗಡಗಳ ಮೇಲೆ ಮಹತ್ವವಾದ ಪ್ರಭಾವವನ್ನು ಬೀರಿದವು. ಅವುಗಳಲ್ಲಿ ಸಫಾಯಿಕರ್ಮಿಗಳು ಸೇರಿದ್ದಾರೆ.

ಸ್ವಾತಂತ್ರ್ಯಪೂರ್ವ ಕಾಲಾವಧಿಯಲ್ಲಿ ದಲಿತ, ದಮನಿತ ಜಾತಿ ಸಮುದಾಯಗಳಲ್ಲಿ ನಡೆದ ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕ ಸ್ಥಿತ್ಯಂತರಗಳನ್ನು ಗುರುತಿಸಿದರೂ ಅವುಗಳನ್ನು ಬಹು ಆಯಾಮಗಳಲ್ಲಿ ಶೋಧಿಸಲು ಸಾಧ್ಯವಾಗಿಲ್ಲ. ಯಾಕೆಂದರೆ ಸ್ಥಿತ್ಯಂತರಗಳ ಬಗೆಗೆ ನಿಖರವಾದ ದಾಖಲೆಗಳ ಕೊರತೆಯನ್ನು ಎದುರಿಸಬೇಕಾಗಿದೆ. ಆದರೂ ಇತಿಹಾಸದ ಸೂಕ್ಷ್ಮಪಳೆಯುಳಿಕೆಗಳಿಂದ ಶೋಧಿಸಿ ನೋಡುವುದು ತೀರ ಅವಶ್ಯಕವಾಗಿದೆ.

ಆದಿಲ್‌ಶಾಹಿ–ವಿಜಯನಗರ ಸಾಮ್ರಾಜ್ಯಗಳ ಅವನತಿಯ ನಂತರ ಈ ಪ್ರಾಂತ್ಯದಲ್ಲಿ ಉದ್ಭವಿಸಿದ ಅರಾಜಕತೆ, ಅಸ್ಥಿರತೆ ಅದರಿಂದ ಇಲ್ಲಿನ ಆರ್ಥಿಕ ಚಟುವಟಿಕೆಗಳ ಮೇಲೆ ಆದ

ಪರಿಣಾಮಗಳನ್ನು ಅಧ್ಯಯನ ಮಾಡುವುದರಿಂದ ಈ ಹೊತ್ತಿನ ಇಲ್ಲಿನ ಕಾರ್ಮಿಕ ಸಮುದಾಯಗಳ ಹಿಂದುಳಿವಿಕೆಗೆ ಕಾರಣಗಳನ್ನು ಗುರುತಿಸಬಹುದು.

4.3 ಗುಲಬರ್ಗಾ ಜಿಲ್ಲೆಯ ಜನ ಸಾಂದ್ರತೆ

ಭೌಗೋಳಿಕವಾಗಿ ಕರ್ನಾಟಕದ ಈಶಾನ್ಯ ಭಾಗದಲ್ಲಿರುವ ಗುಲಬರ್ಗಾ ಜಿಲ್ಲೆಯು ಪುನರ್ ವಿಂಗಡಣೆಯ ನಂತರ ಏಳು (7) ತಾಲೂಕುಗಳನ್ನು ಒಳಗೊಂಡಿದೆ. ಜಿಲ್ಲೆಯ ಆಳಂದ ಮತ್ತು ಅಫಜಲ್‌ಪುರ ತಾಲೂಕುಗಳ ನೆರೆಯ ಮಹಾರಾಷ್ಟ್ರದ ಉಸ್ಮಾನಾಬಾದ ಮತ್ತು ಸೊಲ್ಲಾಪುರ ಜಿಲ್ಲೆಗಳ ಗಡಿಗೆ ಹಾಗೂ ಸೇಡಂ ಮತ್ತು ಚಿಂಚೋಳಿ ತಾಲೂಕುಗಳು ಆಂಧ್ರಪ್ರದೇಶದ ಸಂಗಾರೆಡ್ಡಿ ಮತ್ತು ಮೆಹಬೂಬ ನಗರ ಜಿಲ್ಲೆಗೆ ಅಂಟಿಕೊಂಡಿವೆ. ಇನ್ನುಳಿದ ಜೇವರಗಿ ತಾಲೂಕಿಗೆ ಬಿಜಾಪುರ ಜಿಲ್ಲೆ ಮೇರೆಯಾಗಿದೆ. ಅದರಂತೆ ಚಿತಾಪುರ ಮತ್ತು ಗುಲಬರ್ಗಾ ತಾಲೂಕುಗಳು ಜಿಲ್ಲೆಯ ಮಧ್ಯವರ್ತಿ ಸ್ಥಳದಲ್ಲಿವೆ.

4.3.1 ಜಿಲ್ಲೆಯ ಜನಸಂಖ್ಯಾ ಬೆಳವಣಿಗೆ

ಒಂದು ಪ್ರದೇಶದ ಸಮಗ್ರ ಆರ್ಥಿಕ ಸ್ಥಿತಿಗತಿಯ ಅಧ್ಯಯನಕ್ಕೆ ಅಲ್ಲಿಯ ಜನಸಂಖ್ಯಾ ಬೆಳವಣಿಗೆ ಮತ್ತು ಸಾಮಾಜಿಕ ಲಕ್ಷಣಗಳು ಅವಿಭಾಜ್ಯ ಅಂಗವಾಗಿದ್ದು, ಇವು ಪ್ರದೇಶದಿಂದ ಪ್ರದೇಶಕ್ಕೆ ವಿಭಿನ್ನವಾಗಿವೆ. ರಾಜ್ಯದ ಇತರೆ ಜಿಲ್ಲೆಗಳಂತೆ ಗುಲಬರ್ಗಾ ಜಿಲ್ಲೆಯೂ ಸಹ ವಿವಿಧ ಧರ್ಮ, ಜಾತಿ, ಮತ, ವರ್ಗ, ಭಾಷೆ, ಆಚಾರ-ವಿಚಾರಗಳು, ನಂಬಿಕೆಗಳು, ಉದ್ಯೋಗ ಇವೇ ಮೊದಲಾದ ವೈವಿಧ್ಯತೆಗಳಿಂದ ಕೂಡಿದ್ದು ಕಂಡುಬರುತ್ತದೆ. ಈ ಎಲ್ಲ ಲಕ್ಷಣಗಳನ್ನು ಅನ್ವಯಿಸಿಕೊಂಡು ಈ ಅಧ್ಯಾಯದಲ್ಲಿ ಗುಲಬರ್ಗಾ ಜಿಲ್ಲೆಯ ಸಫಾಯಿ ಕರ್ಮಚಾರಿ ಜನ ಮತ್ತು ಅವರ ಆರ್ಥಿಕ ಸ್ಥಿತಿಗತಿಯ ಬಗ್ಗೆ ಚರ್ಚಿಸಲಾಗಿದೆ.

ಭಾಷಾವಾರು ಆಧಾರದ ಮೇಲೆ ಕರ್ನಾಟಕ ರಾಜ್ಯ ರಚನೆಗೊಂಡಾಗ ಈ ಹಿಂದೆ ಹೈದರಾಬಾದ ರಾಜ್ಯದ ಭಾಗವಾಗಿದ್ದ ಗುಲಬರ್ಗಾ ಜಿಲ್ಲೆಯು ನಂತರ ಕರ್ನಾಟಕ ರಾಜ್ಯದ

ಜಿಲ್ಲೆಯಾಗಿ ಮುಂದುವರಿಯಿತು. ರಾಜ್ಯ ಪುನರ್‌ವಿಂಗಡಣೆಯ ನಂತರ 1961ರಲ್ಲಿ ಜಿಲ್ಲೆಯಲ್ಲಿ ಮೊದಲನೇ ಜನಗಣತಿ ನಡೆಯಿತು.

1961ರ ಜನಗಣತಿಯಂತೆ ಜಿಲ್ಲೆಯ ಜನಸಂಖ್ಯೆಯು ಒಟ್ಟು 13,99,457 ಇದ್ದು 2011ರಲ್ಲಿ 42,82,169 ಆಗಿರುವುದು. ರಾಜ್ಯ 30 ಜಿಲ್ಲೆಗಳನ್ನು ಅವಲೋಕಿಸಿದರೆ, ಗುಲಬರ್ಗಾ ಜಿಲ್ಲೆಯು ಆರನೇ ಸ್ಥಾನ ಪಡೆದಿರುವುದು. ಜಿಲ್ಲೆಯಲ್ಲಿನ 1961 ರಿಂದ 2011ರ ವರೆಗಿನ ಜನಸಂಖ್ಯೆಯನ್ನು ತಾಲೂಕವಾರು ಹಾಗೂ ನಗರ ಪ್ರದೇಶಗಳಿಗನುಗುಣವಾಗಿ ಈ ಕೆಳಗಿನಂತೆ ನೋಡಬಹುದಾಗಿದೆ.

ಕೋಷ್ಟಕ–1

ಕ್ರ ಸಂ.	ತಾಲೂಕು	ನಗರ/ ಪಟ್ಟಣ	1961	1971	1891	1991	2001
1.	ಅಫಜಲಪುರ	ಗ್ರಾಮಾಂತರ	90071	111779	114490	15856	170826
		ನಗರ	18056	19678	21550	22186	24570
		ಒಟ್ಟು	1081270	131457	134168	173042	195396
2.	ಆಳಂದ	ಗ್ರಾಮಾಂತರ	142326	175635	18967	234270	245770
		ನಗರ	18009	21568	26435	26564	27990
		ಒಟ್ಟು	160335	197203	216112	260834	273760
3.	ಚಿತಾಪುರ	ಗ್ರಾಮಾಂತರ	142948	172256	170810	208965	210650
		ನಗರ	31828	44793	87073	100516	120770
		ಒಟ್ಟು	174776	217049	257883	219481	331420
4.	ಗುಲಬರ್ಗಾ	ಗ್ರಾಮಾಂತರ	131704	160134	181179	213024	245078
		ನಗರ	97069	145588	221325	310920	421057
		ಒಟ್ಟು	228773	305722	402504	523944	666135
5.	ಜೇವರಗಿ	ಗ್ರಾಮಾಂತರ	111212	136358	144754	188707	206567
		ನಗರ	--	--	--	22257	24993
		ಒಟ್ಟು	111212	136358	144754	180964	231560
6.	ಚಿಂಚೋಳಿ	ಗ್ರಾಮಾಂತರ	191615	125200	142766	178577	196365
		ನಗರ	6047	7380	10434	10584	12792

		ಒಟ್ಟು	107763	132580	153200	189161	32427
7.	ಸೇಡಂ	ಗ್ರಾಮಾಂತರ	82162	95938	11361	129889	139620
		ನಗರ	8527	11378	15823	33266	357621
		ಒಟ್ಟು	**90739**	**07316**	**129414**	**163155**	**497241**

"1961 ರಿಂದ2001ರ ಜನಗಣತಿಯ ಪ್ರಕಾರ ಜಿಲ್ಲೆಯ ಗ್ರಾಮಾಂತರ ಮತ್ತು ನಗರ ಪ್ರದೇಶಗಳಲ್ಲಿ ಜನಸಂಖ್ಯಾ ಬೆಳವಣಿಗೆಯು 9.22 ರಷ್ಟು ಆಗಿದ್ದು, ರಾಜ್ಯದ ಬೆಳವಣಿಗೆಗಿಂತ ಶೇ. 3.60ರಷ್ಟು ಹೆಚ್ಚಾಗಿರುತ್ತದೆ. ಇದಕ್ಕೆ ಕಾರಣ ಈ ಅವಧಿಯಲ್ಲಿ ಉದ್ಯೋಗ, ವ್ಯಾಪಾರ, ಶಿಕ್ಷಣಕ್ಕಾಗಿ ಜನರು ಅನ್ಯ ಸ್ಥಳಗಳಿಂದ ವಲಸೆ ಬಂದುದ್ದನ್ನು ಎತ್ತಿ ತೋರಿಸುತ್ತದೆ. ಗ್ರಾಮಾಂತರ ಪ್ರದೇಶದಲ್ಲಿ ಜಿಲ್ಲೆಯಲ್ಲಿ ಅಭಾವ ಪರಸ್ಥಿತಿಯೂ ತಲೆದೋರಿದಾಗ ಸಣ್ಣಪುಟ್ಟ ಹಿಡುವಳಿದಾರರು, ಒಣ ಬೇಸಾಯದವರು, ವ್ಯವಸಾಯ ಕಾರ್ಮಿಕರು ಹಂಗಾಮಿಯಾಗಿ ನಗರ ಪ್ರದೇಶಗಳಿಗೆ ಗುಳೆ ಹೋಗುವುದು ಸರ್ವೇಸಾಮಾನ್ಯವಾಗಿರುವುದು. ಈ ಮೇಲಿನ ಕೋಷ್ಟಕದಲ್ಲಿ 1961 ರಿಂದ ಈವರೆಗಿನ ಜನಸಂಖ್ಯೆ ಪ್ರಮಾಣದಲ್ಲಿನ ವ್ಯತ್ಯಾಸ ಇದನ್ನು ಎತ್ತಿತೋರಿಸುವುದು."[8]

4.4 ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ

ಭಾರತದ ರಾಜ್ಯಾಂಗದ 341ನೇ ವಿಧಿಯಲ್ಲಿ ಸೂಚಿಸಿರುವಂತೆ ನಿರ್ಧಿಷ್ಟಗೊಳಿಸಿರುವ ಜಾತಿ, ಸಮುದಾಯಗಳನ್ನು ಅಥವಾ ಅವುಗಳ ಭಾಗಗಳನ್ನು ಪರಿಶಿಷ್ಟ ಜಾತಿ ಎಂದು ಕರೆಯಲಾಗಿದೆ. "ಭಾರತ ಸರಕಾರವು ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಂತೆ 1976ರಲ್ಲಿ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ವರ್ಗಗಳ (ಬುಡಕಟ್ಟುಗಳು) ಆಜ್ಞೆಗೆ ತಿದ್ದುಪಡಿಮಾಡಿದೆ."[9] ಈ ತಿದ್ದುಪಡಿ ಸೂಚಿಸಿದಂತೆ ಗುಲಬರ್ಗಾ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ವರ್ಗಗಳನ್ನು ಜನಗಣತಿ ಆಧಾರದ ಮೇಲೆ ನೋಡಬಹುದು.


ಗುಲಬರ್ಗಾ ಜಿಲ್ಲೆಯಲ್ಲಿ 1981ರ ಜನಗಣತಿಯಂತೆ, 4,55,462 1991ರ ಜನಗಣತಿಯಂತೆ, 6,10,641 ಮತ್ತು 2001ರ ಜನಗಣತಿಯಂತೆ 9,65,840 ಇದ್ದು ಕ್ರಮವಾಗಿ ಜಿಲ್ಲೆಯ ಒಟ್ಟಿನ ಜನಸಂಖ್ಯೆಯು ಶೇ. 22.89 ರಷ್ಟು ಹಾಗೂ ಶೇ. 23.65ರಷ್ಟಿದೆ. 1981ರ ಜನಗಣತಿಯಂತೆ


ಜಿಲ್ಲೆಯಲ್ಲಿ ವಿವಿಧ ಜಾತಿಗೆ ಸೇರಿದ 100ಕ್ಕೂ ಹೆಚ್ಚು ಪರಿಶಿಷ್ಟ ಜಾತಿಗಳ ಜನಸಂಖ್ಯೆಯು ಈ ರೀತಿಯಾಗಿದೆ.


ಕೋಷ್ಟಕ–2

ವರ್ಷ	ಬಂಗಿ	ಬೋವಿ	ಬ್ಯಾಗಾರ್	ಚಲವಾದಿ	ಚೆನ್ನದಾಸ	ಹೊಲೆಯ	ಮಾದಿಗ
1981	1466	27344	918	751	1279	151109	87755
1991	1578	28464	1950	1991	1376	176106	88754
2001	1662	29352	1198	1779	1487	18705	99652

ವರ್ಷ	ಡೋಹರ	ಸಮಗಾರ	ಕೊರಮ	ಮಹತ್ ತರಲ್	ಮಾಂಗ	ಮಾಂಗಗಾರುಡಿ	ಇತರೆ
1981	4098	6114	2893	1163	3086	612	2500
1991	4208	7215	2965	1272	3198	729	3900
2001	4342	8952	3105	1365	3302	864	5010







ಈ ಎಲ್ಲ ಅಂಕಿಸಂಖ್ಯೆಗಳನ್ನು ಕೂಲಂಕುಷವಾಗಿ ಸಮೀಕ್ಷಿಸಲಾಗಿ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ, ವರ್ಗ ಸಮುದಾಯದ ಜನಸಂಖ್ಯೆಯಲ್ಲಿ ಏರುಪೇರಾಗಿರುವುದು ತಿಳಿದುಬರುತ್ತದೆ. ಹಾಗೇ ಗ್ರಾಮಾಂತರ ಮತ್ತು ನಗರ ಪ್ರದೇಶಗಳ ಸ್ಥಿತಿಗತಿಯೂ ಈ ತೆರನಾದ ಏರುಪೇರುಗಳನ್ನು ಕಾಣಲು ಸಾಧ್ಯವಿದೆ."[10]


ಹಲವಾರು ಕಾರಣಗಳಿಂದ ಗ್ರಾಮಗಳು ಬೆಳೆದು ಪುರಗಳಾಗಿ ಹಾಗೂ ನಗರಗಳಾಗಿ ರೂಪುಗೊಂಡಿರುವುದನ್ನು ಇತಿಹಾಸದ ಉದ್ದಕ್ಕೂ ಗಮನಿಸಬಹುದು. ಪ್ರಾಚೀನ ಮತ್ತು ಮಧ್ಯಕಾಲೀನದಲ್ಲಿ ವರ್ತಕ ಸಮುದಾಯಗಳು ಈ ನಿಟ್ಟಿನಲ್ಲಿ ಹೆಚ್ಚು ಆಸಕ್ತವಾಗಿದ್ದವು. ಮತ್ತು ಇವುಗಳಿಗೆ ರಾಜಾಶ್ರಯವೂ ಇತ್ತು. ಪಟ್ಟಣ ಅಥವಾ ನಗರಗಳ ಬೆಳವಣಿಗೆಗೆ ನಗರೀಕರಣ ಎನ್ನುತ್ತಾರೆ. ನಗರವು ಆಧುನಿಕ ಕಾಲದ ಒಂದು ಸಾಮಾಜಿಕ ಪ್ರಕ್ರಿಯೆಯಾಗಿದೆ. ಪಟ್ಟಣಗಳನ್ನು ಗ್ರಾಮೀಣದಿಂದ ಪ್ರತ್ಯೇಕಿಸಲು ಕೆಲವು ಲಕ್ಷಣಗಳನ್ನು ಸಾಮಾಜಿಕ ವಿಜ್ಞಾನಿಗಳು ಗುರುತಿಸುತ್ತಾರೆ. ಅದರಲ್ಲೂ "ಕನಿಷ್ಟ ಐದು ಸಾವಿರ ಹಾಗೂ ಅದರ ಮೇಲ್ಪಟ್ಟ ಜನಸಂಖ್ಯೆಯುಳ್ಳ ಊರನ್ನು ಪಟ್ಟಣ ಎಂದು ಗುರುತಿಸಲಾಗುತ್ತದೆ. ಶೇ. 75% ರಷ್ಟು ಜನರು ಕೃಷಿಯಲ್ಲದ ಉದ್ಯೋಗಗಳನ್ನು ಹೊಂದಿರಬೇಕು ಮತ್ತು ಜನಸಾಂದ್ರತೆಯ ಪ್ರತಿ ಚ.ಕೀ.ಮೀ.ಗೆ 400ರಷ್ಟು ಇರಬೇಕು. ಸಾಮಾನ್ಯವಾಗಿ ಪುರಸಭೆ, ನಗರಸಭೆ, ದಂಡು (ಕಂಟೋನ್ಮೆಂಟ್) ಪ್ರದೇಶ, ಅನುಸೂಚಿತ (ನೋಟಿಫೈಡ್) ಪ್ರದೇಶಗಳು ನಗರ ವ್ಯಾಪ್ತಿಯಲ್ಲಿ ಬರುತ್ತವೆ."[12] 1971ರ ಜನಗಣತಿ ಆಧಾರದಂತೆ ಗುಲಬರ್ಗಾ ಜಿಲ್ಲೆಯು ಪಟ್ಟಣಗಳ ಜನಸಂಖ್ಯೆಯಲ್ಲಿ 11ನೇ ಸ್ಥಾನದಲ್ಲಿದ್ದರೆ, 1981ರ ಜನಗಣತಿಯ ಪ್ರಕಾರ ಅದು 7ನೇ ಸ್ಥಾನಕ್ಕೆ ಬಂದಿದೆ. ಅಲ್ಲದೆ, 2001ರ ಜನಗಣತಿಯ ಜನಸಂಖ್ಯೆಯು ರಾಜ್ಯದ ಜಿಲ್ಲೆಗಳಲ್ಲಿಯೇ 5ನೇ ಸ್ಥಾನಕ್ಕೇರಿದ್ದನ್ನು ಕಾಣಬಹುದು.

1991ರ ಜನಗಣತಿಯಂತೆ ಜಿಲ್ಲೆಯ ಆಳಂದ, ಅಫಜಲಪುರ, ಚಿತಾಪುರ 2001ರ ಜನಗಣತಿಯ ಪ್ರಕಾರ ವಾಡಿ, ಶಹಾಬಾದ ಪಟ್ಟಣಗಳನ್ನು ಶಾಸನಬದ್ಧ (ಸ್ಟ್ಯಾಚ್ಯೂಟರಿಟನ್) ಅನುಸೂಚಿತ ಪ್ರದೇಶ ಸಮಿತಿಯು ಪಟ್ಟಣಗಳೆಂದು ಪರಿಗಣಿಸಿದೆ.

1901 ರಿಂದ 2001ರ ಜನಗಣತಿಯ ಪ್ರಕಾರ ಜಿಲ್ಲೆಯಲ್ಲಿ 19 ಪಟ್ಟಣ ಪ್ರದೇಶ ಮತ್ತು ಅವುಗಳ ಜನಸಂಖ್ಯೆಯನ್ನು ಈ ಕೆಳಗಿನಂತೆ ಕೊಡಲಾಗಿದೆ.

ಕೋಷ್ಟಕ–3

ದಶಕ	ಜಿಲ್ಲೆ/ಗುಲಬರ್ಗಾ ಪಟ್ಟಣ	ಜನಸಂಖ್ಯೆ	ಒಟ್ಟು ಜನಸಂಖ್ಯೆಯ ಸಾಮಾನ್ಯ ಜಾತಿ	ಅನುಸೂಚಿತ ಜಾತಿ
2001	ಗುಲಬರ್ಗಾ	465309	76.71%	43.28%
	ಅಫಜಲಪುರ	34964	34.08%	25.49%
	ಆಳಂದ	41625	45.94%	27.14%
	ಚಿತ್ತಾಪುರ	39921	39.65%	24.19%
	ಚಿಂಚೋಳಿ	31215	31.02%	24.18%
	ಜೇವರಗಿ	37210	37.42%	30.02%
	ಸೇಡಂ	45025	45.02%	39.18%
	ಶಹಾಬಾದ	66020	65.02%	34.21%
	ವಾಡಿ	41700	47.10%	27.82%




ಸಾಮಾನ್ಯವಾಗಿ ಜನಸಾಂದ್ರತೆಯು ಗ್ರಾಮೀಣ ಪ್ರದೇಶದಲ್ಲಿಕ್ಕಿಂತ ನಗರ ಪ್ರದೇಶದಲ್ಲಿ ಹೆಚ್ಚಾಗಿರುತ್ತದೆ. 2001ರ ಜನಗಣತಿಯಂತೆ ಜಿಲ್ಲೆಯ ಗುಲಬರ್ಗಾ ನಗರ ಮತ್ತು ಪಟ್ಟಣಗಳ ಜನಸಂಖ್ಯೆ ಸಾಂದ್ರತೆಯಲ್ಲಿ ವ್ಯತ್ಯಾಸಗಳು ಕಂಡುಬರುವುದು. ಗುಲಬರ್ಗಾ ನಗರ (406) ಅಫಜಲ್‌ಪುರ (128) ಆಳಂದ (185) ಚಿತಾಪುರ (178) ವಾಡಿ (191) ಶಹಾಬಾದ (205) ಕಮಲಾಪುರ, ಮಹಾಗಾಂವ ಸರ್ಕಲ್ (ಬೆಣ್ಣೆತೊರೆ ಕ್ಯಾಂಪ್ (165) ಹಾಗೂ ಒಟ್ಟು ಜಿಲ್ಲೆಯ ಜನಸಾಂದ್ರತೆ ಚ.ಕಿ.ಮೀ.ಗೆ 195ರಷ್ಟು ಇರುವುದು.

4.5 ಸಫಾಯಿ ಕರ್ಮಚಾರಿ ಜನಸಂಖ್ಯೆ

ಈ ಮುಂದಿನ ಕೋಷ್ಟಕದಲ್ಲಿ 1981, 1991 ಮತ್ತು 2001ರ ಜನಗಣತಿಯ ಪ್ರಕಾರ ಗುಲಬರ್ಗಾ ಜಿಲ್ಲೆಯಲ್ಲಿರುವ ಪರಿಶಿಷ್ಟ ಜಾತಿಗೆ ಸೇರಿದ ಬಂಗಿ (ಸಫಾಯಿ) ಕರ್ಮಚಾರಿಗಳನ್ನು ಜಿಲ್ಲೆಯ ನಗರ ಮತ್ತು ಪಟ್ಟಣ ಪ್ರದೇಶಗಳಿಗನುಗುಣವಾಗಿ ಕೊಡಲಾಗಿದೆ.

ಕೋಷ್ಟಕ–4

ದಶಕ	ನಗರ/ಪಟ್ಟಣ	ಗಂಡಸರು	ಹೆಂಗಸರು	ಒಟ್ಟು
1981	ಗುಲಬರ್ಗಾ ನಗರ	783	638	1466
1991	ಗುಲಬರ್ಗಾ ನಗರ	1205	1105	2310
2001	ಗುಲಬರ್ಗಾ ನಗರ	1678	1652	3330




ಗುಲಬರ್ಗಾ ನಗರದ ಗಾಜಿಪುರ ಬಡಾವಣೆಯಲ್ಲಿ ಸಮಿಷ ಸಮುದಾಯದಲ್ಲಿ 1981ರಲ್ಲಿ ವಾಸಿಸುತ್ತಿದ್ದರು. ಅವರ ಸಂಖ್ಯೆ 1466 ರಷ್ಟಾಗಿತ್ತು. ಅದೇ 1991ರಲ್ಲಿ ಇವರ ಜನಸಂಖ್ಯೆ 2310 ರಷ್ಟಾಯಿತು. 2001ರಲ್ಲಿ ಭಂಗಿಗಳ ಒಟ್ಟು ಸಂಖ್ಯೆ (ಸ್ತ್ರೀ ಮತ್ತು ಪರುರುಷರು ಸೇರಿ) 3330 ಆಗಿದೆ.

ಈ ಹಿಂದೆ ಕೇವಲ ಗಾಜಿಪುರ ಬಡಾವಣೆಯಲ್ಲಿ ಇವರ ನೆಲೆಯಿತ್ತು. ಆನಂತರದಲ್ಲಿ ತಾರಫೇಲ್ (ರೇಲ್ವೆ ಸ್ಟೇಶನ್ ಪ್ರದೇಶ) ಫಿಲ್ಟರ್ ಬೆಡ್ ಸ್ಥಳಗಳಲ್ಲಿ ಸಫಾಯಿ ಕರ್ಮಚಾರಿ ಬಡಾವಣೆಗಳು ನಿರ್ಮಾಣವಾಗಿವೆ ಎಂದು ಹೇಳಬಹುದು. ಹೀಗೆ ಬೇರೆ ಬೇರೆ ವಾಸದ ನೆಲೆಗಳು ನಿರ್ಮಾಣವಾಗಿರುವುದಕ್ಕೆ ಈ ಜನಸಂಖ್ಯೆಲ್ಲಿ ಹೆಚ್ಚಳವು ಕಾರಣವಾಗಿದೆ.


ಗುಲಬರ್ಗಾ ಜಿಲ್ಲೆಯ ತಾಲೂಕು ಮತ್ತು ಪಟ್ಟಣವಾರು ಸಫಾಯಿ ಕರ್ಮಚಾರಿ ಸಮುದಾಯದ ಜನಸಂಖ್ಯೆ ವಿವರ.

ಕೋಷ್ಟಕ – 5


ನಗರ/ ತಾಲೂಕು	1981		1991		2001	
	ಪುರುಷ	ಸ್ತ್ರೀ	ಪುರುಷ	ಸ್ತ್ರೀ	ಪುರುಷ	ಸ್ತ್ರೀ
ಗುಲಬರ್ಗಾ	1902	1810	4200	4150	6990	6902
ಅಫಜಲ್‌ಪುರ	790	625	1390	1321	2701	2750
ಆಳಂದ	1112	1100	2315	2215	6129	6015
ಚಿತ್ತಾಪುರ	1500	1350	2875	2705	4310	4290
ಚಿಂಚೋಳಿ	785	735	1600	1550	2700	2725
ಜೇವರಗಿ	300	350	1500	1350	2750	2600
ಸೇಡಂ	1800	1750	3900	2650	4350	4210
ಶಹಬಾದ	2270	2169	4210	4220	6200	6275
ವಾಡಿ	2100	2050	4100	4080	6550	6000



೧೯೮೧ ಗುಲಬರ್ಗಾ ಪುರುಷ
೧೯೮೧ ಗುಲಬರ್ಗಾ ಸ್ತ್ರೀ
೧೯೮೧ ಅಫಜಲಪುರ ಪುರುಷ
೧೯೮೧ ಅಫಜಲಪುರ ಸ್ತ್ರೀ
೧೯೮೧ ಆಳಂದ ಪುರುಷ
೧೯೮೧ ಆಳಂದ ಸ್ತ್ರೀ
೧೯೮೧ ಚಿತ್ತಾಪುರ ಪುರುಷ
೧೯೮೧ ಚಿತ್ತಾಪುರ ಸ್ತ್ರೀ
೧೯೮೧ ಚಿಂಚೋಳಿ ಪುರುಷ
೧೯೮೧ ಚಿಂಚೋಳಿ ಸ್ತ್ರೀ



೧೯೯೧ ಗುಲಬರ್ಗಾ ಪುರುಷ
೧೯೯೧ ಗುಲಬರ್ಗಾ ಸ್ತ್ರೀ
೧೯೯೧ ಅಫಜಲಪುರ ಪುರುಷ
೧೯೯೧ ಅಫಜಲಪುರ ಸ್ತ್ರೀ
೧೯೯೧ ಆಳಂದ ಪುರುಷ
೧೯೯೧ ಆಳಂದ ಸ್ತ್ರೀ
೧೯೯೧ ಚಿತ್ತಾಪುರ ಪುರುಷ
೧೯೯೧ ಚಿತ್ತಾಪುರ ಸ್ತ್ರೀ
೧೯೯೧ ಚಿಂಚೋಳಿ ಪುರುಷ
೧೯೯೧ ಚಿಂಚೋಳಿ ಸ್ತ್ರೀ
೧೯೯೧ ಜೇವರಗಿ ಪುರುಷ
೧೯೯೧ ಜೇವರಗಿ ಸ್ತ್ರೀ
೧೯೯೧ ಸೇಡಂ ಪುರುಷ
೧೯೯೧ ಸೇಡಂ ಸ್ತ್ರೀ
೧೯೯೧ ಶಹಾಬಾದ ಪುರುಷ
೧೯೯೧ ಶಹಾಬಾದ ಸ್ತ್ರೀ
೧೯೯೧ ವಾಡಿ ಪುರುಷ
೧೯೯೧ ವಾಡಿ ಪುರುಷ ಸ್ತ್ರೀ



4.6 ಸಫಾಯಿ ಕರ್ಮಚಾರಿ ಉದ್ಯೋಗ

ಸಫಾಯಿ ಕರ್ಮಚಾರಿಗಳು ಸಾವಿರಾರು ವರ್ಷಗಳಿಂದ ಇಂದಿನವರೆಗೂ ಉಳ್ಳವರ, ಶ್ರೀಮಂತರ, ಉಚ್ಛ ಜಾತಿಯವರ ಮಲ ತೊಳೆಯುವ ಅಥವಾ ಮಲಹೊರುವ ಉದ್ಯೋಗವನ್ನು ಮಾಡುತ್ತ ಬಂದಿದ್ದಾರೆ. ಇದೊಂದು ಸಾಮಾಜಿಕವಾಗಿ ಅತ್ಯಂತ ಹೀನ ಕೆಲಸವೇ ಹೌದಾದರೂ ಇದು ಈ ಜನಾಂಗದವರು ತಲತಲಾಂತರಗಳಿಂದ ಮಲ ಬಳಿಯುವ ಕೆಲಸವನ್ನು ಸಾಂಪ್ರದಾಯಕ ನೆಲೆಗಟ್ಟಿನ ಮೇಲೆ ಅನುಸರಿಸುತ್ತ ಬಂದಿರುವರು.

ಭಾರತಕ್ಕೆ ಸ್ವಾತಂತ್ರ್ಯ ದೊರಕಿ ಆರು ದಶಕಗಳೇ ಸಂದಿವೆ. "ಸ್ವಾತಂತ್ರ್ಯಾನಂತರ ದೇಶಕ್ಕೆ ಹೊಸ ಸ್ವರೂಪವನ್ನು ಕೊಡಲು ಪ್ರಯತ್ನಗಳು ನಡೆದವು. ಸಮಾಜವಾದೀ ಸ್ವರೂಪದ ಸಮಾಜ ರಚನೆಯ ಮೇಲೆ ಹೆಚ್ಚು ಒತ್ತಡ ಬಿದ್ದಿರುವುದನ್ನು ನಾವೆಲ್ಲ ಬಲ್ಲೆವು. ವರ್ಣ, ವರ್ಗ, ಲಿಂಗ ಇವುಗಳಲ್ಲಿಯ ಅಸಮಾನತೆ ಹೋಗಲಾಡಿಸಲು ಪ್ರಯತ್ನಗಳು ನಡೆಯುತ್ತಲೇ ಇವೆ. ಔದ್ಯಮಿಕ ರಂಗದಲ್ಲಿ ತೀವ್ರತರವಾದ ಬದಲಾವಣೆಗಳಿಗೆ ತೀವ್ರಗತಿ ಬಂದಿದೆ. ಜಾಗತೀಕರಣ, ಉದಾರೀಕರಣದಂಥ ಪ್ರಕ್ರಿಯೆಗಳಿಂದಲೂ ನಾವು ಹೊಸದನ್ನು ಕಾಣುತ್ತಿದ್ದೇವೆ."[13] ಇದೆಲ್ಲವನ್ನು ಸಾಧಿಸಿದ್ದೇವೆ ಎಂದರೆ ಅದು ಅರ್ಧ ಸತ್ಯವನ್ನು ಮಾತ್ರ ಒಪ್ಪಿಕೊಂಡಂತೆಯೇ ಸರಿ. ಇನ್ನರ್ಧ ಸತ್ಯವು ಭಾರತದಂತಹ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಜಾತಿ ಕಾರಣದಿಂದ ಮನುಷ್ಯನನ್ನು ಮುಟ್ಟಿಸಿಕೊಳ್ಳಲಾರದ ಮನುಷ್ಯನು ಮಾಡಲಾಗದ ಕೆಲಸವನ್ನು ಅದೇ ಮನುಷ್ಯನು ಮತ್ತೋರ್ವನಿಗೆ ಹಚ್ಚಿದ್ದೂ ಇನ್ನುಳಿದ ಸತ್ಯವಾಗಿದೆ. ಇವತ್ತಿಗೂ ಸಫಾಯಿ ಕರ್ಮಚಾರಿಗಳು ಮಲ ತೊಳೆಯುವ ಪ್ರಾಚೀನ ಉದ್ಯೋಗವನ್ನೇ ಅವಲಂಬಿಸಿಕೊಂಡು ಆರ್ಥಿಕ ಜೀವನವನ್ನು ಸಾಗಿಸುತ್ತಿದ್ದಾರೆ.

4.2 ಸಫಾಯಿ ಕರ್ಮಚಾರಿ ಪರಿಕರಗಳು

ಸಫಾಯಿ ಕರ್ಮಚಾರಿಗಳು ಸೂರ್ಯೋದಯಕ್ಕೂ ಮೊದಲೆ ಏಳುವರು. ತಮ್ಮ ಉದ್ಯೋಗಕ್ಕೆ ಹೋಗುವ ಮುಂಚೆ ಕೆಲಸದ ಸಲಕರಣೆಗಳನ್ನು ವ್ಯವಸ್ಥಿತಗೊಳಿಸಿಕೊಳ್ಳುತ್ತಾರೆ. ಸಫಾಯಿ ಕರ್ಮಚಾರಿಗಳ ಸಾಮಾನು ಸಲಕರಣೆಗಳು ಹೀಗಿವೆ.

ಅ) ಬಕೇಟ್

ಬಕೇಟನ್ನು ಮಲ ತೊಳೆಯುವುದಕ್ಕೆ ನೀರಿಗಾಗಿ ಉಪಯೋಗಿಸುತ್ತಾರೆ. ಹೆಚ್ಚಾಗಿ ಬಕೇಟ್ಟು ಕಬ್ಬಿಣದ್ದಾಗಿರುತ್ತದೆ. ಪ್ರತಿಯೊಬ್ಬ ಬಂಗಿಯು ಬಕೀಟನ್ನು ಹೊಂದಿರಲೇಬೇಕು. ಇತ್ತೀಚೆಗೆ ಕೆಲವರು ಕಬ್ಬಿಣದ ಬಕೇಟ್ ಬದಲಾಗಿ ಫೈಬರ್ ಪ್ಲಾಸ್ಟಿಕ್ ಬಕೇಟನ್ನು ಬಳಸುತ್ತಿರುವರು. ಹಿಂದಿನ ಕಾಲದಲ್ಲಿ ಸಫಾಯಿಗಳು ಶೌಚಾಲಯದಿಂದ ಮಲವನ್ನು ಬಳಿದು ಬಕೇಟುಗಳಲ್ಲಿ ತುಂಬಿಸಿ ತಲೆಯ ಮೇಲೆ ಹೊತ್ತು ಒಯ್ದು ಊರ ಹೊರಗೆ ಸುರುವುತ್ತಿದ್ದರು. ಹೈದರಾಬಾದ ಕರ್ನಾಟಕದ ಬಹುತೇಕ ನಗರ,

ಪಟ್ಟಣಗಳಲ್ಲಿ ಬಂಗಿಗಳು ಮಲವನ್ನು ತಲೆ ಮೇಲೆ ಹೊತ್ತುಕೊಂಡು ಹೋಗುವ ಪದ್ಧತಿ ಇತ್ತು. ಈಗ ತಲೆ ಮೇಲೆ ಹೊರುವುದನ್ನು ಸರಕಾರವು ನಿಷೇದಿಸಿದೆ. ಬದಲಾಗಿ ಶೌಚಾಲಯಗಳನ್ನು ಒಳಚರಂಡಿ ವ್ಯವಸ್ಥೆಗೆ ಸಂಪರ್ಕ ಕಲ್ಪಿಸಿದೆ. ಹೀಗಾಗಿ ಸಫಾಯಿಗಳು ಈಗ ಶೌಚಾಲಯ ತೊಳೆಯುವ, ಒಳಚರಂಡಿ ಸ್ವಚ್ಛಗೊಳಿಸುವ ಕೆಲಸವನ್ನು ಮಾಡುತ್ತಿದ್ದಾರೆ.

ಬ) ಕಸಬಾರಿಗೆ

ಕಸಬಾರಿಗೆಯನ್ನು ಶೌಚಾಲಯದ ಮಲವನ್ನು ಬಳಿಯುವುದಕ್ಕೆ ಮತ್ತು ಶುಚಿಗೊಳಿಸವುದುದಕ್ಕೆ ಬಳಸಲಾಗುತ್ತದೆ. ಕಸಬಾರಿಗೆಯು ಹೆಚ್ಚಾಗಿ ಟೆಂಗಿನ ಕಡ್ಡಿಯದ್ದಾಗಿರುತ್ತದೆ. ಆದರೆ ಆಳಂದ, ಚಿತ್ತಾಪುರ, ಕಮಲಾಪುರಗಳಲ್ಲಿ ಹುಲ್ಲು ಕಡ್ಡಿ ಬಾರಿಗೆಯನ್ನು ಸಫಾಯಿ ಕೆಲಸಕ್ಕೆ ಬಳಸುವುದನ್ನು ಕಾಣುತ್ತೇವೆ. ಬಕೇಟ್ ಮತ್ತು ಬಾರಿಗೆಯನ್ನು ಅವರು ದೇವರ ಸ್ವರೂಪದಲ್ಲಿ ಗೌರವಿಸುತ್ತಾರೆ. ಯಾಕೆಂದರೆ ಅವು ಅವರ ಉದ್ಯೋಗದ ಸಾಧನ ಸಲಕರಣೆಗಳಾಗಿವೆ. ಪ್ರತಿಯೊಬ್ಬ ಉದ್ಯೋಗಿಯೂ ಒಂದೊಂದು ಬಕೇಟ ಮತ್ತು ಬಾರಿಗೆಯನ್ನು ನಿಯಮಿತವಾಗಿ ಹೊಂದಿರುತ್ತಾರೆ.

ಕ) ಚಂಬು

ಸಫಾಯಿ ಕಾರ್ಯದಲ್ಲಿ ನೀರನ್ನು ಹಾಕುವುದಕ್ಕೆ ಉಪಯೋಗಿಸುವ ಸಣ್ಣ ನೀರಿನ ಸಂಗ್ರಹವಾಗಿದೆ. ಹಿಂದಕ್ಕೆಲ್ಲ ಅಲುಮಿನಿಯಮ್ ಅಥವಾ ಕಂಚಿನ ಪಾತ್ರೆಯನ್ನು ನೀರನ್ನು ಹಾಕುವುದಕ್ಕೆ ಉಪಯೋಗಿಸಲಾಗುತ್ತಿತ್ತಂತೆ. ಆದರೆ ಈಗ ಅವುಗಳ ಸ್ಥಾನದಲ್ಲಿ ಪ್ಲಾಸ್ಟಿಕ್ ಮಗ್ಗು ಬಂದಿವೆ. ಕೆಲವು ಕಡೆ ಇದಕ್ಕೆ ಮಗ್ಗು ಎಂದರೆ, ಮತ್ತೆ ಕೆಲವು ಊರುಗಳಲ್ಲಿ ಜಗ್ಗು ಅಥವಾ ಚಂಬು ಎಂದು ಹೆಸರಿಸುವರು.

ಡ) ಬದ್ದಿ

ಸಾಮಾನ್ಯವಾಗಿ ಬದ್ದಿಯು ಒಳಚರಂಡಿಯನ್ನು ಸ್ವಚ್ಛಗೊಳಿಸುವುದಕ್ಕೆ ಬಳಸುವ ಸಲಕರಣೆಯಾಗಿದೆ. ಬದ್ದಿಯು ಬಿದಿರಿನದು ಇಲ್ಲವೆ ಬೆತ್ತದ ಕಟ್ಟಿಗೆಯದ್ದಾಗಿರುತ್ತದೆ. ಬದ್ದಿಯ ಉದ್ದ

ಸುಮಾರು ಇಪ್ಪತ್ತರಿಂದ ಮೂವತ್ತು ಅಡಿಯವರೆಗೂ ಇರುವುದು. ಒಳಚರಂಡಿಯು ಕಸಕಡ್ಡಿ ಅಥವಾ ಮತ್ತಿತರ ಪದಾರ್ಥಗಳಿಂದ ಕಟ್ಟಿ ನೀರು ಮುಂದಕ್ಕೆ ಹೋಗದಿದ್ದಾಗ ಸಫಾಯಿಗಳು ಪೈಪಲೈನಿನ ಚಂಬರಿನಿಂದ ಬದ್ದಿ ಹಾಕುವುದರ ಮೂಲಕ ಕಡ್ಡಿ, ಕಸವನ್ನು ಸರಿಸಿ ನೀರು ಸರಾಗವಾಗಿ ಹೋಗುವಂತೆ ಮಾಡುವರು. ಬದ್ದಿಗಳನ್ನು ಹೆಚ್ಚಾಗಿ ಸಾರ್ವಜನಿಕ ಒಳಚರಂಡಿಗಳ ರಿಪೇರಿಗೆ ಬಳಸುವರು.

ಇ) ಹಗ್ಗ

ಬಿದಿರಿನ ಅಥವಾ ಬೆತ್ತದ ಉದ್ದನೆಯ ಕಟ್ಟಿಗೆಗಳನ್ನು ಹಗ್ಗದಿಂದ ಒಂದಕ್ಕೊಂದು ಜೋಡಿಸಿ ಬಿಗಿಯಾಗಿ ಕಟ್ಟುತ್ತಾರೆ. ಈ ಹಗ್ಗವು ಸಾಮಾನ್ಯವಾಗಿ ಸಣಬು, ನಾರು ಇಲ್ಲವೆ ಟೆಂಗಿನ ಎಳೆಗಳಿಂದ ಸಿದ್ಧಪಡಿಸಿಸಲಾಗಿರುತ್ತದೆ.

ಸಫಾಯಿಗಳು ಇವುಗಳನ್ನು ಮಾರುಕಟ್ಟೆಯಿಂದ ಖರೀದಿಸುವರು. ಒಳಚರಂಡಿ ಕೆಟ್ಟ ಸಂದರ್ಭದಲ್ಲಿ ಮನೆಯವರು ಸಫಾಯಿಗಳಿಂದ ಕೆಲಸ ಮಾಡಿಸುವಾಗ ಕೊಡುವ ಕೂಲಿ ಹಣದಲ್ಲಿಯೇ ಇವರು ಬದ್ದಿ ಹಗ್ಗ ಮೊದಲಾದವುಗಳನ್ನು ಖರೀದಿ ತರಬೇಕು. ಅದಕ್ಕೆಂದು ಪ್ರತ್ಯೇಕ ಹಣವನ್ನು ಕೊಡುವುದಿಲ್ಲ. ಇತ್ತೀಚೆಗೆ ಮನೆಯ ಮಾಲಿಕರಿಂದ ಖರೀದಿ ಹಣವನ್ನು ಪಡೆಯುತ್ತಿದ್ದಾರೆ.

ಸಫಾಯಿ ಕೆಲಸವು ಬಂಗಿಗಳಿಗೆ ವಂಶಪಾರಂಪರೆಯಿಂದ ಬಂದ ಉದ್ಯೋಗವಾಗಿದೆ. ಇದು ಈ ಜಾತಿ ಸಮುದಾಯಕ್ಕೇ ಮೀಸಲಾದುದು. ತಂದೆಯಿಂದ ಮಗನಿಗೆ ಹೀಗೆ ವಂಶಪಾರಂಪರೆಯಿಂದ ನಡೆಸಿಕೊಂಡು ಬರುವರು.


ಸಫಾಯಿ ಕಾರ್ಯಕ್ಕೆ ಗಂಡಸರು ಮತ್ತು ಹೆಂಗಸರು ಇಬ್ಬರೂ ತೊಡಗಿಸಿಕೊಂಡಿರುತ್ತಾರೆ. ಹೆಂಗಸರು ಊರಿನ ಮನೆಗಳ ಶೌಚಾಲಯಗಳನ್ನು ಸ್ವಚ್ಛಗೊಳಿಸುವ ಕೆಲಸಕ್ಕೆ ಹೋದರೆ, ಗಂಡಸರು ಹೆಚ್ಚಾಗಿ ಸರಕಾರಿ, ಖಾಸಗಿ, ಕಚೇರಿಗಳು, ಸಾರ್ವಜನಿಕ ಶೌಚಾಲಯಗಳನ್ನು ಸ್ವಚ್ಛಗೊಳಿಸುವ ಕೆಲಸಕ್ಕೆ ತೊಡಗುತ್ತಾರೆ.

ಹೆಂಗಸರು ಸಲ್ವಾರ್ ಕಮೀಜ್ ಮತ್ತು ಪೈಜಾಮ ಉಡುಗೆ ತೊಟ್ಟು ಮುಖ ಮುಚ್ಚುವಂತೆ ತೆಳ್ಳನೆಯ ದುಪ್ಪಟಾ (ಓಡನಿ) ಅಥವಾ ಶಲ್ಯವನ್ನು ಹಾಕಿಕೊಂಡಿರುತ್ತಾರೆ. ಬಹುಶಃ ಮಲೀನ ಕೆಲಸಕ್ಕೆ ತೊಡಗಿಸಿಕೊಂಡ ತಮ್ಮನ್ನು ಉತ್ತಮ ಜಾತಿಯವರು ನೋಡಿ ಅಸಹ್ಯಪಟ್ಟುಕೊಳ್ಳದಿರಲೆಂದೋ ಇಲ್ಲವೆ ಇತರೆ ಸಂದರ್ಭದಲ್ಲಿ ತಮ್ಮನ್ನು ಯಾರೂ ಮಲತೊಳೆಯುವರೆಂದು ಗುರುತಿಸಿ ಅಸಹ್ಯಪಟ್ಟಿಕೊಳ್ಳದಿರಲೆಂದೋ ಅವರು ಈ ಮುಸುಕು ಪದ್ಧತಿಯನ್ನು ಅನುಸರಿಸುವರು. ಮನೆಯ ಸ್ವಚ್ಛತೆಗೆ ತೊಡಗಿಸಿಕೊಂಡವರಿಗೆ ತಿಂಗಳಿಗೆ ಇಂತಿಷ್ಟು ಅಂತ ಹಣ (ಕೂಲಿ) ಮಾತನಾಡಿರುತ್ತಾರೆ. ಹಾಗೆಯೇ ಸಾರ್ವಜನಿಕ, ಸರಕಾರಿ ಶೌಚಾಲಯಗಳ ಸ್ವಚ್ಛತೆಯಿಂದ ಸ್ಥಳೀಯ ಆಡಳಿತವು ಸಫಾಯಿಗಳ ಕೂಲಿಯನ್ನು ಭರಿಸುವುದು.

ಸಫಾಯಿ ಕರ್ಮಚಾರಿಗಳ ತಲಾ ವರಮಾನವನ್ನು ಕುರಿತು ಗುಲಬರ್ಗಾ ನಗರ ಮತ್ತು ಜಿಲ್ಲೆಯ ಇತರ ಪಟ್ಟಣಗಳಲ್ಲಿ ಕ್ಷೇತ್ರಕಾರ್ಯ ನಡೆಸುವ ಮೂಲಕ ಗುರುತಿಸಲಾಗಿದೆ. ಅದರ ವಿವರವು ಹೀಗಿದೆ.

ಕೋಷ್ಟಕ–6

ಕ್ರ ಸಂ	ನಗರಗಳು / ತಾಲೂಕು / ಪಟ್ಟಣ	ಕನಿಷ್ಠ ಆದಾಯ ರೂ. 1 ಸಾವಿರದಿಂದ 10 ಸಾವಿರದವರೆಗೆ	ಮಧ್ಯಮ ಆದಾಯ ರೂ. 10 ಸಾವಿರದಿಂದ 20 ಸಾವಿರದವರೆಗೆ	ಗರಿಷ್ಠ ಆದಾಯ ರೂ. 21 ಸಾವಿರದಿಂದ 25 ಸಾವಿರದವರೆಗೆ	ಒಟ್ಟು ಕುಟುಂಬಗಳು	ಒಟ್ಟು ವಾರ್ಷಿಕ ಆದಾಯ
1	ಗುಲಬರ್ಗಾ ನಗರ	92 (3.61)	110 (7.54)	68 (4.65)	270	18.51%
2	ಆಳಂದ	73 (5.00)	89 (6.10)	57 (3.95)	219	15.01%
3	ಅಫಜಲಪುರ	60 (4.11)	75 (5.14)	41 (2.81)	176	12.06%
4	ಚಿತ್ತಾಪುರ	58 (3.98)	65 (4.46)	53 (3.63)	156	10.70%
5	ಚಿಂಚೋಳಿ	53 (3.63)	61 (4.18)	32 (2.19)	146	10.00%
6	ಜೇವರಗಿ	58 (6.98)	69 (4.31)	37 (2.45)	164	11.25%
7	ಸೇಡಂ	54 (3.70)	63 (4.13)	35 (2.54)	152	10.12%



1981ರಲ್ಲಿ ಗುಲಬರ್ಗಾ ನಗರದಲ್ಲಿ ಒಬ್ಬ ಗಂಡಸು ಸಫಾಯಿ ಕರ್ಮಚಾರಿಗೆ ಒಂದು ಮನೆಗೆ ತಿಂಗಳಿಗೆ 10.00 ರೂಪಾಯಿಯಂತೆ ಅಂತಹ 10 ಮನಗಳಿಂದ ಆತನಿಗೆ ಬರುವ ವರಮಾನ ಒಟ್ಟು 100.00 ಆದರೆ ಹೆಂಗಸರಿಗೆ 50.00 ರೂ. ವರಮಾನ ಬರುತ್ತಿತ್ತು. ಅದೇರೀತಿಯಾಗಿ ಆಳಂದ ಪಟ್ಟಣದಲ್ಲಿ ಗ'ಂಡ'ಸಿನ ತಿಂಗಳ ವರಮಾನ 50.00 ರೂ. ಆದರೆ ಹೆಂಗಸಿನ ವರಮಾನ 40 ರೂ. ಆಗಿತ್ತು. ಅಫಜಲ್‌ಪುರ ಪಟ್ಟಣದಲ್ಲಿ ಗಂಡಸಿನ ಆದಾಯ 50.00 ರೂ. ಹೆಂಗಸಿನ ಆದಾಯ 40.00 ಆಗಿತ್ತು. ಸೇಡಂ ಪಟ್ಟಣದಲ್ಲಿ ಗಂಡಸಿಗೆ 50.00 ರೂ. ಹೆಂಗಸಿಗೆ 40.00 ರೂ. ಆಗಿತ್ತು.

1991ರಲ್ಲಿ ಗಂಡಸು ಮತ್ತು ಹೆಂಗಸರ ತಲಾ ಆದಾಯ ಪ್ರಮಾಣದಲ್ಲಿ ಸ್ವಲ್ಪವೇ ಏರಿಕೆಯಾಯಿತು. ಗುಲಬರ್ಗಾ ನಗರದಲ್ಲಿ ತಿಂಗಳಿಗೆ ಗಂಡಸಿನ ಆದಾಯ 100.00 ರೂ. ಆದರೆ ಹೆಂಗಸಿನ ಆದಾಯವು ತಿಂಗಳಿಗೆ 100.00 ಆಗಿದೆ. ಆಳಂದ ಪಟ್ಟಣದಲ್ಲಿ ಒಬ್ಬ ಗಂಡಸಿಗೆ ತಿಂಗಳ ಆದಾಯ 100.00 ರೂ. ಆದರೆ ಹೆಂಗಸಿನ ಆದಾಯ 70.00 ರೂ. ಆಗಿದೆ. ಅಫಜಲ್‌ಪುರ

ಪಟ್ಟಣದಲ್ಲಿ ಗಂಡಸಿಗೆ 100.00 ರೂ. ಹೆಂಗಸಿಗೆ ರೂ. 70.00, ಸೇಡಂ ಪಟ್ಟಣದಲ್ಲಿ ಗಂಡಸಿಗೆ 100.00 ರೂ. ಹೆಂಗಸಿಗೆ 70.00 ಆದಾಯವಿರುವುದನ್ನು ಸಮೀಕ್ಷೆಯಿಂದ ಕಂಡುಬಂದಿರುವಂತಹದ್ದಾಗಿದೆ.

2001ರಲ್ಲಿ ಗುಲಬರ್ಗಾ ನಗರದಲ್ಲಿ ತಿಂಗಳಿಗೆ ಗಂಡಸಿನ ಆದಾಯವು 1 ಮನಗೆ 25.00 ರೂ.ಗೆ ಏರಿಕೆ ಕಂಡುಬಂದರೆ ಹೆಂಗಸಿನ ಆದಾಯವು ಗಂಡಸಿನ ಆದಾಯಕ್ಕೆ ಸರಿಸಮವಾಗಿದೆ. ಆಳಂದ ಪಟ್ಟಣದಲ್ಲಿ ಗಂಡಸಿನ ಆದಾಯ ತಿಂಗಳಿಗೆ 200.00 ರೂ. ಆದರೆ ಹೆಂಗಸಿಗೂ 200.00 ರೂ. ಆದಾಯವಿತ್ತು. ಅಫಜಲಪುರ ಪಟ್ಟಣದಲ್ಲಿ ಗಂಡಸಿಗೆ ತಿಂಗಳಿಗೆ 200.00 ಆದರೆ ಹೆಂಗಸಿಗೆ 200.00 ರೂ ಆಗಿದೆ. ಸೇಡಂ ·ಪಟ್ಟಣದಲ್ಲಿ ·ತಿಂಗಳಿಗೆ ಗಂಡಸಿಗೆ 200.00 ರೂ. ಹೆಂಗಸಿಗೆ ತಿಂಗಳಿಗೆ 200.00 ಆಗಿದೆ. 2001ರಲ್ಲಿ ನಗರ ಪ್ರದೇಶದಲ್ಲಿ ಸಫಾಯಿ ಕರ್ಮಚಾರಿಗಳ ಮಾಸಿಕ ಆದಾಯದಲ್ಲಿ ಏರಿಕೆಯಾಯಿತೆಂದು ಹೇಳಬೇಕು. ಅದರಂತೆ ಗುಲಬರ್ಗಾ ನಗರದಲ್ಲಿ ಒಬ್ಬ ಗಂಡಸಿಗೆ ಒಂದು ಮನೆಯಿಂದ 50.00 ರೂ. ಹಾಗೂ ಹೆಂಗಸಿಗೂ ತಂಗಳಿಗೆ 50.00 ರೂ. ಎಂದು ವರಮಾನ ನಿಗದಿಯಾಗಿದ್ದು ಕಂಡುಬರುತ್ತದೆ. ಆಳಂದ ಪಟ್ಟಣದಲ್ಲಿ ಒಂದು ಮನೆಯಿಂದ ಒಂದು ತಿಂಗಳಿಗೆ ಗಂಡಸಿನ ಆದಾಯವು 50.00 ರೂ. ಇದ್ದರೆ ಹೆಂಗಸಿಗೂ 50.00 ಆದಾಯವಿದೆ. ಅಫಜಲ್‌ಪುರ ಪಟ್ಟಣದಲ್ಲಿ ಗಂಡಸಿನ ಆದಾಯ ಒಂದು ಮನೆಯಿಂದ 40.00 ರೂ. ಗಂಡಸಿಗೆ 40.00 ರೂ. ಹೆಂಗಸಿಗೆ ಸೇಡಂ ಪಟ್ಟಣದಲ್ಲಿ ಒಬ್ಬ ಗಂಡಸಿನ ಆದಾಯ 40.00 ರೂ. ಹೆಂಗಸಿನ ಆದಾಯವೂ 40.00 ರೂ. ಕಂಡುಬರುತ್ತದೆ.


ಕಳೆದ ದಶಕಕ್ಕಿಂತಲೂ 2011ರ ದಶಕದಲ್ಲಿ ಸಫಾಯಿ ಕರ್ಮಿಚಾರಿಗಳ ಊರ ಮನೆಗಳ ಮಲ ಸ್ವಚ್ಛಗೊಳಿಸುವ ಕೆಲಸಕ್ಕೆ ವರಮಾನದಲ್ಲಿ ಬದಲಾವಣೆ ಕಾಣುವೆವು.

ಸಂಘ ಸಂಸ್ಥೆಗಳು, ಸರಕಾರಿ ಕಚೇರಿಗಳ ಶೌಚಾಲಯಗಳನ್ನು ಸ್ವಚ್ಛಗೊಳಿಸುವ ಕೆಲಸಗಳಲ್ಲಿಯೂ ತೊಡಗಿಸಿಕೊಂಡಿರುವುದರಿಂದ ಈ ಸಂಸ್ಥೆಗಳಿಂದಲೂ ನಿಶ್ಚಿತ ಆದಾಯ ಬರುತ್ತದೆ.

ಕೋಷ್ಟಕ-6 (ಅ)

2011 ರಿಂದ 2013 ರ ಸಾಲಿನ ವಾರ್ಷಿಕ ತಲಾ ವರಮಾನ

ಕ್ರ. ಸಂ	ನಗರಗಳು / ತಾಲೂಕು / ಪಟ್ಟಣ	ಕನಿಷ್ಠ ಆದಾಯ ರೂ. 1 ಸಾವಿರದಿಂದ 10 ಸಾವಿರದವರೆಗೆ	ಮಧ್ಯಮ ಆದಾಯ ರೂ. 10 ಸಾವಿರದಿಂದ 20 ಸಾವಿರದವರೆಗೆ	ಗರಿಷ್ಠ ಆದಾಯ ರೂ. 21 ಸಾವಿರದಿಂದ 25 ಸಾವಿರದವರೆಗೆ	ಒಟ್ಟು ಕುಟುಂಬ ಗಳು	ಒಟ್ಟು ವಾರ್ಷಿಕ ಆದಾಯ
1	ಗುಲಬರ್ಗಾ ನಗರ	105 (3.85)	135 (8.79)	96 (5.20)	3.25	33.60%
2	ಆಳಂದ	85 (5.25)	95 (6.30)	88 (4.05)	250	26.80%
3	ಅಫಜಲಪುರ	80 (5.20)	85 (6.14)	51 (2.91)	225	11.04%
4	ಚಿತ್ತಾಪುರ	68 (5.00)	80 (5.20)	70 (4.18)	235	21.08%
5	ಚಿಂಚೋಳಿ	70 (4.50)	75 (5.20)	40 (2.35)	201	18.05%
6	ಜೇವರಗಿ	85 (7.20)	90 (5.00)	47 (2.70)	215	24.90%
7	ಸೇಡಂ	70 (3.90)	78 (4.45)	55 (2.75)	170	20.30%



2011 ರಿಂದ 2013ರ ಸಾಲಿನ ಸಮೀಕ್ಷೆಯ ಪ್ರಕಾರ ಗುಲಬರ್ಗಾ ನಗರದಲ್ಲಿ ತಿಂಗಳಿಗೆ ಗಂಡಸಿನ ಆದಾಯವು 1 ಮನಗೆ 100.00 ರೂ.ಗೆ ಏರಿಕೆ ಕಂಡುಬಂದರೆ ಹೆಂಗಸಿನ ಆದಾಯವು 60.00 ಗಂಡಸಿನ ಆದಾಯಕ್ಕೆ ಸರಿಸಮವಾಗಿದೆ. ಆಳಂದ ಪಟ್ಟಣದಲ್ಲಿ ಗಂಡಸಿನ ಆದಾಯ ತಿಂಗಳಿಗೆ 60.00 ರೂ. ಆದರೆ ಹೆಂಗಸಿಗೂ 40.00 ರೂ. ಆದಾಯವಿತ್ತು. ಅಫಜಲಪುರ ಪಟ್ಟಣದಲ್ಲಿ ಗಂಡಸಿಗೆ ತಿಂಗಳಿಗೆ 60.00 ಆದರೆ ಹೆಂಗಸಿಗೆ 40.00 ರೂ ಆಗಿದೆ. ಸೇಡಂ ಪಟ್ಟಣದಲ್ಲಿ ತಿಂಗಳಿಗೆ ಗಂಡಸಿಗೆ 60.00 ರೂ. ಹೆಂಗಸಿಗೆ ತಿಂಗಳಿಗೆ 40.00 ಆಗಿದೆ.

4.2 ಸಾರ್ವಜನಿಕ ಶೌಚಾಲಯಗಳ ನಿರ್ವಹಣೆ

ಇತ್ತೀಚೆಗೆ ಸಫಾಯಿ ಕರ್ಮಚಾರಿಗಳಿಗೆ ಸರಕಾರ, ಸ್ಥಳೀಯ ಆಡಳಿತಗಳು ಸಾರ್ವಜನಿಕ ಶೌಚಾಲಯಗಳನ್ನು ನಿರ್ವಹಿಸುವ ಕೆಲಸವನ್ನು ನೀಡಿ ಅವರುಗಳ ತಲಾ ಆದಾಯವನ್ನು ಎತ್ತರಿಸುವ ಪ್ರಯತ್ನ ಮಾಡಿದೆ.

ನಗರ ಪ್ರದೇಶದಲ್ಲಿನ ವಿವಿಧ ವಾರ್ಡಗಳಲ್ಲಿ ಸಾರ್ವಜನಿಕರಿಗೆ ಶೌಚಾಲಯಗಳನ್ನು ನಿರ್ಮಿಸಿ ಅವುಗಳ ನಿರ್ವಹಣೆಯನ್ನು ಸಫಾಯಿ ಕರ್ಮಚಾರಿಗಳಿಗೆ ನೀಡಲಾಗಿದೆ. ಸಾರ್ವಜನಿಕರು ನಿರ್ದಿಷ್ಟಗೊಳಿಸಿದ ಹಣವನ್ನು ನೀಡಿ ಶೌಚಾಲಯಗಳನ್ನು ಉಪಯೋಗಿಸಬಹುದಾಗಿದೆ. ಅಂತಹ ಶೌಚಾಲಯಗಳು ಬಹು ಮುಖ್ಯವಾಗಿ ಸಾರ್ವಜನಿಕರು ಹೆಚ್ಚಾಗಿ ಬಳಸುವ ಸ್ಥಳಗಳಾದ ಮಾರ್ಕೆಟ್, ಬಸ್ ನಿಲ್ದಾಣ, ರೇಲ್ವೆ ನಿಲ್ದಾಣ ಹಾಗೂ ಸಮುದಾಯದ ಈ ಸ್ಥಳಗಳಲ್ಲಿ ಸುಲಭ ಶೌಚಾಲಾಯಗಳನ್ನು ಸರಕಾರ ನಿರ್ಮಾಣ ಮಾಡಿ ಸಾರ್ವಜನಿಕರ ಬಳಕೆಗೆ ಹೆಚ್ಚಿನ ಅನುಕೂಲ ಮಾಡಿಕೊಡುತ್ತಲಿದೆ. ಇದರಿಂದ ನಗರದ ಪರಿಸರದ ನೈರ್ಮಲ್ಯ ರಕ್ಷಣೆ ಮತ್ತು ಸಫಾಯಿ ಉದ್ಯೋಗಿಗಳ ಕುಟುಂಬ ನಿರ್ವಹಣೆಗೆ ಆದಾಯ ಎರಡೂ ದೊರಕುವುದು.

ಕಳೆದ ದಶಕದ ಕೊನೆಯಲ್ಲಿ ಬಹುಶಃ 70 ರಿಂದ 80 ಪ್ರತಿಶತ ಸಫಾಯಿಕರ್ಮಿಗಳು ಬಡತನ ರೇಖೆಗಳಿಗಿಂತ ಕೆಳಗೆ ಜೀವನ ನಿರ್ವಹಿಸುತ್ತಿದ್ದರು. ಆದರೆ, ಸರಕಾರ ಜಾರಿಗೆ ತಂದ ಸಾರ್ವಜನಿಕ ಸುಲಭ ಶೌಚಾಲಯ, ಸಾಕ್ಷರತೆ ಯೋಜನೆ, ಆಶ್ರಯ ವಸತಿ ಯೋಜನೆ, ಪಡಿತರ ವಿತರಣೆ ಯೋಜನೆಗಳಿಂದ ಇವರುಗಳ ಜೀವನ ನಿರ್ವಹಣೆಯಲ್ಲಿ ಕೆಲಮಟ್ಟಿಗಾದರೂ ಸುಧಾರಣೆ

ಕಂಡಿದೆಯಾದರೂ ಸಂಪೂರ್ಣ ಯೋಜನೆಗಳ ಪ್ರಯೋಜನೆಗಳು ಇನ್ನೂ ಈ ಜನಾಂಗಕ್ಕೆ ತಲುಪಬೇಕಿದೆ.

4.3 ಪರ್ಯಾಯ ಉದ್ಯೋಗ

ಸಫಾಯಿ ಕರ್ಮಚಾರಿಗಳ ಮೂಲ ಉದ್ಯೋಗ ಮಲ ಸ್ವಚ್ಛಗೊಳಿಸುವುದಾಗಿದೆ ಎಂಬುದನ್ನು ಬಲ್ಲೆವು. ಆದರೆ ಇಂದಿನ ಆಧುನಿಕತೆಯ ಬದಲಾವಣೆಯ ದಿನಗಳಲ್ಲಿ ಈ ಸಾಂಪ್ರದಾಯಿಕ ಉದ್ಯೋಗ ಮಾತ್ರದಿಂದಲೇ ಜೀವನ ನಿರ್ವಹಣೆ ಮಾಡುವುದು ಕಷ್ಟಕರವಾಗಿದೆ. ಸರಕಾರವು ಸಾರ್ವಜನಿಕ ಸುಲಭ ಶೌಚಾಲಯವನ್ನು ನಿರ್ಮಿಸಿ ಉದ್ಯೋಗ ಸೃಷ್ಟಿಮಾಡಿದೆ ನಿಜ. ಆದರೆ ಇಡೀ ಸಮುದಾಯದ ಜನರಿಗೆ ಈ ಉದ್ಯೋಗ ಸೌಲಭ್ಯ ಸಿಗುವುದು ಅಸಾಧ್ಯ. ಹಿಂದೆಲ್ಲ ಮ್ಯಾನ್‌ಹೋಲಗಳನ್ನು ಮಾನವ ಶಕ್ತಿಯನ್ನು ಬಳಸಿ ಸ್ವಚ್ಛಗೊಳಿಸಲಾಗುತ್ತಿತ್ತು. ಆದರೆ ಈಗ ಮಾನವಶಕ್ತಿಯ ಬಳಕೆಗೆ ಸರಕಾರವು ನಿರ್ಬಂಧಗೊಳಿಸಿದೆ. ಯಂತ್ರಗಳಿಂದ ಮ್ಯಾನ್‌ಹೋಲ್‌ಗಳ ರಿಪೇರಿ, ನಿರ್ವಹಣೆ ಮಾಡುತ್ತಿದ್ದುದರಿಂದ ಕೆಲವು ಉದ್ಯೋಗವನ್ನು ಕಳೆದುಕೊಳ್ಳುವಂತಾಯಿತು. ಕೆಲವು ದಿನಗಳ ಹಿಂದೆ ಹಾವೇರಿ ಜಿಲ್ಲೆಯ ಸವಣೂರಿನಲ್ಲಿ ಸಫಾಯಿ ಕರ್ಮಚಾರಿಗಳು ತಲೆ ಮೇಲೆ ಮಲ ಸುರಿದುಕೊಂಡು ತಮ್ಮ ಜೀವನ ನಿರ್ವಹಣೆಯ ಕಷ್ಟದ ಕಡೆಗೆ ಸರಕಾರದ ಗಮನ ಸೆಳೆದ ಸಂಗತಿ ರಾಜ್ಯ, ದೇಶ, ಅಂತರಾಷ್ಟ್ರೀಯ ಮಟ್ಟದಲ್ಲಿ ಸುದ್ದಿ ಮಾಡಿತು.

ಕೆಲಸ ಕಳೆದುಕೊಂಡು ನಿರ್ಗತಿಕರಾದವರಿಗೆ ಪರ್ಯಾಯ ಉದ್ಯೋಗ ಸೃಷ್ಟಿಸಿಕೊಡುವುದು ಸರಕಾರದ ಪರಮ ಕರ್ತವ್ಯವಾಗಿದೆ. ಆದರೆ ಈ ಜನಾಂಗವು ಸರಕಾರವನ್ನು ನೆಚ್ಚಿ ಕುಳಿತುಕೊಳ್ಳದೆ ತಾವೇ ಪರ್ಯಾಯ ಉದ್ಯೋಗಗಳನ್ನು ಹುಡುಕಿಕೊಳ್ಳುತ್ತಿರುವುದನ್ನು ಗಮನಿಸಬೇಕು.

1) ವ್ಯಾಪಾರ – ನೌಕರಿ

ದೊಡ್ಡ ದೊಡ್ಡ ನಗರಗಳಲ್ಲಿ ಕೆಲವರು ಪಾನಬೀಡಾ ಅಂಗಡಿಗಳನ್ನು ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದಾರೆ. ಇನ್ನು ಕೆಲವರು ಸರಕಾರಿ ವಿವಿಧ ಇಲಾಖೆ, ಶಿಕ್ಷಣ ಸಂಸ್ಥೆ, ವಿಶ್ವವಿದ್ಯಾಲಯಗಳಲ್ಲಿ ಸ್ವೀಪರ್ (ಕಸಗುಡಿಸುವವ) ಸಫಾಯಿ ಕೆಲಸದವನಾಗಿ ಸಿಪಾಯಿಯಂಥ

ನಾಲ್ಕನೇ ದರ್ಜೆಯ ನೌಕರಿಯನ್ನು ಮಾಡುತ್ತಿದ್ದಾರೆ ಎನ್ನಬಹುದು. ಈ ಜನಾಂಗದಲ್ಲಿ ಸಾಕ್ಷರತೆಯ ಪ್ರಮಾಣ ತೀರ ಕೆಳಮಟ್ಟದಲ್ಲಿರುವುದರಿಂದ ಯಾರೂ ದೊಡ್ಡ ದೊಡ್ಡ ಹುದ್ದೆಗಳಲ್ಲಿ ನೌಕರಿ ಮಾಡುತ್ತಿಲ್ಲ ಎನ್ನಬೇಕು.

ಅಡಿಟಿಪ್ಪಣಿಗಳು

1. ಡಾ. ಅರ್ಜುನ ಗೊಳಸಂಗಿ, ದಲಿತರ ಬದುಕು ಮತ್ತು ಸಂಸ್ಕೃತಿ, ಪು.13, ವಿಮೋಚನಾ ಪ್ರಕಾಶನ, ಅಥಣಿ, ಜಿ. ಬೆಳಗಾವಿ 2000.
2. ಡಾ. ಚಿದಾನಂದಮೂರ್ತಿ ಎಂ. , ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪು. 419, ಸಪ್ನ ಬುಕ್ ಹೌಸ್, ಬೆಂಗಳೂರು 2002.
3. Burrow and Emeneay A Dravidian Etymological Dictionary p. 115.
4. ಐಯಾವೊಳೆ ಐನೂರ್ವರ್ ಸಂಘವು ಈಗಿನ ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲೂಕಿನ ಐಹೊಳೆ ಗ್ರಾಮದಲ್ಲಿತ್ತು. ಈ ಊರಿನಲ್ಲಿ ಕೆಲವು ವರ್ತಕರು ಸೇರಿ ತಮ್ಮದೇ ಆದ ವರ್ತಕರ ಸಂಘವನ್ನು ರಚಿಸಿಕೊಂಡಿದ್ದರು.
5. ಡಾ. ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪು. 428, ಸಪ್ನ ಬುಕ್ ಹೌಸ್, ಬೆಂಗಳೂರು 2002.
6. ನಾಗರಾಜ ಎಂ.ಜಿ. ಕೆಂಬಟ್ಟೆ ಹೊಲೆಯರ ಸಂಸ್ಕೃತಿ ಪು. 7, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು 1993.
7. ಡಾ. ಅಮರೇಶ ನುಗಡೋಣಿ, ಹೈದರಾಬಾದ ಕರ್ನಾಟಕದ ಹಾಡುಪಾಡು ಪು. 134, ಕನ್ನಡ ವಿಶ್ವವಿದ್ಯಾಲಯ, ಹಂಪಿ 2002.
8. ಜಿಲ್ಲಾ ಅಂಕಿಸಂಖ್ಯೆ ಇಲಾಖೆಯ ಮಾಹಿತಿ.
9. ಗುಲಬರ್ಗಾ ಜಿಲ್ಲೆಯ ಗೆಜಿಟೀರಿಯರ್ (ಪ್ರಸಂ) ಎಂ.ಬಿ. ಪಾಟೀಲ ಪು.133, ಕರ್ನಾಟಕ ಸರಕಾರ, ಬೆಂಗಳೂರು 1997.
10. ಅದೇ, ಪು. 133.
11. ಅದೇ, ಪು. 130.
12. ಅದೇ, ಪು. 131
13. ಡಾ. ರಾಜಾರಾಮ ಹೆಗಡೆ (ಸಂ) ಭಾರತೀಯ ಇತಿಹಾಸ, ಸಮಾಜ ಮತ್ತು ಸಂಸ್ಕೃತಿ ಅಧ್ಯಕ್ಷೀಯ ಮಾತುಗಳು, 2004 ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಅಧ್ಯಾಯ–5

ಸಫಾಯಿ ಕರ್ಮಚಾರಿಗಳ ಸಾಂಸ್ಕೃತಿಕ ಸ್ಥಿತಿಗತಿ

ಅಧ್ಯಾಯ–5

ಸಫಾಯಿ ಕರ್ಮಚಾರಿಗಳ ಸಾಂಸ್ಕೃತಿಕ ಸ್ಥಿತಿಗತಿ

5.1 ಸಮಾಜ ಮತ್ತು ಸಂಸ್ಕೃತಿ

ಸಮಾಜದ ಮೂಲ ಸಹ ಜೀವನದಿಂದ ಆರಂಭವಾಯಿತು. ಇದಕ್ಕೆ ಬಹುಶಃ ಜೀವಿಗಳು ಗುಂಪು ಗುಂಪಾಗಿ ಜೀವಿಸುವುದರಿಂದಾಗಿರಬಹುದು. ಮಾನವನಂತೆ ಪ್ರಾಣಿಗಳೂ ಹೀಗೆ ಗುಂಪಾಗಿ ಜೀವಿಸುತ್ತವೆ. ಆದ್ದರಿಂದ ಅಲ್ಲಿಯೂ ಸಮಾಜವನ್ನು ಕಲ್ಪಿಸಬಹುದೆ ಎನ್ನುವ ವಿಚಾರವಿದೆ. ಉದಾ: ಕಾಡಿನಲ್ಲಿ ಪ್ರಾಣಿಗಳು ಗುಂಪಾಗಿ ವಾಸಿಸುತ್ತವೆ. ಜೇನು ನೊಣಗಳು ಸಾಮೂಹಿಕವಾಗಿ ಗೂಡು ರಚನೆ ಮಾಡಿ ಜೇನನ್ನು ಉತ್ಪಾದಿಸುತ್ತವೆ.

ಇವುಗಳು ಕೇವಲ ಜೈವಿಕ ಅವಲಂಬನೆಗಾಗಿ ಒಂದಕ್ಕೊಂದು ಹೊಂದಿಕೊಂಡು ಹೋಗುತ್ತವೆಯೇ ವಿನಃ ಸಾಮಾಜಿಕ ಅವಶ್ಯಕತೆಗಳಿಂದಲ್ಲ. ಅಲ್ಲದೆ ನಾವು ಗುಂಪಾಗಿ ಜೀವಿಸುತ್ತಿದ್ದೇವೆ. ಹೀಗೆ ಜೀವಿಸುವುದರಿಂದ ನಮಗೆ ಅನುಕೂಲವಿದೆ ಎನ್ನುವ ಕಲ್ಪನೆಯೂ ಇವಕ್ಕಿಲ್ಲ. ಆದರೂ ತಮಗೆ ಬರಬಹುದಾದ ಅಪಾಯಗಳನ್ನು ನಿವಾರಿಸಿಕೊಳ್ಳಲು ಅವು ಒಟ್ಟಾಗಿ ಜೀವಿಸುತ್ತವೆ"[1] ಎನ್ನುತ್ತಾರೆ ವಿದ್ವಾಂಸರುಗಳು.

ಪ್ರಾಣಿಗಳಲ್ಲಿ ಕೇವಲ ಸಹಕಾರವನ್ನು ಕಂಡರೆ, ಮಾನವರಲ್ಲಿ ಸಹಕಾರದ ಜೊತೆಗೆ ಸಂಸ್ಕೃತಿಯನ್ನು ಕಾಣುತ್ತೇವೆ. ಮಾನವನಲ್ಲಿರುವ ಸಂಸ್ಕೃತಿ ಕಾರಣವಾಗಿ ಆತನು ಪ್ರಪಂಚದ ಅಧಿಪತಿಯಾಗಿದ್ದಾನೆ. ಇದುವೇ ಪ್ರಾಣಿಗಳಿಗೂ ಮತ್ತು ಮಾನವನಿಗೂ ಇರುವ ಪ್ರಮುಖ ವ್ಯಾತ್ಯಾಸವೆಂದು ಹೇಳಬೇಕು.

ಮಾನವನು ತನಗಿದ್ದ ಆಲೋಚನಾ ಶಕ್ತಿಯಿಂದ ದಿನನಿತ್ಯದ ಅನೇಕ ವ್ಯವಹಾರಗಳನ್ನು ನಿಭಾಯಿಸಿಕೊಂಡು ಹೋಗುವುದರ ಜೊತೆಗೆ ತನ್ನ ಸಹವರ್ತಿಗಳ ಮೇಲೆ ಪ್ರಭಾವವನ್ನು ಬೀರಿದನು. ಹೀಗೆ ಪ್ರಭಾವಿ ಶಕ್ತಿಗಳ ಮುಖಾಂತರ ಗುಂಪಿನ ಯಜಮಾನ್ಯವನ್ನು ಪಡೆದ ಈ ಪರಸ್ಥಿತಿಯಲ್ಲಿ ಸೋತವರು ಅವನಿಂದ ಶಿಕ್ಷೆಗೆ ಒಳಗಾಗಿಯೋ, ಶರಣಾಗತರಾದವರನ್ನು ಹಿಂಬಾಲಕರನ್ನಾಗಿಸಿಕೊಂಡೋ ಹೀಗೆ ತನ್ನ ಸುಖಕ್ಕೆ ಮತ್ತು ಸೇವೆಗೆಂದು ತನ್ನ ಸುತ್ತ ಸೇರಿಸಿಕೊಂಡು ಗುಂಪಿನಲ್ಲಿ ಸಹಜ ಜೀವನಕ್ಕೆ ಬೀಜ ಬಿತ್ತಿದನು. ಇದರ ರೂಪವೇ ಸಮಾಜ ಮತ್ತು ಸಂಸ್ಕೃತಿಯಾಗಿದೆ. ಸಂಸ್ಕೃತಿ ಬಗೆಗೆ ಚರ್ಚಿಸುವಾಗ ಸಮಾಜ ಮೊದಲೋ ಅಥವಾ ಸಂಸ್ಕೃತಿ ಮೊದಲೋ ಎಂಬ ಪ್ರಶ್ನೆ ಉದ್ಭವಾಗದೆ ಇರದು. ಈ ಕುರಿತು ಮಾನವ ಶಾಸ್ತ್ರಜ್ಞರು ಮತ್ತು ಸಮಾಜ ಶಾಸ್ತ್ರಜ್ಞರು ಸಾಕಷ್ಟು ಪ್ರಮಾಣದಲ್ಲಿ ಚರ್ಚಿಸಿದ್ದಾರೆ. ಅವರುಗಳ ಅಭಿಪ್ರಾಯದಲ್ಲಿ ಮಾನವ ಸಮಾಜದೊಂದಿಗೆ ಸಂಸ್ಕೃತಿಯ ಉಗಮವಾಯಿತು. ಮನುಷ್ಯ ತನ್ನ ಉಗಮದ ಕಾಲದಿಂದಲೂ ಮಾಡಿದ ಎಲ್ಲಾ ಕಾರ್ಯಗಳು ಅವನ ಸಂಸ್ಕೃತಿಯ ವ್ಯಾಪ್ತಿಯಲ್ಲಿ ಬರುತ್ತವೆ. ಆದರೆ ಮಾನವ ಸಂಸ್ಕೃತಿಯು ಮೂಲದಲ್ಲಿ ತೀರಾ ಸರಳವಾಗಿತ್ತು. ಮುಂದೆ ಮಾನವನ ಸಾಮಾಜಿಕ ಹಾಗೂ ಸುತ್ತಲಿನ ವಾತಾವರಣದಲ್ಲಿ ಆದ ಬದಲಾವಣೆಗೆ ಅನುಗುಣವಾಗಿ ಸಂಕೀರ್ಣವಾಗುತ್ತ ಬೆಳೆಯಿತು. ಮಾನವ ಸಮಾಜ ಮತ್ತು ಸಂಸ್ಕೃತಿಗಳು ಎಲ್ಲಾ ರಂಗದಲ್ಲಿಯೂ ಜೊತೆ ಜೊತೆಯಾಗಿ ಬೆಳೆದು ಬಂದವು. ಅಂದರೆ ಸಾಮಾಜಿಕ ವಿಷಯದಲ್ಲಾದ ಬೆಳವಣಿಗೆಗಳು ಸಾಂಸ್ಕೃತಿಕ ವಿಷಯದಲ್ಲಿಯೂ.

ಸಂಸ್ಕೃತಿ ಕುರಿತು ನಿರ್ವಚನ, ಅದರ ಅಧ್ಯಯನದ ಬೆಳವಣಿಗೆಯನ್ನು ಒಂದು ವ್ಯವಸ್ಥಿತವಾದ ನಿಟ್ಟಿನಲ್ಲಿ ಗುರುತಿಸುವುದು ಕಷ್ಟ. ಹಾಗೆಯೇ ಅದೊಂದು ಸಂಕೀರ್ಣವಾದ ಬೆಳವಣಿಗೆಯಾಗಿದೆ. ಕನ್ನಡದ ಸಂದರ್ಭದಲ್ಲಿ ಸಂಸ್ಕೃತಿ ಅಧ್ಯಯನ ತೀರಾ ಇತ್ತೀಚಿನದು. ಒಂದು ರೀತಿಯಲ್ಲಿ ಕಳೆದ ಎಪ್ಪತ್ತರ ದಶಕದಲ್ಲಿ ಇದಕ್ಕೊಂದು ನಿರ್ದಿಷ್ಟ ಸ್ವರೂಪ ಬಂದಿತೆಂದು ಹೇಳಬಹುದು. ನವ್ಯೋತ್ತರ ಸಂದರ್ಭದಲ್ಲಿ ಬರಗೂರ ರಾಮಚಂದ್ರಪ್ಪ, ಡಿ.ಆರ್. ನಾಗರಾಜ, ರಹಮತ್ ತರೀಕೆರೆ, ಕೆ.ವ್ಹಿ. ನಾರಾಯಣ ಹೀಗೆ ಹಲವಾರು ಚಿಂತಕರು ಸಂಸ್ಕೃತಿ ಹಾಗೂ ಅದರ ಅಧ್ಯಯನದ ಸ್ವರೂಪ ಮತ್ತು ಮಹತ್ವವನ್ನು ಕುರಿತು ವಿಶ್ಲೇಷಿಸಿದರು. ಇವರುಗಳು ಸಂಸ್ಕೃತಿ–ಉಪಸಂಸ್ಕೃತಿ, ಸಂಸ್ಕೃತಿ ಕಥನ, ಸಾಂಸ್ಕೃತಿಕ ಸ್ವರೂಪ, ಕಥಾನಕ, ಸಂಕಥನ ಮುಂತಾದ ಸಂಸ್ಕೃತಿಗೆ ಸಂಬಂಧಿಸಿದ ಚಿಂತನೆಗಳನ್ನು ಒಳಗೊಂಡ ಲೇಖನ, ಕೃತಿಗಳನ್ನು ಬರೆದರು. ಇವರ ಬರಹಗಳು ಸಂಸ್ಕೃತಿ ಕುರಿತ ಅಧ್ಯಯನಕ್ಕೆ ಹೊಸ ಪರಿಕಲ್ಪನೆಗಳಾಗಿವೆ.

ಸಮಾಜ ಮತ್ತು ಸಂಸ್ಕೃತಿ ಅಧ್ಯಯನವು ಇಂದು ಅಂತರ್‌ಶಿಸ್ತೀಯ ನೆಲೆಗಳಲ್ಲಿ ವ್ಯಾಪಕವಾಗಿದೆ. ಕರ್ನಾಟಕ ಮತ್ತು ಕನ್ನಡದ ಸಮಾಜ, ಸಮುದಾಯಗಳ ಸಂಸ್ಕೃತಿಯನ್ನು ಹಿಂದಿನವರು ಪರಿಭಾವಿಸಿರುದಕ್ಕಿಂತ ಇಂದಿನವರು ಪರಿಭಾವಿಸುವುದರಲ್ಲಿ ನಿಚ್ಚಳವಾದ ವ್ಯತ್ಯಾಸಗಳು ಕಂಡುಬರುತ್ತಿವೆ. ಏಕ ಮಾದರಿಯ ಸಂಸ್ಕೃತಿಯ ವೈಭವೀಕರಣಗಳು ಛಿದ್ರಗೊಂಡು ಬಹುರೂಪಿ ಮಾದರಿಯ ಸಂಸ್ಕೃತಿಯ ಅನ್ವೇಷಣೆಗಳ ಕಡೆಗೆ ಇಂದಿನ ಚಿಂತಕರು ಮನಸ್ಸು ಮಾಡುತ್ತಿದ್ದಾರೆ. ಇಂದಿನ ಹೊಸ ಸಂವೇದನೆಗಳು, ಅಧ್ಯಯನಗಳು ಹಿಂದಿನ ವ್ಯಾಖ್ಯಾನಕಾರರ ವ್ಯಾಖ್ಯೆಗಳನ್ನು ಮರುಚಿಂತನೆಗೊಳಪಡಿಸಿ ಸಂಸ್ಕೃತಿಯ ಹೆಸರಿನಲ್ಲಿ ಹೊಸ ಚಿಂತನೆಗಳನ್ನು ಹೊರಗೆಡುತ್ತಿವೆ.

ಸಂಸ್ಕೃತಿಯನ್ನು ಕುರಿತು ನಿರ್ವಚಿಸುವಾಗ ಈ ಪದದ ಜೊತೆಗೆ 'ನಾಗರಿಕತೆ' ಎಂಬುದನ್ನು ಕೆಲವೊಮ್ಮೆ ಎರಡೂ ಒಟ್ಟಾಗಿಯೋ ಇಲ್ಲವೇ ಸಂಸ್ಕೃತಿಗೆ ಸಮಾನಾಂತರವಾಗಿ ಬಳಸುವುದನ್ನು ಕಾಣುತ್ತೇವೆ. 'ನಾಗರಿಕತೆ' ಎಂಬ ಶಬ್ದ 'ನಗರ' ಎಂಬುದರೊಡನೆ ಸಂಬಂಧವನ್ನು ಪಡೆದಿದೆ. ಆಂಗ್ಲ ಭಾಷೆಯ Civilization ಎಂಬುದರಲ್ಲಿಯೂ 'City' ಎಂಬ ಪದದ ಅರ್ಥ ಸಂಬಂಧವಿರುವಂತಿದೆ. 'to Civilize' ಮತ್ತು Civil ಎಂಬ ಮಾತುಗಳಿಂದ ಅನೇಕ ಜನಾಂಗಗಳ ಸಮುದಾಯಗಳು ಗುಂಪಾಗಿ ಬಾಳಬೇಕಾದ ನಗರದ ಕಲ್ಪನೆ ಬರುತ್ತದೆ"[9]

ನಾಗರಿಕತೆ ಎಂಬುದು ಮೊದಲು ನಗರಗಳ ಜೀವನ ಕ್ರಮವನ್ನು ಸೂಚಿಸುವ ಶಬ್ದವಾಗಿ ರೂಪುಗೊಂಡಂತೆ ತೋರುತ್ತದೆ. ನಾಗರಿಕತೆಯನ್ನು ರೂಪಿಸಲು ಸಹಾಯಕವಾಗುವ ಕೆಲವು ಅಂಶಗಳನ್ನು ವಿಲ್‌ಡ್ಯೂರಾಂಟ್‌ರವರು ತಮ್ಮ The story of civilization ಎಂಬ ಗ್ರಂಥದಲ್ಲಿ ನಿರೂಪಿಸಿದ್ದಾರೆ. "ಅವುಗಳಲ್ಲಿ ಭೌಗೋಳಿಕ ವಾತಾವರಣ, ಆರ್ಥಿಕ ಅಂಶ, ರಾಜಕೀಯ ವ್ಯವಸ್ಥೆ, ನೈತಿಕ ನಿಯಮಗಳು ಮತ್ತು ಮಾನಸಿಕ ವಿಕಾಸ ಎಂಬವು ಮುಖ್ಯವಾಗಿ ಡಾ. ತಿಪ್ಪೇರುದ್ರ ಸ್ವಾಮಿಯವರು ತಮ್ಮ ಕರ್ನಾಟಕ ಸಂಸ್ಕೃತಿ ಸಮೀಕ್ಷೆ ಗ್ರಂಥದಲ್ಲಿ ಉಲ್ಲೇಖಿಸಿರುತ್ತಾರೆ."[2] ಅನಾಗರಿಕನಾಗಿದ್ದ ಆದಿಮಾನವ ಸಭ್ಯ ಸಮಾಜದ ಜೀವಿಯಾಗುವವರೆಗೂ ಇರುವ ಮಾನವನ ಬೆಳವಣಿಗೆಯ ವಿವಿಧ ಹಂತಗಳನ್ನು ಕಂಡುಕೊಳ್ಳುವುದಕ್ಕೆ ನಾಗರಿಕತೆ ತುಂಬಾ ಸಹಾಯಕವಾಗುತ್ತದೆ. ಸಂಸ್ಕೃತಿ ಮಾನವನ ಅಂತರಂಗಕ್ಕೆ ಸಂಬಂಧಿಸಿದ್ದರೆ, ನಾಗರಿಕತೆ ಅವನ ಬಹಿರಂಗ ಜೀವನಕ್ಕೆ ಸಂಬಂಧಿಸಿದೆ ಎಂದು ಹೇಳಬಹುದು.

ಜೀವನದ ಬಹಿರಂಗದ ಸಮಸ್ಯೆಗಳನ್ನು ಎದುರಿಸಿ ಅವುಗಳಿಗೆ ಅನುಕೂಲತೆಗಳನ್ನು ನಾಗರಿಕತೆ ಕಂಡುಹಿಡಿಯುತ್ತದೆ. ಉದಾ: ಮೊದಲು ಮಾನವ ಕಾಡಿನಲ್ಲಿ ಕಾಲುನಡಿಗೆಯಲ್ಲಿ ಸಂಚರಿಸುತ್ತಿದ್ದ ನಂತರ ಪ್ರಾಣಿಗಳ ಮೇಲೆ ಬಂಡಿಗಳಲ್ಲಿ ಅದಕ್ಕಿಂತ ವೇಗವಾಗಿ ಚಲಿಸಬಲ್ಲ ಗಾಡಿ ಮೋಟಾರ್ ರೈಲುಗಳನ್ನು ಕಂಡುಹಿಡಿದು ಬೆಳೆಸಿದನು. ಇವು ಮಾನವನ ಬಾಹ್ಯ ಜೀವನಕಕೆ ಉಪಯೋಗಿಸಿಕೊಂಡ ಸಾಧನೆಗಳಾಗಿ ನಾಗರಿಕತೆಯನ್ನು ಸೂಚಿಸುತ್ತವೆ. ನಾಗರಿಕತೆ ಮಾನವನ ಬಾಹ್ಯ ಜೀವನಕ್ಕೆ ಸಹಕಾರಿಯಾದ ಅಂಶಗಳನ್ನು ನಿರ್ದೇಶಿಸಿದರೆ, ಸಂಸ್ಕೃತಿ ಆತನ ಅಂತರಂಗಿಕ ಜೀವನಕ್ಕೆ ಸಂಬಂಧಿಸಿರುತ್ತದೆ ಎಂಬ ಅಭಿಪ್ರಾಯವನ್ನು ವಿದ್ವಾಂಸರುಗಳು ವ್ಯಕ್ತಪಡಿಸುತ್ತಾರೆ. ಅದರಂತೆ "ಸಂಸ್ಕೃತ ವ್ಯಕ್ತಿಯ ಅಂತರಂಗದಲ್ಲಿ ಅರಳುವ ಪರಿಮಳ, ವ್ಯಕ್ತಿಯ ವಿಕಾಸಕ್ಕೆ ಕಾರಣವಾಗುವ ಸಾಮಾಜಿಕ ಪರಿಕರಗಳು ಸಹ ಸಂಸ್ಕೃತಿಯಲ್ಲಿಯೇ ಸಮಾವೇಶಗೊಳ್ಳುತ್ತವೆ. ಈ ಅರ್ಥದಲ್ಲಿ ಅದನ್ನು ಕೆಲವು ವೇಳೆ ದೇಶವಾಚಕವಾಗಿ ಬಳಸುತ್ತೇವೆ. ಭಾರತೀಯ ಸಂಸ್ಕೃತಿ, ಕರ್ನಾಟಕ ಸಂಸ್ಕೃತಿ ಇತ್ಯಾದಿಯಾಗಿ ಇನ್ನೂ ಕೆಲವು ವೇಳೆ ಅದನ್ನು 'ಭಾಷಾವಾಚಕವಾಗಿ ಮತಧರ್ಮಗಳ ಸೂಚಕವಾಗಿ ಬಳಸುವುದುಂಟು. ಈ ಎಲ್ಲ ಅಂಶ ಪ್ರಧಾನವಾಗಿ ಗೋಚರಿಸುತ್ತದೆ. ಆಯಾ ಪ್ರದೇಶದ ಆಯಾ ಭಾಷೆಯ, ಆಯಾ ಧರ್ಮದ ಜನಗಳು ತಮ್ಮ ಸಮಸ್ಯೆಗಳಿಗೆ ಉತ್ತರವನ್ನು ಕಾಣಬಯಸುವ ಅಂತರಂಗದ ಸಾಧನೆಯೇ ಸಂಸ್ಕೃತಿಯ ಮೂಲ ಸಾಮಗ್ರಿಯಾಗುತ್ತದೆ"[3] ಎನ್ನಲಾಗುತ್ತದೆ.

ಸಂಸ್ಕೃತಿಯ ಪ್ರಯೋಜನ ಅನೇಕ ಬಗೆಯಲ್ಲಿ ಗುರುತಿಸಿ ಅದನ್ನು ಬಹುಮುಖಿ ಸಾಮಗ್ರಿಯಾಗಿ ಅಧ್ಯಯನ ಮಾಡುವ ಪದ್ಧತಿಯು ಇಪ್ಪತ್ತನೆಯ ಶತಮಾನದ ಸ್ವಾತಂತ್ರ್ಯೋತ್ತರ ಕಾಲಘಟ್ಟದಲ್ಲಿ ಮತ್ತಷ್ಟು ವ್ಯಾಪಕಗೊಂಡಿತು. ಇದರಿಂದ ಸಂಸ್ಕೃತಿಯು ದೇಶ, ಭಾಷೆ, ಧರ್ಮ, ಜನಾಂಗ, ಜಾತಿ, ಕಲೆ, ಸಾಹಿತ್ಯ ಹೀಗೆ ಅದು ವ್ಯಾಪಕವಾಗಿ ಬೆಳೆಯಲು ಸಾಧ್ಯವಾಯಿತು.

ಜನಜೀವನದ ನಾಗರಿಕತೆಗೆ ಅನುಗುಣವಾಗಿ ಸಂಸ್ಕೃತಿಯ ಅಂಶಗಳು ಅಳವಡುತ್ತವೆ. ಹಾಗಾಗಿ ಸಂಸ್ಕೃತಿಯ ಮೌಲ್ಯಗಳನ್ನು ಭಾರತವು ರೂಪಿಸಿಕೊಂಡಿತಲ್ಲದೆ ಜನಜೀವನದಲ್ಲಿ ಅವುಗಳನ್ನು ಆಳವಾಗಿ ನಾಟಲು ಸಮರ್ಥವಾದುದರಿಂದಲೇ ಅದು ಉಳಿದುಕೊಂಡು ಬೆಳೆದುಬರಲು ಸಾಧ್ಯವಾಗಿದೆ. ತಾಯಿಬೇರಿನಿಂದ ಪೋಷಿತವಾದ ಕರ್ನಾಟಕದ ಸಂಸ್ಕೃತಿಗೂ ಈ ಮಾತು ಅನ್ವಯಿಸುತ್ತದೆ.

ಈವರೆಗಿನ ಸಮೀಕ್ಷೆಯಿಂದ ಸಂಸ್ಕೃತಿ ಬಗೆಗೆ ಸಾಕಷ್ಟು ಚರ್ಚೆಗಳಾಗಿರುವುದು ಕಂಡುಬರುತ್ತದೆ. ಹಾಗೆಯೇ ಸಂಸ್ಕೃತಿಯನ್ನು ಕುರಿತು ಕನ್ನಡದಲ್ಲಿಯೂ ಇತ್ತೀಚೆಗೆ ಕಂಡುಬರುತ್ತದೆ. ಸಂಸ್ಕೃತಿಯ ಚರ್ಚೆ ಬಂದಾಗಲೆಲ್ಲ ಭಾರತೀಯ ಸನಾತನ ಮೌಲ್ಯಗಳ ಕಡೆಗಷ್ಟೇ ಸೀಮಿತಗೊಳಿಸಿಕೊಳ್ಳುವ ಚಿಂತನೆಗಳೂ ಕೂಡ ನಡೆಯುತ್ತವೆ.

ಮನುಷ್ಯ ಸಮಾಜ ಇರುವ ಕಡೆಗಳಲ್ಲೆಲ್ಲ ಸಂಸ್ಕೃತಿ ಇರುತ್ತದೆಯೆಂದು ಈ ಹಿಂದೆಯೇ ಹೇಳಲಾಗಿದೆ. ಆದರೆ ಮನುಷ್ಯರಲ್ಲಿ ಮತ್ತು ಅವರನ್ನು ನೋಡುವ ನಮ್ಮ ಸಾಮಾಜಿಕ, ಧಾರ್ಮಿಕ, ಆರ್ಥಿಕ, ರಾಜಕೀಯ ಮಾನದಂಡಗಳಲ್ಲಿ ಅನೇಕ ಭಿನ್ನತೆಗಳಿವೆ. "ಮನುಷ್ಯನೊಬ್ಬ ಬಡವನೋ, ಶ್ರೀಮಂತನೋ, ಮೇಲ್ಜಾತಿಯೋ, ಕೆಳಜಾತಿಯೋ ಯಾವೂ ಮುಖ್ಯವಲ್ಲ. ಮನುಷ್ಯನಿದ್ದ ಕಡೆಯಲ್ಲಿ ಸಂಸ್ಕೃತಿ ಇರುತ್ತದೆ"[4] ಎಂಬುದು ಈ ಚರ್ಚೆಯ ಅಭಿಪ್ರಾಯವನ್ನು ಎತ್ತಿ ತೋರಿಸುತ್ತದೆ.

ಜನ ಇದ್ದ ಕಡೆ ಸಂಸ್ಕೃತಿ ಇರುತ್ತದೆ ಎಂಬ ಮಾತಿದೆ ನಿಜ. ಆದರೆ ಇಲ್ಲಿ ಈ ವಾದವನ್ನು ಪ್ರತಿಪಾದಿಸುವವರ ದೃಷ್ಟಿಯಲ್ಲಿ ಈ ಜನ ಯಾರಾದರೂ ಆಗಿರಬಹುದು ಅಥವಾ ಯಾವುದೇ ಪ್ರದೇಶದಲ್ಲಿ ವಾಸಿಸುತ್ತಿರಬಹುದು. ಆದರೆ ಜನರೆಲ್ಲರು ಒಂದೇ ತೆರನಾಗಿರಲು ಹೇಗೆ ತಾನೆ ಸಾಧ್ಯ? ಭಾರತದಂತ ಬಹು ಸಂಸ್ಕೃತಿಗಳ ದೇಶದಲ್ಲಿ ಜನರ ಜೀವನ ಕ್ರಮ, ಅವರ ಆಹಾರ ವಿಹಾರ, ಊಟೋಪಚಾರ, ನಂಬಿಕೆ, ಸಂಪ್ರದಾಯಗಳು, ಭಾಷೆ, ಸಾಹಿತ್ಯ, ಕಲೆ ಮುಂತಾದವುಗಳು ಒಂದೇ ತೆರನಾಗಿಲ್ಲ. ಏಕೆಂದರೆ ಭಾರತದ ಭೌಗೋಳಿಕ ಪರಿಸರ ತುಂಬ ವಿಭಿನ್ನತೆಯಿಂದ

ಕೂಡಿದ್ದಾಗಿದೆ. ಭಿನ್ನ ಭಿನ್ನ ಪ್ರದೇಶಗಳಲ್ಲಿ ಜನ ನೆಲೆಸಿರುತ್ತಾರೆ. ಇಲ್ಲಿ ವಿಶಾಲವಾದ ಬಯಲು ಇದೆ, ಬೆಟ್ಟ ಸಾಲುಗಳಿಂದ ಕೂಡಿದೆ, ಕರಾವಳಿ ಇದೆ, ಮಲೆನಾಡು ಇದೆ, ಫಲವತ್ತಾದ ನೆಲವಿದೆ, ಬಂಜರು ಭೂಮಿ ಇದೆ, ಕಾಡು ಮೇಡುಗಳಲ್ಲಿ, ಹಳ್ಳಿ, ನಗರಗಳಲ್ಲಿ ಜನರು ಅವರದೇ ಜೀವನಕ್ರಮವನ್ನು ಹೊಂದಿ ಬಾಳುತ್ತಿದ್ದಾರೆ. ಹೀಗಾಗಿ ಅವರ ಸಂಸ್ಕೃತಿಗಳು ಭಿನ್ನ ಭಿನ್ನವಾಗಿವೆ.

ಮನುಷ್ಯರಿದ್ದ ಕಡೆಗೆ ಸಂಸ್ಕೃತಿ ಇರುತ್ತದೆಯೆನ್ನುವುದಾದರೆ, ಎಲ್ಲ ಕಡೆಗೆ ನೆಲೆಸಿರುವ ಮನುಷ್ಯರು ಅವರ ಜೀವನ ಕ್ರಮ, ಉದ್ಯೋಗ, ವರ್ತನೆ ಒಂದೇ ವಿನ್ಯಾಸದಲ್ಲಿಲ್ಲ. ಬರಗೂರ ಅವರು ಹೇಳುವಂತೆ "ಒಂದೊಂದು ಪ್ರದೇಶದಲ್ಲಿ ಒಂದೊಂದು ಜನಾಂಗಕ್ಕೆ ಒಂದೊಂದು ರೀತಿಯ ಸಂಸ್ಕೃತಿ ಇರಲು ಸಾಧ್ಯ."[5] ಒಂದು ಸಂಸ್ಕೃತಿ ಎಂಬ ಪರಿಕಲ್ಪನೆ ಹುಟ್ಟುವುದು, ಪ್ರಚಲಿತವಾಗುವುದು ಈ ನೆಲೆಯಲ್ಲೇ. ಒಟ್ಟು ಮನುಷ್ಯ ಸಂಸ್ಕೃತಿಯಲ್ಲಿ ಒಂದೊಂದು ಸಂಸ್ಕೃತಿ ಉಸಿರಾಡುತ್ತಲೇ ಇರುವ ವೈರುಧ್ಯ ಇರುವುದು ಒಪ್ಪಿಕೊಳ್ಳಬೇಕಾಗುತ್ತದೆ.

ಸಂಸ್ಕೃತಿಯಲ್ಲಿ ಜೀವನ ಸಂದರ್ಭಗಳ ಯುಕ್ತಾಯುಕ್ತ ವಿವೇಚನೆ ಒಂದು ಪ್ರಮುಖ ಅಂಶವಾಗಿದೆ. ಸಂಸ್ಕೃತಿಯನ್ನು ಕುರಿತಾದ ವಿವೇಚನೆಯ ಸಂದರ್ಭದಲ್ಲಿ ಪ್ರಧಾನ ಸಂಸ್ಕೃತಿ ಹಾಗೂ ಉಪಸಂಸ್ಕೃತಿ ಕುರಿತು ವಿವೇಚಿಸಿರುವರು. ವಾಸ್ತವವಾಗಿ ಸಂಸ್ಕೃತಿಯ ಪರಿಕಲ್ಪನೆ ಯಾವಾಗಲೂ ಈ ತಾರ್ಕಿಕ ವೈರುಧ್ಯಗಳ ಮೂಲಕವೇ ನಿರ್ವಚಿಸಲು ಪ್ರಯತ್ನ ಮಾಡಿತು. ಈ ನೆಲೆಯಲ್ಲಿಯೇ ಸ್ಥಳೀಯ ಮತ್ತು ಜಾಗತಿಕ ಪ್ರಧಾನ ಮತ್ತು ಉಪಸಂಸ್ಕೃತಿ ಪರಿಕಲ್ಪನೆಗಳು ಪ್ರಸ್ತುತವಾಗುವವು. "ಮನುಷ್ಯ ಸಂಸ್ಕೃತಿಯು ರೂಪುಗೊಳ್ಳುತ್ತಿರುವಾಗ ವಿವಿಧ ಕಾರಣಗಳಿಂದ ವಿಂಗಡಣೆಗೊಳಗಾದ ಮನುಷ್ಯ ಸಮಾಜ ತನ್ನ ವಿಭಜಿತ ನೆಲೆಗಳಿಗನುಗುಣವಾಗಿ ವಿಭಿನ್ನ ಸಂಸ್ಕೃತಿಗಳನ್ನು ರೂಪಿಸಿಕೊಳ್ಳುತ್ತ ಬಂದದ್ದು ಒಂದು ಚಾರಿತ್ರಿಕ ಸಂಗತಿಯೇ ಆಗಿದೆ. ಮನುಷ್ಯ ಸಮಾಜದ ಹಿಂದೆ ಒಂದು ನಿರ್ದಿಷ್ಟ ಚರಿತ್ರೆಯಿರುವುದರಿಂದ ಸಂಸ್ಕೃತಿಯ ಉಪ ವಿಭಾಗಿಕರಣಕ್ಕೂ ಒಂದು ಚರಿತ್ರೆಯಿದೆ."[5]

ಸಂಸ್ಕೃತಿಯು ಚಾರಿತ್ರಿಕ ಬೆಳವಣಿಗೆಯನ್ನು ಹೊಂದಿದ್ದು, ಸಾಮಾಜಿಕ ಹಗೂ ಭೌಗೋಳಿಕ ಪರಿಸರದಿಂದ ರೂಪಿಸಲ್ಪಡುತ್ತವೆ. ಹೀಗಾಗಿ ಸಂಸ್ಕೃತಿಯ ಪ್ರತಿ ಗುಣಲಕ್ಷಣವೂ ಚಾರಿತ್ರಿಕೆ ಸಂಭವದ ಫಲ. ಆದ್ದರಿಂದ ಸಂಸ್ಕೃತಿಯ ಪ್ರತಿಫಲಗಳನ್ನು ಸ್ವತಂತ್ರವಾಗಿ ಅಧ್ಯಯನ ಮಾಡುವುದರಲ್ಲಿ ಮಹತ್ವವಿದೆ.

ಊರು ಮತ್ತು ಕಾಡುಗಳ ಆಕಾರ, ಸ್ವರೂಪಗಳ ಬಗೆಗೆ ಚರ್ಚೆಯಲ್ಲಿ ತೊಡಗಿದ ನಮ್ಮ ಸಂಸ್ಕೃತಿ ಚಿಂತಕರು "ಕಾಡಿನಂಚಿನಲ್ಲಿ ಮತ್ತು ಊರಂಚಿನಲ್ಲಿ ಉಪಸಂಸ್ಕೃತಿಯ ನೆಲೆಗಳು ಇರುತ್ತವೆ"[7] ಎಂದಿದ್ದಾರೆ, ಮನುಷ್ಯ ಕಾಡಿನಿಂದ ಊರಿಗೆ, ಊರಂಚಿಗೆ ಬಂದಾಗಲೂ ಸಂಸ್ಕೃತಿಯ ಮೂಲ ಅಂಶಗಳು ಮರೆಯಾಗದಿದ್ದರೆ ಅಂಥವರೂ ಉಪಸಂಸ್ಕೃತಿಯ ರಕ್ಷೆಗೆ ಬರುತ್ತಾರೆಂಬ ತಿಳುವಳಿಕೆಯಿಂದ ಊರೊಳಗೂ ಉಪಸಂಸ್ಕೃತಿಗಳು ಇರುತ್ತವೆ ಎಂಬ ಅಭಿಪ್ರಾಯವಾಗಿದೆ. ಈ ದೃಷ್ಟಿಯಿಂದಲೇ ನಮ್ಮದು ಬಹು ಸಂಸ್ಕೃತಿಗಳಿಂದ ಕೂಡಿದ ದೇಶ, ನಾಡು ಆಗಿದೆ ಎಂದು ಹೇಳಿದ್ದಾಗಿದೆ. ಇಡೀ ದೇಶಕ್ಕೆ ಹೋಲಿಸಿದರೆ, ಕರ್ನಾಟಕದ ಅನೇಕ ಪ್ರಾದೇಶಿಕ ನೆಲೆಗಳಲ್ಲಿಯೇ ಅನೇಕ ಉಪಸಂಸ್ಕೃತಿಗಳು ಜೀವಂತವಾಗಿರುವುದು ತುಂಬ. ವಿಶಿಷ್ಟವಾಗಿದೆ.

ಕಾಡುಮಾನವ ತಾನಿದ್ದ ಕಾಡನ್ನು ತೊರೆದು ನಾಗರಿಕತೆಯ ಅಂಗಳದಲ್ಲಿ ಕಾಲಿಟ್ಟು ಊರು ಕಟ್ಟಿಕೊಂಡು ಸಮಾಜವನ್ನು ರಚಿಸಿ ಅದರ ಸಂರಚನೆಯಲ್ಲಿ ಅನೇಕ ವಿಧಿ ವಿಧಾನ, ಕಟ್ಟುಪಾಡುಗಳು, ಸಂಪ್ರದಾಯ, ನಂಬಿಕೆಗಳನ್ನು ರೂಢಿಸಿಕೊಂಡು ಬಾಳುವೆ ಮಾಡಲು ತೊಡಗಿದ ಮಾನವನು ಇವೆಲ್ಲವುಗಳಿಗೆ ಒಂದು ಸಾಂಸ್ಕೃತಿಕ ರೂಪ ಕೊಟ್ಟನು.

ನಾಗರಿಕತೆ, ವಿಕಾಸವಾದಂತೆ ಊರು ಬೆಳೆದು ನಗರವಾದಂತೆ ಅಲ್ಲಿರುವ ಸಮುದಾಯಗಳು ತಮ್ಮದೇ ಆದ ನೆಲೆಯಲ್ಲಿ ಜೀವನವನ್ನು ಕಟ್ಟಿಕೊಂಡರು. ಒಂದೇ ಊರಿನಲ್ಲಿಯೇ ಒಂದು ಓಣಿಯ, ಒಂದು ಸಮುದಾಯದವರು ಇನ್ನೊಂದು ಸಮುದಾಯದಂತೆ ಇರದೆ ಭಿನ್ನವಾಗಿರುವರು. ಅವರ ಆಚಾರ, ವಿಚಾರಗಳಲ್ಲಿ ವ್ಯತ್ಯಾಸ ಕಾಣುವವು. ಉಳ್ಳವರದು ಶ್ರೀಮಂತರದು ಸಮುದಾಯ ಹೀಗೆ ಸಮುದಾಯಗಳ ನಡುವೆ ಸಾಮಾಜಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ಪ್ರತಿಯೊಂದರಲ್ಲೂ ತನ್ನ ಅಚ್ಚೊತ್ತಿವೆ. ಈ ವಿಭಿನ್ನ ಸ್ತರಗಳ ಸಮುದಾಯಗಳ ಸಾಂಸ್ಕೃತಿಕ ವಿವರವನ್ನು ಇಲ್ಲಿ ಕಾಣಲಾಗುತ್ತಿದೆ.

ಪ್ರಾಚೀನ ಮಾನವನಿಂದ ಮೊದಲುಗೊಂಡು ಇಂದಿನ ಮಾನವನವರೆಗೆ ಬೆಳೆದುಬಂದ ಜೀವನ ವಿಧಾನ, ನಂಬಿಕೆ, ಆಚರಣೆ, ಸಂಪ್ರದಾಯ ವಿಧಿನಿಷೇಧಗಳು ಭಾವಾಭಿವ್ಯಕ್ತಿಯ ವಿವಿಧ ಮಾಧ್ಯಮಗಳು ಒಟ್ಟು ಸಂಸ್ಕೃತಿಯ ಸ್ವರೂಪ ರಚನೆಗೆ ವಸ್ತುಗಳಾಗಿರುತ್ತವೆ. ಆದುದರಿಂದ ಮಾನವನ ಜೀವನ ವಿಕಾಸದಲ್ಲಿ ಸಂಸ್ಕೃತಿಯ ವಿಕಾಸದ ಚರಿತ್ರೆಯನ್ನು ಕಾಣುತ್ತೇವೆ. ಅಲ್ಲದೆ ಮಾನವನ ಜೀವನ ವಿಕಾಸದ ವಿವಿಧ ಹಂತಗಳು ಅವನ ಸಾಂಸ್ಕೃತಿಕ ವಿಕಾಸದ ಜೊತೆಗೆ ಹೇಗೆ

ಸಂಘರ್ಷವನ್ನು ಮಾಡುತ್ತಲೋ, ಇಲ್ಲವೆ ಒಪ್ಪಂದ ಮಾಡಿಕೊಂಡೋ ಬೆಳೆದು ಬಂದ ಕಥೆಯೇ ಅವನ ವಿಕಾಸದ ಚರಿತ್ರೆಯಾಗಿದೆ.

ಮಾನವನ ಜೀವನ ಹಂತ ಹಂತವಾಗಿ ವಿಕಾಸಗೊಳ್ಳುತ್ತ ರೂಪಾಂತರಗೊಂಡರೂ ಕೆಲವು ಸಾಂಸ್ಕೃತಿಕ ಮೌಲ್ಯಗಳು ಪರಂಪರೆಯ ಹೆಸರಿನಲ್ಲಿ ರೂಢಿಯಲ್ಲಿರುವುದನ್ನು ಕಾಣುತ್ತೇವೆ. ಅವುಗಳಲ್ಲಿ ಊಟೋಪಚಾರ, ಉಡುಗೆ ತೊಡುಗೆ, ದೇವರು ದಿಂಡರುಗಳು, ಆರಾಧನೆ, ಜಾತ್ರೆ, ಉತ್ಸವ ಹರಕೆ, ಬಲಿ ಆಚರಣೆ ಕೌಟುಂಬಿಕ ವಿಧಿ ವಿಧಾನಗಳು, ಸಂಸ್ಕಾರಗಳು, ನಂಬಿಕೆ, ಪದ್ಧತಿಗಳು, ಸಾಹಿತ್ಯ, ಅಭಿವ್ಯಕ್ತಿ ಮೊದಲಾದವುಗಳು ಬಹು ಮುಖ್ಯವಾದವುಗಳಾಗಿವೆ.

ಮಾನವನ ಸಾಂಸ್ಕೃತಿಕ ವ್ಯವಸ್ಥೆಯ ಸಮಗ್ರ ಅಧ್ಯಯನ ಈ ದೃಷ್ಟಿಯಿಂದ ಮಾಡುವುದು ತುಂಬ ಅವಶ್ಯಕವಾಗಿದೆ. ಒಂದೊಂದು ಸಮಾಜವನ್ನು ಈ ರೀತಿಯಾಗಿ ಅಧ್ಯಯನ ಮಾಡಬೇಕಾದ ಅಗತ್ಯದಿಂದಾಗಿ ಸಮುದಾಯಗಳ ಅಧ್ಯಯನವೂ ನಡೆದಿವೆ, ಇಂದಿಗೂ ನಡೆಯುತ್ತಿವೆ. ಮಾನವ ಮತ್ತು ಅವನ ಸಂಸ್ಕೃತಿಯನ್ನು ಕುರಿತು ಅಭ್ಯಸಿಸುವ ಎಲ್ಲ ಮಾನವಿಕ ಜ್ಞಾನ ಶಾಖೆಗಳು ಇಂದು ತಮ್ಮ ತಮ್ಮ ದೃಷ್ಟಿಯಲ್ಲಿ ವಿವಿಧ ಸಮಾಜಗಳಲ್ಲಿ ಅಧ್ಯಯನ ಕೈಕೊಂಡು, ಅವು ರೂಢಿಸಿಕೊಂಡಿರುವ ಸಾಂಸ್ಕೃತಿಕ ವೈಶಿಷ್ಟ್ಯವನ್ನು ಗುರುತಿಸುತ್ತವೆ. ಮೇಲ್ನೋಟಕ್ಕೆ ಬೇರೆ ಬೇರೆ ಸಂಸ್ಕೃತಿಗಳ ವೈಶಿಷ್ಟ್ಯ ಒಟ್ಟಾರೆಯಾಗಿ ಒಂದೇ ಬಗೆಯಾಗಿ ಕಂಡರೂ ಆ ವೈಲಕ್ಷಣಗಳನ್ನು ಸಾಂಸ್ಕೃತಿಕ ದೃಷ್ಟಿಯಿಂದ ನೋಡಿದರೆ ಅವುಗಳ ಕಾರ್ಯಚಟುವಟಿಕೆಗಳ ವ್ಯತ್ಯಾಸದ ಪರಿಚಯವಾಗುತ್ತದೆಯೆನ್ನಬಹುದು.

ಭಾರತಕ್ಕೆ ಸುಮಾರು ಮೂರು-ನಾಲ್ಕು ಸಾವಿರ ವರ್ಷಗಳ ಚರಿತ್ರೆಯು ಇದ್ದರೂ ಅದನ್ನು ಈವರೆಗೆ ಆಳ್ವಿಕೆ ನಡೆಸಿದ ಆರ್ಯರು, ವೈದಿಕರು, ಕ್ಷತ್ರೀಯರು, ಬ್ರಾಹ್ಮಣರ ಚರಿತ್ರೆಯನ್ನೇ ಚಿತ್ರಿಸಲಾಗಿದೆ. ಭಾರತದ "ಚರಿತ್ರೆಯಲ್ಲಿ ಇಲ್ಲಿ ದಲಿತರ ಪಾತ್ರವನ್ನು ಎಲ್ಲೂ ದಾಖಲಿಸಿಲ್ಲ. ದಲಿತರು, ಅಸ್ಪೃಶ್ಯರು ಭಾರತದ ಮೂಲ ನಿವಾಸಿಗಳೆಂಬುದರಲ್ಲಿ ಎರಡು ಮಾತಿಲ್ಲ. ಈ ದೇಶದ ಸಂಸ್ಕೃತಿಯೊಂದಿಗೆ ತಮ್ಮದೇ ಆದ ಛಾಪನ್ನು ಉಳಿಸಿಕೊಂಡವರು ದಲಿತರು. ಇವರ ಮೇಲೆ ಪರಕೀಯರ ದಾಳಿ ಪಲ್ಲಟಗೊಳಿಸಿದ್ದು, ಇತಿಹಾಸ ಶೂದ್ರರು, ಚಾಂಡಾಲರು, ಪಂಚಮರು, ಅಂತ್ಯಜರು, ಮ್ಲೇಚರು, ತುಳಿತಕ್ಕೊಳಪಟ್ಟವರು, ಅಸ್ಪೃಶ್ಯರು ಭಾರತದ ಚರಿತ್ರೆಯ ವಿವಿಧ ಕಾಲಘಟ್ಟಗಳಲ್ಲಿ ಕಂಡುಬರುತ್ತಾರೆ. ಇಂದು ಅಸ್ಪೃಶ್ಯತೆಯ ಭೂತಕ್ಕೆ ಬಲಿಯಾಗಿ ನರಳುತ್ತಿದ್ದಾರೆ."[8]

ಈ ಬಗೆಯಲ್ಲಿ ಅನೇಕರು ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಅಶಕ್ತರು, ಅಲಕ್ಷಿಸಲ್ಪಟ್ಟವರ ಬಗ್ಗೆ ಇಂದು ಗಮನಿಸಬೇಕಾಗಿದೆ. ಹೀಗೆ ಸಾಂಸ್ಕೃತಿಕವಾಗಿ ಗಮನಿಸಬೇಕಾದವರಲ್ಲಿ ಸಫಾಯಿ ಕರ್ಮಚಾರಿಗಳೆನಿಸಿದ ಬಂಗಿಗಳು ಪ್ರಮುಖವಾಗಿದ್ದಾರೆ.

ಭಾರತದಾದ್ಯಂತ ಕಂಡು ಬರುವ ಸಫಾಯಿ ಕರ್ಮಚಾರಿಗಳು ಅತ್ಯಂತ ಪ್ರಾಚೀನ ಅಸ್ಪೃಶ್ಯ ಜಾತಿಗಳಿಗೆ ಸೇರಿದವರಾಗಿದ್ದಾರೆ. ಹೀಗಿದ್ದೂ ಈ ಜಾತಿ ಸಮುದಾಯವನ್ನು ಬೇರೆ ಬೇರೆ ರಾಜ್ಯಗಳ ಪ್ರಾದೇಶಿಕವಾಗಿ ಬೇರೆ ಬೇರೆ ಹೆಸರುಗಳಿಂದ ಕರೆಯಲಾಗುವುದು. ಈ ಜನಾಂಗವು ತಲೆಮಾರುಗಳಿಂದ ತಮ್ಮದೇ ಬಾಳನ್ನು ಕಟ್ಟಿಕೊಂಡಿದ್ದರೂ ಸಮಾಜದ ಕಪಿಮುಷ್ಟಿಯಿಂದ ಮುಕ್ತಿಹೊಂದಿಲ್ಲ.· ಇವರುಗಳು ಇಂಥ ವಿಷಯ ಪರಸ್ಥಿತಿಯನ್ನು ಎದುರಿಸುತ್ತಲೇ ತಮ್ಮ ಪ್ರಾಚೀನ ಸ್ಥಿತಿಗತಿಗಳನ್ನು ಅವಲೋಕಿಸುವ ಅಗತ್ಯವನ್ನು ಕಾಣುವುದು ವಾಸ್ತವ. ಇಲ್ಲಿ ಮುಖ್ಯವಾಗಿ ಸಫಾಯಿ ಕರ್ಮಚಾರಿಗಳ ಸಾಂಸ್ಕೃತಿಕ ವಿವರಗಳನ್ನು ಈ ಅಧ್ಯಾಯದಲ್ಲಿ ವಿವರವಾಗಿ ಚರ್ಚಿಸಲಾಗುತ್ತಿದೆ.

5.2 ಆಚರಣೆಗಳು

ಮನುಷ್ಯನ ಜೀವನದಲ್ಲಿ ಆಚರಣೆ, ಸಂಪ್ರದಾಯಗಳು ಹಾಸುಕೊಕ್ಕಾಗಿವೆ. ಅವುಗಳು ಹುಟ್ಟಿನಿಂದ ಸಾಯುವವರೆಗೂ ಇರುವವು. ಅದರಲ್ಲೂ ಹುಟ್ಟು ಮತ್ತು ಸಾವು ಮಾನವನ ಜೀವನದ ಎರಡು ಮಹತ್ವದ ಕ್ಷಿತಿಜಗಳು. ಈ ಜನನ ಮತ್ತು ಮರಣ ಜೀವನದಲ್ಲಿ ಒಂದೇ ಸಲ ಬರುವಂಥವು. ಹೀಗಾಗಿ ಹುಟ್ಟು ಹಾಗೂ ಮರಣಕ್ಕೆ ಸಂಬಂಧಿಸಿದ ನಂಬಿಕೆ, ವಿಧಿ ವಿಧಾನಗಳು, ಸಂಸ್ಕಾರಗಳು ಎಲ್ಲಾ ಜಾತಿ ಸಮುದಾಯಗಳಲ್ಲಿ ಕಂಡುಬರುವವೆಂಬುದು ನಿಜ. ಅಲ್ಲಿ ಕಂಡುಬರುವ ಸಂಸ್ಕಾರಗಳು, ಆಚರಣೆಗಳು, ಸಂಪ್ರದಾಯಗಳು ಸಮುದಾಯದಿಂದ ಸಮುದಾಯಕ್ಕೆ ಬಹಳ ಭಿನ್ನವಾಗಿರುತ್ತವೆ.

ಹುಟ್ಟು ಸಾವಿನ ಕುರಿತು ಜನಪದರಲ್ಲಿರುವ ನಂಬಿಕೆಯನ್ನು ಸೂಚಿಸುವ ತ್ರಿಪದಿ ಹೀಗೆ ಇದೆ.

"ಏಳುತಲೆ ನಾನೆದ್ದು ಯಾರ‍್ಯಾರ ನೆನೆಯಲಿ
ಎಳ್ಳು ಜೀರಿಗೆ ಬೆಳೆವಾ ಭೂಮಿ ತಾಯಿಯ
ಎದ್ದೊಂದು ಗಳಿಗೆ ನೆನೆದ್ಯನ"[9]

ಈ ತ್ರಿಪದಿಯಲ್ಲಿ ಎರಡು ಪ್ರಮುಖ ಸಂಗತಿಗಳನ್ನು ಕಾಣುತ್ತೇವೆ. ಅವು ಯಾವುವೆಂದರೆ ಒಂದು ಹುಟ್ಟು ಮತ್ತೊಂದು ಸಾವು ಕುರಿತಾಗಿದೆ. ಮೇಲೆ ಹೇಳಿದಂತೆ ಇವೆರಡೂ ಮಾನವನ ಎರಡು ಪ್ರಮುಖ ಘಟ್ಟಗಳು ಜೀವನದಲ್ಲಿ ಇವೆರಡೂ ಒಮ್ಮೆ ಬಂದು ಹೋಗುವಂಥವು. ಜೀರಿಗೆ ಹುಟ್ಟನ್ನು ಸಂಕೇತಿಸಿದರೆ, ಎಳ್ಳು ಸಾವನ್ನು ಸಂಕೇತಿಸುತ್ತದೆ. ಇವೆರಡರ ಕುರಿತು ಜನಪದರು ಇಲ್ಲಿ ನೆನೆದಿದ್ದಾರೆ. ಇದು ಜನಪದರಿಗಿರುವ ಹುಟ್ಟು ಸಾವಿನ ಕುರಿತಾಗಿರುವ ಲೋಕದೃಷ್ಟಿಯನ್ನು ಎತ್ತಿ ತೋರಿಸುತ್ತದೆ. ಜನಪದರು ಹುಟ್ಟಿಗೆ ನೀಡುವಷ್ಟೇ ಮಹತ್ವವನ್ನು ಸಾವಿಗೂ ನೀಡುತ್ತಾರೆ. ಹೀಗಾಗಿ ಈ ಎರಡು ಸ್ಥಿತಿಗಳ ಕುರಿತು ಅವರದೇ ಆದ ವಿಶಿಷ್ಟ ಬಗೆಯ ಆಚರಣೆಗಳಿವೆ.

5.2.1 ಜನನ

ಈ ಸಫಾಯಿ ಕರ್ಮಚಾರಿಗಳು ನಾನಾ ಕಡೆಗಳಿಂದ ಹಂಚಿಹೋಗಿರುವುದರಿಂದ ಅವರು ವಾಸಿಸುವ ಪ್ರದೇಶಗಳ ಪ್ರಭಾವಕ್ಕನುಸಾರವಾಗಿ ಸಂಪ್ರದಾಯ, ಆಚಾರ, ವಿಚಾರ, ನಡವಳಿಕೆಗಳಲ್ಲಿ ವಿವಿಧ ರೀತಿಯ ಭಿನ್ನತೆಯನ್ನು ಮೈಗೂಡಿಸಿಕೊಂಡಿದ್ದಾರೆ. ಅದೇ ಭಿನ್ನತೆಯನ್ನು ಜನನ ಸಂಸ್ಕಾರದಲ್ಲೂ ಕಾಣಬಹುದು.

ಹೆರಿಗೆಗೆ ಮೊದಲು ಗರ್ಭಿಣಿ ಹೆಂಗಸಿನ ಬಯಕೆಗಳನ್ನು ತೀರಿಸುವುದಕ್ಕಾಗಿ ಮನೆಯವರು ಸಮೀಪದ ನೆಂಟರು ಬಗೆ ಬಗೆಯ ಊಟವನ್ನು ಬಯಕೆ ಊಟವೆಂದು ಮಾಡಿಸುತ್ತಾರೆ. ಸಫಾಯಿ ಕರ್ಮಚಾರಿಗಳು ಮಾಂಸಾಹಾರಿಗಳೂ ಹೌದು. ಹೀಗಾಗಿ ಕುರಿ, ಹಂದಿ ಇಲ್ಲವೆ ಕೋಳಿ ಮಾಂಸದ ಆಹಾರವನ್ನು ಅವಳಿಗೆ ಉಣ್ಣಿಸುವರು. ಚೊಚ್ಚಿಲ ಗರ್ಭವತಿಯಾದರೆ ತವರು ಮನೆಯವರು ಬಂದು ಕುಬುಸ (ಸೀಮಂತನ) ನಡೆಸಿಕೊಡುತ್ತಾರೆ. ಆವತ್ತು ಗಂಡಿನ ಮನೆಯಲ್ಲಿ ಸಿಹಿ ಹಾಗೂ ಮಾಂಸದ ಅಡಿಗೆ ಮಾಡಿ ಬಂಧು ಬಳಗದವರಿಗೆ ಊಟಕ್ಕೆ ಕರೆಯುವರು. ನಂತರ ಗಂಡ ಮತ್ತು ಹೆಂಡತಿಗೆ ಕೂಡಿಸಿ ಹೊಸ ಬಟ್ಟೆ ಆಯೇರಿ ಮಾಡುವರು. ನಂತರ ಊರ ಹನುಮಂತ ದೇವರಿಗೋ ಇಲ್ಲವೇ ದೇವಿ ಮಂದಿರಕ್ಕೆ ಹೋಗಿ ದರ್ಶನ ಮಾಡಿಸುತ್ತಾರೆ.

ಸೀಮಂತ ಕಾರ್ಯ ಮುಗಿದ ಮರುದಿನ ತವರಿನವರು ಆ ಹೆಣ್ಣುಮಗಳನ್ನು ಹೆರಿಗೆಗೆ ಕರೆದುಕೊಂಡು ಹೋಗುವ ಸಂಪ್ರದಾಯವಿದೆ. ಬಂಗಿಗಳ ಹೆರಿಗೆ ಸನ್ನಿವೇಶ ತುಂಬಾ ವಿಚಿತ್ರಕರವಾಗಿದೆ. ಸೂಲಗಿತ್ತಿಯು ಗರ್ಭಿಣಿ ಹೆಂಗಸಿಗೆ ನಿನ್ನ ಗಂಡನ ಹೆಸರೇನು ಹೇಳು ಎಂದು

ಕೇಳುತ್ತಾಳೆ. ಹೆರಿಗೆ ಬೇನೆ ತಿನ್ನುತ್ತಿರುವ ಆಕೆ ಆ ಎಂದು ಬಾಯಿ ತೆಗೆಯುತ್ತಿದ್ದಂತೆಯೇ ಬಾಯಿಯಲ್ಲಿ ಮಣ್ಣಿನ ಉಂಡಿಯನ್ನು ತಟ್ಟನೆ ಬಾಯಿಗೆ ತುರುಕಿ ತಿನ್ನುವಂತೆ ಹೇಳುತ್ತಾಳೆ. ಹೀಗೆ ಹಾಸ್ಯದ ಮೂಲಕ ಹೆರಿಗೆ ನೋವನ್ನು ನಿವಾರಿಸಿ ಗಮನ ಬೇರೆಡೆಗೆ ಸೆಳೆಯುವುದು ಇದರ ಹಿಂದಿನ ಉದ್ದೇಶವಾಗಿದೆಯೆಂದು ಸೂಲಗಿತ್ತಿ ಕೆಲಸ ಮಾಡುವವಳು ಹೇಳುತ್ತಾಳೆ. ಬಂಗಿಗಳಲ್ಲಿ ಮನೆಯ ಹೊರಗೆ ಗುಡಿಸಿಲಿನಲ್ಲಿ ಹೆರಿಗೆ ಮಾಡಿಸುವ ಪದ್ಧತಿ ಇದೆ. ಹೆರಿಗೆಯಾದ ಮನೆಯಲ್ಲಿ ಹತ್ತು ದಿನಗಳವರೆಗೆ ಸೂತಕವಿರುತ್ತದೆ. ಅಲ್ಲಿಯವರೆಗೆ ಬಾಣಂತಿ ಗುಡಿಸಲಿನಲ್ಲಿಯೇ ಇರಬೇಕು. ಮಗು ಜನನವಾದ ತಕ್ಷಣ ಮನೆಯ ಒಳಗೆ ಮತ್ತು ಮುಂದೆ ಲೋಬಾನ (ಸಾಂಬ್ರಾಣಿ) ಹೊಗೆ ಹಾಕುತ್ತಾರೆ. ಇದು ಇಡೀ ಮೋಹಲ್ಲಾ (ಓಣಿ)ದವರಿಗೆ ಆ ಮನೆಯಲ್ಲಿ ಹೆರಿಯಾಗಿದೆ ಎಂಬ ಸಂದೇಶವು ಬೀರುತ್ತದೆ. ಜೊತೆಗೆ ತಮ್ಮ ಮನೆತನದ ಹಿರಿಯರೇ ಪುನಃ ಹುಟ್ಟಿ ಬಂದಿದ್ದಾರೆ. ಸ್ವರ್ಗದಲ್ಲಿರುವ ಅವರ ಆತ್ಮಕ್ಕೆ ಶಾಂತಿಯನ್ನುಂಟು ಮಾಡುವುದಕ್ಕೆ ಹೀಗೆ ಮಾಡಲಾಗುತ್ತದೆ. ಅಂದು ಉಪಾಧ್ಯಾಯನ ಮನೆಗೆ ಬೆಲ್ಲ, ಬೇಳೆ, ಎಣ್ಣೆ ಮತ್ತು ಒಂದು ಕಾಲು (ಒಂದು ರೂಪಾಯಿ ಇಪ್ಪತ್ತೈದು ಪೈಸೆ) ರೂಪಾಯಿ ದಕ್ಷಿಣೆ ಅರ್ಪಿಸಿ ಬರುವರು. ನಂತರ ಮನೆಯವರೆಲ್ಲರೂ ನೆರೆದವರಿಗೆ ಬೆಲ್ಲವನ್ನು ಹಂಚಿ ಜನಿಸಿದ ಮಗುವನ್ನು ಗಂಜಲ (ಗೋಮೂತ್ರ)ದಿಂದ ಶುದ್ಧಗೊಳಿಸುತ್ತಾರೆ.

"ಹೆರಿಗೆಯಾದ ಐದನೆಯ ದಿನಕ್ಕೆ ತಾಯಿ ಮತ್ತು ಮಗುವಿಗೆ ಸ್ನಾನ ಮಾಡಿಸಿ ಸೂತಕ ಕಳೆದು ಐದೇಸಿಯನ್ನು ಮಾಡುವರು. ಅಂದು ತಾಯಿ ಮತ್ತು ಮಗು ಹತ್ತಿರದಲ್ಲಿದ್ದ ಬಾವಿಗೆ ಹೋಗಿ ಬಾವಿಯ ಮುಂದೆ ಐದು ಸಣ್ಣ ಕಲ್ಲುಗಳನ್ನು ಇಟ್ಟು ಹೂವುಗಳಿಂದ ಪೂಜಿಸಿ ಬಾನ (ಅನ್ನ) ಹಾಲನ್ನು ಅರ್ಪಿಸುವರು. ಇದನ್ನು ಸ್ಥಳೀಯವಾಗಿ ಶೆಟಿಗಿ (ಶೆಟಿಗೆಮ್ಮ) ಮಾಡುವುದು ಎನ್ನುವರು. ನಂತರ ಹತ್ತನೇ ದಿನಕ್ಕೆ ಇಲ್ಲವೇ ಹದಿಮೂರನೇ ದಿನಕ್ಕೆ ನಾಮಕರಣ ಮಾಡುವ ಪದ್ಧತಿಯಿದೆ. ಗಂಡು ಮಗುವಾದರೆ ಸರಿಸಂಖ್ಯೆ ದಿನಗಳಲ್ಲಿ, ಹೆಣ್ಣು ಮಗುವಾದರೆ ಬೆಸದಿನಗಳನ್ನು ನಾಮಕರಣಕ್ಕೆ ಆಯ್ದುಕೊಳ್ಳುವರು. ಮಗುವಿಗೆ ನಾಮಕರಣದ ದಿನ, ಉಪಾಧ್ಯಾಯನು (ಬ್ರಾಹ್ಮಣನು) ಬಂದು ಶಿಶುವಿನ ಕೈಯಿಗೆ ಬಂದು ದಾರವನ್ನು ಕಟ್ಟಿ ಹೆಸರಿಟ್ಟು ಹೋಗುತ್ತಾನೆ. ಅಂದಿನಿಂದ ಮಗು ಬಂಗಿ ಜನಾಂಗಕ್ಕೆ ಪ್ರವೇಶಿಸಿತು ಎಂಬುದನ್ನು ಇದು ಸೂಚಿಸುತ್ತದೆ."[10]

ಮಗುವಿಗೆ ನಾಮಕರಣ ಮಾಡುವ ಆಚರಣೆಯಲ್ಲಿ ಸೋದರತ್ತೆಯ ಪಾತ್ರ ಬಹುಮುಖ್ಯವಾಗಿದೆ. ಆಕೆಯೇ ಮೊದಲು ಮಗುವನ್ನು ತೊಟ್ಟಿಲಿನಲ್ಲಿ ಹಾಕಿ ಮಗುವಿಗೆ ಇಡುವ

ಹೆಸರನ್ನು ಮೂರು ಸಲ ಕೂಗುವಳು. ಎಲ್ಲರೂ ಆಕೆ ಬೆನ್ನಿಗೆ ಹೊಡೆಯುತ್ತಾರೆ. ನಾಮಕರಣಕ್ಕೆ ಬಂದವರಿಗೆ ಬೆಲ್ಲ ಮತ್ತು ಗುಗ್ಗರಿ (ಕುದಿಸಿದ) ಕಾಳು ಹಂಚುವರು. "ಹೆರಿಗೆಯಾದ ನಂತರ ಕಡಿಗಾದ ಮಾಸವನ್ನು ಕುಂಬಾರ ಮೆನಯಿಂದ ತಂದ ಮಣ್ಣಿನ ಮಡಿಕೆಯಲ್ಲಿ ಹಾಕಿ ಅದರ ಮೇಲೆ ಪರ್ಯಾಣವನ್ನು ಮುಚ್ಚುತ್ತಾರೆ. ಈ ಸಂದರ್ಭದಲ್ಲಿ ಅದರಲ್ಲಿ ದವಸ ಧಾನ್ಯ, ಬೆಳ್ಳಿ ಚೂರು ಮುಂತಾದವುಗಳನ್ನು ಮಾಸದ ಜೊತೆಗೆ ಹಾಕಿ ಅದನ್ನು ಮನೆಯ ಬಚ್ಚಲಿನ ಪಕ್ಕದ ನೆಲದಲ್ಲಿ ಹೂಳುತ್ತಾರೆ. ನಂತರ ಹೊಕ್ಕಳ ಹುರಿಯನ್ನು ಕುಡುಗೋಲಿನಿಂದ ಕೊಯ್ಯುವರು."[11] ಕೂಸಿನ ಹುರಿ ಕೊಯ್ದವರು ಬೆನ್ನು ತಟ್ಟಿ ಹಿಂತಿರುಗಿ ನೋಡದೆ ಹೋಗಬೇಕು.

ಹೆರಿಗೆ ನೋವಿನ ಅನುಭವವನ್ನು ಹೇಳುವ ಹಾಡೊಂದು ಹೀಗಿದೆ.

"ಬ್ಯಾನಿಯ ತಿನುವಾಗ ಬ್ಯಾಡವ್ವ, ಮಕ್ಕಳ
ಬಾಗಿ ಬಚ್ಚಲ ಹೋಗುವಾ। ಬೇಡ್ಯಾಳ
ಮತ್ತೊಂದು ಮಗನ ಕೊಡು ಶಿವನ"[12]

ಕುಟುಂಬದಲ್ಲಿ ಮಕ್ಕಳ ಬಯಕೆ ಹೇಗೆ ಇರುತ್ತದೆ ಎಂಬುದಕ್ಕೆ ಈ ಮೇಲಿನ ಹಾಡು ಸಾಕ್ಷಿಯಾಗಿದೆ. ಪ್ರಾಚೀನ ಕಾಲದಿಂದಲೂ ಮಕ್ಕಳ ಬಗೆಗೆ ಜನಪದರಲ್ಲಿ ಅವರದೇ ಆದ ನಂಬಿಕೆಗಳಿದ್ದವು. ಬಂಜೆಯ ಬದುಕು ವ್ಯರ್ಥವೆಂಬುದು ಅದರಲ್ಲಿ ಒಂದು ನಂಬಿಕೆಯಾಗಿದೆ. ಮಕ್ಕಳಿಗಾಗಿ ಕಂಡ ದೇವರಿಗೆ ಹರಕೆ ಹೊರುವವರೂ ಇದ್ದಾರೆ. ಬಡತನವಿದ್ದರೂ ಮಕ್ಕಳ ಅಪೇಕ್ಷೆಗೆ ಬಡತನ ಕಾಣಲಾರೆವು. ತಮ್ಮ ವಂಶದ ಬಳ್ಳಿ ತಲತಲಾಂತರಗಳವರೆಗೆ ಚಿಗುರಿ ಬೆಳೆಯಬೇಕೆಂಬುದು ಎಲ್ಲರಂತೆ ಸಫಾಯಿಕರ್ಮಿಗಳ ನಂಬಿಕೆಯಾಗಿದೆ.

5.2.2 ಜನನ ಕುರಿತಾದ ನಂಬಿಕೆಗಳು

ಮಗುವಿನ ಜನನದ ಬಗ್ಗೆ ಸಫಾಯಿಕರ್ಮಿ ಸಮುದಾಯದಲ್ಲಿ ಕೆಲವು ನಂಬಿಕೆಗಳಿದ್ದು ಅವುಗಳನ್ನು ಉಲ್ಲೇಖಿಸಲಾಗಿದೆ.

1. ಕೂಸು ಕಾಲು ಮುಂದೆ ಮಾಡಿ ಹುಟ್ಟಬಾರದು. ಇದರಿಂದ ಚಿಕ್ಕಮ್ಮನಿಗೆ ಅಪಾಯ.
2. ಬಾಯಿ ಮೇಲೆ ಮಾಡಿ ಹುಟ್ಟಬಾರದು.

3. ಹೊಕ್ಕಳ ಹುರಿ ಹೆಗಲಿಗೆ ಸುತ್ತಿಕೊಂಡು ಹುಟ್ಟಬಾರದು. ಹೀಗೆ ಆದರೆ ಸೂಲಗಿತ್ತಿಗೆ ಆಪತ್ತು.
4. ಬುಧುವಾರ ಹೆಣ್ಣಾದರೆ ಆ ಮಗುವನ್ನು ಹುಟ್ಟಿದ ತಕ್ಷಣ ಚಿಕ್ಕಮ್ಮನ ಉಡಿಯಲ್ಲಿ ಹಾಕಬೇಕು.
5. ಮಾಸವನ್ನು ರಕ್ಷಿಸಬೇಕೆಂದು ದೇವರಲ್ಲಿ ಬೇಡಿಕೊಳ್ಳಬೇಕು. ಏಕೆಂದರೆ ಮಾಸಕ್ಕೆ ಏನಾದರೂ ಧಕ್ಕೆಯಾದರೆ ಕೂಸಿಗೆ ಜೀವನದಲ್ಲಿ ಅಪಾಯ ಬರಬಹುದೆಂಬ ಇದರ ಹಿಂದಿನ ನಂಬಿಕೆಯಾಗಿದೆ.

5.2.3 ಜವಳ ತೆಗೆಯುವುದು

ಮಗುವಿಗೆ ಐದು ತಿಂಗಳು ಇಲ್ಲವೆ ವರ್ಷ ತುಂಬುವುದರೊಳಗೆ ತಲೆಯ ಕೂದಲನ್ನು ಕತ್ತರಿಸಬೇಕು. ಅದಕ್ಕೆ ಜವಳ ಅಥವಾ ಜಡಿ (ಜಡೆ) ತೆಗೆಯುವುದು ಎನ್ನುವರು. ಮಗುವಿನ ತಾಯಿ–ತಂದೆ ಇಲ್ಲವೆ ಅಜ್ಜ–ಅಜ್ಜಿ ಇವರು ತಮ್ಮ ಕುಲದೇವತೆ ಎದುರಿನಲ್ಲಿ ಕೆಲವೊಂದು ಕಡೆಗಳಲ್ಲಿ ತಾವು ಬೇಡಿಕೊಂಡು ದೇವರ ಎದುರಿನಲ್ಲಿ ತಲೆಗೂದಲನ್ನು ಪೂಜೆ ಪುನಸ್ಕಾರಗಳಿಂದ ಸಾಂಪ್ರದಾಯಕವಾಗಿ ಕತ್ತರಿಸುವ ಕ್ರಿಯೆಯನ್ನು ಮಾಡುವರು. ಅನುಕೂಲಕ್ಕೆ ತಕ್ಕಂತೆ ಈ ಕಾರ್ಯವನ್ನು ನೆರವೇರಿಸುವರು. ಅನುಕೂಲಸ್ಥರು ಸ್ವಲ್ಪ ಹೆಚ್ಚಾಗಿ ಖರ್ಚು ಮಾಡಿದರೆ ಬಡವರು ತಮ್ಮ ಮನೆಯಲ್ಲಿಯೇ ಜಗುಲಿಯ ಮುಂದೆ ದೇವರ ಹೆಸರಿನಲ್ಲಿ ಜಡೆ ತೆಗೆಯುತ್ತಾರೆ. "ಗಂಡು ಮಗುವಿಗೆ ಸರಿ ಸಂಖ್ಯೆಯ ತಿಂಗಳಲ್ಲಿ ಅಂದರೆ 6, 8, 10, 12 ತಿಂಗಳಂತೆ ಹೆಣ್ಣು ಮಗುವಿದ್ದರೆ 5, 7, 9, 11 ತಿಂಗಳಂತೆ ಇವುಗಳಲ್ಲಿ ಜಡೆ ತೆಗೆಯುತ್ತಾರೆ. ಜಡೆ ತೆಗೆಯುವ ಕಾರ್ಯವನ್ನು ಹೆಂಡತಿಯ ಸಹೋದರನೇ ಮುಂದೆ ನಿಂತು ನಡೆಸಿಕೊಡಬೇಕು. ಎಲೆ, ಅಡಿಕೆ, ಅಕ್ಕಿ, ಅರಿಷಿಣ, ಕಾರೀಕ (ಉತ್ತತ್ತಿ) ಕೊಬ್ಬರಿ ಮುಂತಾದವುಗಳಿಂದ ದೇವರ ಮುಂದೆ ಮಂಡಲಹಾಕಿ ಹಾಗೂ ದೇವರಿಗೆ ಉಡಿಯಕ್ಕಿ ತುಂಬಿ ಸೋದರ ಮಾವನು ಕೂಸಿನ ತಲೆಗೆ ಎಲೆಗತ್ತರಿಯನ್ನಿಟ್ಟು ನಿಯಮಕ್ಕೆ ಐದು ಇಲ್ಲವೇ ಹನ್ನೊಂದು ಕೂದಲನ್ನು ಕತ್ತರಿಸಿದರೆ, ಅಲ್ಲಿಗೆ ಜವಳ ತೆಗೆಯುವ ಕಾರ್ಯ ಮುಗಿದಂತೆ."[13] ನಂತರ ಮಗು ಮತ್ತು ತಾಯಿ, ತಂದೆಯರಿಗೆ ಹೊಸ ಬಟ್ಟೆ ಉಡಿಸಿ, ದೇವರ ಪ್ರದಕ್ಷಿಣೆ ಹಾಕಿಸುತ್ತಾರೆ. ನಂತರದಲ್ಲಿ ಜವಳ ತೆಗೆದ ಸೋದರ ಮಾವನಿಗೆ ಹೊಸ ಬಟ್ಟೆ ಮಾಡುವರು. ಈ ಕಾರ್ಯಕ್ರಮಕ್ಕೆ ಬಂದ ಬಂಧು ಆಪ್ತರಿಗೆ ಊಟೋಪಚಾರ ಮಾಡಿಸುವುದು

ಸಂಪ್ರದಾಯ. ಕತ್ತರಿಸಿದ ತಲೆಗೂದಲನ್ನು ಸಂಗ್ರಹಿಸಿಟ್ಟು, ನಂತರ ಅದನ್ನು ಕೆರೆ ಅಥವಾ ಹೊಳೆ (ನದಿ)ಗೆ ಒಯ್ದು ಬಿಡುವರು.

5.2.4 ಹಲ್ಲಿಗೆ ಬೆಳ್ಳಿ ಬಟ್ಟಲ ಬಡಿಸುವುದು

"ಮಗುವಿಗೆ 7 ರಿಂದ 14 ತಿಂಗಳವರೆಗೆ ಹಲ್ಲು ಮೂಡುವ ಸಮಯ. ಹಲ್ಲು ಬರುವ ಸಮಯದಲ್ಲಿ, ಮೇಲಿನ ಸಾಲಿನಲ್ಲಿ ಮೊದಲಿಗೆ ಹಲ್ಲು ಮೂಡಿದರೆ ಸೋದರ ಮಾವನಿಗೆ ದೋಷ ಬರುವುದೆಂಬ ನಂಬಿಕೆ ಇವರಲ್ಲಿದೆ. ದೋಷ ನಿವಾರಣೆಗಾಗಿ, ಅಕ್ಕಸಾಲಿಗನ ಹತ್ತಿರ ಹೋಗಿ ಒಂದು ತೊಲಿ ಇಲ್ಲವೇ ಅರ್ಧ ತೊಲಿ ಬೆಳ್ಳಿ ಬಟ್ಟಲನ್ನು ಮಾಡಿಕೊಂಡು ಸೋದರ ಮಾವನಿಗೆ ಬಿನ್ನವತ್ತಳೆ ನೀಡಿ ಕರೆಯಿಸಿಕೊಂಡು ಬೆಳ್ಳಿ ಬಟ್ಟಲಿನಿಂದ ಮೇಲಿನ ಹಲ್ಲನ್ನು ಮುಟ್ಟಿಸುವನು. ಈ ಕಾರ್ಯ ಹನುಮಂತ ದೇವರ ಗುಡಿಯಲ್ಲಿ ಸಾಮಾನ್ಯವಾಗಿ ನಡೆಯುತ್ತದೆ."[14] ಮಗುವಿನ ಹಲ್ಲು ವಜ್ರದಂತೆ ಆಗಲಿ, ಸೋದರ ಮಾವನಿಗೆ ಬರುವ ದೋಷ ನಿವಾರಣೆ ಆಗಲಿ ಎಂದು ಬೇಡಿಕೊಳ್ಳುತ್ತಾರೆ.

ಮಗುವಿನ ಮನೆಯವರು ಪೂಜಾ ಸಿದ್ಧತೆಗಳನ್ನು ಮಾಡಿದ ನಂತರ ಸೋದರ ಮಾವನು ಮಗುವನ್ನು ತನ್ನ ತೊಡೆಯ ಮೇಲೆ ಹಾಕಿಕೊಂಡು ಮೋರೆಗೆ ಮೇಲು ಮುಸುಕು ಹಾಕಿ ಬಟ್ಟಲಿನಿಂದ ಹಲ್ಲನ್ನು ಗೀರುವನು ಇಲ್ಲವೇ ಮುಟ್ಟಿಸುವನು. ಮಗುವಿನ ಹಲ್ಲನ್ನು ಗೀರಿದ ಬಟ್ಟಲನ್ನು ದೇವಾಲಯದ ಮೇಲೆ ಹಾರಿಸುವರು ಅಥವಾ ಗುಡಿಯ ಪೂಜಾರಿಗೆ ದಾನವಾಗಿ ನೀಡುವರು.

5.2.5 ಹೊಸ್ತಿಲ ದಾಟುವುದು

ಮಗು ಅಂಬೆಗಾಲಿಟ್ಟು ಪ್ರಥಮ ಬಾರಿಗೆ ಮನೆಯ ಹೊಸ್ತಿಲನ್ನು ದಾಟಿದರೆ, ಬೆಳ್ಳಿ ಬಟ್ಟಲಲ್ಲಿ ಅಥವಾ ಕೊಬ್ಬರಿ ಬಟ್ಟಲಲ್ಲಿ ಸಕ್ಕರೆಯನ್ನು ಹಂಚುವರು. ಮಗುವಿಗೆ ಹೊಸ ಬಟ್ಟೆ ತಂದು ಉಡಿಸುತ್ತಾರೆ. ಈ ಕಾರ್ಯವು ಮನೆಯಲ್ಲಿಯೇ ನಡೆಯುವಂಥದ್ದು. "ನಂತರ ತವರು ಮನೆಗೆ ಈ ಸುದ್ದಿಯನ್ನು ಬೀರಲಾಗುತ್ತದೆ. ಆಗ ತವರಿನ ಅಜ್ಜ, ಅಜ್ಜಿಯವರು ಬಂದು ತಾಯಿ ಮತ್ತು

ಮಗುವಿಗೆ ಹೊಸ ಬಟ್ಟೆ ಮಾಡಿ ಸಿಹಿ ಹಂಚುವರು. ಅನಂತರ ಕೂಸಿನ ಮುಖ ನೋಡಿ ಮನೆಗೆ ಬರುತ್ತಾರೆ."[15] ಹೀಗೆ ಜನನದಿಂದ ಮಗು ಅಂಬೆಗಾಲು ಇಟ್ಟು ನಡೆಯುವವರೆಗೂ ಮನೆಯಲ್ಲಿ ಪದೇ ಪದೇ ಕಾರ್ಯಗಳು ಜರುಗುವವು.

5.2.6 ಮೈನೆರೆಯುವುದು

ಹೆಣ್ಣು ಮಗಳು ಮೊದಲ ಬಾರಿಗೆ ಮುಟ್ಟಾಗುವುದಕ್ಕೆ ಮೈನೆರೆಯುವುದು ಎನ್ನುತ್ತಾರೆ. ಇದಕ್ಕೆ "ದೊಡ್ಡವಳಾಗುವುದು, ಋತುಮತಿಯಾಗುವುದು ಎಂದೂ ಹೇಳುತ್ತಾರೆ."[24] ಸಾಮಾನ್ಯವಾಗಿ ಹೆಣ್ಣುಮಕ್ಕಳು 11 ರಿಂದ 14ನೇ ವಯಸ್ಸಿನ ಒಳಗೆ ಮೈನೆರೆಯಬೇಕು ಎನ್ನುತ್ತಾರೆ. ಹೆಣ್ಣುಮಗಳು ಮೊದಲನೇ ಸಲ ಮೈನೆರೆದಾಗ ಕೆಲವು ಕಾರ್ಯಗಳನ್ನು ಮಾಡುತ್ತಾರೆ. ಮುಟ್ಟಾದವಳಿಗೆ ಹಳೆಯ ಬಟ್ಟೆಗಳನ್ನು ಬಿಡಿಸಿ ಮನೆಯ ಮೂಲೆ ಅಥವಾ ಮನೆಯ ಹಿತ್ತಲಲ್ಲಿ ಚಪ್ಪರವನ್ನು ಹಾಕಿ ಕೂಡಿಸುತ್ತಾರೆ. ಈ ಅವಧಿಯಲ್ಲಿ ಎಲ್ಲೂ ಹೊರಗಡೆ ಹೋಗಬಾರದು ಹಾಗೂ ಮೂರು ದಿನಗಳವರೆಗೆ ಅವಳನ್ನು ಯಾರೂ ಮುಟ್ಟುವುದಿಲ್ಲ.

ಹುಡುಗಿ ಮದುವೆಗೆ ಮುಂಚೆ ಮೈನೆರೆದರೆ 11 ಇಲ್ಲವೇ 17 ದಿನಗಳವರೆಗೆ ಕೂಡಿಸುತ್ತಾರೆ. ಮದುವೆ ನಂತರ ಮೈನೆರೆದರೆ 21 ದಿನಗಳವರೆಗೆ ಕೂಡಿಸುತ್ತಾರೆ. ಓಣಿಯ ಮನೆಯವರು ದಿನಕ್ಕೊಬ್ಬರಂತೆ ಸರದಿಯಲ್ಲಿ ಮನೆರೆದವರ ಹುಡುಗಿ ಮನೆಗೆ ಶಾವಿಗೆ, ತುಪ್ಪ, ಹಾಲು ಬೆಲ್ಲದ ಅಡುಗೆಯನ್ನು ತಂದುಕೊಡುತ್ತಾರೆ. ಓಣಿಯ ಹಿರಿಯರು ಸಂಜೆಗೆ ಬಂದು ಕೂಡಿಸಿ ಆರತಿ ಮಾಡಿ ಸೋಬಾನೆ ಹಾಡುಗಳನ್ನು ಹಾಡುತ್ತಾರೆ.

ಮುತ್ತೈದೆಯರು ಬಂದು ಮೈನೆರೆದವಳಿಗೆ ಅರಿಷಿಣ, ಎಣ್ಣೆ ಹಚ್ಚಿ ಸ್ನಾನ ಮಾಡಿಸುತ್ತಾರೆ. ತಲೆತುಂಬ ಹೂವು ಮುಡಿಸಿ ದಂಡಿ ಕಟ್ಟಿ ಆರತಿ ಬೆಳಗಿ ಹಾಡುತ್ತಾರೆ. ಮದುವೆಯಾದ ಹುಡುಗಿ ಮೈನೆರೆದರೆ ಗಂಡನ ಮನೆಗೆ ಸುದ್ದಿ ಹೇಳಿ ಕಳುಹಿಸುವರು. ಹಾಗೂ ಹುಡುಗನಿಗೆ ಮೈಮೇಲೆ ಬಣ್ಣ ಚೆಲ್ಲುವರು. 11ನೇ ಅಥವಾ 17ನೇ ಇಲ್ಲವೇ 21ನೇ ದಿನದಂದು ಸಂಬಂಧಿಕರಿಗೂ ಹೇಳಿ ಕಳುಹಿಸಿ ಓಣಿಯವರಿಗೆಲ್ಲ ಹೇಳುತ್ತಾರೆ. ಮನೆಯ ಅಂಗಳದಲ್ಲಿ ಬಣ್ಣ ಬಣ್ಣದ ಸೀರೆಗಳನ್ನು ಹಾಕಿ ಮಂಟಪ ಸಿದ್ಧಪಡಿಸುವರು. ಹೊಸ ಮಂಟಪದಲ್ಲಿ ಹುಡುಗಿಯನ್ನು ಕೂಡಿಸಿ, ಹೊಸ ಬಟ್ಟೆ ತೊಡಿಸಿ ಆರತಿ

ಮಾಡುವರು. ಆರತಿ ಮಾಡಿದವರು ಗಂಡನ ಹೆಸರು ಹೇಳಿ ತಮ್ಮ ಕೈಯ್ಯ ಆರತಿಯನ್ನು ಮತ್ತೊಬ್ಬ ಮುತ್ತೈದೆಗೆ ಕೊಡುತ್ತಾರೆ. ಹುಡುಗಿಯೂ ಗಂಡನ ಹೆಸರು ಹೇಳುವಳು.

5.2.7 ವಿವಾಹ ಕಾರ್ಯ

ಪ್ರತಿ ಸಮಾಜಕ್ಕೂ ತನ್ನದೇ ಆದ ಸಂಸ್ಕೃತಿ ಇರುತ್ತದೆ. ಇದನ್ನು ಸರಿಯಾಗಿ ಪಾಲಿಸಿಕೊಂಡು ಅಭಿವೃದ್ಧಿಪಡಿಸಿಕೊಂಡು ಹೋಗುವ ಹೊಣೆಯು ಸಮಾಜಕ್ಕೆ ಸೇರಿರುತ್ತದೆ. ಸಂಸ್ಕೃತಿಯು ಸಮಾಜದ ಸೃಷ್ಟಿ ಮತ್ತು ಅದರ ಅಂಗವಾದರೂ ಇದು ಸಮಾಜವನ್ನು ನಿಯಂತ್ರಿಸುವ ಹೊಣೆಯನ್ನು ಹೊಂದಿರುತ್ತದೆ. ದಿನನಿತ್ಯ ಜೀವನದ ಕೆಲವು ಕಾರ್ಯಗಳು ಜನರಲ್ಲಿನ ಆಚಾರ ವಿಚಾರಗಳು, ಮೌಲ್ಯಗಳು ಎಲ್ಲವೂ ಆ ಸಂಸ್ಕೃತಿಯ ಕಕ್ಷೆಯಲ್ಲಿ ಬರುತ್ತವೆ.

ಸಾಮಾಜಿಕವಾಗಿ, ಆರ್ಥಿಕವಾಗಿ, ಮಾನಸಿಕವಾಗಿ ಕುಟುಂಬವು ತನ್ನ ಸದಸ್ಯರಿಗೆ ರಕ್ಷಣೆಯನ್ನು ನೀಡುತ್ತದೆ. ಉದಾ: ವ್ಯಕ್ತಿ ಕಾಯಿಲೆ ಬಿದ್ದಾಗ, ಉದ್ಯೋಗವಿಲ್ಲದಿದ್ದಾಗ ತನ್ನನ್ನು ಸಂರಕ್ಷಿಸುವ ಕುರಿತು ವ್ಯಕ್ತಿ ಆಲೋಚಿಸುವುದು ಸಹಜ. ಆದರೆ ಅಂಥ ಸಮಯದಲ್ಲಿ ಕುಟುಂಬವು ವ್ಯಕ್ತಿಗಳಿಗೆ ಸಂರಕ್ಷಿಸುತ್ತದೆ. ಆತನ ಎಲ್ಲ ತೊಂದರೆಗಳಲ್ಲಿ ಭಾಗಿಯಾಗುತ್ತದೆ. ವ್ಯಕ್ತಿ ಜೀವಿಸಲು ಸಮಾಜ ಹಾಗೂ ಸಾಂಸ್ಕೃತಿಕ ಅವಶ್ಯಕತೆಗಳು ಬೇಕಾದರೂ ಅವನು ಜೀವಂತವಾಗಿರಲು ತನ್ನ ಆರೋಗ್ಯವನ್ನು ಕಾಪಾಡಿಕೊಳ್ಳಲು ತನ್ನ ದೈಹಿಕ ಅವಶ್ಯಕತೆಗಳನ್ನು ಈಡೇರಿಸಿಕೊಳ್ಳಲು ಕುಟುಂಬದ ಅವಶ್ಯಕತೆ ಮಾನವನಿಗಿದೆ. ಒಂದು ವಿಧದಲ್ಲಿ ಹೇಳುವುದಾದರೆ ಮಾನವನು ವಿವಾಹ ಸಂಸ್ಥೆಯ ಮೂಲಕ ಕುಟುಂಬವನ್ನು ರಚಿಸಿಕೊಳ್ಳುತ್ತಾನೆ.

"ವಿವಾಹವೆಂದರೆ ಲೈಂಗಿಕ ಸಂಬಂಧವನ್ನು ಕ್ರಮಪಡಿಸುವ ಮಕ್ಕಳಿಗೆ ಸಾಮಾಜಿಕ ಸ್ಥಾನಮಾನ ನೀಡುವ ಮತ್ತು ಎರಡು ಗುಂಪುಗಳ ನಡುವೆ ಉತ್ತಮವಾದ ಸಂಬಂಧವನ್ನು ತರುವ ಒಂದು ಆಚರಣೆ"[17] ಎನ್ನಬಹುದು. ವಿವಾಹವು ಸಮಾಜದಲ್ಲಿ ವಿಶೇಷ ಮನ್ನಣೆ ಪಡೆದಿದೆ. ಕೆಲವು ಜಾತಿ, ಧಾರ್ಮಿಕ ಸಮುದಾಯಗಳಲ್ಲಿ ಸೋದರಿಕೆ ವಿವಾಹವು ರೂಢಿಯಲ್ಲಿದ್ದರೆ, ಸಫಾಯಿ ಕರ್ಮಚಾರಿ ಸಮುದಾಯದಲ್ಲಿ ಸೋದರತ್ತೆ, ಸೋದರ ಮಾವ ಮತ್ತು ಅಕ್ಕನ ಮಗಳನ್ನು ವಿವಾಹವಾಗುವುದು ರೂಢಿಯಲ್ಲಿದೆ. ಸಫಾಯಿಗಳಲ್ಲಿ ಸ್ವಜಾತಿಯ ಒಳ ಬಾಂಧವ್ಯ ಹಾಗೂ ಹೊರ ಬಾಂಧವ್ಯ ವಿವಾಹ ಪದ್ಧತಿಯಿದೆ. ವಿವಾಹ ಕಾರ್ಯವಿಧಾನದಲ್ಲಿ ಹಲವು ಹಂತಗಳನ್ನು

ಕಾಣುವೆವು. ಅವುಗಳಲ್ಲಿ 1) ಕನ್ಯೆಯನ್ನು ನೋಡಿ ನಿಶ್ಚಯಿಸುವುದು 2) ವಿವಾಹವನ್ನು ನಿಶ್ಚಯಿಸುವುದು.

1. ಕನ್ಯಾ ನಿಶ್ಚಯ

ವರ ಇಲ್ಲವೇ ವರನ ಮನೆಯವರು ಕನ್ಯೆಯ ಅನ್ವೇಷಣೆಯಲ್ಲಿ ತೊಡಗುವ ಕ್ರಿಯೆ ನಡೆಯುತ್ತದೆ. ತಂದೆ ತನ್ನ ವರ್ಗದ ಹಿರಿಯರೊಂದಿಗೆ ಸೂಕ್ತವಾದ ಹೆಣ್ಣನ್ನು ನಿಶ್ಚಯಿಸಲು ಹೊರಡುವನು. ಅವರು ಭೇಟಿಕೊಟ್ಟ ಮನೆಯ ಹೆಣ್ಣು ಒಪ್ಪಿಗೆಯಾದರೆ, ಕುಲದ ಮುಖ್ಯಸ್ಥರೊಂದಿಗೆ ಎಲ್ಲರೂ ಸಾರಾಯಿ ಅಂಗಡಿಗೆ ಹೋಗುವರು. ಗಂಡಿನ ತಂದೆಯು ಒಂದು ಸಣ್ಣ ಮಣ್ಣಿನ ಪಾತ್ರೆಯಲ್ಲಿ ಸಾರಾಯಿಯನ್ನು ತುಂಬಿ ಆಯ್ಕೆಯಾದ ಮದುವೆ ಹೆಣ್ಣಿನ ತಂದೆಗೆ ಕೊಟ್ಟು ಬೀಗತನ ಮಾಡಲಿಕ್ಕೆ ಒಪ್ಪಿಕೊಳ್ಳುವರು. ಅದೇ ರೀತಿ ಕನ್ಯೆ ಮನೆಯ ಹಿರಿಯರು ಒಂದು ಮಣ್ಣಿನ ಪಾತ್ರೆಯಲ್ಲಿ ಸರಾಯಿ ತುಂಬಿ ಗಂಡಿನ ಕಡೆಗೆಯವರಿಗೆ ಕೊಡುತ್ತಾರೆ. ಸಾರಾಯಿಯನ್ನು ಪರಸ್ಪರ ವಿನಿಯೋಗ ಮಾಡಿಕೊಳ್ಳುವುದರ ಮೂಲಕ ಮದುವೆಯ ನಿಶ್ಚಿತಾರ್ಥಕ್ಕೆ ಸಾಕ್ಷಿಯಾಗುತ್ತಾರೆ.

ಗಂಡಸರು ಕನ್ಯೆಯ ಮನೆಗೆ ಹೋಗಿ ಹುಡುಗಿಯನ್ನು ನೋಡಿ ಬಂದ ಮೇಲೆ ಹೆಂಗಸರು ಹುಡುಗಿಯ ಮನೆಗೆ ಹೋಗಿ ಪರಸ್ಪರ ಸಾರಾಯಿ ವಿನಿಯೋಗಿಸಿಕೊಂಡು ತಮ್ಮ ಒಪ್ಪಿಗೆಯನ್ನು ಸೂಚಿಸಿ ಬರುವರು. ಇಲ್ಲಿಗೆ ಮೊದಲ ಹಂತದ ನಿಶ್ಚಯ ಮುಗಿಯುತ್ತದೆ. ಮುಂದೆ ಒಂದು ಒಳ್ಳೆಯ ದಿನವನ್ನು ಆರಿಸಿ ವರನ ಕಡೆಯವರು ಕನ್ಯೆ ಮನೆಗೆ ಬಂದು ಸೀರೆ ಉಡಿಸಿ, ಸಿಹಿ ಹಂಚುವರು. ಇದಾದ ನಂತರ ಕನ್ಯೆಯ ಮನೆಯವರು ಹುಡುಗನ ಮನೆಗೆ ಬಂದು ಸಿಹಿ ಹಂಚಿ ಪರಸ್ಪರ ಬಾಂಧವ್ಯವನ್ನು ಗಟ್ಟಿ ಮಾಡಿಕೊಳ್ಳುವರು. ಹೆಣ್ಣನ್ನು ನಿಶ್ಚಯ ಮಾಡಿದ ನಂತರ ಕುಂಕುಮ ಕಾರ್ಯ ಮಾಡುವರು. ಇದಾದ ನಂತರ ಮಾತುಕತೆ ಮಾಡುವರು. ಇಲ್ಲಿ ಸೋದರ ಮಾವನ ಪಾತ್ರ ಹಿರಿದಾದುದು. ಏಕೆಂದರೆ ಹುಡುಗನ ಕಡೆಯವರು ಕನ್ಯಾ ಶುಲ್ಕವನ್ನು ಕೊಡಬೇಕಾಗುತ್ತದೆ. ಅದು ಸೋದರ ಮಾವನಿಗಿರುವ ಚಾಜ. ಬಡವರಿರಲಿ, ಶ್ರೀಮಂತರಿರಲಿ ಕನ್ಯಾ ಶುಲ್ಕ ಪದ್ಧತಿ ಈ ಜನಾಂಗದಲ್ಲಿ ಹಿಂದಿನಿಂದಲೂ ಇದೆ. ಇತ್ತೀಚೆಗೆ ಆಧುನಿಕತೆಯ ಪ್ರಭಾವ ಇವರುಗಳ ಮೇಲೆಯೂ ಆಗುತ್ತಿದೆ. ಕನ್ಯೆಯ ಕಡೆಯವರು ವರದಕ್ಷಿಣೆ ಕೊಡುವ ಪದ್ಧತಿ ಅಲ್ಲಲ್ಲಿ ಕೇಳಿ ಬರುತ್ತಿದೆ ಎನ್ನಬೇಕು.

ಸಫಾಯಿಗಳಲ್ಲಿ ಒಮ್ಮೆ ನಿಶ್ಚಯವಾದ ಮದುವೆಯನ್ನು ಯಾವುದೇ ಕಾರಣಕ್ಕೆ ಮುರಿಯಲು ಬರುವಂತಿಲ್ಲ. ಒಂದು ವೇಳೆ ಹಾಗೇನಾದರೂ ಮುರಿದಿದ್ದೇ ಆದರೆ, ನಿಶ್ಚಿತಾರ್ಥದಲ್ಲಿದ್ದ ಎಲ್ಲ ಹಿರಿಯರನ್ನು ಸೇರಿಸಿ, ವಿಚಾರಣೆ ಮಾಡುವರು. ಯಾರ ಕಡೆಯಿಂದ ಮದುವೆ ಮುರಿಯುವ ಪ್ರಸ್ತಾಪ ಬಂದಿರುತ್ತದೆಯೋ ಅವರಿಂದ ಸ್ಪಷ್ಟ ವಿವರಣೆನ್ನು ದೈವದವರು ಕೇಳಿ ಪಡೆದುಕೊಳ್ಳುತ್ತಾರೆ. ಅವರುಗಳು ನೀಡುವ ವಿವರಣೆ ಸಮಾಧಾನಕರವಾಗಿಲ್ಲದಿದ್ದರೆ, ಮುರಿದವರು ದಂಡವನ್ನು ತೆತ್ತಬೇಕು ಮತ್ತು ದೈವಕ್ಕೆ ಅವತ್ತು ಅವರೇ ಸಾರಾಯಿ, ಮಾಂಸದೂಟವನ್ನು ಸರಬರಾಜು ಮಾಡಬೇಕಾಗುತ್ತದೆ.

ಕನ್ಯೆ ನಿಶ್ಚಯವಾದ ನಂತರ ಶುಭ ಮುಹೂರ್ತವನ್ನು ನಿರ್ಧರಿಸಿಕೊಂಡು ಮದುವೆಯನ್ನು ಇಟ್ಟುಕೊಳ್ಳುವರು. ಇವರಲ್ಲಿ ಹೆಚ್ಚಾಗಿ ಹೆಣ್ಣಿನ ಕಡೆಯವರೇ ಮದುವೆ ಮಾಡಿಕೊಡುವ ಪದ್ಧತಿಯಿದೆ. ಸಫಾಯಿ ಕರ್ಮಚಾರಿ ಸಮುದಾಯದವರಲ್ಲಿ ಎರಡು ಹಂತದ ಮದುವೆ ಕಾರ್ಯಗಳು ನಡೆಯುವವು. ಅವುಗಳೆಂದರೆ 1) ಮದುವೆ ಪೂರ್ವದ ಕಾರ್ಯಗಳು 2) ಮದುವೆ ಕಾರ್ಯಗಳು ಅಥವಾ ಮದುವೆ ನಂತರದ ಕಾರ್ಯಗಳಾಗಿವೆ.

1. ಮದುವೆ ಪೂರ್ವದಲ್ಲಿ ಮಾಡುವ ಕಾರ್ಯಗಳನ್ನು ಹೀಗೆ ವಿವರಿಸಬಹುದಾಗಿದೆ.

2) ಹಿರಿಯರಿಗೆ ಮಾಡುವುದು

ಮದುವೆ ಇನ್ನೂ ಎರಡು ವಾರ ಇರುವಾಗಲೇ ಮನೆಮಾರು ಸಾರಿಸಿ ಸುಣ್ಣ ಬಣ್ಣ ಬಳೆಯುವುದು, ಬಟ್ಟೆ ಬರೆ ಖರೀದಿಸುವುದು ನಡೆಯುತ್ತದೆ. ನಂತರ ಹಿರಿಯರ ಹೆಸರಿನಲ್ಲಿ ಸೀರೆ, ಧೋತ್ರ ಏರಿಸಿ ಸಿಹಿ ಅಡಿಗೆ ಮಾಡಿ ಮುತ್ತೈದೆಯರನ್ನು ಉಣ್ಣಿಸುವರು. ಕೇರಿಯ ಹಿರಿಯರ ಆದೇಶದಂತೆ ಮುಂದಿನ ಕಾರ್ಯಕ್ಕೆ ಅಣಿಯಾಗುವರು.

3) ಒಳಕಲ್ಲು ಪೂಜೆ

ಮದುವೆಗೆ ಐದು ದಿನ ಮುಂಚಿತವಾಗಿ ಒಳಕಲ್ಲು, ಬೀಸುವ ಕಲ್ಲು, ಒಣಿಕೆ, ಹಾರೆಗಳ ಪೂಜೆ ಮಾಡಿ ಐದು ಜನ ಮುತ್ತೈದೆಯರಿಗೆ ಊಟ ಮಾಡಿಸುತ್ತಾರೆ. ಅರಿಸಿಣದ ಬೊಟ್ಟನ್ನು ಹಳದಿ

ದಾರಕ್ಕೆ ಸುತ್ತಿ ಒಣಕಿ, ಬೀಸುವ ಕಲ್ಲು, ಕಲ್ಲಿನ ಗುಂಡುಗಳಿಗೆ ಕಂಕಣ ಕಟ್ಟುತ್ತಾರೆ. ಮದುವೆ ಮುಗಿಯುವವರೆಗೆ ಎಷ್ಟೆಷ್ಟು ಹಿಟ್ಟು, ಅಕ್ಕಿ, ಬೆಲ್ಲ ಬೇಕಾಗುತ್ತದೆ ಎಂಬುದನ್ನು ಹಿರಿಯರಿಂದ ವಿಚಾರಿಸಿಕೊಂಡು ಕೇರಿಯ ಪ್ರತಿಯೊಂದು ಮನೆಗೆ ರೊಟ್ಟಿ ಮಾಡಲು ಹಿಟ್ಟನ್ನು ಅಳೆದು ಕೊಡುತ್ತಾರೆ. ನಂತರ ವರನ ಮನೆಯವರು ವಧುವಿನ ಮನೆಗೆ ಅಕ್ಕಿ ಮತ್ತು ಹಿಟ್ಟಿನ ಗಂಟಿನೊಂದಿಗೆ ಎಣ್ಣಿ ಪತ್ತಲು (ಸೀರಿ) ಒಯ್ದು ಕೊಡುತ್ತಾರೆ."[8] ಎಣ್ಣಿ ಪತ್ತಲ ತಂದವರಿಗೆ ಹೆಣ್ಣಿನ ಕಡೆಯವರು ಮದುವೆ ದಿನ ಆಯೇರಿ ಮಾಡಬೇಕು.

ಇದೆಲ್ಲ ಆದನಂತರ ಅಕ್ಕಿಕಾಳು ಬೀಳುವುದಕ್ಕೆ ಮುಂಚೆ ಮನೆ ಎದುರಿನಲ್ಲಿ ಚಿಕ್ಕದಾದ ಹಂದರ ಹಾಕುವರು. ಆ ಎರಡು ದಿನಗಳ ಕಾಲ ರಾತ್ರಿ ಗೊಂದಲ ಹಾಕಿಸುತ್ತಾರೆ."[9] ಈ ಎರಡು ದಿನಗಳು ಕುಲದೇವತೆಯ ಹೆಸರಿನಲ್ಲಿ ಕುರಿ-ಕೋಣಗಳನ್ನು ಬಲಿ ಕೊಟ್ಟು ಕಾರ್ಯ ನೆರವೇರಿಸುತ್ತಾರೆ.

4) ಮದುವೆಯ ದಿನದ ಕಾರ್ಯಗಳು

ಮದುವೆ ದಿನದ ಕಾರ್ಯವು ಬೀಗರನ್ನು ಎದುರುಗೊಳ್ಳುವುದರ ಮೂಲಕ ಪ್ರಾರಂಭವಾಗುತ್ತದೆ. ಬೀಗರನ್ನು ಊರ ಹೊರಗಿನ ಹನುಮಂತ ದೇವರ ಗುಡಿಯಲ್ಲಿ ಇಳಿಸಿ, ಬ್ಯಾಂಡು, ಬಾಜಿಗಳೊಂದಿಗೆ ಮದುವೆ ಮನೆಗೆ ಕರೆತರುವರು. ಈಗೆಲ್ಲ ಊರ ಹೊರಗಿನ ಶಾಲೆ ಇಲ್ಲವೇ ಬಸ್ ನಿಲ್ದಾಣದಲ್ಲಿ ಬೀಗರನ್ನು ಇಳಿಸಿ ಎದುರುಗೊಂಡು ಕರೆತರಲಾಗುತ್ತದೆ. ಬೀಗರನ್ನು ಒಬ್ಬರಿಗೊಬ್ಬರು ತೆಕ್ಕೆಗೆ ಹಾಕಿಕೊಂಡು ಕುಶಲೋಪರಿ ಮಾಡಿ ಮದುವೆ ಮಂಟಪಕ್ಕೆ ಕರೆತಂದು ಮಣೆ ಮೇಲೆ ಎದುರು ಬದುರು ಕುಳ್ಳಿರಿಸಿ ಬಾಯಿಯಲ್ಲಿ ಸಕ್ಕರೆ ಹಾಕುವರು. ಗಂಡಸರ ಸರದಿಯಾದ ನಂತರ ಹೆಣ್ಣುಮಕ್ಕಳು ಗಂಡಿನ ಮತ್ತು ಹೆಣ್ಣಿನವರು ಪರಸ್ಪರ ಬಾಯಿಯಲ್ಲಿ ಸಕ್ಕರೆ ಹಾಕಿ ಬೀಗರನ್ನು ಎದುರುಗೊಳ್ಳುವ ಕಾರ್ಯ ನಡೆಸುವರು.

5) ಸುರಗಿ ಸುತ್ತುವುದು

ಅಕ್ಕಿಕಾಳು ಬೀಳುವ ದಿವಸ ಬೆಳಿಗ್ಗೆ ಬೀಗರು ಮತ್ತು ಕೇರಿಯ ಜನರನ್ನು ಕರೆದು ಚಹಾ, ಚುಡುವಾ ಹಾಕುತ್ತಾರೆ. ನಂತರ ಮದುಮಕ್ಕಳನ್ನು ಹಸೆಮಣೆ ಮೇಲೆ ಕುಳ್ಳಿರಿಸಿ ನಾಲ್ಕು ಕಡೆಗೆ ತಂಬಿಗೆ ಮತ್ತು ಮಧ್ಯದಲ್ಲಿ ಕಸವನ್ನು ಇಟ್ಟು ಹೊಸ ನೂಲಿನಿಂದ ಸುರಗಿ ಸುತ್ತುತ್ತಾರೆ. ಕಳಸ ಹಿಡಿದವಳಿಗೆ ಕಳಸಗಿತ್ತಿ ಎಂದು ಕರೆಯಲಾಗುತ್ತದೆ. ಸುರಗಿ ಸುತ್ತುವಾಗ ಹಾಡಿನ ಸುರಿಮಳೆಯೇ ಅಲ್ಲಿ ನಡೆಯುತ್ತದೆ. ಹೊರಗೆ ಸುರುಗಿ ಸುತ್ತುತ್ತಿದ್ದರೆ ಹಸೆಮಣೆ ಮೇಲೆ ಕುಳಿತಂಥ ವಧು-ವರರಿಗೆ ಎಣ್ಣೆ, ಹರಿಶಿಣ ಹಚ್ಚಿ, ಸುರಗಿ ನೀರನ್ನು ಮುತ್ತೈದೆಯರು ಎರೆಯುವರು.

ಅಕ್ಕಿಕಾಳಿನ ಸಮಯ ಹತ್ತಿರವಾದಾಗ ಹಂದರದಲ್ಲಿ ಎರಡು ಹಂತದ ಸುರಗಿ ಸುತ್ತುವರು. ಒಂದು ಹಂದರದ ಮಧ್ಯದಲ್ಲಿ ಸುತ್ತುವುದು ಹಂದರ ಸುರಗಿ. ಹಸೆಮಣೆಯ ಮೇಲೆ ಸುತ್ತುವುದು ಅಕ್ಕಿಕಾಳಿನ ಸುರಗಿ. ಇದೆಲ್ಲ ಆದನಂತರ ಮದುಮಕ್ಕಳಿಗೆ ನೀರು ಹಾಕಿ ಹೊಸ ಬಟ್ಟೆ ತೊಡಿಸುವರು. ಗಂಡಿಗೆ ಬಾಸಿಂಗ, ಕಂಕಣ ಕಟ್ಟಿದರೆ, ಹೆಣ್ಣಿಗೆ ಮುತ್ತಿನ ದಂಡಿ, ಕೈಗೆ ಕಂಕಣ ಕಟ್ಟುತ್ತಾರೆ. ಈ ಸಮಯದಲ್ಲಿ ಮದುವೆ ಹೆಣ್ಣು ಹಸಿರು ಪತ್ತಲ (ಸೀರೆ)ವನ್ನು ಉಡುವಳು. ವಧು-ವರರಿಗೆ ಆಭರಣಗಳನ್ನು ತೊಡಿಸಿ, ವಧುವಿನ ಪಕ್ಷದವರು ವರನನ್ನು, ವರನ ಪಕ್ಷದವರು ವಧುವನ್ನು ಹೊತ್ತುಕೊಂಡು ಒಳಗೆ ದೇವರ ಅಕ್ಕಿಕಾಳಿಗೆ ಹೊತ್ತೊಯ್ಯುವರು. ದೇವರ ಅಕ್ಕಿಕಾಳು ಮುಗಿಸಿಕೊಂಡು ಪುನಃ ಹೊರಗೆ ಸಿದ್ಧಪಡಿಸಿದ ಹಂದರದಲ್ಲಿ ಕುಳಿತುಕೊಂಡ ನಂತರವೇ ಉಳಿದವರೆಲ್ಲರೂ ವಧು-ವರರಿಗೆ ಅಕ್ಷತೆ ಹಾಕಿ ಆಶೀರ್ವದಿಸುತ್ತಾರೆ. ಅಕ್ಷತೆಯ ನಂತರ ಬಂಧು-ಬಳಗವು ತಮ್ಮ ಶಕ್ತ್ಯಾನುಸಾರ ಕಾಣಿಕೆ, ಬಟ್ಟೆ ಆಯೇರಿಗಳನ್ನು ಮಾಡುವರು. ಇದಾದ ನಂತರ ಎಲ್ಲರಿಗೂ ಊಟ ಬಡಿಸುವರು.

ಅಕ್ಷತೆಯ ನಂತರ ಮದುಮಕ್ಕಳಿಗೆ ಮೋಜಿನಾಟದಲ್ಲಿ ತೊಡಗಿಸಿ ಮನರಂಜನೆ ಪಡೆಯುವರು. ಮದುವೆಯಲ್ಲಿ ಸಾಮಾನ್ಯವಾಗಿ ಶಾಖಾಹಾರ ಮತ್ತು ಮಾಂಸಾಹಾರ ಎರಡೂ ತರಹದ ಅಡುಗೆಯನ್ನು ಮಾಡಿಸಿರುತ್ತಾರೆ. ಶಾಖಾಹಾರದಲ್ಲಿ ಚಪಾತಿ, ಮುದ್ದಿಪಲ್ಲೆ, ಬದನೆಕಾಯಿ, ಸಾರು, ಅನ್ನವಿದ್ದರೆ ಸಿಹಿಗಾಗಿ ಚಕ್ಕಿ (ಕವಾದಿಂದ ಮಾಡಿದ ಸಿಹಿ ಪದಾರ್ಥ) ಬೋಂದಿ ಇರುತ್ತದೆ. ಮಾಂಸಾಹಾರದಲ್ಲಿ ಕುರಿ ಅಥವಾ ದನದ ಮಾಂಸದಿಂದ ಅಡುಗೆ ಮಾಡಿರುತ್ತಾರೆ. ಬಿರಿಯಾನಿಯನ್ನು ಸಹ ಮಾಡಿರುತ್ತಾರೆ. ಊಟದ ನಂತರ ಕೊನೆಯಲ್ಲಿ ಹುಡುಗಿಯ

ಸೋದರಮಾವನು ಅಳಿಯನ ಕಾಲು ತೊಳೆದು ಕನ್ಯದಾನ ಮಾಡುವನು. ಇದಕ್ಕೆ ಧಾರೆಯೆರೆಯುವುದು ಎನ್ನುತ್ತಾರೆ.

ಸಫಾಯಿ ಕರ್ಮಚಾರಿ ಸಮುದಾಯದ ವಿವಾಹ ಕಾರ್ಯದಲ್ಲಿ ಪುರೋಹಿತನ ಪಾತ್ರವೂ ಇಲ್ಲದಿಲ್ಲ. ಹುಡುಗಿಯನ್ನು ನೋಡಿದ ಮೇಲೆ ಆಕೆಯ ಜನ್ಮ ಹೆಸರಿನಿಂದ ಪುರೋಹಿತನಲ್ಲಿ ಕೂಡಿಕೆ ಬಗ್ಗೆ ಕೇಳಿಸಿ ನೋಡುವರು. ಉಪಾದ್ಯೇನು (ಜ್ಯೋತಿಷಿ) ಪಂಚಾಂಗ ತೆಗೆದು ನಿಶ್ಚಯದ ಮುಹೂರ್ತ ಮತ್ತು ಅಕ್ಕಿಕಾಳು ಮುಹೂರ್ತವನ್ನು ತೆಗೆಸಿ ನಿರ್ಧರಿಸುತ್ತಾನೆ. ನಿಶ್ಚಿತಾರ್ಥದಿಂದ ಹಿಡಿದು ಬಾಸಿಂಗ ಕಟ್ಟಿ ಅಕ್ಕಿಕಾಳು ಹಾಕುವವರೆಗೂ ಇಲ್ಲಿ ಪುರೋಹಿತನ ಪಾತ್ರ ಇರುವುದು. ಈ ಸಮುದಾಯದವರು ಹೆಚ್ಚಾಗಿ ಮಂಗಳವಾರ ಅಥವಾ ಶನಿವಾರವನ್ನು ಶುಭ ಕಾರ್ಯಗಳಿಗೆ ಆರಿಸಿಕೊಳ್ಳುತ್ತಾರೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಈ ದಿನಗಳಿಗೆ ಏಕೆ ತುಂಬ ಪ್ರಾಶಸ್ತ್ಯ ಕೊಡುವಿರಿ ಎಂದು ಕೇಳಿದಕ್ಕೆ ಜಾತಿಯ ಮುಖಂಡರು "ಮಂಗಳವಾರ ದೇವಿ ವಾರ ನಾವು ಮಾತೃ ಕುಟುಂಬದವರು ಮಾತಂಗಿ, ಯಲ್ಲಮ್ಮ, ರೇಣುಕಾ, ಅಂಬಾಭವಾನಿಯನ್ನು ಪೂಜಿಸುವ ಪದ್ಧತಿ ಅನುವಂಶಿಕವಾಗಿ ಬಂದಿದೆ. ಇನ್ನು ಶನಿವಾರ ಹನುಮಂತನ ವಾರ, ಅದು ನಮಗೆ ಶುಭದಿನ. ಹಿರಿಯರು ಹಿಂದಿನಿಂದಲೂ ಇದನ್ನು ನಡೆಸಿಕೊಂಡು ಬಂದಿದ್ದಾರೆ. ನಾವು ಅವರ ನಂಬಿಕೆಯನ್ನು ಮುಂದುವರಿಸಿಕೊಂಡು ಹೋಗುತ್ತಿದ್ದೇವೆ"[20] ಎಂದು ನುಡಿಯುವರು.

ಇವರ ಎಲ್ಲ ಕಾರ್ಯಕ್ರಮವನ್ನು ಮುಂದೆ ನಿಂತು ನಡೆಸಿಕೊಡುವ ಪುರೋಹಿತನು ಕೆಲಸಕ್ಕೆ ಪ್ರತಿಯಾಗಿ ಎಲೆ, ಅಡಿಕೆ, ಟೆಂಗಿನಕಾಯಿ ಮತ್ತು ಹನ್ನೊಂದು (ಈಗ ಅದು ಹೆಚ್ಚಾಗಿದೆ) ರೂಪಾಯಿಯನ್ನು ದಕ್ಷಿಣೆಯಾಗಿ ಪಡೆದು ಹೋಗುತ್ತಾನೆ. ಮದುವೆ ಆದ ಮೇಲೆ ಐದು ದಿನ ನೆಂಟರು ವಧು-ವರರನ್ನು ಮನೆಗೆ ಆಹ್ವಾನಿಸಿ ಕೋಲೂಟ ಮಾಡಿಸುತ್ತಾರೆ. ಐದನೇ ದಿನ ಹೊಳೆಗೆ ಹೋಗಿ ಬಾಸಿಂಗ ಬಿಟ್ಟು ಬಂದರೆ ಇವರ ಮದುವೆ ಕಾರ್ಯ ಇಲ್ಲಿಗೆ ಸಂಪೂರ್ಣ ಮುಗಿದಂತೆಯೆಂದು ತಿಳಿಯಲಾಗುತ್ತದೆ. ಅಕ್ಕಿಕಾಳು ಬಿದ್ದ ಐದು ದಿನಗಳತನಕ ವರನು ಎಲ್ಲಿಯೂ ಹೊರಗೆ ತಿರುಗಾಡಲು ಹೋಗಬಾರದು. ಏಕೆಂದರೆ ಅರಿಸಿಣ ಮೈಯಿರುತ್ತದೆ. ಹಾಗೆ ಹೋದರೆ ದೆವ್ವ, ಪಿಶಾಚಿ, ಪೀಡೆಗೆ ಒಳಗಾಗುತ್ತಾರೆ ಎಂಬ ನಂಬಿಕೆ ಈ ಸಮುದಾಯದಲ್ಲಿ ಬಲವಾಗಿದೆ. ನವ ವಧುಗಳು ದೇವರಿಗೆ ಹೋಗಿ ಬಂದ ನಂತರ ಶೋಭನ ನಡೆಸುವರು.

6) ಹೆಣ್ಣು ಕರೆಕಳಿಸುವ ಶಾಸ್ತ್ರ

ಲಗ್ನದ ಕಾರ್ಯವೆಲ್ಲ ಮುಗಿದ ಮೇಲೆ ಮದುವೆ ಹೆಣ್ಣನ್ನು ತವರು ಮನೆಯವರು ಒಂದು ಒಳ್ಳೆಯ ದಿನವನ್ನು ನೋಡಿ ಕರೆದುಕೊಂಡು ಹೋಗಲು ಬರುತ್ತಾರೆ. ಹೆಣ್ಣು ಗಂಡಿನವರು ಈ ಸಮಯದಲ್ಲಿ ಉಭಯ ಕುಶಲೋಪರಿ ವಿಚಾರಿಸಿ ಅಂದು ಮಾಂಸದ ಅಡುಗೆ ಮಾಡಿ ಊಟ ಮಾಡುವರು. ಮರುದಿನ ಉಪಾಧ್ಯೇಯನಲ್ಲಿ ಹೋಗಿ ಪಂಚಾಂಗ ತೆಗೆಸಿ ಮುಹೂರ್ತದ ಪ್ರಕಾರ ತವರು ಮನೆಗೆ ಕಳುಹಿಸಿಕೊಡಲಾಗುತ್ತದೆ.

ತವರು ಮನೆಗೆ ಬಂದ ಮಗಳನ್ನು ತಾಯಿ ಇತರ ಮುತ್ತೈದೆಯರು ಆರತಿ ಮಾಡಿ ರೊಟ್ಟಿಗೆ ಎಣ್ಣೆ ಸವರಿ ಹುಡುಗಿ ಮೇಲಿಂದ ನಿವಾಳಿಸಿ ದೂರದಲ್ಲಿ ಒಯ್ದು ಒಗೆದು ಒಳಗೆ ಕರೆದುಕೊಂಡು ಹೋಗುವರು. ಮದುವೆಗೆ ಬರಲಾಗದವರು ಹುಡುಗಿಯನ್ನು ತಮ್ಮ ಮನೆಗಳಿಗೆ ಕರೆದೊಯ್ದು ಊಟ ಮಾಡಿಸಿ, ಶಕ್ತ್ಯಾನುಸಾರ ಬಟ್ಟೆ ಆಯೇರಿ ಮಾಡಿ, ಉಡಿ ತುಂಬುವ ಕಾರ್ಯ ಮಾಡುತ್ತಾರೆ. ಹೀಗೆ ಕೆಲವು ದಿನಗಳು ಕಳೆದ ನಂತರ ಗಂಡನ ಕಡೆಯವರು ಕರೆಯಲು ಬರುವರು. ಹೆಣ್ಣಿನ ಮನೆಯವರು ಬೀಗರನ್ನು ಬರಮಾಡಿಕೊಂಡು ಊಟೋಪಚಾರ ಮಾಡುವರು. ಪಂಚಾಂಗದ ಮುಹೂರ್ತದಂತೆ ಹುಡುಗಿಯನ್ನು ಗಂಡನ ಮನೆಗೆ ಕಳುಹಿಸುವರು ಮತ್ತು ಓಣಿಯ ಐದು ಮನೆಯಲ್ಲಿ ಹುಡುಗಿ ಉಡಿಯಕ್ಕಿ ಹಾಕಿಸಿಕೊಂಡು ಬರುವಳು. ಮೊದಲನೇ ಸಲ ತವರು ಮನೆಗೆ ಹೋಗಿ, ಗಂಡನ ಮನೆಗೆ ಬಂದ ಹೆಣ್ಣು ಮಗಳು ತನ್ನೊಡನೆ ಬುತ್ತಿ ರೊಟ್ಟಿ ತಂದಿರುತ್ತಾಳೆ. ಆಕೆ ತವರಿನಿಂದ ತಂದ ರೊಟ್ಟಿ, ಬಾನ, ಕರಚಿಕಾಯಿಗಳನ್ನು ಓಣಿಯಲ್ಲಿ ಬೀರುವರು. ಇಲ್ಲಿಂದ ನವ ವಧುಗಳು ತಮ್ಮ ದೈನಂದಿನ ಕೆಲಸಕಾರ್ಯಗಳಲ್ಲಿ ತೊಡಗಿಸಿಕೊಳ್ಳುವರು.

ಮದುವೆಯಾದ ವರ್ಷ ಎಳ್ಳ ಅಮವಾಸೆಯಲ್ಲಿ ಇಲ್ಲವೇ ಅಧಿಕ ಮಾಸದಲ್ಲಿ ಹೆಣ್ಣುಗಳು ಅತ್ತೆಯ ಮನೆಯಲ್ಲಿರಬಾರದು ಎಂಬ ನಂಬಿಕೆ ಇದೆ. ಆಗ ಗಂಡಿನ ಮನೆಯವರು ಒಂದು ತಿಂಗಳ ಕಾಲ ಅವಳನ್ನು ತವರಿಗೆ ಬಿಟ್ಟು ಬರುವರು.

ಉ) ಸೀಮಂತ

ಸಫಾಯಿ ಕರ್ಮಚಾರಿಗಳಲ್ಲಿ ಸೀಮಂತನ (ಕುಬಸ) ಮಾಡುವುದು ಕಡ್ಡಾಯವೇನಿಲ್ಲ. ಅವರವರ ಆರ್ಥಿಕ ಸ್ಥಿತಿ–ಗತಿಗಳಿಗೆ ತಕ್ಕಂತೆ ಕೆಲವರು ವೈಭವದಿಂದಲೋ, ಸರಳವಾಗಿಯೋ ಚೊಚ್ಚಲ ಗರ್ಭವತಿಯಾದ ಹೆಣ್ಣುಮಗಳಿಗೆ ಇದನ್ನು ಆದರಿಸುವುದನ್ನು ಕಾಣುತ್ತೇವೆ.

ಸೊಸೆಗೆ ಐದು ತಿಂಗಳು ತುಂಬಿದಾಗ ಆಕೆಯ ತವರು ಮನೆಗೆ ಮಗಳು ಗರ್ಭವತಿಯಾಗಿರುವ ಸುದ್ದಿಯನ್ನು ಬೀರುವರು. ಸುದ್ದಿ ಕೇಳಿದ ತವರು ಮನೆಯವರು ಹಸಿರು ಕುಪ್ಪಸ, ಹಸಿರು ಬಳೆ, ಮಾದಲಿ"[31] ತಿಂಡಿ, ಹಣ್ಣು ತಂದು ಉಡಿ ತುಂಬಿ, ಬಳೆ ಇಡಿಸುವರು. ಇದನ್ನು ಸ್ಥಳೀಯವಾಗಿ ಕಳ್ಳಕುಬುಸ ಅಥವಾ ಸಣ್ಣ ಕುಬುಸ ಎಂದು ಕರೆಯುವ ವಾಡಿಕೆಯಿದೆ. ಇಲ್ಲಿ ಒಂದು ನಿಯಮವಿದೆ. ಅದೇನೆಂದರೆ ಕಳ್ಳ ಕುಬಸ ಮಾಡಿದವರು ದೊಡ್ಡ ಕುಬುಸ ಮಾಡುವಂತಿಲ್ಲ. ಅದಕ್ಕಾಗಿ ತವರು ಮನೆಯವರು ಕಳ್ಳ ಕುಬುಸವನ್ನು ತಮ್ಮ ಹತ್ತಿರದ ಸಂಬಂಧಿಕರಲ್ಲಿ ಯಾರಾದರೂ ಒಬ್ಬರ ಕೈಲಿಂದ ಮಾಡಿಸುವರು. ಈ ಸಂದರ್ಭದಲ್ಲಿ ಸಂಬಂಧಿಕರನ್ನು ಹೆಚ್ಚಿನ ಸಂಖ್ಯೆಯಲ್ಲಿ ಕರೆಸುವುದಿಲ್ಲ. ಅತ್ಯಂತ ಕಡಿಮೆ ಸಂಖ್ಯೆಯಲ್ಲಿ ಕೇವಲ ಕುಟುಂಬಸ್ಥರು ಮಾಡುವ ಈ ಸಣ್ಣ ಸೀಮಂತನಕ್ಕೆ ಅದಕ್ಕೆಂದೇ ಕಳ್ಳ ಕುಬುಸ ಮಡುವುದು ಎಂದು ಕರೆದಿರಬೇಕು.

ದೊಡ್ಡ ಕುಬುಸ ವಿಜೃಂಭಣೆಯಿಂದ ನಡೆಸುತ್ತಾರೆ. ತಮ್ಮ ಆರ್ಥಿಕ ಶಕ್ತ್ಯಾನುಸಾರ ತವರು ಮನೆಯವರು ಊಟದ ಅನಾಜು ನೀಡಿ ಗಂಡಿಸಿನ ಮನೆಯಲ್ಲಿ ಕುಬುಸ ಮಾಡುವರು. ಸೀರೆ, ಕುಬುಸ, ಬಳೆ, ಹೂವು ದಂಡೆಗಳಿಂದ ಅಲಂಕಾರ ಮಾಡಿ, ಅಳಿಯನಿಗೆ ಬಟ್ಟೆ, ಅನುಕೂಲವಿದ್ದವರು ಬಂಗಾರ ಹಾಕಿ ಮಾನ ಮರ್ಯಾದೆ ಮಾಡುತ್ತಾರೆ. ನೆಂಟರಿಗೆ, ಓಣಿಯವರಿಗೆ ಊಟ ಹಾಕಿಸುವರು. ಗರ್ಭವತಿ ಹಾಗೂ ಆಕೆಯ ಗಂಡನನ್ನು ಬಾಜಿ ಬಜಂತ್ರಿ ಜೊತೆ ಮೆರವಣಿಗೆಯನ್ನು ಅಂಬಾಭವಾನಿ ಮಂದಿರಕ್ಕೆ ಹೋಗಿ ನಮಸ್ಕರಿಸಿ ಕರೆತರುವರು. ದೊಡ್ಡ ಕುಬುಸದ ನಂತರ ತವರಿಗೆ ಹೆರಿಗೆಗೆ ಕರೆದುಕೊಂಡು ಹೋಗುತ್ತಾರೆ.

5.2.9 ಮರಣ ಕಾರ್ಯಗಳು

ಈ ಹಿಂದೆ ಹೇಳಿದಂತೆ ಪ್ರತಿಯೊಂದು ಜೀವಿಗಳ ಜೀವನವು ಎರಡು ಕ್ಷಿತಿಜಗಳಿಂದ ಒಳಗೊಂಡಿದೆ. ಅವೆಂದರೆ, ಒಂದು, ಜನನ ಮತ್ತೊಂದು ಮರಣ. "ಪ್ರತಿಯೊಂದು ಜೀವಾತ್ಮಕ್ಕೂ ಹುಟ್ಟಿನ ನೆರಳಾಗಿ ಸಾವು ಇರುತ್ತದೆ. ಭೂಮಂಡಲದ ಮೇಲಿನ ಜೀವರಾಶಿಗಳಲ್ಲಿ ಹುಟ್ಟು ಸಾವುಗಳು ಚಕ್ರಾಕಾರವಾಗಿ ತಿರುಗುತ್ತಲೇ ಇರುತ್ತವೆ. ಹುಟ್ಟಿದ ಜೀವಿ ಎಂದಾದರೊಂದು ದಿನ ಸಾಯಲೇಬೇಕೆಂಬುದು ಯಾರಿಂದಲೂ ಬದಲಿಸಲಾಗದ ಸೃಷ್ಟಿಯ ನಿಯಮ. ಈ ಜಗತ್ತಿನಲ್ಲಿ ಪಶು ಪಕ್ಷಿ, ಮನುಷ್ಯ ಎಲ್ಲವೂ ಅಶಾಶ್ವತ. ಹೀಗಾಗಿ ಪ್ರತಿಯೊಂದು ಸಮಾಜದಲ್ಲೂ ಹುಟ್ಟಿದ ವ್ಯಕ್ತಿಗೆ ಮಾಡುವ ಕೆಲವು ಆಚರಣೆಗಳು ವಿಧಿವಿಧಾನಗಳನ್ನು ಸತ್ತ ಮೇಲೂ ತಪ್ಪದೆ ಆಚರಿಸುತ್ತಾರೆ. ಮನುಷ್ಯ ಸತ್ತ ಮೇಲೆ ಶವವನ್ನು ಸುಡುವ ಅಥವಾ ಹೂಳುವ, ಹಾಲು ತುಪ್ಪ, ತಿಥಿ ಇತ್ಯಾದಿಗಳನ್ನು ಮಾಡುವ ಸಂಪ್ರದಾಯಗಳನ್ನು ಪ್ರತಿಯೊಂದು ಜಾತಿ, ಪಂಗಡಗಳಲ್ಲಿಯೂ ಕಾಣುತ್ತೇವೆ."[32]

ಇದೇ ರೀತಿ ಫಾಯಿಕರ್ಮಚಾರಿಗಳಲ್ಲೂ ಕೂಡ ಕಾಣುತ್ತೇವೆ.

ಮರದ ಮ್ಯಾಲನ ಹಕ್ಕಿ ಬರ್‍ರಂತ ಹಾರಿದ್ರ
ಸ್ಥಿರವಲ್ಲ ಜೀವ ಅನಕೊಂಡಿ। ಈ ಮಾತ
ನನ್ನೊಳಗ ನಾನು ತಿಳಕೊಂಡೆ"[23]

ಈ ಅನುಭಾವ ನುಡಿ ಕೇಳಿದರೆ ಜನರು ಜೀವನ ಶಾಶ್ವತವಲ್ಲ, ಅದು ನೀರ ಮೇಲಿನ ಗುಳ್ಳೆಯಂತೆ ಒಂದು ಘಳಿಗೆಯಲ್ಲಿ ಪಟ್ಟಂತ ಒಡೆದು ಹೋಗುವುದು. ಮರದ ಮೇಲಿನ ಹಕ್ಕಿಯಂತೆ ಹಾರಿ ಹೋಗುವುದು ಎಂದು ನಂಬಿದ್ದರು ಎನ್ನಬೇಕು. ಮೂಳೆ ಮಾಂಸಾದಿಗಳಿಂದ ಕೂಡಿದ ಈ ದೇಹ ಸ್ಥಿರವಲ್ಲ. ಆದರೆ ಬದುಕಿದ್ದಾಗ ಇದ್ದಂತ ಸಂಸ್ಕಾರಗಳು ಮನುಷ್ಯ ಸತ್ತ ಮೇಲೆಯೂ ವಿವಿಧ ಬುಡಕಟ್ಟು ಜಾತಿ ಸಮುದಾಯಗಳು ಚಾಚೂ ತಪ್ಪದೆ ನಡೆಸಿಕೊಂಡು ಬಂದಿರುವವು. ಸತ್ತ ಮೇಲೆ ಆತ್ಮಕ್ಕೆ ಸದ್ಗತಿ ದೊರೆಯಬೇಕಾದರೆ ದೇಹಕ್ಕೆ ಸಂಸ್ಕಾರ ಮಾಡಲೇಬೇಕೆಂಬುದು ಅವರ ತಿಳುವಳಿಕೆ.

ಅ) ಸತ್ತ ಸುದ್ದಿ ಮುಟ್ಟಿಸುವುದು

ಸಮುದಾಯದವರು ಯಾರಾದರೂ ಸತ್ತರೆ, ಓಣಿಯ ಹಿರಿಯರು ಅವರ ಮನೆಗೆ ಧಾವಿಸಿ, ಮೊದಲು ಸತ್ತವರ ಹತ್ತಿರ ಬಂಧುಗಳಿಗೆ ಸುದ್ದಿ ಮುಟ್ಟಿಸುವ ಕಾರ್ಯ ಮಾಡುತ್ತಾರೆ. ಈಗಿನಂತೆ ಹಿಂದಕ್ಕೆ ಹೆಚ್ಚಿನ ಸಾರಿಗೆ ಸೌಲಭ್ಯಗಳಿಲ್ಲದ ಕಾಲದಲ್ಲಿ ಸತ್ತ ಸುದ್ದಿಯನ್ನು ಆಳಿನ ಮೂಲಕ ಕಳುಹಿಸಲಾಗುತ್ತಿತ್ತು. ಈ ಕೆಲಸಕ್ಕೆ ನೇಮಿಸಲ್ಪಟ್ಟ ಆಳಿಗೆ ಕುಳವಾಡಿ ಎಂದೂ ಕರೆಯುತ್ತಿದ್ದರು. ಬರುಬರುತ್ತ ತಾರ್ (ಟೆಲಿಗ್ರಾಂ) ಮೂಲಕ, ಈಗ ಫೋನ್ ಹಾಗೂ ಮೊಬೈಲ್ ಮೂಲಕ ಸುದ್ದಿ ಕಳುಹಿಸುವರು.

ತಮ್ಮ ನೆಂಟರು, ಹತ್ತಿರದ ಸಂಬಂಧಿಕರಲ್ಲಿ ಯಾರಾದರೂ ತೀರಿಕೊಂಡ ಸುದ್ದಿ ಕೇಳಿದರೆ, ಆ ಮನೆಯವರು ಶವಸಂಸ್ಕಾರ ಆಗುವವರೆಗೆ ಊಟ ಮಾಡುವುದಿಲ್ಲ. ಇದನ್ನು ಕಟ್ಟುನಿಟ್ಟಾಗಿ ಪಾಲಿಸುವರು. ಸಫಾಯಿ ಕರ್ಮಚಾರಿಗಳು ದೂರದ ಮುಂಬೈ, ಪೂನಾ, ಹೈದರಾಬಾದ ಹಾಗೂ ಮತ್ತಿತರೆಡೆಗಳಲ್ಲಿ ಉದ್ಯೋಗವನ್ನು ಅರಿಸಿ ಹೋಗಿದ್ದರೆ, ಅಂಥವರಿಗೆ ಪತ್ರದ ಮೂಲಕ ಸುದ್ದಿ ಮುಟ್ಟಿಸುವರು. ಸತ್ತ ಸುದ್ದಿ ಪತ್ರವು ಮಾಮೂಲು ಪತ್ರದಂತೆ ಇರದೆ, ಅದು ಅರ್ಧ ಬರಹವನ್ನು ಹೊಂದಿರುತ್ತದೆ. ಮತ್ತು ಸತ್ತ ಸುದ್ದಿ ಇರುವ ಪತ್ರಕ್ಕೆ ಕಪ್ಪು ಮಸಿ ಹಚ್ಚಿರುತ್ತಾರೆ. ಅಷ್ಟರ ಮೇಲಿಂದಲೇ ಇದು ಸಾವಿನ ಸುದ್ದಿ ಪತ್ರವೆಂದು ತಿಳಿದುಕೊಳ್ಳುವರು.

ಆ) ಹೆಣದ ವ್ಯವಸ್ಥೆ

ಒಂದೆಡೆ ಸತ್ತ ಸುದ್ದಿಯನ್ನು ತಲುಪಿಸುವ ವ್ಯವಸ್ಥೆ ಮಾಡುತ್ತಿದ್ದರೆ, ಇತ್ತ ಸಮಾಜದ ಮುಖಂಡರು ಹೆಣದ ವ್ಯವಸ್ಥೆ ಮಾಡಲು ಸಿದ್ಧತೆ ನಡೆಸುವರು. ವ್ಯಕ್ತಿಯನ್ನು ಜೀವ ಬಿಟ್ಟ ಸ್ಥಳದಿಂದ ಮತ್ತೊಂದು ಜಾಗಕ್ಕೆ ಸ್ಥಳಾಂತರಿಸುತ್ತಾರೆ. ಮನೆಯ ಪಕ್ಕದಲ್ಲಿ, ಚಪ್ಪರದಲ್ಲಿ ಹೆಣವನ್ನು ತಂದು ಮೈತೊಳೆಯುವರು. ಹೊಸ ಬಟ್ಟೆಯನ್ನು ಉಡಿಸಿ ಪುನಃ ನಡುಮನೆಯಲ್ಲಿ ಅಥವಾ ಮನೆಯ ಅಂಗಳದಲ್ಲಿ ಜೋಳದ ಕಣಿಕೆ (ದಂಟು) ಹಾಕಿ ಅದರ ಮೇಲೆ ಅರಿವೆ ಹಾಸಿ ಮಲಗಿಸುತ್ತಾರೆ. ಮುಖಕ್ಕೆ ಅರಿಸಿಣ, ಕುಂಕುಮ ಹಚ್ಚಿ ಎಳ್ಳು ಅಂಟಿಸುತ್ತಾರೆ. ಹೆಚ್ಚಾಗಿ ಕರಿ ಎಳ್ಳು ಲೇಪಿಸುವುದನ್ನು ಕಾಣುತ್ತೇವೆ.

ಹೆಣವನ್ನು ಸಿಂಗರಿಸಿ ವ್ಯಕ್ತಿಯ ಗುಣಗಾನ ಮಾಡಿ ಹಾಡಿ ಅಳುವರು. ಬಂದವರೆಲ್ಲ ಹೆಣದ ದರ್ಶನ ಮಾಡಿ, ಅಲ್ಲಲ್ಲಿ ಸ್ಥಳವಿದ್ದಲ್ಲೆಲ್ಲ ಕುಳಿತುಕೊಳ್ಳುತ್ತಾರೆ. ಸತ್ತದ್ದು ಹೆಣ್ಣು ಮಗಳಾಗಲಿ ಇಲ್ಲವೇ ಗಂಡಸಾಗಲಿ ಶವ ನಾರ(ವಾಸನೆ)ಬಾರದೆಂದು ಸುಗಂಧ ದ್ರವ್ಯವನ್ನು ಸಿಂಪಡಿಸಿ ಮೂಗಿನಿಂದ ರಕ್ತ ಸೋರದಂತೆ ಅಳ್ಳಿ(ಹತ್ತಿ)ಯನ್ನಿಟ್ಟು ಹೆಣವನ್ನು ಮಲಗಿಸುತ್ತಾರೆ.

ಶವ ಸಂಸ್ಕಾರ ತಡವಾದರೆ ನೆರೆದವರಿಗೆ ಓಣಿಯ ದೈವದವರೆಲ್ಲೂ ಸೇರಿ ಅಲ್ಲಿದ್ದವರಿಗೆ ಚಹಾ ಚೂಡಾ ವ್ಯವಸ್ಥೆ ಮಾಡುವರು. ಓಣಿಯಲ್ಲಿ ಸರಿಸುಮಾರಾಗಿ ಅಂದು ಯಾರೂ ಒಲೆ ಹೊತ್ತಿಸುವುದಿಲ್ಲ ಮತ್ತು ಕೆಲಸಕ್ಕೂ ಹೋಗುವುದಿಲ್ಲ. ಅಲ್ಲಿನವರಿಗೆ ಮತ್ತು ಪರ ಊರನಿಂದ ಬಂದವರಿಗೆ ಈ ವ್ಯವಸ್ಥೆ ಇರುತ್ತದೆ. ಇನ್ನು ಓಡಾಡುವರಿಗಾಗಿ ಸಾರಾಯಿ ವ್ಯವಸ್ಥೆಯನ್ನು ಮಾಡಿರುತ್ತಾರೆ.

ಶವ ಸಂಸ್ಕಾರಕ್ಕೆ ಬರುವವರು ಹೂವಿನ ಹಾರ, ಊದಿನಕಡ್ಡಿಯನ್ನು ಜೊತೆಯಲ್ಲಿ ತರುವರು. ಶವಕ್ಕೆ ಹಾರವನ್ನು ಹಾಕಿ ಊದಿನ ಬತ್ತಿ ಹಚ್ಚಿ ಕೈಮುಗಿಯುತ್ತಾರೆ. ತೀರ ಹತ್ತಿರದ ಸಂಬಂಧಿಕರು ಬಂದಾಗ ಸತ್ತವರ ಸಂಬಂಧಿಕರು ಜೋರಾಗಿ ಅಳುವುದು. ತೆಕ್ಕೆಗೆ ಹಾಕಿಕೊಂಡು ಬೋರಾಡುವ ದೃಶ್ಯವನ್ನು ಕಾಣುತ್ತೇವೆ. ಇಷ್ಟೆಲ್ಲ ಆಗುವ ವೇಳೆಗೆ ವ್ಯವಸ್ಥಾಪಕರು ಚಹಾ ಚೂಡಾಕ್ಕೆ ಕರೆಯುತ್ತಾರೆ. ಕೆಲವರು ಒಬ್ಬಬ್ಬರಾಗಿ ಹೋಗಿ ತಿಂದು ಚಹಾ ಕುಡಿದು ಮತ್ತೊಬ್ಬರನ್ನು ಕಳುಹಿಸುವ ಏರ್ಪಾಡು ಅಲ್ಲಿ ನಿರಂತರವಾಗಿ ನಡೆಯುವುದು. ಶವ ಸಂಸ್ಕಾರಕ್ಕೆ ತಡವಾದರೆ ಅಲ್ಲಿದ್ದವರು ಹಸಿವಿನಿಂದ ಬಳಲಬಾರದು ಎಂಬುದಕ್ಕೆ ಈ ವ್ಯವಸ್ಥೆ ಮಾಡಲಾಗುತ್ತದೆ. ಕೆಲವರು ಅಂತ್ಯಸಂಸ್ಕಾರ ನಡೆಯುವವರೆಗೂ ಬಾಯಲ್ಲಿ ಒಂದು ಹನಿ ನೀರೂ ಸಹ ಹಾಕುವುದಿಲ್ಲ. ಶವ ಸಂಸ್ಕಾರವಾಗಿ ಸ್ನಾನ ಮಾಡಿದ ಮೇಲೆಯೇ ಬಾಯಲ್ಲಿ ನೀರು ಹಾಕಿಲೊಳ್ಳುವರು. ಸತ್ತವರ ಪೈಕಿ ಆಪ್ತರು ಎಲ್ಲರು ಬಂದ ತಕ್ಷಣ ಸಂಸ್ಕಾರ ಕಾರ್ಯದ ಸಿದ್ಧತೆ ನಡೆಸುವರು. ಈ ಮೊದಲೇ ಸ್ಮಶಾನಕ್ಕೆ ಕುಣಿ (ಸಮಾಧಿ) ತೋಡುವುದಕ್ಕೆ ಜನರನ್ನು ಕಳುಹಿಸುತ್ತಾರೆ. ಸಮಾಧಿ ಸಿದ್ಧವಾದ ತಕ್ಷಣ ಹೆಣ ಒಯ್ಯಲು ಮುಂದಾಗುವರು.

ಅತ್ತ ಶವ ಸಂಸ್ಕಾರದ ಸಿದ್ಧತೆಗಳು ನಡೆಯುತ್ತಿದ್ದರೆ, ಮನೆಯ ಮುಂದೆ ಅಂಗಳದಲ್ಲಿ ಹಲಗೆ, ವಾದನ, ಪ್ರದರ್ಶನ ನಡೆಯುತ್ತಿರುತ್ತದೆ. ಹಲಿಗೆ ಪ್ರದರ್ಶನವು ಕೆಲವು ಮನರಂಜನೆ ಆಟಗಳಾಗಿ ಪರಿವರ್ತನೆಯಾಗುವುದು. ಅವುಗಳಲ್ಲಿ ಕಣ್ಣು ಕಟ್ಟಾಟ, ಹಣೆಯಿಂದ ದುಡ್ಡು ತೆಗೆದುಕೊಳ್ಳುವುದು,

ಕಾಣದಂತೆ ದುಡ್ಡು ಮುಚ್ಚಿಟ್ಟು ಅದನ್ನು ಒಬ್ಬನು ಹುಡುಕಬೇಕು. ಆತನು ಹಲಗೆ ತಾಳದಂತೆ ಹೆಜ್ಜೆ ಹಾಕುತ್ತ ಬಚ್ಚಿಟ್ಟ ಹಣವನ್ನು ಹುಡುಕುವನು. ಇದರ ಜೊತೆಗೆ ಹಿಂದಕ್ಕೆ ಬಾಗಿ ಬಾಯಿಂದ ಹಣ ತೆಗೆದುಕೊಳ್ಳುವುದು, ನೆಲದಿಂದ ಸೂಜಿ ತೆಗೆಯುವುದು, ಹಲಗೆಯಲ್ಲಿ ನಾನಾ ಗತ್ತುಗಳನ್ನು ಬಾರಿಸುವ ಆಟಗಳು ಅಲ್ಲಿ ನಡೆಯುತ್ತವೆ.

ಇ) ಗೋರಿ ತೋಡುವುದು : ಶವ ಸಂಸ್ಕಾರ ಕ್ರಮ

ಇಷ್ಟೆಲ್ಲ ಮೇಲಿನಂತೆ ನಡೆಯುತ್ತಿದ್ದಂತೆ ಅತ್ತ ಸ್ಮಶಾನದಲ್ಲಿ ಗೋರಿ ತೋಡಿ ಸಿದ್ಧಪಡಿಸಲಾಗುತ್ತದೆ. ಸಫಾಯಿ ಕರ್ಮಚಾರಿಗಳಲ್ಲಿ ಹೆಣವನ್ನು ಮಲಗಿಸುವ ಪದ್ಧತಿಯಿದೆ. ಹೀಗಾಗಿ ಹೆಣದ ಉದ್ದಗಲ ಅಳತೆಗೆ ತಕ್ಕಂತೆ ಗೋರಿ ತೋಡುವರು. ಶವವನ್ನು ಚಟ್ಟ ತಯಾರಿಸಿ ಅದರ ಮೇಲೆ ಉದ್ದಕ್ಕೆ ಮಲಗಿಸಿ ಮೈಮೇಲೆ ಹೂವಿನ ಹಾರವನ್ನು ಹಾಕಿ ಶೃಂಗರಿಸುತ್ತಾರೆ. ಚಟ್ಟವನ್ನು ಹೊಸ ಬಿದಿರಿನ ಗಳಗಳಿಂದ ಸ್ಥಳದಲ್ಲಿಯೇ ತಯಾರಿಸುವರು. ಅದರ ಮೇಲೆ ಜೋಳದ ದಂಡನ್ನು ಹರಡಿ ಸಣಬಿನಿಂದ ಬಿಗಿಯವರು. ಇವರಲ್ಲಿ ಹೆಣ್ಣಾಗಲಿ, ಗಂಡಾಗಲಿ ಎಲ್ಲರಿಗೂ ಚಟ್ಟದ ಮೇಲೆಯೇ ಶವವನ್ನು ಹೊತ್ತೊಯ್ಯುತ್ತಾರೆ. ಮದುವೆಯಾಗದೆ ಸತ್ತರೆ ಎಕ್ಕೆ ಗಿಡಕ್ಕೆ ಮದುವೆ ಶಾಸ್ತ್ರ ಮುಗಿಸಿ ಸಂಸ್ಕಾರ ಮಾಡುತ್ತಾರೆ.

ಎಲ್ಲ ಶಾಸ್ತ್ರಗಳು ಮುಗಿದ ಮೇಲೆ ಹೆಣವನ್ನು ಎತ್ತುವರು. ಅಲಂಕೃತವಾದ ಚಟ್ಟದಲ್ಲಿ ಹೆಣವನ್ನು ಮಲಗಿಸಿ ನಾಲ್ಕು ಜನ ಹೆಗಲು ಕೊಟ್ಟು ಹೊತ್ತು ನಡೆಯುತ್ತಾರೆ. ಹೆಣದ ಮುಂದೆ ಗಂಡಸರು ಇದ್ದರೆ ಹಿಂದೆ ಹೆಂಗಸರು ನಡೆಯುವ ರೂಢಿಯಿದೆ. ಎಲಕ್ಕೂ ಮುಂದೆ ಸಿಡಿ ಮದ್ದು ಹಾರಿಸುವರು. ಸಿಡಿಮದ್ದು ಹಾರಿಸಿದರೆ ಶವ ಯಾತ್ರೆ ಪ್ರಾರಂಭವಾಯಿತು ಎಂದು ಎಲ್ಲರಿಗೂ ತಿಳಿಯುತ್ತದೆ. ಅಲ್ಲಲ್ಲಿ ಇದ್ದವರು ಬಂದು ಶವ ಯಾತ್ರೆಯಲ್ಲಿ ಪಾಲ್ಗೊಳ್ಳುವರು. ಸಫಾಯಿಗಳ ಶವ ಊರ ಅಗಸಿಯ ಒಳಗಿನಿಂದ ಒಯ್ಯುವಂತಿಲ್ಲ. ಅದು ಊರ ಹೊರವಲಯದಲ್ಲಿ ಸಾಗಬೇಕು. ಶವದ ಮನೆಯಿಂದ ಸ್ಮಶಾನದವರೆಗೆ ಶವ ಯಾತ್ರೆ ನಡೆಯುವಾಗ ಒಬ್ಬರು ಉಡಿಯಲ್ಲಿ ನವಣೆ ಕಟ್ಟಿಕೊಂಡು ಸಣ್ಣಗೆ ದಾರಿಯುದ್ದಕ್ಕೂ ಚಲ್ಲುತ್ತಾರೆ. ಅಂದರೆ "ಸತ್ತವರು ಪಿಶಾಚಿಯಾಗಿ (ಪ್ರೇತವಾಗಿ) ಹಿಂದಕ್ಕೆ ಬರಬಾರದು ಎಂಬುದು ಇದರ ಹಿಂದಿನ ನಂಬಿಕೆಯಾಗಿದೆ"[24] ಸಫಾಯಿ ಕರ್ಮಚಾರಿಗಳಲ್ಲಿ ಶವ ಸಂಸ್ಕಾರವು ಸಾಂಪ್ರದಾಯಿಕವಾಗಿ ಎರಡು ಪ್ರಕಾರಗಳಲ್ಲಿ ನಡೆಯುತ್ತದೆ.

ಅವುಗಳಲ್ಲಿ ಒಂದು ಹೂಳುವುದು, ಇನ್ನೊಂದು ಸುಡುವುದು. ಸಾಮಾನ್ಯವಾಗಿ ಅವರಲ್ಲಿ ಹೂಳುವ ಪದ್ಧತಿಯಿದೆ. ಆದರೆ ರೋಗಿಗಳು, ಬಾಣಂತಿಯರನ್ನು ಅಥವಾ ದುರ್ಮರಣಕ್ಕೊಳಗಾದವರನ್ನು ಮಾತ್ರ ಸುಡುವ ಪದ್ಧತಿಯಿರುವುದು. ಮದುವೆಯಾಗದವರನ್ನು ಅಡ್ಡವಾಗಿ, ಮದುವೆಯಾದವರನ್ನು ಉದ್ದವಾಗಿ ಹೂಳುವರು.

ಮದುವೆಯಾಗದವರನ್ನು ಹೂಳುವಾಗ ಗೋರಿಯಲ್ಲಿ ಹಿಟ್ಟಿನ ಗೊಂಬೆ ಇಡಲಾಗುತ್ತದೆ. ಅದಕ್ಕೆ ಪೂಜೆ ಸಲ್ಲಿಸಿ ಟೆಂಗಿನಕಾಯಿ ಒಡೆದು ಬಾಯಲ್ಲಿ ನಾಣ್ಯ ಇಟ್ಟು, ಮೇಲೆ ಅವರಿ, ಲಕ್ಕಿ ಮುಂತಾದ ತಪ್ಪಲನ್ನು ಹಾಕಿ ಸಂಬಂಧಿಕರಿಗೆ ಮತ್ತೊಮ್ಮೆ ಮುಖ ತೋರಿಸಿ ಮಣ್ಣು ಹಾಕುವರು. ಬಂದವರೆಲ್ಲರೂ ಒಂದೊಂದು ಹಿಡಿ (ಬೊಗಸೆ) ಮಣ್ಣು ಹಾಕಿ ಹಿಂದಕ್ಕೆ ಬರುವರು. ಅನಂತರ ಸಲಿಕೆಯಿಂದ ಮಣ್ಣನ್ನು ಎಳೆದು ಏರಿಸಿ ಅದರ ಮೇಲೆ ಕಲ್ಲನ್ನು ಇಟ್ಟು ಅದಕ್ಕೆ ಪೂಜೆ ಸಲ್ಲಿಸಿದರೆ ಅಲ್ಲಿಗೆ ಶವ ಸಂಸ್ಕಾರ ಕ್ರಿಯೆ ಮುಗಿದಂತೆಯೇ ಎನ್ನಬೇಕು.

ಶವ ಸಂಸ್ಕಾರಕ್ಕೆ ಬಂದವರು ಬಂಧು, ಬಳಗ ಶವ ಸಂಸ್ಕಾರ ಮುಗಿದ ತಕ್ಷಣಕ್ಕೆ ತಮ್ಮ ತಮ್ಮ ಮನೆಗಳಿಗೆ ಊರುಗಳಿಗೆ ಹಿಂತಿರುಗಿ ಹೋಗುತ್ತಾರೆ. ಸತ್ತವರ ಊರಲ್ಲಿ ದೀಪ ಮುಡಿಯುವುದನ್ನು ನೋಡಬಾರದು. ಎಷ್ಟೊತ್ತಿದ್ದರೂ ತಮ್ಮ ಊರಲ್ಲಿಯೇ ದೀಪ ನೋಡಬೇಕೆಂಬ ನಂಬಿಕೆಯನ್ನು ಈ ಜನಾಂಗದಲ್ಲಿ ಕಾಣುತ್ತೇವೆ. ಇನ್ನು ಇತ್ತ ಸತ್ತವರ ಮನೆಯಲ್ಲಿ ಶವವನ್ನು ಸ್ಮಶಾಶನಕ್ಕೆ ಸಾಗಿಸಿದ ಮೇಲೆ ಯಾರಾದರೊಬ್ಬರು ಮನೆಯಲ್ಲಿ ಉಳಿದು ಮನೆಯನ್ನೆಲ್ಲ ಸಾರಿಸಿ ನೀರು ಹೊಡೆದು ಸ್ವಚ್ಛಗೊಳಿಸಿ ಒಂದು ಪಣತೆಯಲ್ಲಿ ದೀಪ ಬೆಳಗಿಸುತ್ತಾರೆ. ಆ ದಿನ ನೆರೆಹೊರೆಯವರು ಮನೆಯವರನ್ನು ತಮ್ಮ ಮನೆಗೆ ಕರೆದೊಯ್ದು ಸ್ನಾನ ಮಾಡಿಸಿ, ಚಹಾ ಕುಡಿಸುತ್ತಾರೆ. ಅಲ್ಲದೆ ತಮ್ಮ ಮನೆಯಿಂದಲೇ ಅಡುಗೆ ಮಾಡಿ ಕಳುಹಿಸುತ್ತಾರೆ ಎನ್ನಬೇಕು.

ಈ) ಶವ ಸಂಸ್ಕಾರೋತ್ತರ ಕ್ರಿಯೆಗಳು

ಇವರಲ್ಲಿ ಶವ ಸಂಸ್ಕಾರವಾದ ನಂತರವೂ ಕೆಲವು ಉತ್ತರ ಕ್ರಿಯೆಗಳು ನಡೆಯುವ ಸಂಪ್ರದಾಯವಿದೆ. ಅದರಲ್ಲಿ ಮುಖ್ಯವಾದವುಗಳೆಂದರೆ, ಹೆಣ ಹೊತ್ತವರ ಹೆಗಲ ಹೊರೆ ಇಳಿಸುವುದು, ಮೂರು ದಿನದ ಕಾರ್ಯ. ವರ್ಷದಲ್ಲಿ ಸತ್ತವರನ್ನು ಮತ್ತೆ ದೈವದಲ್ಲಿ ಹಾಕಿಕೊಳ್ಳುವುದು ಮೆರವಣಿಗೆ ಮಾಡುವುದು ಇತ್ಯಾದಿ ಕ್ರಿಯೆಗಳು ಸೇರಿವೆ.

ಶವ ಸಂಸ್ಕಾರೋತ್ತರವಾಗಿ ನಡೆಯುವ ಪ್ರಥಮ ಕಾರ್ಯವೆಂದರೆ, ಹೊತ್ತವರ ಹೆಗಲ ಭಾರ ಇಳಿಸುವುದು ಆಗಿದೆ. ಶವ ಸಂಸ್ಕಾರಕ್ಕೆ ಬಂದವರು ಮತ್ತು ಶವಕ್ಕೆ ಹೆಗಲು ಕೊಟ್ಟವರಿಗೆ ಮನೆಗೆ ಕರೆದು ಮೂರನೆಯ ದಿನ ಊಟ ಮಾಡಿಸುತ್ತಾರೆ. ಇದನ್ನು ಹಾಗೆ ಮಾಡದಿದ್ದರೆ ಸತ್ತವರು ಋಣದಲ್ಲಿ ಬೀಳುತ್ತಾರೆಂಬ ನಂಬಿಕೆಯಾಗಿದೆ. ಒಂದು ವೇಳೆ ಹೆಗಲು ಕೊಟ್ಟವರು ಅಂದು ಲಭ್ಯವಿಲ್ಲದಿದ್ದರೆ ಅವರ ಮನೆಯ ಸದಸ್ಯರನ್ನು ಕರೆಯುವರು. ಅಂದು ಮನೆಯವರು ಹಾಲು, ತುಪ್ಪ ಹಾಗೂ ಸತ್ತವರ ಪ್ರಿಯವಾದ ಆಹಾರವನ್ನು ತಯಾರಿಸಿ ಸ್ಮಶಾನಕ್ಕೆ ಹೋಗಿ ಅಲ್ಲಿ ಗೋರಿಗೆ ಹಾಲು ತುಪ್ಪ ಎರೆದು ತಂದ ಆಹಾರವನ್ನು ಗೋರಿಗೆ ಸಮರ್ಪಿಸಿ ಮುಂದೆ ಹಾಕುತ್ತಾರೆ. ಕೆಲವು ಹೊತ್ತಿನವರೆಗೆ ಅಲ್ಲಿಯೇ ಕಾಯ್ದು ತಂದ ಆಹಾರವನ್ನು ಕಾಗೆ ತಿಂದ ನಂತರವೇ ಹಿಂತಿರುಗಿ ಮನೆಗೆ ಹೋಗುವರು. ಅಂದರೆ ಇಲ್ಲಿಗೆ ಸತ್ತವರ ಋಣ ಹಾಗೂ ಹೆಣಕ್ಕೆ ಹೆಗಲು ಕೊಟ್ಟವರ ಋಣವು ತೀರಿದಂತೆ.

ಸಾಮಾನ್ಯವಾಗಿ ಈ ಕಾರ್ಯವನ್ನು ದಿನ ಮಾಡುವುದು ಎಂದರೆ ಕೆಲವು ಕಡೆಗಳಲ್ಲಿ ಹಾಲು ಹಾಕುವುದು ಎಂದು ಕರೆಯುವರು. ಸತ್ತವರ ಮನೆಯಲ್ಲಿ ಕೆಲವರು ದಿನ ಕಾರ್ಯದ ಊಟವನ್ನು ಮಾಡುವುದಿಲ್ಲ. ಅಂತವರ ಮನೆಗೆ ಎಣ್ಣೆ, ಬೆಲ್ಲ, ಬ್ಯಾಳಿ, ಹಿಟ್ಟು, ಪದಾರ್ಥವನ್ನು ಕಳುಹಿಸಲಾಗುತ್ತದೆ. "ಸತ್ತವರಲ್ಲಿ ಸ್ತ್ರೀಯರಾಗಿದ್ದರೆ ಸ್ತ್ರೀರೂಪದ ವಿಗ್ರಹವನ್ನು ಅಕ್ಕಸಾಲಿಗರ ಮನೆಯಿಂದ ತಂದು ಅಂದು ಮನೆಯಲ್ಲಿ ಇಟ್ಟು ಪೂಜಿಸುವರು."[25]

ಉ) ವಿಷದ ಕಹಿ ಬಾಯಿ ತೊಳೆಯುವುದು

ಹನ್ನೊಂದನೇ ದಿನಕ್ಕೆ ಸಾವು ಸಂಭವಿಸಿದವರ ಮನೆಗೆ ಹತ್ತಿರದ ಬಳಗದವರು ಬಂದು ಬ್ಯಾಳಿ ಹಾಕಿ, ಹೋಳಿಗೆ ಮಾಡಿ, ದೇವರಿಗೆ ಮತ್ತು ಸತ್ತ ವ್ಯಕ್ತಿಯ ಗೋರಿಗೂ ಎಡೆ ಮಾಡಿ ಮನೆ ಮಂದಿಗೆ ಸಿಹಿ ಉಣ್ಣಿಸುತ್ತಾರೆ. ಇದಕ್ಕೆ ವಿಷದ ಬಾಯಿ ತೊಳೆಯುವುದು ಎನ್ನುವರು. ಸತ್ತ ಸುದ್ದಿ ಕೇಳಿ ಎಲ್ಲೆಲ್ಲಿಂದಲೋ ಬಳಗದವರು ಬಂದು ಮಾತನಾಡಿಸಿ ಹೋಗುತ್ತಿರುವುದರಿಂದ ಇವರುಗಳ ದುಃಖ ಕಡಿಮೆ ಆಗಿರುವುದಿಲ್ಲ. ಅದಕ್ಕಾಗಿ ಬಳಗದವರು ಬಂದು ಸಿಹಿ ಊಟ ಮಾಡಿಸಿ ಅವರ ದುಃಖವನ್ನು ಕಡಿಮೆ ಮಾಡುವರು. ವಿಷಬಾಯಿ ತೊಳೆದ ಮೇಲೆ ಅವರು ಅಳುವುದಿಲ್ಲ.

ಊ) ದೈವದಲ್ಲಿ ಹಾಕಿಕೊಳ್ಳುವುದು

ಹೆಣ್ಣು ಅಥವಾ ಗಂಡು ತೀರಿಕೊಂಡ ದಿನದಿಂದ ಅಮವಾಸೆ ಅಥವಾ ಹುಣ್ಣಿಮೆ ಒಳಗಾಗಿ ಆಚರಿಸುವ ಕಾರ್ಯಕ್ಕೆ ದೈವದಲ್ಲಿ ಹಾಕಿಕೊಳ್ಳುವುದು ಎಂದು ಕರೆಯುತ್ತಾರೆ. ಅಂದರೆ ವ್ಯಕ್ತಿ ಪ್ರಾಣ ತೊರೆದ ನಂತರ ಅವನ ದೇಹವನ್ನು ಮನೆಯಿಂದ ಸ್ಮಶಾನಕ್ಕೆ ತೆಗೆದುಕೊಂಡು ಹೋಗಿ ಮಣ್ಣು ಮಾಡಿರುತ್ತಾರೆ. ಆದರೆ ಸತ್ತ ವ್ಯಕ್ತಿಯ ಆತ್ಮ ಮಾತ್ರ ಮನೆಯ ಸುತ್ತಲೂ ತಿರುಗುತ್ತಿರುತ್ತದೆ. ಅದಕ್ಕೆ ಆತ್ಮ ಅಂತರ ಪಿಶಾಚಿಯಾಗಿ ಅಲೆಯಬಾರದು ಎಂದು ಈ ಕಾರ್ಯವನ್ನು ಮಾಡುತ್ತಾರೆ.

ಈ ಸಂದರ್ಭದಲ್ಲಿ ಸತ್ತವರ ಸಂಬಂಧಿಕರನ್ನೆಲ್ಲ ಕರೆಸುತ್ತಾರೆ. ಅಂದು ಕೂಡ ಬಟ್ಟೆಗಳನ್ನೆಲ್ಲ ಒಗೆದು (ಮಡಿ ಮಾಡಿ) ಮನೆ ಸಾರಿಸುತ್ತಾರೆ. ಮನೆಯವರೆಲ್ಲ ದುಃಖವನ್ನು ಮರೆತಿರುವುದರಿಂದ ಈ ಕಾರ್ಯ ಸಾಧಾರಣವೆಂದರೂ ವ್ಯವಸ್ಥಿತವಾಗಿ ಮಾಡುವರು. ಸಿಹಿ ಹಾಗೂ ಮಾಂಸದ ಅಡುಗೆಯನ್ನು ಮಾಡಿ ಕೇರಿಯ ಹಿರಿಯರಾದಿಯಾಗಿ ಎಲ್ಲರನ್ನು ಕರೆದು ಊಟ ಮಾಡಿಸುವರು. ದೈವಕ್ಕೆ ಊಟಕ್ಕೆ ಹಾಕುವುದರ ಮೂಲಕ ಸತ್ತವರ ಆತ್ಮವನ್ನು ಮತ್ತೆ ದೈವದಲ್ಲಿ ಹಾಕಿಕೊಂಡಂತಾಗುವುದು ಎನ್ನಲಾಗುತ್ತದೆ.

5.2.10 ದೇವತಾ ಆರಾಧನೆ

ಧರ್ಮಕ್ಕೂ, ಮಾನವನಿಗೂ ಬಿಡಿಸಲಾಗದ ನಿಕಟವಾದ ಸಂಬಂಧವಿದೆ. ಮನುಷ್ಯನಿಗೆ ತಿಳುವಳಿಕೆ ಬಂದ ಕಾಲದಿಂದಲೂ ಅವನು ಧರ್ಮ ದೇವರುಗಳಿಗೆ ಸಂಬಂಧಿಸಿದಂತೆ ಅನೇಕ ರೀತಿಯ ಆಲೋಚನೆ ಮತ್ತು ದೇವರುಗಳಿಗೆ ಸಂಬಂಧಿಸಿ ದೇವತಾರಧನೆ ಉತ್ಸವಗಳನ್ನು ಮಡುತ್ತಲೇ ಬಂದಿದ್ದಾನೆ. ದೇವರ ಕಲ್ಪನೆಯೇ ಆದಿ ಮಾನವನಿಂದ ಹಿಡಿದು ಇಂದಿನ ಆಧುನಿಕ ಮಾನವನವರೆಗೂ ಆವರಿಸಿಕೊಂಡಿದೆ.

ನಮ್ಮ ಪೂರ್ವಿಕರು ಸರಳರು ಮತ್ತು ಮುಗ್ಧರು, ಅವರ ನಂಬಿಕೆ ಜಗತ್ತಿನ ಸಕಲವು ಮತ್ತು ಜೀವಿಗಳ ಮೂಲಕ ಸಕ'ಲ ಕಾರ್ಯಗಳ ನಿರ್ವಾಹಕನು ದೇವರು. ಇದೇ ರೀತಿ ಸಕಲ ಚರಾಚರಾ ವಸ್ತುಗಳಂತೆ ಮಾನವನೂ ದೇವರ ಸೃಷ್ಟಿ. ಅವನು ಸುಖವಾಗಿರಲೆಂದೇ ದೇವರು ಸಕಲ ಜೀವಕೋಟಿಗಳನ್ನು ಸೃಷ್ಟಿಸಿದ. ಇದಕ್ಕೆ ಬದಲಾಗಿ ಮಾನವನಿಂದ ದೇವರು ಅಪೇಕ್ಷಿಸುವುದು

ಅವನ ಭಕ್ತಿ, ಭಯ, ಉತ್ತಮ ನಡವಳಿಕೆ ಮತ್ತು ಆಚಾರ ವಿಚಾರಗಳು ಈ ನಿಯಮದಂತೆ ನಡೆದರೆ ಅವರ ಸಹಾಯಕ್ಕೆ ಬರಲು ಸದಾಸಿದ್ದ. ಆದರೆ ಅನೈತಿಕ-ಅನಾಚಾರ ಅವ್ಯವಹಾರಗಳಲ್ಲಿ ಮುಳುಗಿದವರಿಂದ ದೂರವಿದ್ದು ಅಂಥವರನ್ನು ಎಚ್ಚರಿಸಲು ತೊಂದರೆಗಳನ್ನು ಸೃಷ್ಟಿಸುವನು"[26] ಎಂಬುದಾಗಿದೆ.

ಮನುಷ್ಯನಲ್ಲಿ ಎರಡು ಬಗೆಯ ನಂಬಿಕೆಗಳಿವೆ. ಅವುಗಳಲ್ಲಿ ಒಂದು ನೇರವಾಗಿ ದೇವರನ್ನು ಕುರಿತಾಗಿದ್ದರೆ, ಇನ್ನೊಂದು ದೇವರ, ಕಿಂಕರರ ಅಥವಾ ದುಷ್ಟ ಶಕ್ತಿಗಳಲ್ಲಿ ನಂಬಿಕೆ ಇಟ್ಟಿರುತ್ತಾರೆ. ದುಷ್ಟ ಶಕ್ತಿಗಳು ತಮಗೆ ಕಾಟ ಕೊಡದಿರಲೆಂದು ಅವುಗಳನ್ನು ಆರಾಧಿಸುವದನ್ನು ಅನೇಕ ಬುಡಕಟ್ಟು ಜಾತಿ, ಸಮುದಾಯದಲ್ಲಿ ಕಂಡುಬರುವುದು. ಇಲ್ಲಿಯೂ ಅಷ್ಟೆ, ಸಫಾಯಿ ಕರ್ಮಚಾರಿಗಳು ಸಹ ಅನೇಕ ದೇವರುಗಳಲ್ಲಿ ನಂಬಿಕೆ ಇಟ್ಟು ನಡೆದುಕೊಳ್ಳುತ್ತಾರೆ. ಅವುಗಳಲ್ಲಿ ಇವರು ಹೆಚ್ಚಾಗಿ ಶಕ್ತಿ ದೇವತೆಯ ಆರಾಧಕರಾಗಿ ಕಂಡು ಇನ್ನುಳಿದಂತೆ ಹನುಮಂತ ದೇವರು ಹಿರೋಡೆಪ್ಪ, ತಿರುಪತಿ ವೆಂಕಟರಮಣ ಹಾಗೂ ಸ್ಥಳೀಯ ದೇವರು ಮತ್ತು ದರ್ಗಾಗಳಿಗೆ ಹೆಚ್ಚಾಗಿ ನಡೆದುಕೊಳ್ಳುತ್ತಾರೆ.

ಇವರ ಪ್ರಕಾರ ದೇವರು ಸ್ವರ್ಗದಲ್ಲಿದ್ದರೂ ಆತನು ಭೂಮಿಯ ಮೇಲಿನ ಆಗುಹೋಗುಗಳನ್ನು ತನ್ನ ಕಿಂಕರರ ಮೂಲಕ ಸದಾ ನೋಡಿಕೊಳ್ಳುತ್ತಾನೆ. ತನ್ನ ಕಿಂಕರರಾದ ಭೂತಪ್ಪ, ನಂದಿ, ಚೌಡಿ ಮಾರಿ ಮುಂತಾದ ಶಕ್ತಿಗಳನ್ನು ಮಾನವನು ಆರಾಧಿಸುವುದರ ಮೂಲಕ ತನ್ನನ್ನು ರಕ್ಷಿಸಿಕೊಳ್ಳುವನು. ಆದರೆ ಮನುಷ್ಯ ತನ್ನ ದೈನಂದಿನ ವ್ಯವಹಾರಗಳಲ್ಲಿ ಚಾಚೂ ತಪ್ಪದೆ ದೈವಗಳ ಪೂಜೆ, ಪುನಸ್ಕಾರ, ಆರಾಧನೆಗಳಲ್ಲಿ ತೊಡಗಿಸಿಕೊಳ್ಳಲು ಆಗುವುದಿಲ್ಲ. ಅದಕ್ಕಾಗಿ ಅವರು ಅಮವಾಸೆ, ಹುಣ್ಣಿಮೆ, ಜಾತ್ರೆ, ಉತ್ಸವಗಳನ್ನು ಮಾಡುವುದರ ಮೂಲಕ ದೇವರನ್ನು ಸಂತೃಪ್ತಗೊಳಿಸಲು ಪ್ರಯತ್ನ ಮಾಡುತ್ತಾನೆ. ಅವುಗಳೇ ಸಂಪ್ರದಾಯ, ಆಚರಣೆಗಳಲ್ಲಿ ಪರಂಪರೆಯಾಗಿ ಬೆಳೆದುಬಂದಿರುತ್ತವೆ ಎನ್ನಬಹುದು.

ಬುಡಕಟ್ಟು ಸಮುದಾಯ, ಜಾತಿಗಳಲ್ಲಿ ಅನೇಕ ಬಗೆಯ ಹಬ್ಬಗಳನ್ನು ಜಾತ್ರೆಗಳನ್ನು ಮತ್ತು ವಿಧಿವಿಧಾನಗಳನ್ನು ಆಚರಿಸುತ್ತಾರೆ. ಇವೆಲ್ಲವುಗಳು ಒಂದು ವಿಧದಲ್ಲಿ ತಮಗೆ ಬಂದಿರುವ ಅಥವಾ ಬರಬಹುದಾದ ತೊಂದರೆಗಳನ್ನು ನಿವಾರಿಸಲೆಂದು ಫಲ ನೀಡಲೆಂದು ಕೇಳಿಕೊಂಡು ದೇವರನ್ನು ಅವನ ಕಿಂಕರರನ್ನು ಆರಾಧಿಸಿ ಮಾಡುವ ಕಾರ್ಯಗಳು. ಹೀಗೆ ಆಚರಿಸುವ ಹಬ್ಬಗಳು ಮತ್ತು ವಿಧಿಗಳು ತುಂಬ ವಿಶಿಷ್ಟತೆಯನ್ನು ಪಡೆದುಕೊಂಡಿರುತ್ತವೆ.

"ಹಬ್ಬಗಳನ್ನು ಆಚರಿಸುವ ಗುಂಪಿನ ಆಧಾರದಿಂದ ಪ್ರದೇಶ, ಊರು, ಜಾತಿ ಮತ್ತು ಕುಟುಂಬ ಅಥವಾ ವಂಶಮಟ್ಟದ ಹಬ್ಬಗಳೆಂದು ವಿಂಗಡಿಸಬಹುದೆಂದು ವಿದ್ವಾಂಸರು ಅಭಿಪ್ರಾಯಪಡುವರು."[27] ಪ್ರತಿ ಜಾತಿ, ಸಮುದಾಯದ ಕುಟುಂಬವು ತನ್ನದೇ ಆದ ದೇವರನ್ನು ಹೊಂದಿದ್ದು, ತನ್ನ ವೃತ್ತಿ, ಸಂಸ್ಕೃತಿ ಮುಂತಾದವುಗಳಿಗೆ ಅನುಗುಣವಾಗಿ ಅವುಗಳನ್ನು ಆಚರಿಸಲಾಗುತ್ತದೆ. ಈ ಹಬ್ಬ ಜಾತ್ರೆಗಳಲ್ಲಿ ಪಾಲ್ಗೊಳ್ಳುವವರು ಅವುಗಳಿಗೆ ತಗುಲುವ ಖರ್ಚು ವೆಚ್ಚಗಳನ್ನು ನೋಡಿಕೊಳ್ಳುತ್ತಾರೆ. ಮತ್ತು ಆಚರಣೆಯಿಂದ ಬರುವ ಪುಣ್ಯದಿಂದ ಸಂತೃಪ್ತರಾಗುತ್ತಾರೆ.

ಸಫಾಯಿ ಕರ್ಮಚಾರಿ ಸಮುದಾಯವು ಮೊದಲಿನಿಂದಲೂ ಹಿಂದೂ ಸಂಪ್ರದಾಯಕ್ಕೆ ಅಂಟಿಕೊಂಡಿದ್ದರೂ ತಾವು ಆಚರಿಸುವ ವಾರ್ಷಿಕ ಆಚರಣೆಗಳು, ಹಬ್ಬ, ಜಾತ್ರೆ, ಉತ್ಸವಗಳಲ್ಲಿ ತಪ್ಪದೇ ಅವರದೇ ಆದ ವೈಶಿಷ್ಟ್ಯತೆಯನ್ನು ಉಳಿಸಿಕೊಂಡು ಬಂದಿದ್ದಾರೆ. ಈ ಕರ್ಮಚಾರಿಗಳಲ್ಲಿ ಸಾಮಾನ್ಯವಾಗಿ ತಮ್ಮ ಮನೆ ದೇವರು, ಕುಲದೇವರು, ಊರದೇವರು, ಪಿತೃದೇವರು, ಮಾತೃದೇವರು, ನಾಡದೇವರು ಹೀಗೆ ಹೆಜ್ಜೆಗೊಂದು ದೇವರು ದಿಂಡಿರುಗಳು ಬೇಕೇಬೇಕು. ಒಂದೊಂದು ರೋಗಕ್ಕೆ, ಕಾಯಿಲೆಗೆ, ಕಾಟಕ್ಕೆ, ಸುಖ ಸಮೃದ್ಧಿಗೆ ಒಬ್ಬೊಬ್ಬ ವಿಶಿಷ್ಟ ದೇವ-ದೇವತೆಗಳು ಇರುವುದು ಆದಿ ಕಾಲದಿಂದಲೂ ನಾನಾ ಕಾರಣಗಳಿಗಾಗಿ ನಾನಾ ದೇವರುಗಳನ್ನು ಪೂಜಿಸುತ್ತ ಬಂದಿದ್ದಾರೆ. "ಜನಪದಕ್ಕೆ ಅಂಟಿಕೊಂಡ ದೇವರ ಸಂಖ್ಯೆಗೆ ಇತಿಮಿತಿಯಿಲ್ಲ. ಅಣುರೇಣು ತೃಣ ಕಷ್ಟಗಳಲ್ಲಿ ದೇವರು ಬೆರೆತುಕೊಂಡಿದ್ದಾನೆಂದು ಅವರು ನಂಬಿದ್ದಾರೆ. ಇದರಿಂದಾಗಿ ಅವರ ದೇವರುಗಳು ಎಲ್ಲೆಡೆಯೂ ಹರಡಿಕೊಂಡಿವೆ. ಮನೆ-ಮಾರು, ಕಾಡು-ನಾಡು, ತೀರ್ಥಕ್ಷೇತ್ರಗಳಲ್ಲಿ ದೇವರು ನೆಲೆಸಿರುವನೆಂದು ಅವರ ಅಂತರಾತ್ಮ ಉಸುರುತ್ತದೆ. ಆತ್ಮಸಾಕ್ಷಿಯಾಗಿ ನಂಬಿದ ದೇವರನ್ನು ಆತ ಪೂಜಿಸಲು ಭಯ ಭಕ್ತಿಯಿಂದ ಕಾಣಲು ಮುಂದಾಗುತ್ತಾನೆ."[28]

ಅ) ಸ್ತ್ರೀ ದೇವತೆಗಳು

ಸಫಾಯಿ ಕರ್ಮಚಾರಿ ಸಮುದಾಯದವರಲ್ಲಿ ಸಾಮಾನ್ಯವಾಗಿ ಕಂಡುಬರುವ ದೇವತೆಗಳನ್ನು ಹೀಗೆ ವಿಂಗಡಿಸಬಹುದು. 1) ಸ್ತ್ರೀದೇವತೆಗಳು 2) ಪುರುಷ ದೇವತೆಗಳು. ಇವುಗಳಲ್ಲಿ ಮತ್ತು ಶಾಖಾಹಾರಿ ಹೆಣ್ಣು ದೇವತೆಗಳು, ಮಾಂಸಾಹಾರಿ ಹೆಣ್ಣು ದೇವತೆಗಳು,

ಶಾಖಾಹಾರಿ ಮತ್ತು ಮಾಂಸಾಹಾರಿ ಎರಡನ್ನು ಒಳಗೊಂಡ ಹೆಣ್ಣು ದೇವತೆಗಳು. ಎರಡನೆಯದು ಶಾಖಾಹಾರಿ ಗಂಡು ದೇವತೆಗಳು, ಮಾಂಸಾಹಾರಿ ಗಂಡು ದೇವತೆಗಳು ಹಾಗೂ ಶಾಖಾಹಾರಿ ಮತ್ತು ಮಾಂಸಾಹಾರಿ ಗಂಡು ದೇವತೆಗಳು. ಇವಲ್ಲದೆ ಪೌರಾಣಿಕ ದೇವತೆಗಳು, ಸಾಮಾಜಿಕ ಸ್ಥಾನಮಾನ ಆಧರಿಸಿ ಹುಟ್ಟಿಕೊಂಡ ದೇವತೆಗಳು ಎಂಬುದಾಗಿ ವರ್ಗೀಕರಿಸಬಹುದಾಗಿದೆ.

"ಆಯಾ ಪ್ರಾದೇಶಿಕ ಪರಿಸರ, ಮಹತ್ವ, ಜನಸಮುದಾಯದವರ ಜೀವನ ವಿಧಾನಗಳ ಮೇಲೆ ದೇವತೆಗಳ ವರ್ತನೆ, ನಡವಳಿಕೆ, ರೂಪವಿನ್ಯಾಸಗಳಿಗೆ ಮಹತ್ವವಿರುತ್ತದೆ. ದೇವತೆಗಳ ದೈಹಿಕ ಸ್ವರೂಪ ಸಹ ಆಯಾ ಸಮುದಾಯದ ಜನರನ್ನೇ ಹೋಲುತ್ತದೆ."[29] ಆದ್ದರಿಂದ ಪ್ರಾದೇಶಿಕ ನೆಲೆಗಟ್ಟನ್ನು ಹೊರತುಪಡಿಸಿ ದೇವತೆಗಳನ್ನು ಅಧ್ಯಯನ ಮಾಡಲಾಗುವುದು.

ಕರ್ನಾಟಕದ ಬಹುಪಾಲು ಗ್ರಾಮದೇವತೆಗಳು ಒಂದೇ ರೀತಿಯ ಆಚರಣೆ, ಸಂಪ್ರದಾಯ, ಪುರಾಣಗಳನ್ನು ಹೊಂದಿರುತ್ತವೆ. "ಅಲ್ಲಲ್ಲಿ ಅಲ್ಪಸ್ವಲ್ಪ ವ್ಯತ್ಯಾಸ ಕಂಡು ಬಂದರೂ ಮೂಲ ಆಶಯ ಮಾತ್ರ ಒಂದೇ ಆಗಿರುತ್ತದೆ. ಇನ್ನು ಕೆಲವು ದೇವತೆಗಳು ಸಂಪೂರ್ಣವಾಗಿ ಸ್ಥಳೀಯವಾಗಿ ಅವುಗಳನ್ನು ಅಧ್ಯಯನ ಮಾಡಲು ಆಯಾ ಪ್ರಾದೇಶಿಕ ಮೇಲ್ಮೈ ಲಕ್ಷಣಗಳನ್ನೇ ನಾವು ಅವಲಂಬಿಸಬೇಕಾಗುತ್ತದೆ. ಮತ್ತು ಕೆಲವು ದೇವತೆಗಳು ಹಲವು ಜಿಲ್ಲೆಗಳಲ್ಲಿ ಪ್ರಚಾರದಲ್ಲಿದ್ದು, ಕರ್ನಾಟಕದ ಹೊರಗೆ ಅವು ಅಪರಿಚಿತವಾಗಿರುತ್ತವೆ."[30] ಆದ್ದರಿಂದ ಇಲ್ಲಿ ಗುಲಬರ್ಗಾ ಜಿಲ್ಲೆಯಲ್ಲಿ ಸಫಾಯಿ ಕರ್ಮಚಾರಿಗಳು ಆರಾಧಿಸುವ ದೈವಗಳನ್ನು ಮಾತ್ರ ಅಧ್ಯಯನಕ್ಕೆ ಪರಿಗಣಿಸಲಾಗಿದೆ.

ಈ ದೇವರುಗಳು ಇಂತಹ ಊರಿನದು, ಇಂತಹ ಪ್ರದೇಶದ್ದು ಎಂದು ಹೇಳಬಹುದು. ಆದರೆ ಇದುವೇ ಬಂಗಿಗಳ ದೇವತೆ ಎಂದು ನಿರ್ದಿಷ್ಟವಾಗಿ ಹೇಳುವುದು ತುಂಬ ಕಷ್ಟಸಾಧ್ಯ. ಆದರೆ ಇಷ್ಟನ್ನು ಮಾತ್ರ ಹೇಳಬಹುದು. ಅದೇಂದರೆ, ಯಾವ ದೇವತೆಗಳನ್ನು ಹೆಚ್ಚಾಗಿ ತಲತಲಾಂತರಗಳಿಂದ ಆರಾಧಿಸುತ್ತ ಬಂದಿದ್ದಾರೆಯೋ ಸಾಮಾನ್ಯವಾಗಿ ಅವೇ ಅವರುಗಳ ದೇವತೆಗಳೆನಿಸಿಕೊಂಡಿವೆ. ಉದಾ: ಮರಗಮ್ಮ, ದುರಗವ್ವ, ಅಂಬಾಭವಾನಿ, ಹಿರೋಡೆಪ್ಪ, ಭರಮಪ್ಪ, ಹನುಮಂತ, ಮಾಯವ್ವ, ಗಡೆಮ್ಮ, ಬಂಡೆಮ್ಮ, ಮಾಸ್ತೆಮ್ಮ ಮುಂತಾದವು ಎಲ್ಲರಂತೆ ಬಂಗಿಗಳ ದೇವತೆಗಳಾಗಿ ಸ್ಥಾನ ಪಡೆದಿದ್ದಾರೆ ಎನ್ನಬೇಕು.

ಇ) ಅಂಬಾಭವಾನಿ

ಸ್ತ್ರೀದೇವತೆಗಳು ಹೆಚ್ಚಾಗಿ ತುಳಜಾ ಅಂಬಾಭವಾನಿಯನ್ನು ಈ ಸಮುದಾಯದವರು ಆರಾಧಿಸುವರು. ಈಕೆ ತಮ್ಮ ಅನಾದಿಕಾಲದಿಂದ ಬಂದ ಕುಲದೇವತೆಯಾಗಿದ್ದಾಳೆ ಎನ್ನುತ್ತಾರೆ. ಈ ಸಮುದಾಯ ಹಿರಿಯರು ಮೊಹಲ್ಲಾದ ಜನ, ದನ, ಕರು, ಪಕ್ಷಿಗಳನ್ನೆಲ್ಲ ರಕ್ಷಣೆ ಮಾಡುವುದರೊಂದಿಗೆ ಈಕೆಯು ಮಾರಕ ರೋಗಗಳನ್ನು ತಡೆಗಟ್ಟುವ ದೇವತೆ ಎಂಬ ನಂಬಿಕೆ ಇವರಲ್ಲಿದೆ. ಅದಕ್ಕಾಗಿಯೆ ಅವರು

"ಅಂಬಾಭವಾನಿ ನಾ ನಿನ್ನ ಮಗಳಮ್ಮ
ಹಾಲ ಬಾನ ತಂದೀನಿ ಉಣವ್ವ ತಾಯಿಗೋಳ್ಯಾ
ನಮ್ಮೂರ ತನವು ಇಡಲೇಳವ್ವ"[31]

ಎಂದು ಭಯ-ಭಕ್ತಿಯಿಂದ ಕೇಳಿಕೊಳ್ಳುತ್ತಾರೆ.

ಅಂಬಾಭವಾನಿ ಸವರ್ಣಿಯರ ದೇವತೆಯಾಗಿರುವಂತೆ ದಲಿತರ, ಸಫಾಯಿಕರ್ಮಿಗಳ ದೇವತೆಯೂ ಹೌದು. ಈ ಸಮುದಾಯದವರಿಗೆ ದೇವಾಲಯದಲ್ಲಿ ಮುಕ್ತ ಪ್ರವೇಶ ಇಲ್ಲದಿದ್ದರೂ ದೇವಾಲಯದ ಅಂಗಳದಲ್ಲಿ ನಿಂತು ಭಯಭಕ್ತಿಯಿಂದ ಕೈಮುಗಿಯುತ್ತಾರೆ. ತಾವು ತಂದ ಕಾಯಿ, ಕರ್ಪೂರ, ಊದಬತ್ತಿಯನ್ನು ದೂರದಿಂದಲೇ ಪೂಜಾರಿಗೆ ನೀಡಿ ಹರಕೆ ತೀರಿಸುತ್ತಾರೆ. ಪೂಜಾರಿಯು ಎತ್ತರದಿಂದ ನೀಡುವ ತೀರ್ಥ ಪ್ರಸಾದವನ್ನು ಸ್ವೀಕರಿಸಿ ಧನ್ಯತಾಭಾವನೆ ಹೊಂದುವರು. ಈ ಸಮುದಾಯಕ್ಕೆ ದೇವರೆಂದರೆ ಎಲ್ಲಿಲ್ಲದ ಭಕ್ತಿ. ತಾವು ವಾಸ ಮಾಡುವ ಮೊಹಲ್ಲಾದಲ್ಲಿಯೇ ಕಲ್ಲುಗಳಿಂದ ಏರಿಸಿ ಒಂದು ಚಿಕ್ಕದಾಗಿ ದೇವಿಯ ಗುಡಿ ರಚಿಸಿಕೊಂಡಿರುತ್ತಾರೆ. ತಾವು ತಮ್ಮ ವೃತ್ತಿಗೆ ಹೊರಡುವಾಗ ದೇವರಿಗೆ ನಮಸ್ಕರಿಸಿ ತಿಲಕವನ್ನು ಹಣೆಗೆ ಹಚ್ಚಿಕೊಂಡು ಹೊರಡುತ್ತಾರೆ. ಅದು ಅವರ ದಿನನಿತ್ಯದ ನಿಯಮವಾಗಿದೆ.

ಭವಾನಿ ದೇವಿಯಂತೆ ಇವರು ರೇಣುಕಾದೇವಿ, ಯಲ್ಲಮ್ಮ ದ್ಯಾಮವ್ವ, ದುರುಗಮ್ಮ, ಮರಗಮ್ಮ ಮೊದಲಾದ ಸ್ತ್ರೀದೇವತೆಗಳನ್ನು ಈ ಒಬ್ಬೊಬ್ಬ ದೇವತೆಗಳು ಒಂದೊಂದು ರೋಗವನ್ನು ನಿಯಂತ್ರಿಸಿ ಮಕ್ಕಳನ್ನು ರಕ್ಷಿಸುತ್ತಾಳೆ ಎಂಬ ನಂಬಿಕೆ ಅವರದ್ದಾಗಿದೆ. ವಾರದ ಮಂಗಳವಾರವನ್ನು ಅವರು ದೇವಿ ವಾರವನ್ನಾಗಿ ಪಾಲಿಸುತ್ತಾರೆ. ಅಂದು ಅವರು ಕಪ್ಪು ಅಡಿಗೆ"[32]

ತಯಾರಿಸುವುದಾಗಲಿ, ಊಟವನ್ನಾಗಲಿ ಮಾಡುವುದಿಲ್ಲ. ಸ್ನಾನ ಮಾಡಿ ದೇವರ ಗುಡಿಗೆ ಹೋಗಿ ಬಂದ ಮೇಲೆ ತಮ್ಮ ದೈನಂದಿನ ಕೆಲಸ ಕಾರ್ಯಗಳಲ್ಲಿ ತೊಡಗುತ್ತಾರೆ.

ಇ) ಎಲ್ಲಮ್ಮ

ಭವಾನಿಯಂತೆ ಇವರು ಯಲ್ಲಮ್ಮನ ಆರಾಧಕರೂ ಹೌದು. ಎಲ್ಲರ ಅಮ್ಮನೇ ಎಲ್ಲಮ್ಮ ಎನ್ನುತ್ತಾರೆ ಇವರು. ಈಕೆ ಸರ್ವರಿಗೂ ಮಾತೃ ಸ್ವರೂಪಿ. ಹೀಗಾಗಿ ಆಕೆಗೆ ನಡೆದುಕೊಳ್ಳುತ್ತಾರೆ. ಎಲ್ಲಮ್ಮನ ಹೆಸರಿನಲ್ಲಿ ಅಲ್ಲಲ್ಲಿ ಸಣ್ಣ ಸಣ್ಣ ಗುಡಿಗಳನ್ನು ಕೇರಿಯಲ್ಲಿ ಕಟ್ಟಿಕೊಂಡು ಪೂಜಿಸುವರು. ಸವದತ್ತಿ ಎಲ್ಲಮ್ಮ, ಕೊಕಟನೂರ ಎಲ್ಲಮ್ಮ, ಬೂದಿಹಾಳ ಎಲ್ಲಮ್ಮ, ಗೋಳಾ ಲಕ್ಕಮ್ಮ ಕ್ವಾನಳ್ಳಿ ಎಲ್ಲಮ್ಮ ಎಲ್ಲವೂ ಅಮ್ಮನ ಪ್ರತಿರೂಪವೆನ್ನುತ್ತಾರೆ. ಮಂಗಳವಾರ ಮತ್ತು ಶುಕ್ರವಾರ ದೇವಿ ವಾರವನ್ನು ಆಚರಿಸುತ್ತಾರೆ. ಬನದ ಹುಣ್ಣಿಮೆ ಮತ್ತು ಭಾರತ ಹುಣ್ಣಿಮೆಗಳಲ್ಲಿ ಎಲ್ಲಮ್ಮ ದೇವಿಯ ಜಾತ್ರೆ, ಉತ್ಸವ ಮಾಡಿದರೆ, ವಿಜಯದಶಮಿಯಲ್ಲಿ ಅಂಬಾಭವಾನಿ ಉತ್ಸವ ಮಾಡುತ್ತಾರೆ.

ಈ) ಮಾತಂಗಿ

ಎಲ್ಲಮ್ಮನಂತೆ ಮಾತಂಗಿಯನ್ನು ದೇವತೆಯಾಗಿ ಇವರು ಪಾಲಿಸುವರು. ಅವರು ಈಕೆಯನ್ನು ಎಲ್ಲಮ್ಮನ ತಂಗಿಯೆಂದು ಭಾವಿಸುತ್ತಾರೆ. ಈಕೆ ಎಲ್ಲಮ್ಮನ ಹೆರಿಗೆ ಸಮಯದಲ್ಲಿ ಸಹಾಯ ಮಾಡಿದ್ದರಿಂದ ಈಕೆಯನ್ನು ದೇವರಾಗುವಂತೆ ಎಲ್ಲಮ್ಮ ವರ ನೀಡಿದ್ದರಿಂದ ಮಾತಂಗಿಯೂ ಇವರುಗಳ ಪಾಲಿಗೆ ದೇವತೆಯಾಗಿದ್ದಾಳೆ. ಹೆಚ್ಚಾಗಿ ಮಾದಿಗ ಸಮುದಾಯವು ಮಾತಂಗಿಯನ್ನು ಆರಾಧಿಸುತ್ತಾರೆ. ಆದರೆ ಇಲ್ಲಿ ಸಫಾಯಿಗಳೂ ಈಕೆಯನ್ನು ಪೂಜಿಸುವುದನ್ನು ನೋಡಿದರೆ ನಿಶ್ಚಿತವಾಗಿ ಈ ಸಮುದಾಯವು ತೀರ ಅಸ್ಪೃಶ್ಯರಾದ ಅಂತ್ಯಜ ಕುಲಕ್ಕೆ ಸೇರಿದವರಾಗಿದ್ದಾರೆಂದು ತಿಳಿಯುಬಹುದು. ಯಾವುದೋ ಕಾಲಘಟ್ಟದಲ್ಲಿ ಮಾದಿಗರೊಂದಿಗೆ ಇವರು ಸಂಬಂಧ ಬೆಳೆಸಿರಬಹುದು. ಹೀಗಾಗಿ ಮಾದಿಗ ಕುಲದ ಈ ಮಾತಂಗಿಯನ್ನು ತಮ್ಮ ದೇವತೆಯಾಗಿ ಸ್ವೀಕರಿಸಿ ಆರಾಧಿಸುತ್ತಿರಬಹುದು ಎಂದು ತೋರುತ್ತದೆ.

ಸಾಮಾನ್ಯವಾಗಿ ಸ್ತ್ರೀದೇವತೆಗಳಿಗೆ ಸಸ್ಯಾಹಾರ ಮತ್ತು ಕೆಲವು ವಿಶೇಷ ಸಂದರ್ಭಗಳಲ್ಲಿ ಮಾಂಸಾಹಾರವನ್ನು ನೈವೇದ್ಯ ಮಾಡುವ ಪದ್ಧತಿ ಇವರಲ್ಲಿ ಕಾಣುತ್ತೇವೆ. ಭಾರತದ ಸಾಂಸ್ಕೃತಿಕ ಇತಿಹಾಸದಲ್ಲಿ ಶಕ್ತಿ ದೇವತೆಯ ಪೂಜಾ ಪರಂಪರೆ ಶತಮಾನಗಳ ಕಾಲದಿಂದ ನಿರಂತರವಾಗಿ ಬೆಳೆದುಬಂದಿದೆ. ಜನಪದರು ಮೂಲತಃ ದೇವತೆಗಳ ಅನನ್ಯ ಭಕ್ತರು. ಅದರಲ್ಲೂ ಶಕ್ತಿಯನ್ನು ಬಲವಾಗಿ ನಂಬಿದವರು. ಶಕ್ತಿಯು ಹೆಣ್ಣು ದೇವತೆಯ ಸಂಕೇತ. ಆ ಆದಿಶಕ್ತಿಯ ವಿವಿಧ ರೂಪಗಳನ್ನು ಆರಾಧಿಸುವ ವಿಶಿಷ್ಟ ಪರಂಪರೆಯೇ ಶಕ್ತಿ ಪೂಜೆಯ ಮೂಲ ತತ್ವ. "ನಮ್ಮ ಪ್ರಾಚೀನ ಪುರಾಣ ಗ್ರಂಥಗಳು ಕೂಡ ಶಕ್ತಿಯ ಮಹತ್ವವನ್ನು ಕೊಂಡಾಡಿವೆ. ಅಂತೆಯೇ ಜಾತಿ-ಮತ ಪಂಥಗಳನ್ನು ಮೀರಿ ಎಲ್ಲ ಜಾತಿಯವರು ಎಲ್ಲ ದೇವತೆಗಳನ್ನು ಆರಾಧಿಸುವರು. ಬಿಡಾರ ಬಿಟ್ಟುಕೊಂಡು ಊರಿಂದೂರಿಗೆ ಅಲೆಯುವ ಅಲೆಮಾರಿ ಸಮುದಾಯಗಳು. ತಾವು ಇಳಿದುಕೊಂಡಲ್ಲಿ ತಮ್ಮ ಕುಲದೇವರ ಸಂಕೇತದ ಬಾವುಟವನ್ನು ಹಾರಿಸುತ್ತಾರೆ."[33]

ದಲಿತರ ಅಂತ್ಯಜರ ದೇವತೆಗಳಿಗೆ ಪ್ರತ್ಯೇಕ ಪೂಜಾರಿ ಇರುವುದಿಲ್ಲ. ಇನ್ನು ಕೆಲವು ದೇವತೆಗಳಿಗೆ ಬಂದ ಭಕ್ತರೇ ಪೂಜಾರಿಯಾಗುತ್ತಾರೆ. ಇವರುಗಳ ದೇವತೆಗಳಿಗೆ ಇತರರ ದೇವತೆಗಳಂತೆ ಹೋಳಿಗಿ, ತುಪ್ಪ, ಎಲಿಪೂಜೆ, ಹಾಲಿನ ಅಭಿಷೇಕ ಬೇಕಿಲ್ಲ. ಕುಂಕುಮ ಬಂಢಾರ, ಅವರಿ ಹೂವು, ಚಂಡು ಹೂವು, ಉಪ್ಪು, ಊದಿನಕಡ್ಡಿ, ತೆಂಗಿನಕಾಯಿ ಇದ್ದರೆ ಸಾಕು ತಮ್ಮ ದೇವರು ಸಂತೃಪ್ತ ಎಂದು ಭಾವಿಸುತ್ತಾರೆ.

ಇವರ ದೇವತೆಗಳ ಆರಾಧನೆಯಿಂದ ಯಾವುದೇ ತರಹದ ಆದಾಯವು ಇರುವುದಿಲ್ಲ. ತಾವು ದುಡಿದುದ್ದರಲ್ಲಿಯೇ ಖರ್ಚು ಮಾಡಿ ದೇವತೆಗೆ ಸಣ್ಣದೊಂದು ಗುಡಿಯನ್ನು ಕಟ್ಟಿಸಿರುತ್ತಾರೆ. ಇಲ್ಲವೆ ಕೆಲವೊಂದು ಸಲ ದೊಡ್ಡದಾದ ಬೇವಿನ ಗಿಡದ ಕೆಳಗೆ ಕಟ್ಟೆಯನ್ನು ಕಟ್ಟಿ, ಆ ಕಟ್ಟೆಯ ಮೇಲೆ ಕಲ್ಲುಗಳನ್ನಿಟ್ಟು ಅದಕ್ಕೆ ಕುಂಕುಮ, ಬಂಡಾರ ಬಳಿದು ದೇವರ ರೂಪದಲ್ಲಿ ಪೂಜಿಸುತ್ತಾರೆ. ಕೆಲವೊಂದು ಕಡೆಗಳಲ್ಲಿ ಕುಲದ ಹಿರಿಯರೊಬ್ಬರು ದೇವತೆಯ ಪೂಜೆ, ಪುನಸ್ಕಾರ, ದೇವರ ಗುಡಿಯ ಸ್ವಚ್ಛತೆ ಮುಂತಾದ ವ್ಯವಸ್ಥೆಗೆ ತಮ್ಮನ್ನು ತಾವೇ ನಿಯೋಗಿಸಿಕೊಂಡಿರುವುದುಂಟು. ಸಮಾಜವು ಅವರುಗಳ ಮೇಲೆಯೂ ಗೌರವ ಇಟ್ಟಿರುತ್ತದೆ. ಆದರೆ ಇವರಲ್ಲಿ ಪೂಜಾರಿ ವರ್ಗ ಇಲ್ಲವೆಂಬುದನ್ನು ಗಮನಿಸುವಂತಹದ್ದಾಗಿದೆ. ಇವರಲ್ಲಿ ಗುಡಿಯ ಪೂಜಾರಿಕೆ ಅಥವಾ ಉಸ್ತುವಾರಿಕೆಯನ್ನು ಹೆಣ್ಣುಮಕ್ಕಳು ಅಥವಾ ಗಂಡು ಮಕ್ಕಳಲ್ಲಿ ಯಾರಾದರೂ ಆಗಿರಬಹುದು. ಅಲ್ಲಿ

ಹೆಣ್ಣು ಗಂಡುಗಳೆಂಬ ಬೇಧವಿಲ್ಲ. ಅಲ್ಲದೆ ದೇವರ ಪೂಜಾರಿಕೆ ಮಾಡುವವರೂ ಸಂಸಾರಿಗಳಾಗಿರುತ್ತಾರೆ.

ಉ) ಪುರುಷ ದೇವತೆಗಳು

ಪುರುಷ ದೇವರುಗಳಲ್ಲಿ ಹನುಮಾನ್, ಹಲವಾಪೊನ್, ಜೇತಮನ್ ಪೊನ್ ರತಮನ್ ಪೊನ್ ಇವುಗಳ ಜೊತೆಗೆ ತಮ್ಮ ಕುಲದಲ್ಲಿ ಮಡಿದ ಹಿರಿಯರನ್ನು ದೈವಗಳಾಗಿ ಪೂಜಿಸುವ ಪರಂಪರೆಯನ್ನು ಸಫಾಯಿಕರ್ಮಿಗಳಲ್ಲಿ ಕಾಣುವೆವು. ಆದರೆ ಈ ಸಮುದಾಯದಲ್ಲಿ ಪುರುಷ ದೇವತೆಗಳಿಗಿಂತಲೂ ಸ್ತ್ರೀ ದೇವತಾ ಆರಾಧನೆಗೆ ಹೆಚ್ಚಿನ ಮಹತ್ವವಿದೆ.

ಸ್ತ್ರೀ ದೇವತೆಗಳಂತೆ ಪುರುಷ ದೇವತೆಗಳಿಗೂ ಭವ್ಯ ಹಾಗೂ ದೊಡ್ಡದಾದ ಗುಡಿಗಳನ್ನು ನಿರ್ಮಿಸಿರುವುದಿಲ್ಲ. ಹೆಣ್ಣು ದೇವತೆಗಳ ಪಕ್ಕದಲ್ಲಿಯೇ ಕಲ್ಲುಗಳನ್ನಿಟ್ಟು ಕುಂಕುಮ ಬಂಡಾರ ಲೇಪಿಸಿ ಇಟ್ಟಿರುತ್ತಾರೆ. ಇವರಲ್ಲಿ ಪುರುಷ ದೇವತೆಗಳಲ್ಲಿ ಹಿರೋಡೆಪ್ಪನಿಗೆ ಮಹತ್ವ ಕೊಡುವರು.

ಹಿರಿಯೊಡೆಯ ಅಥವಾ ಹೊರೋಡ್ಯ, ಹಿರೋಡೆಪ್ಪ ಎಂದು ಕರೆಯಿಸಿಕೊಳ್ಳುವ ದೇವತೆ ಮೂಲವಾಗಿ ನಾಗದೇವತೆಯಾಗಿದ್ದಾನೆ ಎಂದು ಹೇಳಬೇಕು. ಒಂದು ಗುಂಡುಗಲ್ಲಿಗೆ ನೂರಾರು ಕಣ್ಣುಗಳನ್ನು ಲೇಪಿಸಿ ಮೇಲೆ ಎಣ್ಣೆ ಹೊಯ್ದು ಕುಂಕುಮ ಬಂಡಾರಗಳಿಂದ ಈ ದೇವತೆಯ ಮೂರ್ತಿಯನ್ನು ರಚಿಸಿರುತ್ತಾರೆ. ಈ ಅನೇಕ ಕಣ್ಣುಗಳು ನಾಗದೇವತೆಯ ಹೆಡೆಗಳೆಂದು ಹೇಳುವರು. ಅವರಲ್ಲಿ ಆದಿಶೇಷನು ಈ ಭೂಮಿಯನ್ನು ತನ್ನ ಅಸಂಖ್ಯೆ ಹೆಡೆಗಳ ಮೇಲೆ ಹೊತ್ತುಕೊಂಡು ನಿಂತಿದ್ದಾನೆ. ಅವನು ಈ ಭೂಮಿಯನ್ನು ಮತ್ತು ಈ ಭೂಮಿಯ ಮೇಲೆ ವಾಸಿಸುವ ತಮ್ಮನ್ನೆಲ್ಲರನ್ನು ರಕ್ಷಿಸುತ್ತಾನೆ ಎಂದು ನಂಬಿರುವರು. ಹೀಗೆ ತಮ್ಮನ್ನು ಸಂರಕ್ಷಿಸುವ ದೇವತೆಯನ್ನು ಇವರು ಹಿರಿಯೊಡೆಯ ಅಥವಾ ಹಿರೋಡ್ಯಾ ಎಂಬ ಹೆಸರಿನಲ್ಲಿ ಪೂಜಿಸುವರು. ನಾಗರ ಪಂಚಮಿಗಳಲ್ಲಿ ಓಣಿಯ ಹೆಂಗಸರು ಹಿರಿಯೊಡೆಯ ದೇವರಿಗೆ ಹಾಲನ್ನು ಎರೆದು ತಮ್ಮ ಭಕ್ತಿಯನ್ನು ಮೆರೆಯುತ್ತಾರೆ. ಸಫಾಯಿ ಕರ್ಮಚಾರಿಗಳು ಯಾವುದೇ ಊರಲ್ಲಿ ವಾಸಿಸಿರಲಿ ಅಲ್ಲೆಲ್ಲ ಅಂಬಾಭವಾನಿ ಮತ್ತು ಹಿರೋಡ್ಯ ದೇವತೆಗಳ ಸಣ್ಣ ಸಣ್ಣ ಗುಡಿಗಳನ್ನು ಕಾಣುವೆವು.

ಊ) ಜಾತ್ರೆ ಉತ್ಸವಗಳು

ಎಲ್ಲ ಸಮುದಾಯಗಳಲ್ಲಿರುವಂತೆ ಸಫಾಯಿ ಕರ್ಮಚಾರಿಗಳಲ್ಲಿಯೂ ತಮ್ಮ ಕುಲದೇವತೆ, ಗ್ರಾಮದೇವತೆಯ ಜಾತ್ರೆ, ಉತ್ಸವಗಳನ್ನು ತಮ್ಮ ಆರ್ಥಿಕ ಶಕ್ತ್ಯಾನುಸಾರವಾಗಿ ಮಾಡುವ ಪದ್ಧತಿಯಿದೆ. ಪ್ರತಿ ವರ್ಷಕ್ಕೊಮ್ಮೆ ಇಲ್ಲವೆ ತಮಗೆ ಅನುಕೂಲಕರವಾದ ಸಮಯದಲ್ಲಿ ಜಾತ್ರೆ, ಉತ್ಸವಗಳನ್ನು ಆಚರಿಸುತ್ತ ಬಂದಿರುವರು. "ಜಾತ್ರೆಯೆಂಬುದು ಜಾನಪದ ರೂಢಿ–ಸಂಪ್ರದಾಯಗಳ ಒಂದು ಅಂಗ ಜಾತ್ರೆ ಎಂಬ ಪದ ಯಾತ್ರೆಯೆಂಬುದರ ತದ್ಬವ ರೂಪ."[34] ಜಾತ್ರೆಗಳು ದೇಸಿ ಸಂಸ್ಕೃತಿಯ ಪ್ರತೀಕವೆನಿಸುತ್ತವೆ. ಬೇರೆ ಬೇರೆ ಕಡೆಗಳಲ್ಲಿ ಉದ್ಯೋಗ ಮತ್ತಿತರ ಕಾರಣಗಳಿಗಾಗಿ ಚದುರಿ ಹೋಗಿರುವ ಜಾತಿಯ ಜನರೆಲ್ಲರು ಒಂದು ಕಡೆಗೆ ಸೇರಿ ಪರಸ್ಪರ ಕುಶಲೋಪರಿಗಳನ್ನು ವಿತರಿಸಿಕೊಳ್ಳುವ ವೇದಿಕೆಗಳಾಗುತ್ತವೆಂತಲೂ ಹೇಳಬಹುದಾಗಿದೆ. ಇದು ಕೆಳವರ್ಗದ ಜಾತಿ ಸಮುದಾಯಗಳಲ್ಲಿ ಇನ್ನೂ ಹೆಚ್ಚಿನ ಮಹತ್ವ ಪಡೆದುಕೊಂಡಿರುತ್ತದೆ.

ಸಫಾಯಿ ಕರ್ಮಚಾರಿಗಳ ದೇವತೆಗಳ ಜಾತ್ರೆ ಅಷ್ಟೊಂದು ಆಡಂಬರವಾಗಿರುವುದಿಲ್ಲ. ಈ ಜನಾಂಗದ ಜನಸಂಖ್ಯೆ ತೀರ ಕಡಿಮೆ ಇರುವುದರಿಂದ, ಅಲ್ಲದೆ ಅವರಲ್ಲಿ ಶ್ರೀಮಂತರಾಗಿರುವುದೂ ಕ್ವಚಿತ್ತ ಹಾಗಾಗಿ ತೀರ ಸರಳವಾಗಿರುತ್ತದೆ.

ಜಾತ್ರೆಗಳಲ್ಲಿ ಯಾವುದೇ ರಥ (ತೇರು)ವಾಗಲಿ, ಅಡ್ಡಪಲ್ಲಕ್ಕಿಯಾಗಲಿ ಇರುವುದಿಲ್ಲ. ಜಾತ್ರೆ, ಹಬ್ಬ ಉತ್ಸವದ ದಿನಗಳನ್ನು ನಿರ್ಧರಿಸಿ ದೇವರ ಗುಡಿಗಳಿಗೆ ಸುಣ್ಣ ಜಾಜ ಬಳಿಯುತ್ತಾರೆ. ತಮ್ಮ ಬಂಧು ಬಳಗದವರಿಗೆ ಜಾತ್ರೆಗೆ ಬರುವಂತೆ ಪತ್ರ ಬರೆದು ಕರೆಯಿಸಿಕೊಳ್ಳುತ್ತಾರೆ. ಸಾಮಾನ್ಯವಾಗಿ ಜಾತ್ರೆ, ಉತ್ಸವಗಳು ವರ್ಷದ ಬಾದ್ರಪದ ವೈಶಾಖ, ಕಾರ್ತೀಕ ಅಂದರೆ ಅಗಷ್ಟ, ಸಪ್ಟಂಬರ್, ಅಕ್ಟೋಬರ್ ಅಥವಾ ಮಾರ್ಚ, ಏಪ್ರೀಲ್ ತಿಂಗಳಲ್ಲಿ ಹೆಚ್ಚಾಗಿ ನಡೆಯುತ್ತವೆ. ಜಾತ್ರೆ, ಹಬ್ಬಗಳಲ್ಲಿ ಸಾಮೂಹಿಕವಾಗಿ ಕುರಿ, ಕೋಳಿಗಳನ್ನು ಕೊಯ್ದು ದೇವರಿಗೆ ಎಡೆ ಅರ್ಪಿಸಿ ಸಾಮೂಹಿಕವಾಗಿ ಊಟ ಮಾಡುತ್ತಾರೆ.

"ಜಾತ್ರೆಯ ದಿನ ಬಂಧು ಬಾಂಧವರೆಲ್ಲರೂ ಒಂದೇ ಸ್ಥಳದಲ್ಲಿ ಸೇರುವುದರ ಜೊತೆಗೆ ತಮ್ಮ ಆರ್ಥಿಕ ವ್ಯವಹಾರಗಳಿಗೆ ಸಂಬಂಧಿಸಿದಂತೆ ಮಾತುಕತೆಗಳನ್ನು ಆಡುತ್ತಾರೆ. ಸಾಲ ಸಮೂದಗಳಲ್ಲಿ ಜಾತ್ರೆಯಲ್ಲಿಯೇ ಫೈಸಲ್ (ನಿರ್ಣಯ) ಮಾಡಿಕೊಳ್ಳುವರು. "ಜಾತ್ರೆಯಲ್ಲಿ ಹಲಗೆ, ಬಜಂತ್ರಿ ವಾದ್ಯಗಳೊಂದಿಗೆ ಮೆರವಣಿಗೆ ಹೊರಟು ಎಲ್ಲರೂ ದೇವಿ ಅಥವಾ ದೇವರ ಗುಡಿ ಮುಂದೆ ಬಂದು

ಸೇರುತ್ತಾರೆ. ಕೆಲವು ಊರುಗಳಲ್ಲಿ ಆಟ, ಗೊಂದಲಿಗರ ಹಾಡು, ಚೌಡಕಿ ಹಾಡುಗಳು, ಜೋಗತಿ ಕುಣಿತ, ತೊಗಲು ಗೊಂಬೆಯಾಟ, ಕುದುರೆ ಕುಣಿತ, ನವಿಲು ಕುಣಿತಗಳನ್ನು ಹಮ್ಮಿಕೊಳ್ಳುವುದುಂಟು. ಕೇರಿಯಲ್ಲಿ ಇಡೀ ರಾತ್ರಿಯವರೆಗೆ ಮನರಂಜನೆಗಳು ನಡೆಯುವುವು.

ಜಾತ್ರೆ, ಉತ್ಸವಗಳಿಗೆ ಜನರ ಧಾರ್ಮಿಕ ಭಾವನೆಯೇ ಮೂಲ ಕಾರಣವಾಗಿದ್ದರೂ ಸಮಷ್ಟಿ ಹಿತದ ಸಾಮಾಜಿಕ ಕಾಳಜಿಯಿಂದ ಕೂಡಿದ ಸಾಂಸ್ಕೃತಿಕ ಬದುಕಿನ ಹಿನ್ನೆಲೆಯೂ ಇದೆ. ಜನರಿಗೆ ಬೇಕು ಬೇಕಾದ ವಸ್ತುಗಳ ಮಾರಾಟದ ಮಳಿಗೆಗಳು ಜಾತ್ರೆಯಲ್ಲಿ ಸಿದ್ಧವಾಗಿರುತ್ತವೆ. ಅನೇಕರು ಬಹು ದೂರದಿಂದ ಬಂದಿರುತ್ತಾರೆ. ಒಂದೊಂದು ಜಾತ್ರೆಯಲ್ಲಿ ಒಂದೊಂದು ತರಹದ ಸಾಮಾನುಗಳು ಇರುವವು. ಜನರು ಅಲ್ಲಿ ತಮಗೆ ಬೇಕಾದ ವಸ್ತುಗಳನ್ನು ಖರೀದಿಸುವರು. ಜಾತ್ರೆಯು ರೀತಿಯ ಆರ್ಥಿಕ ಚಟುವಟಿಕೆಯ ಕೇಂದ್ರವಾಗಿಯೂ ಆ ತತ್ಕಾಲಿನ ವ್ಯವಸ್ಥೆಯಾಗಿ ರೂಪು ಪಡೆದುಕೊಳ್ಳುವುದು.

ಹಿಂದಿನ ಕಾಲದಲ್ಲಿ ಈ ಜಾತ್ರೆಗಳಿಗೆ ಹೆಚ್ಚಿನ ಪ್ರಯೋಜನವಿತ್ತು. ಕಾಯಕ ಕರ್ಮಿಗಳಾದ ಬಡವರಿಗೆ ನಿತ್ಯ ಸಾಮಾನುಗಳನ್ನು ಖರೀದಿಸಲು ಸಾಧ್ಯವಾಗುವುದಿಲ್ಲ. ಅವರು ತಾವು ದುಡಿದಿದ್ದರಲ್ಲಿ ಕೂಡಿಟ್ಟು ಉಳಿತಾಯ ಮಾಡಿ ಜಾತ್ರೆಗಳ ಸಂದರ್ಭದಲ್ಲಿ ತಮಗೆ ಬೇಕಾದ ವಸ್ತುಗಳನ್ನು ಖರೀದಿಸುವರು. ಆದರೆ ಈಗ ಪರಸ್ಥಿತಿ ಬದಲಾಗಿದೆ. ತಮಗೆ ಬೇಕಾದ ಸಾಮಾನುಗಳು ನಿತ್ಯ ಮಾರುಕಟ್ಟೆಯಲ್ಲಿಯೇ ದೊರೆಯುವುವು. ಹೀಗಿದ್ದಾಗಲೂ ಜಾತ್ರೆಗೆ ಹೋಗಿ ಬರಿಗೈಯಲ್ಲಿ ಬರಬಾರದು, ಏನಾದರೊಂದು ಸಾಮಾನು ಖರೀದಿಸಬೇಕೆಂಬ ನಂಬಿಕೆ ಮಾತ್ರ ಮಾಸಿಲ್ಲವೆನ್ನಬೇಕು. ಜಾತ್ರೆ, ಉತ್ಸವಗಳು ಹೀಗೆ ಸಾಮಾಜಿಕ, ಧಾರ್ಮಿಕ, ಆರ್ಥಿಕ, ಸಾಂಸ್ಕೃತಿಕ ಮಹತ್ವ ಪಡೆದಿವೆ ಎನ್ನಬೇಕು.

5.3 ಹಬ್ಬ ಹರಿದಿನಗಳು

ಈ ಸಫಾಯಿ ಕರ್ಮಚಾರಿ ಸಮುದಾಯದವರಿಗೆ ದಸರೆ, ದೀಪಾವಳಿ, ಯುಗಾದಿ ಹಬ್ಬಗಳು ತುಂಬ ಪ್ರಮುಖ ಹಬ್ಬಗಳಾಗಿವೆ. ಈ ಹಬ್ಬಗಳನ್ನು ಅವರು ಅತ್ಯಂತ ಸಡಗರ ಸಂಭ್ರಮಗಳಿಂದ ಆಚರಿಸುವರು.

ಅ) ದಸರೆ ಹಬ್ಬ

ದಸರೆ ಹಬ್ಬವನ್ನು ಇತರ ಸಮುದಾಯದವರಂತೆ ಇವರೂ ಆಚರಿಸುವರು. ಮಹಾನವಮಿ ಅಮವಾಸೆಗೆ ಮೊದಲು ಮನೆಗೆ ಸುಣ್ಣ ಬಣ್ಣ ಮಾಡಿ, ಬಟ್ಟೆ ಬರೆ ಒಗೆಯುವರು (ಮಡಿ ಮಾಡುವರು). ಇವರಲ್ಲಿಯೂ ಸವರ್ಣಿಯರಂತೆ ದೀಪ (ಘಟ್ಟ) ಹಾಕುವ ನಡೆ ಇದೆ. ದೀಪ ಹಾಕುವ ಮೊದಲು ಮಹಾರಾಷ್ಟ್ರದ ತುಳಜಾಪುರಕ್ಕೆ ಹೋಗಿ ದೇವಿಗೆ ನೈವೇದ್ಯ ಮಾಡಿ ಬಂದು ಒಂಬತ್ತು ಇಲ್ಲವೆ ಐದು ದಿನಗಳ ದೀಪ ಹಾಕುವರು. ಹುತ್ತಿನ ಮಣ್ಣು ತಂದು, ಆಳವಿ, ಸಾಸಿವೆ, ಗೋದಿ, ನವಣಿ, ಅಕ್ಕಿ, ಮೊದಲಾದ ಐದು ತರಹದ ಧಾನ್ಯಗಳನ್ನು ಹಾಕಿ ಸಸಿ ಬರಿಸುವರು. ದೀಪ ಹಾಕಿದ ಸಮಯದಲ್ಲಿ ಮಾಂಸ, ಮದ್ಯವನ್ನು ಸೇವಿಸಬಾರದೆಂಬ ನಿಯಮ ಅನುಸರಿಸುತ್ತಾರೆ. ಹೆಂಗಸರು ತಮ್ಮ ಕೆಲಸಕ್ಕೆ ಹೋಗದೆ ಮನೆಯಲ್ಲಿಯೇ ಉಳಿಯುವರು. ಐದು ಮನೆಗಳಿಗೆ ತಿರುಗಾಡಿ, ಜೋಗ ಬೇಡಿ ತಂದುದ್ದನ್ನೇ ಊಟ ಮಾಡುವರು. ಹತ್ತನೆಯ ದಿವಸ ಬನ್ನಿ ಮುಡಿಯುವರು. ತಮ್ಮ ಬಂಧು ಬಳಗದವರಲ್ಲಿಗೆ ಹೋಗಿ ಬನ್ನಿ ನೀಡಿ ಆಶೀರ್ವಾದ ಪಡೆಯುತ್ತಾರೆ. ಹಬ್ಬದ ಮರುದಿವಸ ಘಟ್ಟದ ಸಸಿಗಳನ್ನು ಹಳ್ಳ, ಹೊಳೆ ಅಥವಾ ಕೆರೆಗಳಲ್ಲಿ ಬಿಟ್ಟು ಬಂದರೆ ಹಬ್ಬವು ಮುಗಿದಂತೆ.

ಆ) ದೀಪಾವಳಿ

ದಸರೆಯಂತೆ ದೀಪಾವಳಿ ಹಬ್ಬವೂ ಶ್ರೇಷ್ಠವಾಗಿದೆ. ಈ ಹಬ್ಬವು ಅವರ ಪಿತೃಗಳಿಗೆ ಎಡೆಯನ್ನು ಅರ್ಪಿಸುವ ಹಬ್ಬವಾಗಿದೆ. ದೀಪಾವಳಿ ಹಬ್ಬಕ್ಕೆ ಹೊರಗೆ ಹೋಗಿರುವ ಎಲ್ಲಾ ಸಫಾಯಿಕರ್ಮಿಗಳು ಬಂದು ಸೇರುತ್ತಾರೆ. ಹಬ್ಬದಂದು ಹೊಸ ಬಟ್ಟೆ ಉಟ್ಟು ಸಿಹಿ ಅಡುಗೆ ಮಾಡುವರು. ಅಲ್ಲದೆ, ಅಕ್ಕತಂಗಿಯರು ತಮ್ಮ ಸಹೋದರುಗಳಿಗೆ ಆರತಿ ಮಾಡಿ ಕಾಣಿಕೆಗಳನ್ನು ಪಡೆಯುವರು.

ಹಬ್ಬದ ದಿನ ಹಿರಿಯರಿಗೆ ಬಟ್ಟೆಯನ್ನು ಏರಿಸುವುದರಿಂದ ಇದನ್ನು ಹಿರಿಯರ ಹಬ್ಬವನ್ನಾಗಿಯೂ ಆಚರಿಸುವರು. ಸತ್ತ ವ್ಯಕ್ತಿಗಳು ಉಪಯೋಗಿಸುತ್ತಿದ್ದ ವಸ್ತುಗಳನ್ನು ಎಡೆಯ ಇಡುವರು. ಎಡೆ ಇಡುವಾಗಿ ಎರಡು ಮಣ್ಣಿನ ಮಡಿಕೆಗಳಲ್ಲಿ ನೀರು ತುಂಬಿಟ್ಟು ಅವುಗಳಿಗೆ ಒಡವೆ, ವಸ್ತ್ರಗಳಿಂದ ಅಲಂಕರಿಸಿ ಅವುಗಳ ಕಂಠಕ್ಕೆ ವೀಳ್ಯೆದೆಲೆಯನ್ನು ಸಿಕ್ಕಿಸಿ ಅದರ ತಳಭಾಗಕ್ಕೆ ಅಕ್ಕಿ

ಸುರಿದಿಡುತ್ತಾರೆ. ತುಂಬಿದ ತಂಬಿಗೆಯ ಮುಂದೆ ಐದು ದೊಣ್ಣೆಗಳನ್ನು ಇಟ್ಟು ಅದರಲ್ಲಿ ಮಾಡಿದ ಅಡುಗೆಯನ್ನು ಹಾಕಿ ಹಿರಿಯರಿಗೆ ಸಮರ್ಪಿಸುವರು. ಆ ಸಮಯದಲ್ಲಿ "ಮನೆಯ ಯಜಮಾನನು ಸತ್ತ ಹಿರಿಯರಿಗೆ ಬೇಡಿಕೊಂಡು ನೈವೇದ್ಯವನ್ನು ಸ್ವೀಕರಿಸಿ ಸಂತೃಪ್ತರಾಗಬೇಕು. ನನಗೆ ಆಶೀರ್ವಾದ ನೀಡಬೇಕೆಂದು ಬೇಡಿಕೊಳ್ಳುತ್ತಾನೆ."[35] ಇದೇ ರೀತಿ ಮನೆಯ ಯಜಮಾನಿಯೂ ಸಹ ಪೂಜೆ ಸಲ್ಲಿಸಿದ ಮೇಲೆ ಮನೆಯವರೆಲ್ಲರೂ ಸೇರಿ ಊಟ ಮಾಡಿ ಹಬ್ಬವನ್ನು ಆಚರಿಸುತ್ತಾರೆ. ಸಫಾಯಿ ಕರ್ಮಚಾರಿಗಳು ತಾವು ಕೆಲಸ ಮಾಡುವ ಮನೆ, ಆಫೀಸುಗಳಿಗೆ ತೆರಳಿ ಹಬ್ಬದ ಕೊಡುಗೆಯನ್ನು ಪಡೆದುಕೊಳ್ಳುವರು.

ಇ) ಉಗಾದಿ

ಉಗಾದಿ ಹಬ್ಬವೂ ಇವರ ಜೀವನದಲ್ಲಿ ವಿಶಿಷ್ಟತೆಯನ್ನು ಹೊಂದಿದೆ. ಇವರು ವಲಸೆ ಸಮುದಾಯವಾಗಿದ್ದರಿಂದ ತಾವು ಊರಿನಲ್ಲಿ ಇರುತ್ತಾರೆಯೋ ಅಲ್ಲಿ ಪ್ರತಿ ವರ್ಷ ಉಗಾದಿಯನ್ನು ಆಚರಿಸುತ್ತಾರೆ. ಸವರ್ಣೀಯರ ಮನೆಯ ಮಲ ತೊಳೆಯುವ ಕೆಲಸಕ್ಕೆ ಅಂದು ಪ್ರತಿಫಲ ಪಡೆಯುವುದು ಮತ್ತು ಹೊಸದಾಗಿ ಒಪ್ಪಂದದಂತೆ ನಿರ್ಧರಿಸಿಕೊಳ್ಳುತ್ತಾರೆ. ಉಗಾದಿ ಸಫಾಯಿ ಕರ್ಮಚಾರಿಗಳ ಜೀವನದ ಭದ್ರತೆಗೆ ಹಾಗೂ ನೆಮ್ಮದಿಯನ್ನು ನೀಡುವ ವಂಶಪಾರಂಪರ್ಯವಾದ ಧಾರ್ಮಿಕ ಮಹತ್ವ ಪಡೆದ ಹಬ್ಬ ಇದಾಗಿದೆ.

5.4 ನಂಬಿಕೆ-ವಿಧಿ ನಿಷೇಧಗಳು

ಯಾವುದೇ ಒಂದು ಸಮುದಾಯದ ಅಧ್ಯಯನದಲ್ಲಿ ಅದರಲ್ಲಿ ಪ್ರಚಲಿತವಿರುವ ಜೀವನ ಮೌಲ್ಯಗಳು, ಧಾರ್ಮಿಕ, ಸಾಮಾಜಿಕ ಮೌಲ್ಯಗಳನ್ನು ಅಲ್ಲಿನ ನಂಬಿಕೆ, ವಿಧಿ ನಿಷೇದಗಳಲ್ಲಿ ಕಾಣುವೆವು. ಹಾಗೆಯೇ ಜನಾಂಗಗಳಲ್ಲಿ ನಂಬಿಕೆ ಮತ್ತು ವಿಧಿ ನಿಷೇದಗಳಿಗೆ ಮಹತ್ವವಾದ ಸ್ಥಾನವಿದೆ. ನಂಬಿಕೆ ಎನ್ನುವ ಅಡಿಗಲ್ಲಿನ ಮೇಲೆಯೇ ಮಾನವನ ಜೀವನ ಸೌಧವು ನಿಂತಿರುವುದು. "ಸಂಸ್ಕೃತಿಯೆಂಬುದು ಅದರ ಸದಸ್ಯರ ವರ್ತನೆಗಳ ಮೊತ್ತವೆಂದು ಪರಿಗಣಿಸಿದರೆ ಅಂತಹ

ನಡವಳಿಕೆಗಳ ಪರಿಯನ್ನು ನಂಬಿಕೆಗಳು ತೆರೆಯುತ್ತವೆ"[36] ಎಂಬ ಅಭಿಪ್ರಾಯವು ಮಾನವನ ಜೀವನ ರೀತಿಯಲ್ಲಿ ನಂಬಿಕೆ ಪ್ರಬಲವಾದ ಹಿಡಿತವನ್ನು ಹೊಂದಿರುವುದನ್ನು ಕಾಣುತ್ತೇವೆ.

ಸಮುದಾಯದ ಅಧ್ಯಯನದಲ್ಲಿ ಸಂಗ್ರಹಿಸಿದ ನಂಬಿಕೆ ಮತ್ತು ವಿಧಿ ನಿಷೇದಗಳನ್ನು ಹೀಗೆ ನೀಡಬಹುದಾಗಿದೆ.

1) ನಂಬಿಕೆಗಳು

1. ಮುಂಜಾನೆ. ಬಂಗಿಗಳ ಮುಖದರ್ಶನ ಮಾಡಬಾರದು ಎಂಬ ನಂಬಿಕೆ ಇದೆ. ನವ ನಾಗರಿಕತೆ ಸೋಂಕು ತಾಗಿದ್ದರೂ ಜನರಲ್ಲಿ ಈ ಸಮುದಾಯದ ಕುರಿತಾದ ಈ ನಂಬಿಕೆ ಇನ್ನೂ ಜೀವಂತವಾಗಿದೆ.
2. ಬಂಗ್ಯಾರ ಜೀವನ ಸಿಂದಿ ಸೆರ‍್ಯಾಗ – ಬಂಗಿಗಳು ತಾವು ದುಡಿದಿದ್ದನ್ನು ಸೆರೆ ಕುಡಿಯುವುದಕ್ಕೆ ಹೆಚ್ಚಿನ ಖರ್ಚು ಮಾಡುವರು.
3. ಬಂಗ್ಯಾರ ಜೀವನ ಪಡಕ್ಯಾಗ – ಅಂದರೆ ಬಡತನವನ್ನು ಸೂಚಿಸುವುದು.
4. ಮಗು ಹುಟ್ಟಿದ ಐದು ದಿನಕ್ಕೆ ಶಟಗಿ ಬಂದು ಹಣೆಬರಹ ಬರಿಯುತ್ತಾಳೆ ಎಂಬ ನಂಬಿಕೆ ಈ ಜನಾಂಗದಲ್ಲಿದೆ.
5. ಮಕ್ಕಳ ಜಡೆಗೂದಲನ್ನು ಹೊಳೆಗೆ ಬಿಡಬೇಕು.
6. ಮುಟ್ಟಾದವರು ಕೂಸನ್ನು ಮುಟ್ಟಬಾರದು. ಮುಟ್ಟಿದರೆ ಆ ಕೂಸಿನ ಮೈ ಒಣಗುತ್ತದೆ.
7. ಒಳ್ಳೆಯ ಕೆಲಸಕ್ಕೆ ಹೋಗುವಾಗ ಎಲ್ಲಿಗೆ ಎಂದು ಕೇಳಬಾರದು ಹಾಗೆ ಕೇಳಿದರೆ ಹೋದ ಕೆಲಸ ಆಗುವುದಿಲ್ಲ.
8. ಕನ್ಯಾ ನೋಡಲಿಕ್ಕೆ ಹೊರಟಾಗ ಕಂಬಾರ ಕಾಗಿ (ರತ್ನಪಕ್ಷಿ) ಎಡಕಿನಿಂದ ಬಲಕ ಹಾರಿ ಹೋದರೆ ಕನ್ಯಾ ನಿಶ್ಚಯ ಆಗುತ್ತದೆ ಎಂಬ ನಂಬಿಕೆ ಇದೆ.
9. ಹೊಸದಾಗಿ ಮದುವೆಯಾಗಿ ಬಂದ ಹೆಣ್ಣುಮಗಳು ಮೊದಲು ಹಾಲು ಉಕ್ಕಿಸಬೇಕು ಎಂಬ ನಂಬಿಕೆ ಇವರಲ್ಲಿ ಸಾಂಪ್ರದಾಯಿಕವಾಗಿದೆ.

10. ಸತ್ತವರ ಹೆಣದ ಹಿಂದೆ ನವಣೆ ಚೆಲ್ಲುತ್ತ ನಡೆದರೆ ಅವರು ದೆವ್ವವಾಗಿ ಮನೆಗೆ ಬರಲಾರರು.

2) ವಿಧಿ ನಿಷೇಧಗಳು

1. ಹಾಸಿಗೆ ಕೆಳಗೆ ಆಕಳು, ಕುದುರೆ ಕಟ್ಟಬಾರದು ಹಾಗೂ ಅವುಗಳಿಗೆ ಕಟ್ಟಿದ ಹಗ್ಗವನ್ನು ದಾಟಬಾರದು.
2. ಹೆಣ್ಣುಮಕ್ಕಳಿಗೆ ಬಲಕ್ಕೆ, ಗಂಡು ಮಕ್ಕಳಿಗೆ ಎಡಕ್ಕೆ ಮಚ್ಚೆ ಇರಬಾರದು.
3. ಹಲ್ಲುಗಳ ನಡುವೆ ಸಂದಿ ಇದ್ದರೆ ಒಳ್ಳೆಯದಲ್ಲ.
4. ಗರ್ಭಿಣಿ ಹೆಣ್ಣುಮಗಳು ಮದುವೆ ಹಂದರದಲ್ಲಿ ಬರಬಾರದು. ಹಾಗೊಂದು ವೇಳೆ ಬರುವಂತಿದ್ದರೆ ಕಂಕಣ ಕಟ್ಟಿಕೊಂಡು ಬರಬೇಕು.
5. ಹೆಣ್ಣುಮಗಳು ಹೊಸ್ತಿಲ ಮೇಲೆ ಸೀನುವುದು, ನಿಂತಿರುವುದು, ಕೂಡುವುದು ಮಾಡಬಾರದು.
6. ಹೆಣ್ಣಿನ ಕಾಲಿನ ಕಿರುಬೆರಳು ನೆಲಕ್ಕೆ ಹತ್ತಬಾರದು.
7. ದೀಪ ಹಚ್ಚಿದ ಮೇಲೆ ಕಸ ಹೊಡೆಯಬಾರದು.
8. ಗಂಡ ಹೆಂಡತಿಯ ಎಂಜಲನ್ನು ತಿನ್ನಬಾರದು. ಆದರೆ ಹೆಂಡತಿ ಮಾತ್ರ ಗಂಡನ ಎಂಜಲನ್ನು ತಿನ್ನಬಹುದು.
9. ಬೆನ್ನ ಹಿಂದೆ ಬೆಂಕಿ ಒಯ್ಯಬಾರದು.
10. ಖಾಲಿ ತೊಟ್ಟಿಲನ್ನು ತೂಗಬಾರದು.

ಇತ್ಯಾದಿ ನಂಬಿಕೆ ಹಾಗೂ ವಿಧಿ ನಿಷೇಧಗಳು ಈ ಜನಾಂಗದಲ್ಲಿ ಆಚರಣೆಯಲ್ಲಿವೆ.

5.5 ಭಾಷೆ

ಸಫಾಯಿ ಕರ್ಮಚಾರಿಗಳು ಸಾಮಾನ್ಯವಾಗಿ ಕನ್ನಡ ಭಾಷೆಯನ್ನು ಮಾತನಾಡುತ್ತರಾದರೂ, ಗುಲಬರ್ಗಾ ಜಿಲ್ಲೆಯಾದ್ಯಂತ ಕ್ಷೇತ್ರಕಾರ್ಯ ಕೈಕೊಂಡಾಗ ಸಫಾಯಿ ಕರ್ಮಚಾರಿಗಳು ಬೇರೆ ಬೇರೆ ಊರುಗಳಲ್ಲಿ ಬೇರೆ ಬೇರೆ ಭಾಷೆಗಳನ್ನು ಆಡುತ್ತಿರುವುದು ಕಂಡುಬಂದಿತು. ಇದಕ್ಕೆ ಮುಖ್ಯ ಕಾರಣ ಅವರುಗಳು ಆಯಾ ಭಾಷಿಕ ವಲಯದಲ್ಲಿ ತಲತಲಾಂತರಗಳಿಂದ ನೆಲೆಸಿರುವುದು ತಿಳಿಯುತ್ತದೆ.

ಭಾಷೆ ಒಂದು ಸಂವಹನ ಮಾಧ್ಯಮ. ಅದು ಮನುಷ್ಯನ ನಿತ್ಯ ಜೀವನದ ವ್ಯವಹಾರಗಳಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಈ ಭಾಷೆಯೆಂಬುದು ಇಲ್ಲದೇ ಹೋಗಿದ್ದ ಪಕ್ಷದಲ್ಲಿ ನಾಗರಿಕತೆ ಮತ್ತು ಸಂಸ್ಕೃತಿಗಳು ಇರುತ್ತಿರಲಿಲ್ಲ. ಮಾನವನು ಉಳಿದ ಪ್ರಾಣಿ ಪಕ್ಷಗಳಂತೆ ಜೀವನ ಸಾಗಿಸುತ್ತ ಇದ್ದು ಬಿಡುತ್ತಿದ್ದನೆಂದು ಹೇಳಬೇಕಾಗುತ್ತದೆ. ಹೀಗಾಗಿ ಭಾಷೆ ಮಾನವನ ಅಭಿವ್ಯಕ್ತಿಗೆ ಕೇವಲ ಸಾಧನ ಸಲಕರಣೆಯಾಗಿ ಮಾತ್ರವಲ್ಲ. ಅದು ಜೀವನ ವಿಧಾನ ಮತ್ತು ಸಂಸ್ಕೃತಿಯ ವಾಹಕವೂ ಆಗಿದೆ ಎಂದೇ ಹೇಳಬೇಕಾಗುತ್ತದೆ.

ಆಯಾ ಭಾಷೆಯನ್ನಾಡುವ ಸಫಾಯಿ ಕರ್ಮಚಾರಿಗಳನ್ನು ಹೀಗೆ ಗುರುತಿಸಬಹುದು. ಕನ್ನಡ ಸಫಾಯಿಗಳು, ತೆಲುಗು ಸಫಾಯಿಗಳು, ಮರಾಠಿ ಸಫಾಯಿಗಳು. ಇನ್ನು ಕೆಲವರು ಉರ್ದು ಮಿಶ್ರಿತ ಕನ್ನಡ ಮರಾಠಿ ಮಿಶ್ರಿತ ಕನ್ನಡ ಭಾಷೆಯನ್ನು ಆಡುತ್ತಾರೆ. ಆಳಂದ, ಅಫಜಲಪುರಗಳಲ್ಲಿ ಮರಾಠಿ ಮಿಶ್ರಿತ ಭಾಷೆಯನ್ನಾಡುವರು. ಚಿಂಚೋಳಿ, ಸೇಡಂ, ಚಿತ್ತಾಪುರ, ವಾಡಿ, ಶಹಾಬಾದಗಳಲ್ಲಿ ತೆಲುಗು ಕನ್ನಡ ಮಿಶ್ರಿತ ಭಾಷೆಯನ್ನು ಆಡುವರು. ಗುಲಬರ್ಗಾ ನಗರ, ತಾಲೂಕು ಇತರ ಪ್ರದೇಶಗಳಲ್ಲಿ ಕನ್ನಡ ಉರ್ದು, ಮರಾಠಿ ಮಿಶ್ರಿತ ಭಾಷೆಯನ್ನಾಡುವವರು ಸಿಗುತ್ತಾರೆ. ಗುಲಬರ್ಗಾ ನಗರದಲ್ಲಿ ಮರಾಠಿ, ಉರ್ದು, ಹಿಂದಿ, ತೆಲುಗು ಮಿಶ್ರಿತ ಕನ್ನಡ ಭಾಷೆಯನ್ನಾಡುವವರು ಒಂದಡೆ ಸಿಗುವುದು ಅವರು ಯಾವುದೋ ಕಾಲದಲ್ಲಿ ಬೇರೆ ಬೇರೆಡೆಗಳಿಂದ ವಲಸೆ ಬಂದಿರಬಹುದಾಗಿದೆ.

ಸಫಾಯಿ ಕರ್ಮಚಾರಿಗಳು ವೃತ್ತಿಗನುಗುಣವಾಗಿ ಕಾಲಾಂತರದಲ್ಲಿ ಅನೇಕ ಪರದೇಶಗಳಲ್ಲಿ ನೆಲೆಸಿದ್ದರಿಂದ ಆಯಾ ಪ್ರದೇಶದ ಭಾಷೆಗಳನ್ನು ಬಳಸುವುದು ಕಂಡುಬರುತ್ತದೆ. ಇವರಲ್ಲಿ ಕಲಬುರ್ಗಿ ಜಿಲ್ಲೆಯ ಆಳಂದ, ಅಫಜಲ್‌ಪುರ ಹಾಗೂ ಗುಲಬರ್ಗಾ ನಗರಗಳಲ್ಲಿ ನೆಲೆಸಿರುವರು. ಉರ್ದು, ಮರಾಠಿ ಹಾಗೂ ಕನ್ನಡ ಭಾಷೆಯನ್ನು ಮಾತನಾಡುವರು. ಜೇವರಗಿ, ಶಹಾಬಾದ,

ವಾಡಿ, ಚಿತ್ತಾಪುರ ತಾಲೂಕು ಹೋಬಳಿಗಳಲ್ಲಿ ಉರ್ದು, ಹಿಂದಿ ಕನ್ನಡ ಮಿಶ್ರಿತ ಭಾಷೆಯನ್ನಾಡುವರು. ಚಿಂಚೋಳಿ ತಾಲೂಕಿನಲ್ಲಿ ಇವೆಲ್ಲವುಗಳ ಜೊತೆಗೆ ತೆಲುಗು ಭಾಷೆ ಆಡುವುದನ್ನು ನೋಡುತ್ತೇವೆ. ಆದರೂ ಇವರು ಉರ್ದು ಮತ್ತು ಮರಾಠಿ ಆಡು ನುಡಿ ಹೆಚ್ಚಾಗಿ ಬಳಸುವರು. ಇದನ್ನೆಲ್ಲ ನೋಡಿದರೆ ಸುಮಾರು 2-3 ಶತಮಾನಗಳ ಹಿಂದೆ ಮಹಾರಾಷ್ಟ್ರದಿಂದ ಗುಲಬರ್ಗಾ ಪ್ರದೇಶಕ್ಕೆ ವಲಸೆ ಬಂದಿರಬೇಕು ಎನಿಸುತ್ತದೆ. ಸಫಾಯಿ ಕರ್ಮಚಾರಿಗಳಲ್ಲಿಯು ಮೌಖಿಕ (ಜನಪದ) ಹಾಡು, ಕಥೆ, ಗಾದೆ, ಒಗಟುಗಳಂತಹ ಸಾಹಿತ್ಯ ಪ್ರಚಲಿತದಲ್ಲಿದೆ. ಆದರೆ ಈವರೆಗೂ ಅದನ್ನು ಸಂಗ್ರಹಿಸುವ ಪ್ರಕಟಿಸುವ ಕೆಲಸ ಮಾತ್ರ ಆಗಿಲ್ಲವೆನ್ನಬಹುದು.

ಅ) ಬೈಗುಳಗಳು

ಸಫಾಯಿ ಕರ್ಮಚಾರಿಗಳು ತಮ್ಮ ತಮ್ಮಲ್ಲಿ ಜಗಳವಾದಾಗ ಬೈದಾಡಿಕೊಳ್ಳುವುದನ್ನು ಗಮನಿಸುವಂತಿದೆ. ಅವರು ಹೆಚ್ಚಾಗಿ ತಮ್ಮ ಬೈಗಳುಗಳಲ್ಲು ಉರ್ದು, ಹಿಂದಿ, ಮರಾಠಿ ಮಿಶ್ರಿತ ಪದಗಳನ್ನು ಬಳಸುವರು. ಉದಾ: ಮಾದರ್‌ಚೋದ್, ಸುವರ್ ಕಾ ಬಚ್ಚೆ, ರಂಡಿಮಗನೆ, ಬೋಸಡಿಕೆ, ಕಜ್ಜಾಳಿ, ಕೈಂಯಿ, ಆಖರಿ ಬಚ್ಚೆ, ಇಂಗ್ಲಿಷ ಭಾಷೆ ಪ್ರಭಾವದಿಂದ ಥರ್ಡ್‌ಕ್ಲಾಸ್, ರಾಸ್ಕಲ್ ಎಂದೆಲ್ಲ ಬೈದಾಡುವರು.

ಅಡಿಟಿಪ್ಪಣಿಗಳು

1. ಗುರುಮೂರ್ತಿ ಕೆ.ಜಿ., ಜನಪದ ಸಮಾಜ ಮತ್ತು ಸಂಸ್ಕೃತಿ ಪು. 6, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ 1979.
2. ಅದೇ- ಪು. 5.
3. ಅದೇ- ಪು. 6.
4. ಬರಗೂರು ರಾಮಚಂದ್ರಪ್ಪ, ಪ್ರಸ್ತಾವನೆ, ಉಪಸಂಸ್ಕೃತಿ ಅಧ್ಯಯನ ಪು. 16, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು 1993.
5. ಅದೇ- ಪು. 16, 1993.
6. ಅದೇ- ಪು. 16, 1993.

7. ಅದೇ– ಪು. 39, 1993.

8. ಡಾ. ವಿರುಪಾಕ್ಷಿ ಪೂಜಾರಹಳ್ಳಿ, ದಲಿತರು ಮತ್ತು ಚರಿತ್ರೆ ಪ್ರಸ್ತಾವನೆ–1, ಕನ್ನಡ ವಿಶ್ವವಿದ್ಯಾಲಯ, ಹಂಪಿ 2005.

9. ಸಿಂಪಿ ಲಿಂಗಣ್ಣ, ಗರತಿಯ ಹಾಡು, ಪು. 29, ಸಮಾಜ ಪುಸ್ತಕಾಲಯ, ಧಾರವಾಡ 1991.

10. ಕ್ಷೇತ್ರಕಾರ್ಯ ದರ್ಶನದಿಂದ ದಿನಾಂಕ 1.04.2010, ಆಳಂದ ತಾಲೂಕಿನ ಆಳಂದ ಪಟ್ಟಣ.

11. ಡಾ. ಅರ್ಜುನ ಗೊಳಸಂಗಿ, ದಲಿತರ ಬದುಕು ಮತ್ತು ಸಮಾಜ ಜಾನಪದೀಯ ಅಧ್ಯಯನ, ಪು. 51–52, ವಿಮೋಚನಾ ಪ್ರಕಾಶನ, ಅಥಣಿ, ಜಿ. ಬೆಳಗಾವಿ 2000.

12. ಅದೇ – ಪು. 65.

13. ಕ್ಷೇತ್ರಕಾರ್ಯದಿಂದ ದಿನಾಂಕ 12.04.2010 ಗುಲಬರ್ಗಾ ಜಿಲ್ಲೆಯ ಸೇಡಂ ಪಟ್ಟಣದಲ್ಲಿ ನಡೆಸಿದ ಸಂದರ್ಶನ.

14. –ಅದೇ–

15. –ಅದೇ–

16. ಕ್ಷೇತ್ರಕಾರ್ಯದಿಂದ 25.05.2010 ಗುಲಬರ್ಗಾ ನಗರದಲ್ಲಿ ನಡೆಸಿದ ಸಂದರ್ಶನ.

17. ಗುರುಮೂರ್ತಿ, ಕೆ.ಜಿ.: ಜಾನಪದ ಸಮಾಜ ಮತ್ತು ಸಂಸ್ಕೃತಿ ಪು. 46, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ 1979.

18. ಈ ಪದ್ಧತಿಯು ಗುಲಬರ್ಗಾ ಜಿಲ್ಲೆಯ ಎಲ್ಲ ಕಡೆಗಳಲ್ಲಿ ಕಂಡುಬರುತ್ತದೆ.

19. ಗೊಂದಲಿಗರು ಇಡೀ ರಾತ್ರಿ ಗೊಂದಲ ಹಾಕಿ, ಅಂಬಾಭವಾನಿಯ ಕಥೆ, ಹಾಡು ಹೇಳುವರು.

20. ಕ್ಷೇತ್ರಕಾರ್ಯದಿಂದ 08.06.2010 ಗುಲಬರ್ಗಾ ನಗರದಲ್ಲಿ ನಡೆಸಿದ ಸಂದರ್ಶನದಿಂದ ಪಡೆದ ಮಾಹಿತಿ.

21. ಫಾರಿಕತ್–ಗಂಡನು ಹೆಂಡತಿಗೆ ವಿಚ್ಛೇದನೆ ಕೊಡುವುದು.

22. ಕ್ಷೇತ್ರಕಾರ್ಯದಿಂದ ದಿನಾಂಕ 07.08.2010ರಂದು ಗುಲಬರ್ಗಾ ನಗರದ ಸಫಾಯಿ ಕರ್ಮಚಾರಿ ಸಮುದಾಯದವನ್ನು ಸಂದರ್ಶನ ಮಾಡಿ ಪಡೆದ ಮಾಹಿತಿ.

23. ಮಾದಲಿ= ಗೋದಿ ರೊಟ್ಟಿ ಸುಟ್ಟು ಸಣ್ಣದಾಗಿ ಕುಟ್ಟಿ ಬೆಲ್ಲ ಕಸಕಸಿ, ಸೋಪು, ಕೊಬ್ಬರಿ ಕಲಸಿ ಮಾಡಿದ ಅಡುಗೆ ಸಿಹಿ ಪದಾರ್ಥ.

24. ಮಾನಸ – ಕೊರವರ ಸಂಸ್ಕೃತಿ ಪು. 114, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು 1993.

25. ಅರ್ಜುನ ಗೊಳಸಂಗಿ ಬದುಕು ಮತ್ತು ಸಂಸ್ಕರತಿ: ಜಾನಪದೀಯ ಅಧ್ಯಯನ ಪು. 78, ವಿಮೋಚನಾ ಪ್ರಕಾಶನ, ಅಥಣಿ, ಜಿ: ಬೆಳಗಾವಿ 2000.

26. ಕ್ಷೇತ್ರಕಾರ್ಯದಿಂದ ದಿನಂಕ 08.08.2010 ಗುಲಬರ್ಗಾ ನಗರದಲ್ಲಿ ನಡೆಸಿದ ಸಂದರ್ಶನ.

27. ಕ್ಷೇತ್ರಕಾರ್ಯದಿಂದ ಪಡೆದ ಮಾಹಿತಿ ಸಂದರ್ಶನ ದಿನಂಕ 20.10.2010.

28. ಗುರುಮೂರ್ತಿ ಕೆ.ಜಿ., ಜಾನಪದ ಸಮಾಜ ಮತ್ತು ಸಂಸ್ಕೃತಿ ಪು. 89, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ 1979.

29. –ಅದೇ– ಪು. 93.

30. ಡಾ. ಅರ್ಜುನ ಗೊಳಸಂಗಿ ಬದುಕು ಮತ್ತು ಸಂಸ್ಕೃತಿ: ಜಾನಪದೀಯ ಅಧ್ಯಯನ ಪು. 89, ವಿಮೋಚನಾ ಪ್ರಕಾಶನ, ಅಥಣಿ, ಜಿ: ಬೆಳಗಾವಿ 2000.

31. ಅದೇ – ಪು. 274.

32. ಅದೇ – ಪು. 274.

33. ಕ್ಷೇತ್ರಕಾಯ ದಿನಾಂಕ 15.11.2010 ರಂದು ನಡೆಸಿದ ಸಂದರ್ಶನದ ಮಾಹಿತಿ.

34. ಮಾಂಸದಿಂದ ತಯಾರಿಸಿದ ಅಡುಗೆ.

35. ಅರ್ಜುನ ಗೊಳಸಂಗಿ ಬದುಕು ಮತ್ತು ಸಂಸ್ಕರತಿ: ಜಾನಪದೀಯ ಅಧ್ಯಯನ ಪು. 286, ವಿಮೋಚನಾ ಪ್ರಕಾಶನ, ಅಥಣಿ, ಜಿ: ಬೆಳಗಾವಿ 2000.

36. ಅದೇ– ಪು. 288.

37. ಕ್ಷೇತ್ರಕಾರ್ಯದಿಂದ ದಿನಾಂಕ 25.10.2010 ರಂದು ಗುಲಬರ್ಗಾ ನಗರ ಮೇಹತರ ಗಲ್ಲಿಯ ಮುಖಂಡರಿಂದ ನಡೆಸಿದ ಸಂದರ್ಶನ.

38. ಕೇಶವ ಪ್ರಸಾದ, ಕಪ್ಪೆ ಹೊಲೆಯರ ಸಂಸ್ಕೃತಿ ಪು. 20, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು 1993.

ಅಧ್ಯಾಯ–6

ಆಧುನಿಕತೆ ಜಾಗತೀಕರಣಗಳ ಪ್ರಭಾವ ಮತ್ತು ಸಫಾಯಿ ಕರ್ಮಚಾರಿಗಳ ಸ್ಥಿತ್ಯಂತರಗಳು

6.1 ಆಧುನಿಕತೆ : ಹೊಸ ಪರಿವೇಶಗಳು

6.2 ಜಾಗತೀಕರಣ–ಪರಿಕಲ್ಪನೆ

6.3 ಜಾಗತೀಕರಣ : ಸಮಾಜ–ಸಂಸ್ಕೃತಿ

6.5 ಜಾಗತೀಕರಣ ಸಫಾಯಿ ಕರ್ಮಚಾರಿಗಳ ಸ್ಥಿತ್ಯಂತರಗಳು

1 ಸಾಮಾಜಿಕ ಸ್ಥಿತ್ಯಂತರಗಳು
2 ಆರ್ಥಿಕ ಸ್ಥಿತ್ಯಂತರಗಳು
3 ಧಾರ್ಮಿಕ ಸ್ಥಿತ್ಯಂತರಗಳು
4 ಶೈಕ್ಷಣಿಕ ಸ್ಥಿತ್ಯಂತರಗಳು
5 ಸಾಂಸ್ಕೃತಿಕ ಸ್ಥಿತ್ಯಂತರಗಳು

ಅಧ್ಯಾಯ–6

ಆಧುನಿಕತೆ ಜಾಗತೀಕರಣಗಳ ಪ್ರಭಾವ ಮತ್ತು ಸಫಾಯಿ ಕರ್ಮಚಾರಿಗಳ ಸ್ಥಿತ್ಯಂತರಗಳು

6.1 ಆಧುನಿಕತೆ: ಹೊಸ ಪರಿವೇಶಗಳು

ಸಮಾಜ ಸ್ಥಾವರವಲ್ಲ ಅದು ಜಂಗಮ. ಸಮಾಜಕ್ಕೆ ಜಂಗಮ ಗುಣ ಇದ್ದುದರಿಂದಲೇ ಅದು ಸ್ಥಿರವಾಗಿರದೆ. ಕಾಲಕಾಲಕ್ಕೆ ಪರಿವರ್ತನೆಗೊಳ್ಳುತ್ತ ಬೆಳೆಯುತ್ತ ಬಂದಿರುವುದು. ಈ ಪರಿವರ್ತನೆಗೆ ಆಯಾ ಕಾಲದ ಸಾಮಾಜಿಕ, ಧಾರ್ಮಿಕ, ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಮೊದಲಾದ ಕಾರಣಗಳು ಹಾಗೂ ಇವುಗಳಿಗೆ ಮುಖಾಮುಖಿಯಾಗುತ್ತ, ಸ್ಪಂದಿಸುತ್ತ ಬಂದ ಜನತೆಯೂ ಕಾರಣರಾಗಿರುತ್ತಾರೆ.

ಪರಿವರ್ತನೆ ಬೆಳವಣಿಗೆಯ ಲಕ್ಷಣ. ಯಾವುದು ಪರಿವರ್ತನೆಯಾಗುತ್ತದೆಯೋ ಅದು ಬೆಳವಣಿಗೆಯಾಗುತ್ತಿದೆಯೆಂದೇ ಅರ್ಥ. ಸಮಾಜದಲ್ಲಾಗುವ ಪರಿವರ್ತನೆಯು ಅದು ಸಮಾಜ ಬೆಳವಣಿಗೆಯನ್ನು ಸೂಚಿಸುತ್ತದೆ. ಸಮಾಜ ಪರಿವರ್ತನೆಯಾದಂತೆ ಸಾಮಾಜಿಕ ವಿನ್ಯಾಸ, ಅದರ ಮೌಲ್ಯಗಳು ಬದಲಾಗುತ್ತವೆ. ಪರಿವರ್ತನೆ ಕೆಲವೊಮ್ಮೆ ಸಮಸ್ಯೆಗಳ ಹುಟ್ಟಿಗೂ ಕಾರಣವಾಗುವುದು. ಜಾತ್ಯತೀತತೆ, ಧರ್ಮ ನಿರಪೇಕ್ಷತೆ ಮುಂತಾದ ವಿಚಾರಗಳು ಇಂದಿಗೂ ಕೇವಲ ಸೈದ್ಧಾಂತಿಕ ಸಂಗತಿಗಳಾಗಿ ನಮ್ಮೊಂದಿಗಿರುವುದನ್ನು ಕಾಣುತ್ತೇವೆ. ಹಲವಾರು ಕಾರಣ ಮತ್ತು ಒತ್ತಡಗಳಿಂದ ಭಾರತೀಯ ಸಮಾಜದಲ್ಲಿ ಸ್ಥಿತ್ಯಂತರಗಳು ಕಂಡು ಬಂದರೂ ಕೂಡ ಜಾತೀಯತೆ, ಮತೀಯತೆ ಮಡಿ-ಮೈಲಿಗೆ, ಮೇಲು-ಕೀಳು ಮುಂತಾದ ವಿಚಾರಗಳು ಇಂದಿನ ಆಧುನಿಕ ಕಾಲದಲ್ಲಿಯೂ ತಮ್ಮ ಪ್ರಾಬಲ್ಯತೆಯನ್ನು ಉಳಿಸಿಕೊಂಡು ಬಂದಿರುವುದನ್ನು ಕಾಣುತ್ತೇವೆ.

ಸಾಮಾನ್ಯವಾಗಿ "ಆಧುನಿಕತೆಯನ್ನು ವಿಜ್ಞಾನದ, ಪ್ರಗತಿ, ಯಂತ್ರಗಳ ಅವಿಷ್ಕಾರ, ಬಳಕೆ, ಸಾಕ್ಷರತೆ, ನಗರೀಕರಣಗಳಿಂದ ನಮ್ಮ ಬಾಹ್ಯ ಚಟುಟಿಕೆಗಳಲ್ಲಿ ಆದ ಬದಲಾವಣೆಗಳಿಂದ ಗುರುತಿಸಲಾಗುತ್ತದೆ."[1] ಇದನ್ನು ಸಮಾಜ ವಿಜ್ಞಾನಿಗಳು ಭೌತ ಸಂಸ್ಸೃತಿಯ ಬದಲಾವಣೆಯೆಂದು ಕರೆಯುತ್ತಾರೆ. ಸಮಾಜವುಗತಿಶೀಲವಾತ್ತುದ್ದರಿಂದ ಪರಿವರ್ತನೆ ಸಹಜ ನಿಯಮ. ಆವರನ್ನು, ವಿವಿಧ ಸಮುದಾಯ, ಸಂಘ, ಸಂಸ್ಥೆಗಳನ್ನು ಹೊಂದಿರುವ ಮಾನವ ಸಮಾಜವಂತೂ ಪರಿವರ್ತನೆ ಹೊಂದಲೇಬೇಕು. ಅದೇ ರೀತಿಯಾಗಿ ಭಾರತೀಯ ಸಮಾಜ, ಸಂಸ್ಕೃತಿಯಲ್ಲಿಯೂ ಕೆಲವೊಂದು ಬದಲಾವಣೆಗಳನ್ನು ಕಾಣುತ್ತೇವೆ. ಬದಲಾವಣೆಗೆ ಕಾರಣಗಳು ವೈವಿಧ್ಯಮಯವಾಗಿರುತ್ತವೆ. ಅವುಗಳಲ್ಲಿ ಮುಖ್ಯವಾಗಿ "ನಿರ್ಧಿಷ್ಟಕಾಲ ಮಿತಿಯಲ್ಲಿ ಒಂದು ಘಟಕ ಅಥವಾ ವ್ಯವಸ್ಥೆಯಲ್ಲಿ ಕಂಡು ಬರುವ ಯಾವುದೇ ರೀತಿಯ ಸ್ಥಿತ್ಯಂತರ, ವ್ಯತ್ಯಾಸ ಅಥವಾ ಏರು ಪೇರುಗಳನ್ನು ಸಾಮಾಜಿಕ ಪರಿವರ್ತನೆಯೆಂದು ಕರೆಯಲಾಗುತ್ತದೆ."[2] 18ನೇ ಶತಮಾನದಲ್ಲಿ ಯುರೋಪಿನಲ್ಲಿ ಉಂಟಾದ ಔದ್ಯೋಗಿಕ ಕ್ರಾಂತಿಯ ಪ್ರಭಾವ ಬ್ರಿಟಿಷ ವಸಾಹತು ಶಾಹಿ ದೇಶವಾಗಿದ್ದ ಭಾರತದ ಮೇಲೆಯೂ ಉಂಟಾಯಿತು. ಇದರಿಂದ ಭಾರತದಲ್ಲಿ. ಕೆಲವೊಂದು ಉದ್ದಿಮೆ ಪ್ರಧಾನವಾದ ನಗರಗಳು ತಲೆಯೆತ್ತಿದವು. ನಗರದ ಫ್ಯಾಕ್ಟರಿ ಮತ್ತು ಮಿಲ್ಲುಗಳಲ್ಲಿ ದುಡಿಯಲು ಬಹುಸಂಖ್ಯಾತ ಜನರು ತಮ್ಮ ಗ್ರಾಮೀಣ ಸಮುದಾಯಗಳಲ್ಲಿರುವ ಅವಿಭಕ್ತ ಕುಟುಂಬಗಳು ಜಾತಿ ಪದ್ಧತಿ, ಕುಲ ಕಸುಬುಗಳು ತೀವ್ರಗತಿಯಿಂದ ಪರಿವರ್ತನೆ ಹೊಂದುತ್ತ ನಡೆದವು. ಸುಮಾರು ಮೂರು ನಾಲ್ಕು ತಲೆಮಾರಿಗೆ ಸಂಬಂಧಿಸಿದ ರಕ್ತ ಸಂಬಂಧಿಕರನ್ನು ಹೊಂದಿರುವ ಸಂಯುಕ್ತ ಕುಟುಂಬಗಳು ಒಡೆದು ಹೋಗಿ

ವಿಭಕ್ತ ಕುಟುಂಬಗಳು ತಲೆಯೆತ್ತಿದವು. ಜನರು ನಗರಗಳಿಗೆ ವಲಸೆ ಹೋಗುವುದರಿಂದ ನಗರ ಜೀವನ ಪ್ರಭಾವ ಅವರ ಬದುಕಿನ ಆಚಾರ, ವಿಚಾರ, ವೇಷ ಭೂಷಣಗಳಲ್ಲಿ ಬದಲಾವಣೆ ತಂದಿತು. ಕುಲಕಸುಬಿನ ಬಗೆಗೆ ಅವರ ಆಸಕ್ತಿ ಕಡಿಮೆಯಾಗಿ ನಗರದಲ್ಲಿ ವಿವಿಧ ವೃತ್ತಿಗಳಲ್ಲಿ ತೊಡಗಲು ಪ್ರಾರಂಭಿಸಿದರು. ಇದರಲ್ಲಿ ಸಫಾಯಿ ಕರ್ಮಚಾರಿ ವೃತ್ತಿಯಲ್ಲಿಎಷ್ಟೋ ಸಮುದಾಯಗಳು ಸೇರಿವೆ.

ಕಲಬುರ್ಗಿ ನಗರ ಮತ್ತು ಜಿಲ್ಲೆಯ ಇತರ ಪಟ್ಟಣಗಳಲ್ಲಿನ ಸಫಾಯಿ ಕರ್ಮಚಾರಿ ವೃತ್ತಿಯಲ್ಲಿ ತೊಡಗಿಸಿಕೊಂಡವರು ಕೇವಲ ಒಂದು ಜಾತಿ, ಪಂಗಡ ಮತ್ತು ಕೋಮಿಗೆ ಮಾತ್ರ ಸೇರಿದವರಿಲ್ಲ. ಈ ವೃತ್ತಿಯಲ್ಲಿ ಅಸ್ಪೃಶ್ಯರೆನಿಸಿಕೊಂಡ ಮಾದಿಗರು, ಡೋರ್‌ದಾಸರು, ಜಾತಗಾರ ಸಿಕ್ಕಲಿಗ, ಭಂಗಿ, ಭಂಬಿ, ಬ್ಯಾಗರ, ತರಲ್ ದೇಗುಮೇಗು, ಮಾಲಾ, ಮಾಂಗ್, ಮತಾಂಗ, ಮಿಣಿ ಮಾದಿಗ ಮುಸ್ಲಿಮರು ಮುಂತಾದ ತಳ ಸಮುದಾಯಗಳು ಸೇರಿವೆ.

ಕೋಷ್ಟಕ – 7 ಸಫಾಯಿ ಕರ್ಮಚಾರಿ ವೃತ್ತಿಯಲ್ಲಿರುವವರು

ಕ್ರ ಸಂ.	ವಿವಿಧ ಜಾತಿಗೆ ಸೇರಿದವರು	ಗುಲಬರ್ಗಾ ನಗರ		ಒಟ್ಟು	ಇತರ	ಪಟ್ಟಣ	ಒಟ್ಟು
		ಪು.	ಸ್ತ್ರೀ		ಪು.	ಸ್ತ್ರೀ	
01	ಮಾದಿಗರು	165	143	385	199	181	381
02	ಢೋರ್	98	41	139	172	169	341
03	ದೇಗುಮೇಗು	81	64	145	241	199	440
04	ಮಾಲಾ	71	84	156	74	59	133
05	ಮತಂಗ	110	102	212	238	230	468
06	ಮಿಣಿ ಮಾದಿಗ	130	110	240	240	231	471
07	ಸಿಕ್ಕಲಿಗರು	98	78	179	280	240	530
08	ಭಂಗಿ	325	183	604	404	490	424
09	ಬ್ಯಾಗರ	35	31	66	110	100	210
10	ತರಲು	23	62	135	118	100	218
11	ಮುಸ್ಲಿಂ	264	225	89	425	315	740

ಇವರೆಲ್ಲರು ಮೂಲತಃ ಗುಲಬರ್ಗಾ ನಗರಕ್ಕೆ ಸೇರಿದವರಲ್ಲ ಬೇರೆ ಬೇರೆ ಕಡೆಗಳಿಂದ ಉದ್ಯೋಗವನ್ನು ಹುಡುಕಿಕೊಂಡು ವಲಸೆ ಬಂದವರು. ಗುಲಬರ್ಗಾ ಜಿಲ್ಲೆಯಲ್ಲಿ ಕೈಗಾರಿಕೆಗಳು ಪ್ರಾರಂಭವಾದ ವೇಳೆಗೆ ಇವರೆಲ್ಲರು ಉದ್ಯೋಗಾಕಾಂಕ್ಷಿಗಳಾಗಿ ಬಂದ ಜನಗಳಾಗಿದ್ದಾರೆ. "ಕ್ರಿ.ಶ. 1886 ರಲ್ಲಿ ಗುಲಬರ್ಗಾದಲ್ಲಿ ಮೆಹಬೂಬ ಶಾಹಿ ಕಲ್ಬುರ್ಗಿ ಮಿಲ್ಸ್ (ಎಂ.ಎಸ್.ಕೆ) ಎಂಬ ಹೆಸರಿನ ಬಟ್ಟೆ ಗಿರಣಿಯು ಗುಲಬರ್ಗಾದಲ್ಲಿ ಕಾರ್ಯಾರಂಭ ಮಾಡಿತು"[3] ಅದರಂತೆ 1925 ರಲ್ಲಿ ಚಿತ್ತಾಪುರ ತಾಲೂಕಿನ ಶಹಾಬಾದನಲ್ಲಿ ಮತ್ತು ವಾಡಿ ಪಟ್ಟಣಗಳಲ್ಲಿ ಬೃಹತ್ ಪ್ರಮಾಣದ ಸಿಮೆಂಟ ಕಾರ್ಖಾನೆಗಳು ಸ್ಥಾಪನೆಗೊಂಡವು. ಸೇಡಂ ತಾಲೂಕಿನಲ್ಲಿ ಜಿನ್ನಿಂಗ್ ಫ್ಯಾಕ್ಟರಿ, ಸುರಪುರ ತಾಲೂಕಿನ ಜಮಾಲ್‌ಪುರದಲ್ಲಿ ಗಾಜಿನ ಬಳೆ ತಯಾರಿಕೆಗಳ ಕಾರ್ಖಾನೆ ಕಾರ್ಯ ಮಾಡುತ್ತಿತ್ತು. ಇಂಪಿರಿಯಲ್ ಗ್ಯಾಸೆಟಿಯರ್‌ನಿಂದ ತಿಳಿದು ಬರುವಂತೆ. ಗುಲಬರ್ಗಾ ನಗರದಲ್ಲಿ ಪ್ರಾರಂಭವಾದ ಎಂ.ಎಸ್.ಕೆ. ಮಿಲ್‌ನಲ್ಲಿ 21,036 ಕದಿರುಗಳನ್ನು, 224 ಮಗ್ಗಗಳನ್ನು ಹೊಂದಿದ್ದು ಸು. ಐದು ಸಾವಿರಕ್ಕೂ ಮೇಲ್ಪಟ್ಟು ಕಾರ್ಮಿಕರಿಗೆ ಉದ್ಯೋಗವನ್ನು ಒದಗಿಸಿತ್ತು. ಇನ್ನು ಶಹಾಬಾದ, ವಾಡಿ, ಸೇಡಂ, ಮಳಖೇಡ, ಮುಂತಾದೆಡೆಗಳಲ್ಲಿನ ಕಾರ್ಖಾನೆಗಳಲ್ಲಿ ಐದು ಸಾವಿರಕ್ಕೂ ಅಧಿಕ ಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದರು. ಕೈಗಾರಿಕಾ ಬೆಳವಣಿಗೆಯ ಆಂತರಿಕ ಸಾಧನ ಸೌಲಭ್ಯಗಳಾದ ವಿದ್ಯುತ್ ಶಕ್ತಿ, ಸಾರಿಗೆ ಸಂಪರ್ಕ, ತಾಂತ್ರಿಕ ತರಬೇತಿ, ಕೈಗಾರಿಕಾ ನಿವೇಶನ, ಕೈಗಾರಿಕಾ ವಸಾಹತು ಮೊದಲಾದವುಗಳ ಬೆಳವಣಿಗೆಗಳು ಆಗಿ. ನಗರ, ಪಟ್ಟಣ, ಪ್ರದೇಶಗಳ ಜನ ಸಂಖ್ಯೆ ಸಾಂದ್ರತೆ ಹೆಚ್ಚುತ್ತ ಬಂದಿತು. ತಾಂತ್ರಿಕ ಬೆಳವಣಿಗೆ, ಗ್ರಾಮೀಣ, ಗೃಹ ಕೈಗಾರಿಕೆ ಮತ್ತು ಕುಲಕಸುಬಗಳ ಮೇಲೆ ಪ್ರತ್ಯಕ್ಷ ಪರಿಣಾಮ ಬೀರಿತು. ಕೈಕಸುಬುಗಳ ಕೆಲಸವನ್ನು ಯಂತ್ರಗಳೇ ಪ್ರಾರಂಭಿಸಿದಾಗ ಬಡಿಗ, ಕಂಬಾರ, ಕುಂಬಾರ, ನೇಯ್ಕಾರ ಮುಂತಾದ ಕುಶಲಕರ್ಮಿಗಳು ತಮ್ಮ ಪರಂಪರಾಗತ ಉದ್ಯೋಗಗಳನ್ನು ಕಳೆದುಕೊಳ್ಳುವಂತಾಯಿತು. ಇದರಿಂದಾಗಿ ನಿರುದ್ಯೋಗಿಗಳಾದ ಗ್ರಾಮೀಣ ಜನರು ಉದ್ಯೋಗವನ್ನರಸುತ್ತ ನಗರಗಳಿಗೆ ವಲಸೆ ಬರುವಂತಾಯಿತು. ಔದ್ಯೋಗಿಕರಣ ಮತ್ತು ಯಾಂತ್ರೀಕರಣಗಳ ಪ್ರಭಾವಗಳಿಂದ ಸಮಾಜದಲ್ಲಾದ ಪ್ರಮುಖ ಬದಲಾವಣೆಗಳನ್ನು ಸಂಕ್ಷಿಪ್ತದಲ್ಲಿ ಹೀಗೆ ಹೇಳಬಹುದಾಗಿದೆ.

- ಜನರು ಮೂಲ ಪ್ರದೇಶಗಳನ್ನು ತೊರೆದು ನಗರಗಳಿಗೆ ಧಾವಿಸ ತೊಡಗಿದರು.
- ಯುವ ಜನಾಂಗ ಕುಟುಂಬವನ್ನು ತೊರೆದು ಸ್ವಾವಲಂಬಿ ಬದುಕು ಸಾಗಿಸಲುಸಾಧ್ಯವಾಯಿತು.

- ಅವಿಭಕ್ತ ಕುಟುಂಬ, ಆಯಪದ್ಧತಿ, ಜಾತಿ ವ್ಯವಸ್ಥೆಯಲ್ಲಿ ಸಿಥಿಲತೆ ಕಂಡು ಬಂದಿತು.
- ಜಾತ್ಯಾತೀತ ಮತ್ತು ಧರ್ಮ ನಿರಪೇಕ್ಷ ಭಾವನೆಗಳು ಬೆಳೆದು ಬಂದವು.
- ಉದ್ಯೋಗಾವಕಾಶಗಳ ಹೆಚ್ಚಳದಿಂದ ತಂದೆ ತಾಯಿಗಳ ಮೇಲೆಅವಲಂಬನಾ ಭಾವನೆಗಳು ಕಡಿಮೆಯಾಗ ತೊಡಗಿತು.
- ಸದಸ್ಯರ ಮೇಲಿನ ಕುಟುಂಬದ ಹಿರಿಯರ ನಿಯಂತ್ರಣ ಶಿಥಿಲಗೊಳ್ಳುತ್ತ ನಡೆಯಿತು.
- ಕುಟುಂಬದ ಸಂಬಂಧಗಳು ಔಪಚಾರಿಕ ಮತ್ತು ಮಾಧ್ಯಮಿಕ ಸ್ವರೂಪ ಪಡೆದುಕೊಂಡವು.
- ತಾತ್ವಿಕ ಮತ್ತು ಧಾರ್ಮಿಕ ದೃಷ್ಟಿ ಕ್ಷೀಣಿಸುತ್ತ ಭೌತದೃಷ್ಟಿ ಹೆಚ್ಚ ತೊಡಗಿತು
- ಉದ್ದಿಮೆಗಳ ಬೆಳವಣಿಗೆಯಿಂದಾಗಿ ವರ್ಗ ಪ್ರಜ್ಞೆ ಹಾಗೂ ವರ್ಗ ಸಂಘರ್ಷಗಳು ಹೆಚ್ಚಿದವು.
- ಜನ ಸಂಖ್ಯೆ ಹೆಚ್ಚಳದಿಂದ ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಕೊಳಚೇಗೇರಿಗಳು ನಿರ್ಮಾಣವಾದವು. ಆಧುನಿಕತೆಯ ಪರಿಣಾಮ ಆರ್ಥಿಕವ್ಯವಸ್ಥೆ ಮೇಲೆ ನೇರವಾಗಿ ಆಗುತ್ತದೆ. ಪ್ರತಿಯೊಬ್ಬ ವ್ಯಕ್ತಿ ಯಾವುದೇ ಉದ್ಯೋಗದಲ್ಲಿ ತೊಡಗಿ ಹೆಚ್ಚು ಹಣ ಗಳಿಸಲು ಬಯಸುತ್ತಾನೆ. ವ್ಯಕ್ತಿಗಳು ಉತ್ಪಾದನಾ ಮೂಲಗಳನ್ನು ಹುಡುಕುತ್ತಾ ಬೇರೆ ಬೇರೆ ಸ್ಥಳಗಳಿಗೆ ವಲಸೆ ಹೋಗುತ್ತಾರೆ. ಫ್ಯಾಕ್ಟರಿ, ಮಿಲ್ಲುಗಳು, ರೇಲ್ವೆ, ಅಂಚೆ-ತಂತಿ ಭದ್ರತಾ ಪಡೆ, ಪೌರ ಕಾರ್ಮಿಕ ಮುಂತಾದ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಜನರು ಪರಂಪರಾಗತ ಉದ್ಯೋಗಗಳನ್ನು ಸಂಪೂರ್ಣವಾಗಿ ಮರೆಯುವಂತಾಯಿತು.

ಸಾರಿಗೆ ಸಂಪರ್ಕಗಳಲ್ಲಿ ಕಂಡುಬಂದ ಪ್ರಗತಿಯು ಸಾಮಾಜಿಕ ಬದಲಾವಣೆಯನ್ನು ತಂದಿತು. ಗ್ರಾಮ ಮತ್ತು ನಗರಗಳ ಸಂಬಂಧಗಳು ನಿಕಟವಾದವು. ಆಧುನಿಕ ಯುಗದಲ್ಲಿ ಒಬ್ಬ ವ್ಯಕ್ತಿ ಕೆಲವೇ ಸಮಯದಲ್ಲಿ ಇಡೀ ವಿಶ್ವವನ್ನೇ ಪರ್ಯಟನೆ ಮಾಡಬಹುದಾಗಿದೆ. ಶಿಕ್ಷಣದ ಪ್ರಗತಿಯೂ ಕೂಡ ಆಧುನಿಕತೆಯ ಪರಿವರ್ತನೆಗೆ ಕಾರಣವಾಯಿತು. ಶೈಕ್ಷಣಿಕ ಪ್ರಗತಿಯಾಗುತ್ತ ನಡೆದಂತೆ ಅಂತರ್‌ಜಾತಿಯ ವಿವಾಹ, ಪ್ರೇಮ ವಿವಾಹ ಮತ್ತು ನೊಂದಣಿ (ರಜಿಸ್ಟರ್ಡ್) ವಿವಾಹಗಳ ಸಂಖ್ಯೆ

ಹೆಚ್ಚಾಗುತ್ತ ನಡೆದವು, ಇದರಿಂದಾಗಿ ವಿವಾಹ ಮತ್ತು ಕುಟುಂಬ ಸಂಸ್ಥೆಗಳು ತಮ್ಮ ಮೂಲ ಸ್ವರೂಪಗಳನ್ನು ಕಳೆದುಕೊಳ್ಳತ್ತ ಬಂದವು. 1951ರಲ್ಲಿ 36% ವಾಗಿದ್ದ ಸಾಕ್ಷರತಾ ಪ್ರಮಾಣವು 1997ರಲ್ಲಿ 60%, 2001 ರಲ್ಲಿ ಅದು 65%ಕ್ಕೆ ತಲುಪಿದೆ ಇಷ್ಟಾಗಿಯೂ ಇನ್ನೂ ಕೆಲವು ಸಮುದಾಯಗಳಿಗೆ ಶಿಕ್ಷಣತಲುಪಿಲ್ಲ, ಅದಕ್ಕೆಸ್ಪಷ್ಟ ಉದಾಹರಣೆಯೆಂದರೆ, ಸಫಾಯಿ ಕರ್ಮಚಾರಿ, ಮಾಂಗಗಾರುಡಿಗ, ಪಾರಧಿ ಮುಂತಾದ ಆಲಕ್ಷಿತ ಸಮುದಾಯಗಳಲ್ಲಿ ಶಿಕ್ಷಿತರನ್ನು ಹುಡುಕುವುದು ಕಷ್ಟ ಸಾಧ್ಯವಿದೆ.

ಬದಲಾದ ಸನ್ನಿವೇಶಗಳ ನಡುವೆ ಯಾವುದೇ ಪದ್ಧತಿ, ಸಮಾಜ ಸಂಸ್ಕೃತಿ ಪ್ರತ್ಯೇಕವಾಗಿ ಉಳಿಯಲು ಸಾಧ್ಯವಿಲ್ಲ. ತೀವ್ರವಾಗಿ ಬೆಳೆಯುತ್ತಿರುವ ವೈಜ್ಞಾನಿಕ, ವಾಣಿಜ್ಯ ಮತ್ತು ಆಧುನಿಕ ವಿದ್ಯಮಾನಗಳು ಪ್ರತಿಯೊಂದು ಕ್ಷೇತ್ರವನ್ನು ಬದಲಾವಣೆಯ ಪ್ರಕ್ರಿಯೆಗಳಿಗೆ ಒಳಗು ಮಾಡಿದೆ. ಆದುದರಿಂದ ಗುಲಬರ್ಗಾ ಜಿಲ್ಲೆಯ ಪರಿಸರದ ಸಮಾಜ, ಸಂಸ್ಕೃತಿಯು ಇದರಿಂದ ದೂರ ಸರಿಸಲಕ್ಕೆ ಸಾಧ್ಯವಾಗದೆ ತೀವ್ರಗತಿಯಲ್ಲಿ ಪರಿವರ್ತನೆಗಳಿಗೆ ಪಕ್ಕಾಗಿದೆ. ಈ ಭಾಗದಲ್ಲಿ ಹೆಚ್ಚಿನ ರೀತಿಯಲ್ಲಿ ನಗರೀಕರಣ, ಔದ್ಯೋಗಿಕರಣ, ಆರ್ಥಿಕ ಕಾರಣಗಳಿಂದ ಪರಿವರ್ತನೆಯ ವೇಗವೂ ಹೆಚ್ಚಿದೆ.

ಆಧುನಿಕತೆಯು ತನ್ನ ವೈಜ್ಞಾನಿಕ ಪ್ರಗತಿಯಿಂದಾಗಿ ಹೊಸ ಹೊಸ ಉತ್ಪಾದನಾ ಘಟಕಗಳನ್ನು ಸೃಷ್ಟಿಸುವ ಮುಖಾಂತರ ಹೆಚ್ಚಿನ ಸಂಖ್ಯೆ ಜನರು ಒಟ್ಟಾಗಿ ದುಡಿಯುವ ಮಹತ್ವದ ಸ್ಥಿತಿಯಾಗಿರುತ್ತದೆ. ಅಲ್ಲಿ ಬೇರೆ ಬೇರೆ ಸಮುದಾಯ ಹಾಗೂ ಬೇರೆ ಬೇರೆ ಜಾತಿಗಳು ಒಟ್ಟಾಗಿ ಬದುಕುವಂತಹ ಸ್ಥಿತಿಯನ್ನು ಆಧುನಿಕ ಕಾಲದಲ್ಲಿ ಕಾಣುತ್ತೇವೆ. ಆಧುನಿಕತೆಯ ಪರಿಣಾಮದಿಂದ ಹೊಸ ಹೊಸ ಊರುಗಳು, ಕಾಲನಿಗಳು ನಿರ್ಮಾಣಗೊಂಡು ಅಲ್ಲಿ ಹೊಸ ಸಂಕರಸಮಾಜ, ಸಂಸ್ಕೃತಿ ತಲೆಯೆತ್ತಲು ಕಾರಣವಾಗುತ್ತದೆ. ಆಗ ಹೊಸ ಹೊಸ ಚಹರೆಗಳು ಪರಿವೇಶಗೊಳ್ಳುವ ಸಾಧ್ಯತೆಗಳಿರುತ್ತವೆ. ಜೊತೆಗೆ ಸರಕಾರದ ಧೋರಣೆಗಳಿಂದಾಗಿ ಹೊಸ ಹೊಸ ಜನತಾ ಮನೆಗಳ ನಿರ್ಮಾಣ, ಹೊಸ ಹೊಸ ಉದ್ಯೋಗ, ಆರ್ಥಿಕ ಮೂಲಗಳು ಸಹ ಹೊಸ ಬಗೆಯ ಪ್ರವೇಶಕ್ಕೆ ಕಾರಣಾಗುತ್ತವೆ.

ವಸಾಹತು ಶಾಹಿ ಮೂಲಕ ಪ್ರವೇಶಿಸಿದ ಆಧುನಿಕತೆಯು ಜಾತಿ ವ್ಯವಸ್ಥೆಯಲ್ಲಿ ಹಲವಾರು ಸಾಮಾನ್ಯೀಕರಣಗೊಳಿಸಿತು. "ಈ ಸಾಮಾನ್ಯೀಕರಣಗಳಿಗೆ ಮಾಧ್ಯಮಗಳು, ಆಧುನಿಕ ಸಂಪರ್ಕಗಳು ಸಮೂಹ ಅಭಿಪ್ರಾಯಗಳು ಹೀಗೆ ಹಲವಾರು ಕಾರಣಗಳನ್ನು ಕಾಣಬಹುದಾಗಿದೆ"[4] ಆಧುನಿಕ

ಜಗತ್ತಿನ ತೀವ್ರವಾದ ಸಂಪರ್ಕ ಮಾಧ್ಯಮಗಳಿಂದ ಜಾತಿ-ಜಾತಿಗಳ ನಡುವೆ ಅಂತರ ಕಡಿಮೆಯಾಗ ತೊಡಗಿತು. ಆದರೂ ಸಾಂಪ್ರದಾಯಕ ಸಮಾಜದಲ್ಲಿ ಈ ಅಂತರ ಕೆಲವಷ್ಟು ಜಾತಿಗಳ ನಡುವೆ ಮಾತ್ರ ಆಗುತ್ತಿರುವುದು ವಿಪರ್ಯಾಸವೇ ಆಗಿವೆ. ಇವುಗಳಲ್ಲಿ ಚಾಂಡಾಲರು, ಜಾಡಮಾಲಿಗಳು, ಮಲ ಬಳಿಯು ಉದ್ಯೋಗದಲ್ಲಿ ತೊಡಗಿಸಿಕೊಂಡ ಸಫಾಯಿ ಕರ್ಮಚಾರಿಗಳಂತಹ ಸಮುದಾಯಗಳ ಇನ್ನೂ ಅಸ್ಪೃಶ್ಯತೆಗೆ ಒಳಗಾಗಿಯೇ ಇರುವುದನ್ನು ಇಂದಿನ ಆಧುನಿಕ ಕಾಲದಲ್ಲಿಯೂ ನೋಡುತ್ತಿದ್ದೇವೆ.

6.2 ಜಾಗತೀಕರಣ-ಪರಿಕಲ್ಪನೆ

ಜಾಗತೀಕರಣವು ಆಧುನಿಕೋತ್ತರ ಕಾಲದ ಸೃಷ್ಟಿ ಎಂಬುದು ಈಗಾಗಲೇ ಬಲ್ಲೆವು. ಕಳೆದ ಎಂಬತ್ತರ ದಶಕದಿಂದಲೇ ಈ ಜಾಗತೀಕರಣದ ಸೊಲ್ಲನ್ನು ಎಲ್ಲೆಡೆ ಕೇಳಿಬಂದಿತು. ಜಾಗತೀಕರಣದ ಹೆಸರಿನ ಮೂಲಕ ನುಸುಳಿದ ಬಹುರಾಷ್ಟ್ರೀಯ ಕಂಪನಿಗಳು ಲಾಭದ ಆಸೆ ತೋರಿಸಿ ಹೂಡುಕುತ್ತ ಬಂದ ಹುನ್ನಾರದ ಕಾರಣದಿಂದಾಗಿ ಇವತ್ತಿನವರೆಗೂ ಅದು ನಮ್ಮನ್ನು ನಿದ್ದೆಗೆಡಿಸಿ ಕಾಡುತ್ತ ದಂಗುಬಡಿಸಿದೆ. ಇದರ ಜೊತೆಗೆ ಖಾಸಗೀಕರಣ, ಉದಾರೀಕರಣ, ರಾಷ್ಟ್ರೀಕರಣ, ಗಣಕೀಕರಣಗಳಂತಹ ಪದಗಳು ತಮ್ಮದೇ ಆದ ಬಣ್ಣ ಬಳಿದುಕೊಂಡು ತೃತೀಯ ಜಗತ್ತಿನ ಅಭಿವೃದ್ಧಿಶೀಲ ರಾಷ್ಟ್ರಗಳ ಸರ್ವರಂಗವನ್ನು ಆವರಿಸಿಬಿಟ್ಟಿವೆ.

ಜಾಗತೀಕರಣವು ಕಳ್ಳ ಬೆಕ್ಕಿನಂತೆ ಹೆಜ್ಜೆಯಿಡುತ್ತ ಅದು ನಮ್ಮ ಶಿಕ್ಷಣ, ಸಾಹಿತ್ಯ, ಕಲೆ, ಭಾಷೆ, ಕೃಷಿ, ಉದ್ಯೋಗ, ಸಮೂಹ ಮಾಧ್ಯಮಗಳಂತ ಕ್ಷೇತ್ರಗಳ ಮೇಲೆ ಅತ್ಯಂತ ಗಾಢವಾದ ಪ್ರಭಾವವನ್ನು ಬೀರಿದ್ದರಿಂದ ನಮ್ಮ ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಅನೇಕ ಸ್ಥಿತ್ಯಂತರಗಳು ಸಂಭವಿಸಿವೆ. ನಿರುಮ್ಮಳಾಗಿ ಉಸಿರಾಡಬೇಕಾದ ನಮ್ಮ ಅನೇಕ ವರ್ಗ ಸಮುದಾಯಗಳು ಹಲವು ಬಗೆಯ ಆತಂಕ, ತವಕ, ತಲ್ಲಣಗಳನ್ನು ಅನುಭವಿಸುತ್ತವೆ.

ಜಾಗತೀಕರಣವು ಮೂಲತಃ ವಸಾಹತುಶಾಹಿ ಮೂಲದ ಪ್ರಕ್ರಿಯೆಯಾಗಿದೆ. ಇದನ್ನು ನಮ್ಮ ದೇಶದ ಕೆಲವು ಉದ್ದಿಮೆದಾರರು, ಕಂಪನಿಗಳು ಅದನ್ನು ರತ್ನಗಂಬಳಿ ಹಾಸಿ ಅದ್ದೂರಿಯಾಗಿ ಸ್ವಾಗತಿಸಿದವು ಕೂಡ. ಜಾಗತೀಕರಣದಿಂದ ನಾವು ಆರ್ಥಿಕವಾಗಿ ಬಹಳಷ್ಟು ಸುಧಾರಿಸಬಹುದು. ಜಾಗತೀಕ ಮಟ್ಟದಲ್ಲಿ ಸ್ಪರ್ಧಿಸಿ ಸಬಲರಾಗಬಹುದೆನ್ನುವ ನಮ್ಮ ಕನಸುಗಳನ್ನು ಅದು ಬೇಗನೇ ಹುಸಿ

ಮಾಡಿದ್ದಂತೂ ಸುಳ್ಳಲ್ಲ. "ಇಂದು ಎಲ್ಲ ಉದ್ಯೋಗ ಕ್ಷೇತ್ರಗಳಲ್ಲಿ ಕಂಪ್ಯೂಟರೀಕರಣಗೊಳ್ಳುತ್ತಿರುವುದರಿಂದ ಉದ್ಯೋಗದಲ್ಲಿದ್ದವರೇ ಉದ್ಯೋಗ ಕಳೆದುಕೊಳ್ಳಬೇಕಾದ ದುರಂತದ ಕರಾಳ ಸ್ವರೂಪ ಕಣ್ಮುಂದೆ ರಾರಾಜಿಸುತ್ತಿದೆ."[3] ಈ ರೀತಿಯಾದ ವ್ಯತಿರಿಕ್ತ ಪರಸ್ಥಿತಿ ಬಿಗಡಾಯಿಸಿರುವಾಗ ಉದ್ಯೋಗ ಎಂಬುದು ಗಗನ ಕುಸುಮವೇ ಆಗಿರುತ್ತದೆ. ಕೆಲವು ಬಹುರಾಷ್ಟ್ರೀಯ ಕಂಪನಿಗಳು ರೈತರಿಗೆ ಹೆಚ್ಚಿನ ಇಳುವರಿಯ ಲಾಭದಾಸೆಯನ್ನು ತೋರಿಸಿ, ರೈತರಿಗೆ ಬೀಜ, ಗೊಬ್ಬರ, ರಾಸಾಯನಿಕ ಔಷಧಿಗಳನ್ನು ನೀಡಿ ಅವರನ್ನು ಜೀವನಪೂರ್ತಿ ಸಾಲಗಾರರನ್ನಾಗಿಸಿದೆ. ಈ ಸಾಲದ ಬಾಧೆ ತಾಳಲಾರದೆ ಎಷ್ಟೋ ರೈತರು ನೇಣಿಗೆ ಕೊರಳೊಡ್ಡಿಯೋ, ವಿಷ ಸೇವಿಸಿಯೋ ಆತ್ಮಹತ್ಯೆಗೆ ಶರಣಾದ ಉದಾಹರಣೆಗಳು ಬೇಕಾದಷ್ಟಿವೆ. ವರ್ಷಕ್ಕೆ ಸಾವಿರಾರು ರೈತರು ಸಾಯುತ್ತಿದ್ದಾರೆ. ಹೀಗಾಗಿ ಜಾಗತೀಕರಣವು ಕೆಲವೇ ಕೆಲವು ವರ್ಗದ ಜನರಿಗೆ ಸುಖದ ಸುಪ್ಪತ್ತಿಗೆಯಾಗಿದ್ದರೆ, ಬಹುಪಾಲು ರೈತರು ಕೂಲಿಕಾರರು. ಸಾಂಪ್ರದಾಯಿಕವಾಗಿ ತಮ್ಮ ಜಾತಿ ಆಧಾರಿತ ವೃತ್ತಿಯನ್ನು ಮಾಡುತ್ತ ಬಂದಿರುವ ತಳಸಮುದಾಯದ ಜನರ ಬದುಕನ್ನು ಅದು ನರಕದ ಕೂಪಕ್ಕೆ ತಳ್ಳಿದ್ದಂತೂ ನಿಜ. ಇಡೀ ವಿಶ್ವವನ್ನೇ ಒಂದು ಗ್ರಾಮವಾಗಿಸುವ ಜಾಗತೀಕರಣದ ಈ ಬಗೆಯ ಪರಿಕಲ್ಪನೆ ಬಲವಿದ್ದವೇ ಬದುಕಬಲ್ಲವೆಂಬುದನ್ನು ದುಡಿಯುವ ಸಮುದಾಯಕ್ಕೆ ಅದು ಎಂದಿಗೂ ಒಳಿತನ್ನು ಬಯಸುವುದಿಲ್ಲವೆಂಬುದನ್ನು ಸಾಬೀತುಗೊಳಿಸುತ್ತದೆ.

ಜಾಗತೀಕರಣ ಗ್ರಹಿಕೆಯ ಲಕ್ಷಣ, ಸ್ವರೂಪ, ತಳಸಮುದಾಯಗಳ ಮೇಲೆ ಅದು ಬೀರಿರುವ ಪರಿಣಾಮ, ಜಾಗತೀಕರಣದ ಸುಳಿಗೆ ಸಿಲುಕಿ ಸ್ಥಿತ್ಯಂತರಗೊಳ್ಳುತ್ತಿರುವ ದೇಶಿ ಸಮುದಾಯಗಳ ಕುರಿತು ಈಗಾಗಲೇ ಸಾಕಷ್ಟು ಚಿಂತನೆಗಳು ನಡೆದಿವೆ, ನಡೆಯುತ್ತಿವೆ ಎಂದು ಹೇಳಬಹುದು.

ವಸಾಹತುಶಾಹಿ ವ್ಯವಸ್ಥೆಯ ಕೂಸು ಈ ಜಾಗತೀಕರಣವಾಗಿದೆ. "ಸುಮಾರು 200 ವರ್ಷಗಳ ಹಿಂದೆ ಮ್ಯಾಂಚೆಸ್ಟರ್ ಲ್ಯಾಂಕ್‌ಶಯರ್‌ನ ಕಾಟಿನ್ ಫ್ಯಾಬ್ರಿಕ್ಸ್ ಭಾರತವನ್ನು ಪ್ರವೇಶಿಸಿದಾಗ ಈ ದೇಶದ ಸ್ವಾವಲಂಬಿ ಅರ್ಥವ್ಯವಸ್ಥೆಯನ್ನೇ ಬುಡಮೇಲು ಮಾಡಿತು. ಇಂದಿನ ಈ ಜಾಗತೀಕರಣವು ಕೇವಲ ಆರ್ಥಿಕ ವ್ಯವಸ್ಥೆಯನ್ನು ಮಾತ್ರವಲ್ಲ. ನಮ್ಮ ಸ್ಥಳೀಯ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ವ್ಯವಸ್ಥೆಯನ್ನೇ ಬುಡಮೇಲು ಮಾಡಿದೆ"[4] ಎಂದು ಪ್ರಸಿದ್ಧ ಸಮಾಜ ಶಾಸ್ತ್ರಜ್ಞರಾದ ಆಶಿಸ್ ನಂದಿ ಅಭಿಪ್ರಾಯಪಡುತ್ತಾರೆ. ಭಾರತೀಯ ಅಂಕಿಸಂಖ್ಯೆಗಳ ಆಧಾರದ ಪ್ರಕಾರ 60 ಶೇಕಡಾ ಇನ್ನೂ ಅಸಂಘಟಿತ ಕ್ಷೇತ್ರವಾಗಿದೆ. ಅಲ್ಲಿ ದುಡಿಯುವವರು ಸಾಮಾನ್ಯ

ಕೂಲಿಕಾರರು ಒಂದು ದಿನ ಕೆಲಸ ಸಿಕ್ಕರೆ ಸಿಕ್ಕಿತು. ಇಲ್ಲದಿದ್ದರೆ ಇಲ್ಲವೆನ್ನುವಂತಹ ಸ್ಥಿತಿಯಲ್ಲಿ ಅಲ್ಲಿನ ಜನರು ದುಡಿಯುತ್ತಾರೆ. ಇಂಥ ವಿಪುಲ ಕ್ಷೇತ್ರಕ್ಕೆ ಕೇಡು ಬಗೆದರೆ ದೇಶಕ್ಕೆ ಕೇಡು ಬಗೆದಂತೆಯೇ ಆಗುವುದು. ಆದರೆ ತಲ್ಲಣದ ಸಂಗತಿಯೆಂದರೆ ಕಳೆದ 5 ವರ್ಷಗಳಲ್ಲಿ ಭಾರತದಲ್ಲಿ ಸುಮಾರು 3,25,000 ಸಣ್ಣ ಕೈಗಾರಿಕೆಗಳು ಮುಚ್ಚಿವೆ. ಕರ್ನಾಟಕವೊಂದರಲ್ಲಿಯೇ 84,000 ಸಣ್ಣ ಕೈಗಾರಿಕೆಗಳು ಮುಚ್ಚಲ್ಪಟ್ಟಿವೆಯೆಂದು ಅಂಕಿಸಂಖ್ಯೆಗಳು ತಿಳಿಸಿಕೊಡುತ್ತವೆ. ಜಾಗತೀಕರಣದ ತಳಕು ಬೆಳಕಿನ ಅಡಿಯಲ್ಲಿ ಇಂದು ವೈವಿಧ್ಯಮಯ ಕರಕುಶಲಗಳಾದ ಪರಂಪರೆ ಮತ್ತು ಅಂಥವರ ತಳಿಯೇ ಅಳಿಯುವ ಭೀತಿಯಲ್ಲಿದೆ.

ನಮ್ಮ ದೇಶದ ಸಂಪತ್ತಿನ ಹಂಚಿಕೆ, ವಿಪುಲ ಉದ್ಯೋಗ ನಿರ್ಮಾಣ ಮತ್ತು ಉದ್ಯೋಗ ಅವಕಾಶಗಳೆರಡರಲ್ಲೂ ಸಾಮಾಜಿಕ ಸಮಾನತೆಯನ್ನು ಕಾಯುವ ಮತ್ತು ವಿಶ್ವಮಟ್ಟದಲ್ಲಿ ಪೈಪೋಟಿಯನ್ನು ಎದುರಿಸಲು ಸಮರ್ಥವಾಗಿರುವ ಇಂಥ ದಕ್ಷ ಕೈಕಸಬು, ಸಣ್ಣ ಕೈಗಾರಿಕಾ ಕ್ಷೇತ್ರಗಳನ್ನು ಬುಡಮೇಲು ಮಾಡಿದ ಜಾಗತೀಕರಣ ಶ್ರಮಶಕ್ತಿಯನ್ನೇ ದುರ್ಬಲೀಕರಿಸಿದೆ. ಇಷ್ಟಾದರೂ ಜಾಗತೀಕರಣವನ್ನು ಅನಿವಾರ್ಯವೆಂಬಂತೆ ಹಾಡಿಹೊಗಳುವ ಸಂಕೀರ್ತನಕಾರರಿಗೆ ಮುಖ್ಯವಾಗಿ ನಮ್ಮ ಮಧ್ಯಮ ಹಾಗೂ ಕೆಳವರ್ಗಗಳಿಗೆ ಜಾಗತೀಕರಣದ ಅತ್ಯಂತ ಸೂಕ್ಷ್ಮ ರಚನಾ ಎಳೆಗಳು ಜಗತ್ತಿನ ಒಟ್ಟು ಜನಸಂಖ್ಯೆ 15–20 ಶೇಕಡಾ ಜನರನ್ನು ಭೂಪಟದಿಂದಲೇ ಅಳಿಸಿಹಾಕಿ ನಿರ್ನಾಮ ಮಾಡಿಬಿಡುತ್ತದೆ.

ಜಾಗತೀಕರಣವನ್ನು ವ್ಯಾಖ್ಯಾನಿಸುವವರು ಸಾಂಪ್ರಾದಾಯಿಕವಾಗಿ ನಾವು ಆಧುನಿಕತೆ ಎಂದು ಕರೆಯುವ ಘಟ್ಟವನ್ನು ಜಾಗತೀಕರಣದ ಪ್ರಕ್ರಿಯೆಯಿಂದ ಬೇರ್ಪಡಿಸಿ ಗುರುತಿಸುತ್ತಾರೆ. ಇವರ ಪ್ರಕಾರ ಆಧುನಿಕತೆ ಮತ್ತು ಜಾಗತೀಕರಣಗಳೆರಡೂ ವಿಭಿನ್ನ ಪ್ರಕ್ರಿಯೆಗಳಾಗಿರುತ್ತವೆ."[5] ಈ ರೀತಿಯ ಹೊಸ ವ್ಯಾಖ್ಯಾನದಲ್ಲಿ ಜಾಗತೀಕರಣವು ಪರ್ಯಾಯ ರಾಜಕೀಯ ಪ್ರಜ್ಞೆಯನ್ನು ಹುಟ್ಟಿಸುವ ಶಕ್ತಿಯಾಗಿಯೂ, ಹೋರಾಟದಲ್ಲಿ ತೊಡಗಿರುವ ಸಮುದಾಯಗಳ ಪರವಾಗಿರುವ ಹೊಸ ವಿದ್ಯಾಮಾನಗಳಾಗಿಯೂ ಗೋಚರವಾಗುತ್ತದೆ. ಒಟ್ಟಿನಲ್ಲಿ ಜಾಗತೀಕರಣವು ರಾಷ್ಟ್ರಪ್ರಭುತ್ವದ ಗೆರೆ–ಗಡಿಗಳು ಮಾಯವಾಗುವ ಹಂತವನ್ನು ಸೃಷ್ಟಿಸುತ್ತವೆ. ಜಾಗತೀಕರಣವು ಆಕ್ರಮಣಕಾರಿಯೂ ದಮನಕಾರಿಯೂ ಆದ ರಾಷ್ಟ್ರಪ್ರಭುತ್ವದ ರೇಖೆಯನ್ನು ದಾಟುವ ದಾರಿ ಮತ್ತು ಉಪಾಯಗಳನ್ನು ಜಾಗತೀಕರಣವು ಸೂಚಿಸುತ್ತದೆ ಎಂಬ ನಂಬಿಕೆ ಈ ವಾದದ ಹಿಂದಿ ಇದೆ.

ಇಲ್ಲಿ ಇನ್ನೊಂದು ಮಾತನ್ನು ಗಮನಿಸಬೇಕು. ಅದೆಂದರೆ ಎಲ್ಲ ಕಾಲಗಳಲ್ಲೂ ಆಳುತ್ತಿರುವ ಪ್ರಭುತ್ವವು ಕೆಲವರಿಗೆ ಮಾತ್ರ ಆಧುನಿಕತೆಯ ಲಾಭಗಳು ಲಭ್ಯವಾಗುವಂತೆ ಮಾಡುತ್ತಿತ್ತು. ಆದ್ದರಿಂದ ಆಧುನಿಕತೆಯು ಪ್ರಭುತ್ವಕ್ಕೆ ಬೇಕಿರುವವರಿಗೆ ಮಾತ್ರ ದಕ್ಕುತ್ತಿತ್ತು. ಅದರ ಪ್ರಯೋಜನ ಕೆಲವರಿಗೆ ಮಾತ್ರ ಮೀಸಲಾಗಿತ್ತು. ಆದರೆ ಇಂದು ಜಾಗತೀಕರಣವು ನವ-ಆಧುನಿಕತೆಯೊಂದನ್ನು ಸೃಷ್ಟಿಸಿ ಆ ಮುಖಾಂತರ ಎಲ್ಲ ಶ್ರಮ ಸಮುದಾಯಗಳಿಗೂ ಆಧುನಿಕತೆಯ ಎಲ್ಲ ಅಂಶಗಳನ್ನು ಕೊಟ್ಟುಬಿಟ್ಟಿದೆ. ಹಾಗಾಗಿ ಜಗತ್ತಿನ ಯಾವ ಮೂಲೆಯಲ್ಲಿದ್ದರೂ ಆಧುನಿಕತೆಯ ಅಂಶಗಳನ್ನು ಇಂದು ಎಲ್ಲರೂ ಪಡೆದುಕೊಳ್ಳಬಹುದು. ಅಂದರೆ ಪ್ರಭುತ್ವ ಮತ್ತು ಆಧುನಿಕತೆಗಳ ನಡುವೆ ಹಿಂದಿದ್ದ ಸಂಬಂಧವನ್ನು ಜಾಗತೀಕರಣವು ಕಡಿದು ಹಾಕಿದೆ"[6] ಎಂದು ಈ ವಾದದ ಸೂಚನೆಯಾಗಿದೆ.

ಈ ವಾದದಲ್ಲಿ ಅಡಗಿರುವ ಮತ್ತೊಂದು ಅಂಶವನ್ನು ಕೂಡ ನಾವು ಗಮನಿಸಬೇಕಾದ ಅಗತ್ಯ ಇದೆ. ಜಾಗತೀಕರಣದಿಂದ ರಾಷ್ಟ್ರಪ್ರಭುತ್ವಗಳು ಹೆಚ್ಚು ಜವಾಬ್ದಾರಿಯಿಂದ ಇರಲೇಬೇಕಾಗುತ್ತದೆ. ಅಂತರಾಷ್ಟ್ರೀಯ ಮಟ್ಟದಲ್ಲಿ ಎಲ್ಲ ಆಂದೋಲನಗಳು ಪ್ರಚುರವಾಗತೊಡಗಿದಾಗ ರಾಷ್ಟ್ರಪ್ರಭುತ್ವ ತನ್ನ ಇಚ್ಛೆಯಿಂದ ಬಂದಂತೆ ನಡೆದುಕೊಳ್ಳಲು ಅದಕ್ಕೆ ಸಾಧ್ಯವಾಗದು. ಹೊರಗಿನ ಒತ್ತಡದಿಂದ ಜನರನ್ನು ಅದು ಹತ್ತಿಕ್ಕಲಾರದು. ಇವೆಲ್ಲವು ಈ ವಾದದ ಪೂರ್ವ ಪಕ್ಷಗಳಾದವು. ಈಗ ಈ ವ್ಯಾಖ್ಯಾನದ ಅನೇಕ ತೊಡಕುಗಳನ್ನು ವಿಪರ್ಯಾಸಗಳನ್ನು ದ್ವಂದ್ವಗಳನ್ನು ಬಿಡಿಸಿಕೊಂಡು ಜಾಗತೀಕರಣವೆಂಬುದು ಕೇವಲ ರಾಜಕೀಯ ಪ್ರಭುತ್ವಕ್ಕೆ ಮಾತ್ರ ಸೀಮಿತಗೊಂಡಿದ್ದಾಗಿಲ್ಲ. ಬದಲು ಅದು ಒಂದು ಪ್ರಾದೇಶಿಕ ನೆಲೆಯಲ್ಲಿ ಬಾಳುತ್ತಿರುವ ಜನ ಸಮುದಾಯದ ಬದುಕನ್ನು ಕುರಿತಾಗಿಯೂ ಯೋಚಿಸುವುದಾಗಿದೆ. ಇದು ಈವತ್ತಿನ ಅಗತ್ಯವೂ ಕೂಡ ಆಗಿದೆ ಎನ್ನಬೇಕು.

6.3 ಜಾಗತೀಕರಣ: ಸಮಾಜ–ಸಂಸ್ಕೃತಿ

ಜಾಗತೀಕರಣದ ದಾಳಿ ಕೇವಲ ಅರ್ಥ ವ್ಯವಸ್ಥೆ ಮೇಲಷ್ಟೇ ಆಗಿಲ್ಲ. ಅದು ಸಾಮಾಜಿಕ ಮತ್ತು ಸಂಸ್ಕೃತಿಯ ಮೇಲೆಯೂ ದಾಳಿ ಇಟ್ಟಿದೆ. ಹಾಗೆ ನೋಡಿದರೆ ಸಮಾಜ ಮತ್ತು ಸಂಸ್ಕೃತಿ ಇವುಗಳಲ್ಲಿ ಒಂದನ್ನು ಬಿಟ್ಟು ಇನ್ನೊಂದು ಬದುಕಲಾರದು, ಬೆಳೆಯಲಾರದು. ಒಂದರಿಂದ ಇನ್ನೊಂದಕ್ಕೆ ತುಷ್ಟಿ, ಪುಷ್ಟಿ, ಸಮಾಜ ಬೇಕಾದರೆ ಸಂಸ್ಕೃತಿ ಮರ. ಮೂಲ ಬೇರು

ರೋಗಗ್ರಸ್ತವಾದರೆ ಮರಕ್ಕೆ ಕೇಡು ಮರದ ಬೊಡ್ಡೆ ಒಣಗುತ್ತದೆ. ಎಲೆ-ಹೂ-ಫಲ ಕಾಣದಾಗುತ್ತದೆ. ಒಮ್ಮೊಮ್ಮೆ ಮೂಲ ಬೇರು ತನಗೆ ಅಂಟಿದ ರೋಗವನ್ನು ಕಳೆದುಕೊಂಡು ತನ್ನ ಪರಿಸರದ ಮಣ್ಣು, ನೀರು, ಗೊಬ್ಬರ, ಗಾಳಿ, ಬಿಸಿಲು ಯಥೇಚ್ಛವಾಗಿ ಪಡೆದುಕೊಂಡಾಗ ಬೇರಿನಲ್ಲಿ ಚೈತನ್ಯ ಚಿಮ್ಮುತ್ತದೆ. ಆ ಚೈತನ್ಯವೇ ಆ ಮರದ ಬೊಡ್ಡೆಗೆ ಶಕ್ತಿಯನ್ನು ಕೊಡುತ್ತದೆ. ಅದರಿಂದ ಕೊರಡು ಕೆನರುತ್ತದೆ. ಇದರಂತೆಯೇ ಸಮಾಜ ತಳಬೇರು ಸಂಸ್ಕೃತಿ ಅದರ ಫಲ ಎಂದು ನಿರ್ಧರಿಸಬಹುದು. "ಸಂಸ್ಕೃತಿ ಬೆಳೆಯಲು, ಅಳಿಯಲು ಸಮಾಜದ ಆಗುಹೋಗುಗಳು, ನೋವು ನಲಿವುಗಳು ಮೂಲ ಕಾರಣ ಸಮಾಜವಿದ್ದಂತೆ ಸಂಸ್ಕೃತಿ. ಆದ್ದರಿಂದ ಸಮಾಜ-ಸಂಸ್ಕೃತಿಗಳು ಒಂದಕ್ಕೊಂದು ಪೂರಕವಾಗಿ ಬೆಳೆದು ಬಂದಿವೆ. ಒಂದನ್ನು ತಿಳಿಯದೆ ಇನ್ನೊಂದರ ಮರ್ಮವಾಗದು."[7] ಆದ್ದರಿಂದ ಆಯಾ ಜನಾಂಗದ ಸಮಾಜದ ಬಗೆಗೆ ಹೇಳಹೊರಟವರು ಆಯಾ ಜನಾಂಗ, ಜಾತಿ ಸಮುದಾಯದ ಸಂಸ್ಕೃತಿಯ ಅಸ್ಮಿತೆ ಬಗೆಗೂ ಅರಿತುಕೊಳ್ಳಬೇಕಾಗುತ್ತದೆ.

ಭಾರತೀಯ ಹಾಗೆಯೇ ಕನ್ನಡದ ಸಂವೇದನಾಶೀಲ ಸಂಸ್ಕೃತಿ ಚಿಂತಕ ಮನಸ್ಸುಗಳು ಜಾಗತೀಕರಣದ ವಿರಾಟಸ್ವರೂಪವನ್ನು ಅದು ವಿವಿಧ ಜಾತಿ ಸಮುದಾಯಗಳ ಮೇಲೆ ಬೀರಿರುವ ಪ್ರಭಾವ ಹಾಗೂ ಉಂಟು ಮಾಡಿರುವ ಪರಿಣಾಮವನ್ನು ವಿವಿಧ ನೆಲೆಗಳಲ್ಲಿ ಅಧ್ಯಯನಕ್ಕೊಳಪಡಿಸಿ ತಮ್ಮ ಚಿಂತನೆಗಳನ್ನು ದಾಖಲಿಸಿದ್ದಾರೆ. ಜಾಗತೀಕರಣದ್ದು ಸರಕು ಸಂಸ್ಕೃತಿಯಾಗಿದೆ. ಈ "ಸರಕು ಸಂಸ್ಕೃತಿ ಜಾಗತೀಕರಣದ ಕಾಲಘಟ್ಟದಲ್ಲಿ ಜಗತ್ತೇ ಒಂದು ಹಳ್ಳಿಯಾಗಿಸಿ ವಿಶ್ವವನ್ನೇ ಒಂದು ಏಕರೂಪದ ಮಾರುಕಟ್ಟೆಯನ್ನಾಗಿಸಿದ. ಜಗತ್ತಿನಾದ್ಯಂತ ಒಂದೇ ಮಾದರಿಯ ವಸ್ತುಗಳು ಚಲಾವಣೆಗೆ ಬಂದಂತೆ ನೆಲದ ಸಂಸ್ಕೃತಿಯ ಅವಿಭಾಜ್ಯ ಅಂಗವಾದ ಭಿನ್ನ ಮಾದರಿಯ ವಸ್ತುಗಳು ಮೂಲೆಗುಂಪಾಗುತ್ತವೆ. ಸರಕು ಸಂಸ್ಕೃತಿಯ ನೆಲದ ಸಂಸ್ಕೃತಿಯ ಜೊತೆ ಪೈಪೋಟಿಗಿಳಿಯುತ್ತದೆ. ಬಹುಮುಖತೆಯುಳ್ಳ ನೆಲದ ಸಂಸ್ಕೃತಿ ಅದನ್ನು ಎದುರಿಸಲಾರದೆ ತಾನೇ ಹಿಂದಕ್ಕೆ ಸರಿಯುತ್ತದೆ."[8] ಈ ನವ ವಸಾಹತುಶಾಹಿಯು ಹಣಕಾಸು ವಲಯದಲ್ಲಿ ವಿಶ್ವಬ್ಯಾಂಕ್ ಮೂಲಕ ಕ್ರೀಡಾ ಕ್ಷೇತ್ರದಲ್ಲಿ ಬಹುರಾಷ್ಟ್ರೀಯ ಕಂಪನಿಗಳ ಕ್ರಿಕೇಟ್ ಮುಂತಾದ ಟೂರ್ನಮೆಂಟ್‌ಗಳ ಸಾಂಸ್ಕೃತಿಕ ಕ್ಷೇತ್ರದಲ್ಲಿ ಫೋರ್ಡ್, ರಾಕ್‌ಫೆಲ್ಲರ್, ನೋಬೆಲ್, ಮ್ಯಾಗಸೆಸೆ ಫೌಂಡೇಷನ್‌ಗಳ ಮೂಲಕ ಹಿಂದುಳಿದ ದೇಶಗಳಲ್ಲಿ ತನ್ನ ನೆಲೆಗಳನ್ನು ವಿಸ್ತರಿಸಿಕೊಂಡು ಅಲ್ಲಿನ ಸಮಾಜಗಳ ಮೇಲೆ ತನ್ನ ಬೀರುತ್ತದೆ. ಬಲವಿದ್ದ ಸಮುದಾಯಗಳು ಈ ಸವಲತ್ತಿನೊಡನೆ ರಾಜಿ ಮಾಡಿಕೊಂಡು ಸರಕು ಸಂಸ್ಕೃತಿಗೆ ಮೊರೆ ಹೋಗುತ್ತವೆ. ಆದರೆ ಆರ್ಥಿಕವಾಗಿ ತೀರ ಕೆಳಸ್ತರದಲ್ಲಿರುವ ಜಾತಿ ಸಮುದಾಯಗಳ

ಜಾಗತೀಕರಣವು ನೆರವಾಗುವ ಬದಲು ಅವರ ಅಸ್ತಿತ್ವದ ಮೇಲೆ ಬರೆ ಎಳೆಯುವುದರಲ್ಲಿ ಯಾವುದೇ ಅನುಮಾನವಿಲ್ಲ. ಇಲ್ಲಿ ಜಾಗತೀತಕರಣಕ್ಕೆ ಬಂಡವಾಳಶಾಹಿಯ ಹಿತ ಸಾಧನೆಯೇ ಮುಖ್ಯವಾಗಿರುವುದರಿಂದ ಕುಲಕಸಬುಗಳ ಮೇಲೆ ತೀವ್ರವಾದ ಹೊಡೆತ ಬೀಳುವುದು.

'ಸಂಸ್ಕೃತಿ ಎಂದಾಗ ಅದರಲ್ಲಿ ಜ್ಞಾನ, ವಿಜ್ಞಾನ, ನಂಬಿಕೆ, ಆಚರಣೆ ಎಲ್ಲವೂ ಇರುತ್ತದೆ' ಎನ್ನುತ್ತಾನೆ ಈ.ಬಿ. ಟೈಲರ್. ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಕೃತಿಯ ಭಾಗವಲ್ಲ ಎಂದು ಒಡೆದು ನೋಡುವ ಮನೋಭಾವವನ್ನು ಈವತ್ತಿನ ತಂತ್ರಜ್ಞಾನದ ವಿದ್ಯಾಭ್ಯಾಸವು ಮನದಟ್ಟು ಮಾಡಿಕೊಡುತ್ತದೆ. ಹೀಗಾದಾಗ ದೇಶೀಯ ತಂತ್ರಜ್ಞಾನ ಹಿಂದೆ ಬಿದ್ದು ವಿದೇಶಿಯ ತಂತ್ರಜ್ಞಾನಕ್ಕೆ ವಿಧಿಯಿಲ್ಲದೆ ಜೋತುಬೀಳುವ ಪರಸ್ಥಿತಿ ವಿದ್ಯಾವಂತರಿಗೆ ಅನಿವಾರ್ಯವಾಗಿ ಸೃಷ್ಟಿಗೊಳ್ಳುತ್ತದೆ.

ಇದರ ಜೊತೆಯಲ್ಲಿ ಗಮನಿಸಬಹುದಾದ ಮತ್ತೊಂದು ಅಂಶವೆಂದರೆ ಕರ್ಮಚಾರಿಗಳ ಸಮಾಜದಲ್ಲಿ ಇರುವ ಪರಸ್ಪರ ಸಹಕಾರ ತತ್ವ. ಇಲ್ಲಿನ ಮಾನವೀಯ ಸಂಬಂಧಗಳು ವರ್ಣ, ವರ್ಗ, ವೈರುದ್ಯಗಳಿದ್ದರೂ ಅವೆಲ್ಲವೂ ಮೀರಿ ಗಾಢವಾಗಿರುತ್ತದೆ. ಇಂಡಿಯಾದಂತಹ ದೇಶದಲ್ಲಿ ಕಾರ್ಮಿಗಳು ಕುಲಕಸಬುಗಳಾಗಿ ಅದರಿಂದ ಜಾತಿ ವ್ಯವಸ್ಥೆ ಬೆಳೆದು ಅದರಿಂದ ಸ್ವಲ್ಪ ತೊಂದರೆಗಳಾಗಿವೆ. ಊಳಿಗಮಾನ್ಯ ಪದ್ಧತಿ ಇಂಥ ಸಮಾಜದಲ್ಲಿ ನೆಲೆಯೂರಿದೆ. ಆದರೆ ಜಾತಿಗಳೇ ಇಲ್ಲದ ದೇಶಗಳಲ್ಲಿ ಇಂಥ ಸಮಸ್ಯೆ ಎದುರಾಗದು. ಸಂಸ್ಕೃತಿಯನ್ನು ಉಳಿಸಬೇಕೆಂಬ ನಿಜವಾದ ಕಳಕಳಿ ನಮ್ಮಂಥ ದೇಶಗಳಿಗೆ ಇರುವುದೇ ಆದರೆ ಕರ್ಮಚಾರಿಗಳ ಕೆಲಸಗಳನ್ನು ಬದಲಾದ ಸನ್ನಿವೇಶಗಳಿಗನುಗುಣವಾಗಿ ನವೀಕರಿಸಿಕೊಂಡು ಜಾಗತೀಕರಣಕ್ಕೆ ಎದುರು ನಿಲ್ಲಬೇಕಾಗಿದೆ.

ಇಲ್ಲಿಯೇ ನಮಗೆ ಮುಖ್ಯವಾದ ಪ್ರಶ್ನೆಯೊಂದು ಕಾಡುತ್ತದೆ. "ಮನುಷ್ಯ ಸಮಾಜ ಮತ್ತು ಸಂಸ್ಕೃತಿಗಳು ಸಾವಯವ ಸಂಬಂಧವನ್ನು ಪಡೆದಿವೆ. ಒಂದರೊಳಗೊಂದು ಬೆರೆಯುತ್ತ, ಬೆಳೆಯುತ್ತ ಬೆಳಕಿನ ಬೀಜ ಬಿತ್ತುತ್ತ ಕೆಲವೊಮ್ಮೆ ಕತ್ತಲ ಹೂವು ಅರಳಿಸುತ್ತ ಒಂದು ವಿಶಿಷ್ಟ ವ್ಯಕ್ತಿತ್ವವನ್ನು ಒಡಮೂಡಿಸುತ್ತವೆ"[9] ಎನ್ನಲಾಗುತ್ತದೆ. ವ್ಯಕ್ತಿ ತನ್ನ ಜೀವನವನ್ನು ರೂಪಿಸಿಕೊಳ್ಳಲು ಸಂಸ್ಕೃತಿಯು ಆತನಿಗೆ ಮೂಲ ವಸ್ತುವನ್ನು ಒದಗಿಸುತ್ತದೆ. ಅದೆಂದರೆ ವ್ಯಕ್ತಿಯ ಸ್ವಭಾವಗಳು ಇದ್ದಕ್ಕಿದ್ದಂತೆ ಬದಲಾಗುವುದಿಲ್ಲ. ಅವುಗಳಿಗೆ ಅದರದೇ ಆದ ಇತಿಹಾಸ ಒಂದು ಒಳ ಒತ್ತಡ ಇರುತ್ತದೆ. ಹೀಗೆ ಒಳ ಹಾಗೂ ಹೊರ ಒತ್ತಡಗಳ ಒಂದು ಇತಿಹಾಸ ಮನುಷ್ಯನ ಸ್ವಭಾವ ಲಕ್ಷಣಗಳನ್ನು ನಿರ್ದಿಷ್ಟ

ವಿನ್ಯಾಸವನ್ನಾಗಿ ಮೂಡಿಸುತ್ತದೆ ಎಂಬ ಇತಿಹಾಸವು ತಿಳಿಸುತ್ತದೆ. ಅಲ್ಲಿ ವ್ಯಕ್ತಿ ಕೇವಲ ವ್ಯಕ್ತಿಯಾಗಿರದೆ ಆತ ತಾನು ಬದುಕುತ್ತಿರುವ ಸಮಾಜ ಮತ್ತು ಸಂಸ್ಕೃತಿಯಿಂದ ಪ್ರೇರಿತನಾಗಿರುತ್ತಾನೆ. ಯಾಕೆಂದರೆ ವ್ಯಕ್ತಿ–ಸಮಾಜ–ಸಂಸ್ಕೃತಿಗಳ ಸಂಬಂಧ ತುಂಬಾ ಗಾಢವಗಿರುವಂತಹದ್ದಾಗಿರುತ್ತದೆ. ಕ್ರಿಯೆಗೂ ಸಂಸ್ಕೃತಿಗೂ ಸಂಬಂಧವಿದೆ. ಈ ಹಿನ್ನೆಲೆಯಲ್ಲಿ ನಾವು ಚರಿತ್ರೆ ಮತ್ತು ಸಂಸ್ಕೃತಿಯನ್ನು ಹೇಗೆ ನೋಡುತ್ತೇವೆಯೆನ್ನುವುದು ಮುಖ್ಯವಾಗುತ್ತದೆ. ಯಾಕೆಂದರೆ ಚರಿತ್ರೆಯೆನ್ನುವುದು ಆಳುವ ವರ್ಗದ ನಡುವಳಿಕೆಗಳನ್ನು ಮಾತ್ರ ದಾಖಲಿಸುತ್ತದೆ. ಅದಕ್ಕೆ ಹೊರತಾಗಿಯೂ ಅಲಕ್ಷಿತ ಸಮುದಾಯಗಳ ನಡವಳಿಕೆಗಳೂ ಇರುತ್ತವೆಯೆಂಬುದನ್ನು ಚರಿತ್ರೆಕಾರರು ಅರಿಯಬೇಕು.

6.4 ಜಾಗತೀಕರಣ–ಸಫಾಯಿ ಕರ್ಮಚಾರಿಗಳ ಸ್ಥಿತ್ಯಂತರಗಳು

ಭಾರತೀಯ ಸಾಮಾಜಿಕ ವ್ಯವಸ್ಥೆಯೇ ತುಂಬ ವಿಚಿತ್ರವಾಗಿದೆ. ಅದು ವರ್ಣ–ವರ್ಗ–ಜಾತಿ–ಸಮುದಾಯಗಳ ತಳಪಾಯದ ಮೇಲೆ ನಿರ್ಮಾಣಗೊಂಡಿದೆ. ಜಾತಿವ್ಯವಸ್ಥೆ ಭಾರತೀಯ ಸಮಾಜದ ಜೀವ, ಜೀವಾಳ, ಜಾತಿಯಿಲ್ಲದೆ ಸಮಾಜವನ್ನು ಕಲ್ಪಿಸಿಕೊಳ್ಳುವುದೂ ಸಾಧ್ಯವಿಲ್ಲವೆನ್ನುವಷ್ಟರ ಮಟ್ಟಿಗೆ ಅದು ಸಮಾಜದೊಡನೆ ಹಾಸುಹೊಕ್ಕಾಗಿದೆ. ವಿದ್ವಾಂಸರ ಅಭಿಪ್ರಾಯದ ಪ್ರಕಾರ "ನಮ್ಮ ದೇಶದಲ್ಲಿ ಸುಮಾರು ಮೂರು ಸಾವಿರಕ್ಕೂ ಹೆಚ್ಚು ಬುಡಕಟ್ಟು ಜಾತಿಗಳಿವೆ ಎಂದು ಗುರುತಿಸಲಾಗಿದೆ."[10] ಒಂದೊಂದು ಜಾತಿ, ಸಮುದಾಯಗಳ ವೃತ್ತಿಜೀವನದ ವಿಧಾನ, ಪರಿಸರ, ಸಂಸ್ಕೃತಿ ಹಲವಾರು ವೈಶಿಷ್ಟ್ಯಗಳನ್ನು ಹೊಂದಿವೆ. ಬದುಕಿನ ಕ್ಷೇತ್ರಗಳು ಬದಲಾದಂತೆ ಜೀವನದ ಅನುಭವಗಳು ಬದಲಾಗುತ್ತವೆ. ಇಂಥ ಹಲವಾರು ಬದಲಾವಣೆಗಳನ್ನು ಜಾತಿ ದಾಟಿ ಬಂದಿವೆಯಾದರೂ ಇನ್ನೂ ಅನೇಕ ಅಸ್ಪೃಶ್ಯ ಜಾತಿಗೆ ಸೇರಿದ ಸಮುದಾಯಗಳು ತಮ್ಮ ಬದುಕಿನ ಒಳಗುಟ್ಟನ್ನು ಬಿಟ್ಟುಕೊಟ್ಟಿಲ್ಲ. ತಮ್ಮ ಸಂಸ್ಕೃತಿಯ ಚೌಕಟ್ಟನ್ನು ಮೀರಿಲ್ಲ. ತಾವು ಪರಂಪರಾಗತವಾಗಿ ಅನುಸರಿಸುತ್ತ ಬಂದಿರುವ ನಂಬಿಕೆ, ರೂಢಿ, ಆಚರಣೆ, ಸಂಪ್ರದಾಯಗಳ ಶರಣರಾಗಿ ತಮ್ಮದೇ ವಿಶಿಷ್ಟ ಸಂಸ್ಕೃತಿಯನ್ನು ಕಾಪಾಡಿಕೊಂಡು ಬಂದಿದ್ದಾರೆ. ಅಂಥವರಲ್ಲಿ ಸಫಾಯಿ ಕರ್ಮಚಾರಿಗಳೂ ಕೂಡ ಒಬ್ಬರಾಗಿದ್ದಾರೆ.

ಸಫಾಯಿ ಕರ್ಮಚಾರಿಗಳು ಭಾರತದಾದ್ಯಂತ ಹೆಚ್ಚಾಗಿ ನಗರ ಪರಿಸರದಲ್ಲಿ ಕಂಡುಬರುತ್ತಾರೆ. ಇವರು ಸಾಮಾಜಿಕ ಶ್ರೇಣಿಯಲ್ಲಿ ಕೆಳಮಟ್ಟದಲ್ಲಿದ್ದರೂ ಅವರ ಸಾಂಸ್ಕೃತಿಕ

ಬದುಕು ಮಾತ್ರ ವಿಶಿಷ್ಟವಾದುದು. ಆಧುನಿಕತೆಯ ಬದಲಾವಣೆ, ಜಾಗತೀಕರಣದ ಬೆಳವಣಿಗೆಯಿಂದ ಕಾಲ ಬದಲಾದರೂ ಈ ಸಮುದಾಯ ಮಾತ್ರ ಇನ್ನೂ ಮೇಲಿನ ವರ್ಗ ಶ್ರೇಣಿಯವರಿಂದ ಅನೇಕ ಪಾರಂಪರಿಕ ಮೂಢ ಶ್ರದ್ಧೆ ನಂಬಿಕೆಗೆ ಒಳಗಾಗಿದ್ದಾರೆ. ಸಫಾಯಿಕರ್ಮಿಗಳು ಅನುಸೂಚಿತ ಜಾತಿ, ಉಪಜಾತಿಗಳಲ್ಲಿ ವಿಸ್ತರಿಸಿಕೊಂಡಿರುವ ದುಡಿಯುವ ಜನ. ಕಾರ್ಮಿಕ, ಭೂಹೀನ, ಕೂಲಿಕಾರರು ಆಗಿರುವರು. ಸಾಮಾನ್ಯವಾಗಿ ದಲಿತ ಎನ್ನುವ ವರ್ಗಕ್ಕೆ ಸೇರಿದ ಅಸ್ಪೃಶ್ಯರೆನಿಸಿದ್ದಾರೆ. ಇಂದಿನ ಆಧುನಿಕ ಕಾಲದಲ್ಲಿ ಸಂವಿಧಾನವು ಎಲ್ಲ ಜಾತಿ ಜನಾಂಗಗಳಿಗೆ ಸಮಾನ ಹಕ್ಕುಗಳನ್ನು ನೀಡಿದೆ. ಆದರೆ ಅಸ್ಪೃಶ್ಯತೆಗೆ ಒಳಗಾಗಿರುವ ಬಂಗಿಗಳು ನಿಜವಾಗಿಯೂ ಈ ಸಮಾನತೆಯ ಹಕ್ಕನ್ನು ಅನುಭವಿಸುತ್ತಿದ್ದಾರೆಯೇ ಎಂಬುದಾಗಿ ಯೋಚಿಸಿದರೆ, ಉತ್ತರ ತೀರ ನಿರಾಶದಾಯಕವಾಗಿದೆ. ಸಫಾಯಿಗಳ (ಬಂಗಿಗಳು) ಸ್ಥಿತಿಗತಿಗಳು ಇಂದಿಗೂ ಕರಾಳವಾಗಿವೆ. ಸಂವಿಧಾನಬದ್ಧ ಹಕ್ಕುಗಳನ್ನು ಅವರು ಹೊಂದಲು ಅವರು ಕೈಕೊಂಡಿರುವ ವೃತ್ತಿಯೇ ಅವರಿಗೆ ಮಾರಕವಾಗಿದೆ. ಇನ್ನೂ ಈ ಜನಾಂಗದಲ್ಲಿ ಸಾಕ್ಷರತೆ ಅತ್ಯಂತ ಕನಿಷ್ಟಮಟ್ಟದಲ್ಲಿ ಇರುವುದರಿಂದಲೇ ಅವರಲ್ಲಿ ಬಹುತೇಕ ಮಂದಿಗೆ ಅದರ ಅರಿವೆ ಇಲ್ಲವೆನ್ನಬೇಕು.

ಸಫಾಯಿಗಳು ತಾವು ಸಾಮಾಜಿಕವಾಗಿ, ರಾಜಕೀಯವಾಗಿ ಅನುಭವಿಸುತ್ತಿರುವ ಶೋಷಣೆಯನ್ನು ಸರಕಾರದ ಗಮನ ಸೆಳೆಯುವುದಕ್ಕೆ ಈಗೀಗ ಅಲ್ಲಲ್ಲಿ ಪ್ರತಿಭಟನೆಗಳು ಕಾಣಿಸಿಕೊಳ್ಳುತ್ತವೆ ನಿಜ. ಆದರೆ ಅದು ಸಾಂಘಿಕ ಮಟ್ಟದಲ್ಲಿ ಆಗದೆ ಎಲ್ಲೊ ಒಂದೋ ಎರಡೋ ಕುಟುಂಬಗಳ ನೇತೃತ್ವದಲ್ಲಿ ನಡೆಯುತ್ತಿದೆ.

ಉದಾ: ಕಳೆದ ಕೆಲವು ದಿನಗಳ ಹಿಂದೆ ಹಾವೇರಿ ಜಿಲ್ಲೆಯ ಸುವರ್ಣರ ಪಟ್ಟಣದಲ್ಲಿ ಅಲ್ಲಿನ ಸಫಾಯಿಕರ್ಮಿ ಕುಟುಂಬವು ತಮ್ಮ ಕಡೆಗೆ ಸರಕಾರದ ಗಮನ ಸೆಳೆಯಲು ಮೈಮೇಲೆ ಮಲ ಸುರುವಿಕೊಂಡಿತು. ಇದು ಮಾಧ್ಯಮಗಳಲ್ಲಿ ದೊಡ್ಡ ಸುದ್ದಿ ಮಾಡಿತು. ವಿಧಾನಸಭೆ, ಮಾನವ ಹಕ್ಕುಗಳ ಆಯೋಗದ ಗಮನಕ್ಕೂ ಬಂದಿತು. ಇದರಿಂದ ಸರಕಾರ ಶೋಷಿತ ಬಂಗಿ ಕುಟುಂಬಗಳಿಗೆ ಒಂದಷ್ಟು ನೆರವನ್ನು ಘೋಷಿಸಿತು. ವಿಪರ್ಯಾಸವೆಂದರೆ ಅಷ್ಪೃಶ್ಯರಿಗೆ, ಶೋಷಿತರಿಗೆ ಅವರ ಸಂವಿಧಾನಿಕ ಹಕ್ಕುಗಳಿಗೆ ಇನ್ನೂ ಹೋರಾಟ ಮಾಡಬೇಕಾದ ಪರಸ್ಥಿತಿಯಿಲ್ಲದಿಲ್ಲವೆಂಬುದೇ ಖೇದಕರ ಸಂಗತಿಯಾಗಿದೆ. ಈ ಘಟನೆಯಿಂದ ಪ್ರೇರಿತರಾದ ಕೆಲವೊಂದು ಕಡೆಗಳಲ್ಲಿ ಸಫಾಯಿಕರ್ಮಿಗಳು ಇಂಥದೇ ಬೇರೆ ಬೇರೆಯಾಗಿ ಪ್ರತಿಭಟಿಸಿದವು ಎಂಬುದನ್ನು ಮಾಧ್ಯಮಗಳಿಂದ ನೋಡುತ್ತೇವೆ.

ಮೂಲಭೂತವಾಗಿ ಅಸ್ಪೃಶ್ಯರ ಬಗೆಗಿನ ಈ ತಿರಸ್ಕಾರ ಧೋರಣೆಗೆ ನಮ್ಮ ನಂಬಿಕೆಗಳು ಧರ್ಮಗ್ರಂಥಗಳೇ ಕಾರಣವಾಗಿವೆ. ವೇದಗಳು ಹಿಂದುಗಳಲ್ಲಿ ಅತ್ಯಂತ ಪ್ರಾಚೀನ ಧರ್ಮಗ್ರಂಥಗಳಾಗಿವೆ. ವೇದಗಳಿಂದ ಪ್ರೇರಿತವಾದ ನಂತರದ ಧಾರ್ಮಿಕ ಕೃತಿಕಾರರು ಇನ್ನೂ ಹೆಚ್ಚಿನ ನಿಂದಾತ್ಮಕ ಭಾಷೆಯಲ್ಲಿ ಅಸ್ಪೃಶ್ಯರನ್ನು ಕುರಿತು ಬರೆದಿರುವರು. ಅಸ್ಪೃಶ್ಯರನ್ನು ಚಾಂಡಾಲರನ್ನು ಪ್ರಾಣಿ ವರ್ಗಕ್ಕೆ ಸೇರಿಸಲಾಗಿತ್ತು. ಅವರಿಗೆ ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸುವ ಅವಕಾಶವಿರಲಿಲ್ಲ. ಸತ್ತ ಪಶುವಿನ ಮಾಂಸವನ್ನು ಆಹಾರವಾಗಿ ಉಪಯೋಗಿಸಬೇಕೆನ್ನುವ ಅವರು ಹಗಲು ಹೊತ್ತಿನಲ್ಲಿ ಊರಲ್ಲಿ ನಿಷಿದ್ಧ ಎಂಬ ಕಟ್ಟಳೆಗಳನ್ನು ವಿಧಿಸಲಾಗಿತ್ತು. ಚಾಂಡಾಲರು ಯಾವ ವೇಳೆಯಲ್ಲಿ ಮತ್ತು ಹೇಗೆ ಊರನ್ನು ಪ್ರವೇಶಿಸಬೇಕು ಎಂಬ ನಿಯಮಗಳನ್ನು ಧಾರ್ಮಿಕ ಗ್ರಂಥಗಳಲ್ಲಿ ಹೇಳಲಾಗಿದೆ. ಅದರಂತೆ ಅವರುಗಳು ನಡೆಯಬೇಕಾಗಿತ್ತು. ಸ್ವಾಭಾವಿಕವಾಗಿ ಅಂತಹ ಕ್ರೂರ ಧಾರ್ಮಿಕ, ಸಾಮಾಜಿಕ ಸಂಪ್ರದಾಯಗಳ ನೆರಳಲ್ಲಿ ಆಶ್ರಯಪಡೆಯುತ್ತ ಉತ್ತಮ ವರ್ಣ, ವರ್ಗದವರ ಶೋಷಣೆಗೆ ಗುರಿಯಾಗಿ ಭೋಗವಸ್ತುವಾಗಿ ಪರಿಗಣಿಸಲ್ಪಟ್ಟಿರುವರು.

ಕರ್ನಾಟಕದೆಲ್ಲೆಡೆ ನೆಲೆನಿಂತಿರುವ ಸಫಾಯಿಗಳನ್ನು ಸವರ್ಣೀಯರು ಕೀಳಾಗಿ ಕಂಡು, ತಮ್ಮ ಗುಲಾಮರನ್ನಾಗಿಸಿಕೊಂಡು ಪರಾವಲಂಬಿಗಳಾಗಿ ಬದುಕುವಂತ ಪರಿಸರವನ್ನು ಬಹು ಪುರಾತನ ಕಾಲದಿಂದಲೂ ನಿರ್ಮಿಸಿ ದಲಿತ ಸಂಸ್ಕೃತಿ ಬೆಳಕಿಗೆ ಬರದಂತೆ ನೋಡಿಕೊಂಡಿರುವುದು ವಿಷಾದನೀಯ. ಉತ್ತರ ಕರ್ನಾಟಕದಲ್ಲಿ ಸಾಮಾನ್ಯವಾಗಿ ಸಫಾಯಿಗಳು ಸಸ್ಯಹಾರಿ ಮತ್ತು ಮಾಂಸಾಹಾರಿಗಳಾಗಿದ್ದಾರೆ. ರೊಟ್ಟಿ, ನುಚ್ಚು ಮಜ್ಜಿಗೆಗಳಲ್ಲಿ ಕುರಿ, ಕೋಳಿ, ಎತ್ತು, ಎಮ್ಮೆ, ದನ, ಮೀನು, ಮೊಲ, ಕೌಜುಗ, ಪಾರಿವಾಳ, ಬುರ್ಲಿ, ಬಾತುಗೋಳಿ, ಉಡಾ ಹೀಗೆ ಅನೇಕ ಪ್ರಾಣಿ ಪಕ್ಷಿಗಳನ್ನು ತಿನ್ನುವರು. ಮುಂಜಾನೆ ಏಳುತ್ತಲೇ ಕೇರಿಯಲ್ಲಿ ಮಕ್ಕಳು ಗಂಗಾಳದಲ್ಲಿ ನುಚ್ಚನ್ನೋ, ತಂಗಳ ಕೂಳನ್ನೋ ಹಾಕಿಕೊಂಡು ಉಣ್ಣುತ್ತ ನಿಂತಿರುವುದನ್ನು ಕಾಣಬಹುದು. ಅಂದರೆ ಈ ಜನಾಂಗದ ಬಡತನ ಎಷ್ಟೆಂಬುದು ಇದು ತಿಳಿಸುತ್ತದೆ. ಸಫಾಯಿ ಕರ್ಮಚಾರಿಗಳು ತಮ್ಮ ಜೀವನದ ಅರೆಕೋರೆಗಳೇನೇ ಇದ್ದರೂ ಅವುಗಳನ್ನು ನುಂಗಿಕೊಂಡು ಜನರ ಸೇವೆ ಮಾಡುವ ಮೂಲಕ ಅಸ್ಪೃಶ್ಯರಾಗಿ ಬದುಕುತ್ತಿದ್ದಾರೆ. ಭೌತಿಕ ಬದುಕಿನಂತೆಯೇ ಅಭೌತಿಕ ಬದುಕಿಗೂ ಅಷ್ಟೇ ಪ್ರಾಮುಖ್ಯತೆಯನ್ನು ಕೊಟ್ಟಿರುವುದು ಕಂಡುಬರುತ್ತದೆ. ಅನೇಕ ವಿಚಿತ್ರ ನಂಬಿಕೆ, ಆಚರಣೆ, ರೂಢಿ, ಸಂಪ್ರದಾಯದ ಸೂತ್ರಗಳನ್ನು ಹಿಡಿದುಕೊಂಡೇ ಅಭೌತಿಕ ಬದುಕನ್ನು ಸಾಗಿಸುತ್ತಿರುವರು.

ಸಾಮಾಜಿಕವಾಗಿ ತೀರ ನಿರ್ಲಕ್ಷ್ಯಕ್ಕೊಳಗಾಗಿರುವ ಅಸ್ಪರಶ್ಯರ ಬದುಕು ಇಂದಿನ ಆಧುನಿಕ ಕಾಲವನ್ನು ಹೊರತುಪಡಿಸಿ ಹೇಳುವುದಾದರೆ, ಕ್ರಿ.ಪೂ.ದಲ್ಲಿ ಬುದ್ಧನು ಮತ್ತು ಹನ್ನೆರಡನೆಯ ಶತಮಾನದ ಶಿವಶರಣರು ಪ್ರಮುಖರಾಗಿದ್ದಾರೆ. ಇವತ್ತಿನ ಜಾಗತೀಕರಣ ಕೂಸಾದ ಖಾಸಗೀಕರಣವು ದಲಿತರ ಬದುಕನ್ನು ನುಂಗಿ ಹಾಕಿದರೆ, ಹಿಂದೆ "ಭಾರತೀಯ ಊಳಿಗಮಾನ್ಯ ವ್ಯವಸ್ಥೆಯು ಸಾಮೂಹಿಕ ಒಡೆತನವನ್ನು ಧಿಕ್ಕರಿಸಿ ಆಸ್ತಿಯನ್ನು ಖಾಸಗೀಕರಣ ಮಾಡುವುದರ ಮೂಲಕ ದಲಿತರನ್ನು ಶೋಷಿತರನ್ನು ನುಂಗಿಹಾಕಿತ್ತು. ಉತ್ಪಾದನಾ ಶಕ್ತಿಗಳಿಂದ ಮಿಗುತಾಯವನ್ನು ಕಿತ್ತು ಅದನ್ನು ಆಳುವ ವರ್ಗದ ವಿವಿಧ ಸಮೂಹಗಳಿಗೆ ವಿತರಣೆ ಆದ ಪ್ರಕ್ರಿಯೆ ಅವ್ಯಾಹತವಾಗಿ ಮಧ್ಯಕಾಲೀನ ಸಮಾಜದಲ್ಲಾಯಿತು. ಲಭ್ಯವಿರುವ ಶಾಸನ ಹಾಗೂ ಸಾಹಿತ್ಯ ಈ ವಾದವನ್ನು ಪುಷ್ಟೀಕರಿಸುತ್ತದೆ."[11] ಮಿಗುತಾಯದ ಹೆಚ್ಚಳವನ್ನು ಛತ್ರಗಳಿಗೆ ಪುರೋಹಿತಸಾಹಿ ಸಂಸ್ಥೆಗಳಾದ ಮಠ, ದೇವಸ್ಥಾನಗಳಿಗೆ ದಾನ ಮಾಡಿದರೇ ಹೊರತು ಹಸಿದ ಅಸ್ಪೃಶ್ಯ ಸಮುದಾಯಕ್ಕೆ ನೀಡಲಿಲ್ಲ. ಮಧ್ಯಕಾಲೀನ ಸಮಾಜದಲ್ಲಿ ದೇವಸ್ಥಾನಗಳು ರಾಜಕೀಯ ಶಕ್ತಿಗಳನ್ನು ಕೇಂದ್ರೀಕರಿಸುವ ಆರ್ಥಿಕ ಸಂಪತ್ತನ್ನು ಭದ್ರಗೊಳಿಸುವ ಕೇಂದ್ರಗಳದವು. ಅವರಿಗೆ ಮಾನವೀಯತೆಗಿಂತಲೂ ಪುಣ್ಯ, ಸ್ವರ್ಗ ಹಾಗೂ ಮೋಕ್ಷ ಗಳಿಕೆ ಪ್ರಧಾನ ಕಾಳಜಿಯಾಗಿತ್ತು ಎಂದು ಹೇಳಬಹುದು.

ಅಂತೆಯೇ ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣ ದೇವಾಲಯಗಳನ್ನೇ ನಿರಾಕರಿಸಿ, ಆವತ್ತಿನ ಖಾಸಗೀಕರಣಕ್ಕೆ ಪರ್ಯಾಯವನ್ನು ಸೃಷ್ಟಿಸಿದನು.

"ಉಳ್ಳವರು ಶಿವಾಲಯ ಮಾಡುವರು
ನಾನೇನು ಮಾಡಲಯ್ಯಾ ಬಡವನು
ಎನ್ನ ಕಾಲೇ ಕಂಬ ಶಿರವೇ ಹೊನ್ನ ಕಳಸ
ದೇಹವೇ ದೇಗುಲವಯ್ಯಾ
ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ
ಕೂಡಲ ಸಂಗಮದೇವಾ"

ಹೀಗೆ ದೇವಸ್ಥಾನಗಳು ಭೂಮಾಲಿಕರು, ಅರಸರ, ಶ್ರೀಮಂತರ ಹಾಗೂ ಉತ್ಪಾದನಾ ಸಾಧನಗಳ ಸ್ವಾಧೀನವಾಗಿದ್ದವೆಂಬುದು ದೃಢಪಡುತ್ತದೆ. ಇದು ರಾಜಕೀಯ ಅಧಿಕಾರ ಮತ್ತು ಆರ್ಥಿಕ ಕ್ರೋಢೀಕರಣಕ್ಕೆ ಅಂದಿನ ಯಜಮಾನ ವ್ಯವಸ್ಥೆ ದೇವಾಲಯಗಳನ್ನು ಬಳಸಿಕೊಂಡಿದ್ದವು.

"ರಾಜಪ್ರಭುತ್ವ ಮತ್ತು ಊಳಿಗಮಾನ್ಯ ಆರ್ಥಿಕತೆಯ ಅಡಿಯಲ್ಲಿ ಒಟ್ಟಾರೆ ಭಾರತದಲ್ಲಿ ಶ್ರೇಣೀಕೃತ ಸಮಾಜ ಮನಮಾಡಿತ್ತು. ಇದು ಮುಸ್ಲಿಂ ರಾಜರುಗಳಿಗೂ ಅನ್ವಯಿಸುತ್ತದೆ. ಅಂದಿನ ಸಾಮಾಜಿಕ ಚೌಕಟ್ಟಿನಲ್ಲಿ ನಾಲ್ಕು ವರ್ಣಗಳಲ್ಲದೆ ಅದರ ಹೊರಗೆ ಪಂಚಮರಿದ್ದರು. ಪಂಚಮರ ಸ್ಥಿತಿ ತೀರ ಹೀನಾಯವಾಗಿತ್ತು. ಊರಲ್ಲಿ ವಾಸಿಸುವಂತಿರಲಿಲ್ಲ. ಇವರಿಗೆ ವಿದ್ಯಾಭ್ಯಾಸ ನಿಷೇಧವಾಗಿತ್ತು."[13]

ಮಧ್ಯಕಾಲದಲ್ಲಿ ಹುಟ್ಟಿಕೊಂಡ ಭಕ್ತಿ ಚಳವಳಿಗಳು ರಾಜತ್ವ ಹಾಗೂ ಊಳಿಗಮಾನ್ಯ ವ್ಯವಸ್ಥೆಯನ್ನು ವಿರೋಧಿಸಿದವು. ಇವು ಕೆಳವರ್ಗದ ದುಡಿಯುವ ವರ್ಗದ ಜನರಿಂದಲೇ ಪ್ರಾರಂಭವದವು. ಆದರೆ ಎಲ್ಲ ಚಳವಳಿಗಳ ತಾರ್ಕಿಕ ನೆಲೆಗಟ್ಟು ದೇವರ ಕಡೆಗೆ ಇದ್ದುದ್ದರಿಂದ ವಾಸ್ತವ ಬದುಕಿನ ಕಟುಸತ್ಯಗಳಿಗೆ ವಚನಕಾರರಷ್ಟು ಖಚಿತವಾಗಿ ಸ್ಪಂದಿಸಲಾರದೆ ಹೋದವೆಂತಲೇ ಹೇಳಬೇಕು. ಅಂದರೆ ಈ ಚಳವಳಿಯಲ್ಲಿ ಪಾಲ್ಗೊಂಡವರೆಲ್ಲರೂ ತಾತ್ವಿಕ, ಪಾರಮಾರ್ಥಿಕ ಲೋಕದ ಚಿಂತನೆಯ ಕಡೆಗೆ ಹೆಚ್ಚು ವಾಲಿದ್ದರಿಂದ ಅಲಕ್ಷಿತ ಜನವರ್ಗದವರು ಇಲ್ಲಿ ದಾಖಲಾಗದೆ ಹೋದರು ಎಂದು ಹೇಳಬೇಕು. "ಚಳವಳಿಯ ಚಿಂತನೆಗಳು ಸಮಾಜದ ಆರ್ಥಿಕ ವ್ಯವಸ್ಥೆಯಲ್ಲಿ ಉತ್ಪಾದನಾ ವಿಧಾನಗಳಲ್ಲಿ ಬದಲಾವಣೆ ತರುವಂತಹ ರಾಜಕೀಯ, ಸಾಮಾಜಿಕ ಚಿಂತನೆಗಳು ಮೂಡಲಿಲ್ಲ. ಬಹುತೇಕ ಯುರೋಪಿನ ವಸಾಹತುಗಾರರು ಬರುವವರಗೂ ಸಾಮಾಜಿಕ ಅಗತ್ಯಗಳಿಗೆ ಅನುಗುಣವಾಗಿ ಆಗಬೇಕಿದ್ದ ಬದಲಾವಣೆಗಳು ಆಗಲಿಲ್ಲ ಎನ್ನುವುದು ಗಮನಿಸಬೇಕಾದ ಅಂಶವಾಗಿದೆ."[14] ಹೀಗಾಗಿ ಯುರೋಪಿನ ವಸಾಹತುವಾದಿ ದೇಶಗಳು ಬಹುಬೇಗನೆ ಅಭಿವೃದ್ಧಿಶೀಲ ರಾಷ್ಟ್ರಗಳ ಮೇಲೆ ತನ್ನ ಪ್ರಭುತ್ವದ ಅಧಿಪತ್ಯವನ್ನು ಬೇಗನೆ ಹೊಂದಲು ಸಾಧ್ಯವಾಯಿತು. ಇದನ್ನು ಹಿಮ್ಮೆಟ್ಟಿಸುವ ಸಾಮಾಜಿಕ ವ್ಯವಸ್ಥೆ, ಸಾಮಾಜಿಕ ಚಿಂತನೆಗಳು ನಮ್ಮ ದೇಶದಲ್ಲಿ ಪ್ರಬಲವಾಗಿ ಮೂಡಿ ಬರಲಿಲ್ಲವೆಂತಲೂ ಹೇಳಬಹುದು.

ಆಧುನಿಕತೆ, ಜಾಗತೀಕ, ಆರ್ಥಿಕ, ಉದಾರೀಕರಣ, ಪ್ರಜಾಪ್ರಭುತ್ವ ಇವೆಲ್ಲವೂ ಶೋಷಿತರ, ಅಸ್ಪೃಶ್ಯರ ಪಾಲಿಗೆ ವರದಾನವಾಗಬೇಕಾಗಿತ್ತು ಆದರೆ ಅದಾಗುತ್ತಿಲ್ಲ. ಇಂದಿಗೂ ಅಸ್ಪೃಶ್ಯತೆಯ ಕಾರಣದಿಂದ ಉಚ್ಚ ಜಾತಿಯವರೊಂದಿಗೆ ಸರಿಸಮಾನವಾದ ಹಕ್ಕುಗಳು ದಮನಿತ ಸಫಾಯಿ ಕರ್ಮಚಾರಿಗಳತಂಹ ವರ್ಗಗಳಿಗೆ ದಕ್ಕುತ್ತಿಲ್ಲ.

ಸಂಪತ್ತು ಪಾಸು ಮಾಡಿದ ಅಸ್ಪೃಶ್ಯಯತೆ ಕಾಯ್ದೆ ಇದ್ದಾಗ್ಯೂ ರಾಜ್ಯದ ತುಂಬ ದಮನಿತರ ಮೇಲೆ ಅನ್ಯಾಯ, ಅತ್ಯಾಚಾರ ಪ್ರಮಾಣದಲ್ಲಿ ಬದಲಾವಣೆ ಕಂಡಿಲ್ಲ. "ದೇಶದ ಸಧ್ಯದ ಲೌಕಿಕ

ಹಾಗು ಆಧ್ಯಾತ್ಮಿಕ ಅಧೋಗತಿಗೆ ಭಾರತದಲ್ಲಿರುವ ಜಾತಿ ಪದ್ಧತಿಯೇ ಏಕೈಕ ಮಹತ್ವದ ಕಾರಣವೆಂದು"[15] ಸಮಾಜವಾದಿ ಚಿಂತಕ ಡಾ. ರಾಮಮನೋಹರ ಲೋಹಿಯಾ ಅವರ ಅಭಿಪ್ರಾಯ ಇಲ್ಲಿ ಉಲ್ಲೇಖನೀಯವಾಗಿದೆ. ಈ ದೇಶದ ಜನರ ಮನಸ್ಸಿನ ಮೇಲೆ ಜಾತಿ ತುಂಬ ಅಚ್ಚೊತ್ತಿದೆಯೆಂದರೆ ಜನ ತಮ್ಮ ಜಾತಿಯ ಏಳ್ಗೆಯೆಂದರೆ ದೇಶದ ಏಳ್ಗೆಯೆಂದು ನಿರ್ದಿಷ್ಟವಾಗಿ ಸಮೀಕ್ಷಿಸುತ್ತಾರೆ. ಇದು ಈ ದೇಶದಲ್ಲಿನ ಜನರ ಮನೋಸ್ಥಿತಿಯಾಗಿದೆ. ಇದು ಬದಲಾಗದ ಹೊರತು ನಿಮ್ನ ದಮನಿತ ಜಾತಿಗಳು ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲವೆಂದು ಹೇಳಬೇಕು.

ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕವಾಗಿ ಶೋಷಿತರಾದ ಜಾತಿ ಸಮುದಾಯಗಳ ಕುರಿತಾದ ವಿದ್ವಾಂಸರ ವಾದ, ಅಭಿಪ್ರಾಯ ವ್ಯಾಖ್ಯೆಗಳನ್ನು ಚರ್ಚೆಯಾಯಿತು. ಅಲ್ಲದೆ ಈ ಜಾತಿ ಸಮುದಾಯಗಳಿಗೆ ಅವರದೇ ಆದ ಸಾಂಸ್ಕೃತಿಕ ಅನನ್ಯತೆಯಿರುವುದನ್ನು ಗಮನಿಸಲಾಯಿತು. ಮನುಷ್ಯ ಸಮಾಜ ಇರುವೆಡೆಯಲ್ಲೆಲ್ಲ, ಸಂಸ್ಕೃತಿ ಇದ್ದೇ ಇರುತ್ತದೆಯೆಂದು ಈಗಾಗಲೇ ಹೇಳಲಾಗಿದೆ. ಆದರೆ ಈ ತಳ ಸಮುದಾಯಗಳ ಬದುಕಿನಲ್ಲಿ ಈವರೆಗೆ ಆಗಿರುವ ಸ್ಥಿತ್ಯಂತರಗಳ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಸ್ಥಿತ್ಯಂತರಗಳು ಅದಕ್ಕೆ ಕಾರಣವಾದ ಜಾಗತೀಕರಣದ ಬಗೆಗೆ ಹೆಚ್ಚಿನ ಅಧ್ಯಯನ ನಡೆಯಬೇಕಿದೆ.

ಮನುಷ್ಯನಿರುವೆಡೆಯಲ್ಲೆಲ್ಲ ಸಮಾಜ ಮತ್ತು ಸಂಸ್ಕೃತಿಗಳು ಇದ್ದೇ ಇರುತ್ತದೆಯೆಂದು ಈಗಾಗಲೇ ಹೇಳಲಾಗಿದೆ. "ಈ ಜನ ಯಾವುದೇ ಜಾತಿ ಸಮುದಾಯದವರು ಆಗಿರಬಹುದು. ಎಲ್ಲಿಯಾದರೂ ವಾಸಿಸಬಹುದು ಜನರಿದ್ದ ಕಡೆ ಸಂಸ್ಕೃತಿ ಇದ್ದೇ ಇರುತ್ತದೆ. ಆದರೆ ಹೀಗೆ ಇರುವ ಸಂಸ್ಕೃತಿ ಒಂದೇ ತೆರನಾದುದಲ್ಲ, ಒಂದೇ ವಿನ್ಯಾಸದಲ್ಲ. ಒಂದೊಂದು ಪ್ರದೇಶದಲ್ಲಿ ಒಂದೊಂದು ಜನಾಂಗಕ್ಕೆ ಒಂದೊಂದು ರೀತಿಯ ಸಂಸ್ಕೃತಿ ಇರಲು ಸಾಧ್ಯವಿಲ್ಲ."[16] ಮನುಷ್ಯ ಸಮಾಜದ ಬೆಳವಣಿಗೆಯ ಹಿಂದೆ ಒಂದು ನಿರ್ದಿಷ್ಟ ಚರಿತ್ರೆಯಿರುವುದು ಹಾಗೂ ಅದು ತನ್ನದೇ ಸಾಂಸ್ಕೃತಿಕ ವಿಶಿಷ್ಟತೆಯನ್ನು ಉಳಿಸಿಕೊಂಡೆ ಚರಿತ್ರೆ ರೂಪಿಸಿಕೊಳ್ಳುವು. ಈ ಹಿನ್ನೆಲೆಯಲ್ಲಿ ನಾವು ಚರಿತ್ರೆ ಮತ್ತು ಸಂಸ್ಕೃತಿಯನ್ನು ಹೇಗೆ ನೋಡುತ್ತೇವೆ ಎನ್ನವುದೂ ಮುಖ್ಯವಾಗುತ್ತದೆ.

ಕಾಲ ಬದಲಾದರೂ ಸಂಸ್ಕೃತಿ ಚಲನಶೀಲವಾಗಿ ಮುಂದುವರಿಸಿರುತ್ತದೆ. ಆದ್ದರಿಂದ ಪರಿಸರ ಬದಲಾದಂತೆ ಸಂಸ್ಕೃತಿಯೂ ಬದಲಾವಣೆಯೊಂದಿಗೆ ಸಾಗಿಬರುತ್ತದೆ. ಗ್ರಾಮಗಳು ನಗರಗಳಾದಂತೆ, ನಗರ ಸಮಾಜ ನಗರ ಸಂಸ್ಕೃತಿಯಾಗುತ್ತದೆ. ನಗರ ಪರಿಸರದಲ್ಲಿ ಬದುಕುವ ಜನರ ರೀತಿ, ನೀತಿ,

ಸಂಪ್ರದಾಯಗಳಲ್ಲಿ ನಗರ ಸಂಸ್ಕೃತಿಯ ಲಕ್ಷಣಗಳಾಗಿ ಅವು ಜೀವಂತವಾಗಿರುತ್ತವೆ. ಈ ದಿಸೆಯಲ್ಲಿ ಗುಲಬರ್ಗಾ ಜಿಲ್ಲೆಯಲ್ಲಿ ನೆಲೆಸಿರುವ ಸಫಾಯಿ ಕರ್ಮಚಾರಿಗಳ ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಒಳನೋಟಗಳನ್ನು ಗಮನಿಸುವಂತಿದೆ.

ನಗರ ಪ್ರದೇಶದಲ್ಲಿ ನೆಲೆಸಿರುವ ಸಫಾಯಿಕರ್ಮಚರಿಗಳು ವಾಸದ ಮನೆಗಳು ಈಗ ಸುಧಾರಣೆ ಕಂಡಿವೆ. ಆಧುನಿಕ ಜೀವನ ಶೈಲಿಯನ್ನು ರೂಢಿಸಿಕೊಂಡಿದ್ದಾರೆ. ಅವರ ವೇಷ, ಭೂಷಣ, ಆಹಾರ ವಿಧಾನಗಳಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಸರಕಾರದ ವಿವಿಧ ಯೋಜನೆಗಳಾದ ಆಶ್ರಯ ಮನೆ, ಭಾಗ್ಯಜ್ಯೋತಿ, ಉದ್ಯೋಗ ಖಾತ್ರಿ, ಪಡಿತರ ಹಂಚಿಕೆ, ಗಂಗಾಕಲ್ಯಾಣ ಮುಂತಾದ ಯೋಜನೆಗಳ ಫಲಾನುಭವವನ್ನು ಪಡೆಯುತ್ತಿದ್ದಾರೆ ಇಷ್ಟೆಲ್ಲ ನಿಜ. ಆದರೆ ಈ ಸಮುದಾಯದ ಕುರಿತು ಸವರ್ಣೀಯರ ಮನೋಸ್ಥಿತಿಯಲ್ಲಿ ಬದಲಾವಣೆ ಕಾಣುವುದಿಲ್ಲ. ಇನ್ನೂ ಅವರ ದೃಷ್ಟಿಯಲ್ಲಿ ಮೂಢ ನಂಬಿಕೆಗಳು ಮನೆಮಾಡಿವೆ. ಮುಂಜಾನೆ ಅವುಗಳ ಮುಖದರ್ಶನ ಮಾಡುವುದಿಲ್ಲ. ಅಸ್ಪೃಶ್ಯತೆಯು ಜೀವಂತವಾಗಿದೆ. ಈ ಸಮುದಾಯವು ಪ್ರತ್ಯೇಕತಾ ಪರಿಕಲ್ಪನಾತ್ಮಕ ಪರಿಭಾವನೆಯಿಂದ ದೂರ ಸರಿಯುವಂತಾಗಿದೆ ಹೊರತಾಗಿ ಅಥವಾ ಪ್ರಧಾನ ನೆಲೆಯಿಂದ ನಿರ್ಲಕ್ಷಿತರಾಗಿ ಬದುಕುತ್ತಿರುವ ಸಂಸ್ಕೃತಿಗಳು ಉಪಸಂಸ್ಕೃತಿ ಪರಿಕಲ್ಪನೆಯ ಪರಿಧಿಗೆ ಬರುತ್ತವೆ. ಸ್ಥೂಲವಾಗಿ ಹೇಳುವುದಾದರೆ ಮುಂದುವರಿದ ಜಾತಿಗಳಿಗೆ ಹೋಲಿಸಿ ನೋಡಿದಾಗ ಹಿಂದುಳಿದ ಜಾತಿಗಳ ಬಾಳು ಒಂದು ಶಿಕ್ಷೆಯೇ ಆಗಿರುತ್ತದೆ. ಈ ಶಿಕ್ಷೆಯಿಂದ ಹೊರಬರುವಂತೆ ಮಾಡುವುದೇ ಸಾಮಾಜಿಕ, ಆರ್ಥಿಕ ಬದಲಾವಣೆಯ ಮೂಲ ಆಶಯವಾಗಿರುತ್ತದೆ ಎನ್ನಬೇಕು.

1. ಸಾಮಾಜಿಕ ಸ್ಥಿತ್ಯಂತರಗಳು

ಸಮಾಜವೆಂಬುದು ನಿತ್ಯವೂ ಪರಿವರ್ತನ ಶೀಲವಾದುದು. ಈ ಪರಿವರ್ತನೆಯ ವೇಗ ಹೆಚ್ಚಾದಂತೆ ಸಾಮಾಜಿಕ ಬದಲಾವಣೆಗಳು ಅಥವಾ ಸ್ಥಿತ್ಯಂತರಗಳು ಉಂಟಾಗುವುದು ಸಹಜ. ಇದೇ ಕಾರಣದಿಂದಾಗಿ ಗುಲಬರ್ಗಾ ಜಿಲ್ಲೆಯ ಸುಮಾರು ಅರ್ಧಭಾಗ ನಗರ ಸಮಾಜದ ಲಕ್ಷ್ಮಣಗಳನ್ನು ಮೈಗೂಡಿಸಿಕೊಂಡಿದೆ. ಅಥವಾ ಗ್ರಾಮೀಣ ಪರಿಸರ ನಗರವಾಗಿ ಪರಿವರ್ತನೆಗೊಳ್ಳುವ ಸಂಕ್ರಮ್ಮಣಾ ವ್ಯವಸ್ಥೆಯಲ್ಲದೆ. ಏಕೆಂದರೆ ಭೌತಿಕವಾಗಿ ನಗರದ ಸ್ವರೂಪಗಳು ಕಂಡುಬರುವುದಾದರೂ ಗ್ರಾಮೀಣದ

ಗುಣಸ್ವಭಾವವನ್ನು ಪೂರ್ಣವಾಗಿ ಬಿಇಟ್ಟುಕೊಟ್ಟಿಲ್ಲ. ಭಾರತೀಯ ಸಮಾಜದಲ್ಲಿ ನಗರದ ಅಂತರಂಗಲ್ಲಿಯೇ ಹಳ್ಳಿಯ ಸಂಸ್ಕೃತಿ ಅಡಗಿರುವ ಸಂಭ್ರಮಗಳಿರುವಾಗ ಗುಲಬರ್ಗಾ ಜಿಲ್ಲೆಯ ಪ್ರದೇಶದಲ್ಲಿ ಪರಿಪೂರ್ಣವಾದ ಸಮಾಜವನ್ನು ಕಾಣುವಚಿತಿಲ್ಲ. ಹೀಗಾಗಿ ನಗರ ಮತ್ತು ಗ್ರಾಮ ಈ ಎರಡೂ ಸಮಾಜಗಳ ಸಂಕೀರ್ಣ ಸ್ಥಿತಿಗತಿಗಳನ್ನು ಕಾಣಲಾಗುತ್ತದೆ. ಹೀಗಾಗಿ ಸಾಮಾಜಿಕವಾಗಿ ಇಲ್ಲಿನ ಜನ ಜೀವನ ವಿಧಾನವನ್ನು, ಸಂಸ್ಕೃತಿಯ ಗುಣಲಕ್ಷಣಗಳನ್ನು ಬದಲಾದ ಸನ್ನಿವೇಶಗಳನ್ನು ಗಮನಿಸಬಹುದು.

ಗ್ರಾಮೀಣ ಸಮಾಜ ಸೌಹಾರ್ದಯುತವಾದುದು, ಸಾಂಘಿಕವಾದುದು, ಸಹಕಾರಿಯುತವಾದುದೇ ಆತರುತ್ತದೆಯಾದರೂ ಅಲ್ಲ ಪ್ರತ್ಯೇಕತೆಯ ಗೋಡೆಗಳು ಭದ್ರವಾಗಿರುತ್ತವೆ. ಉದಾಹರಣೆಗೆ : ಗ್ರಾಮಗಳಲ್ಲಿ ಪರತಿಯೊಂದು ಜಾತಿಗೂ ಪ್ರತ್ಯೇಕವಾದ ಕೇರಿಗಳಿರುತ್ತವೆ. ಅಸ್ಪೃಶ್ಯರನ್ನು ಊರಿನ ಹೊರಗಡೆಯ ಕೇರಿಗಳಲ್ಲಿ ವಾಸಿಸುವಚಿತೆ ಪ್ರಾಚೀನ ಕಾದಲ್ಲಿ ನಿಯಮಿಸಿದ್ದ ರೂಢಿ ಇಂದಿಗೂ ಚಾಲ್ತಿಚುಲ್ಲಿರುವುನ್ನು ಕಾಣುತ್ತೇವೆ. 'ಊರಿದ್ದಲ್ಲಿ ಹೊಲಗೇರಿ' ಇರುತ್ತದೆಂದು ಇಂತಹ ವಿಭಜನೆಯನ್ನು ಶಾಶ್ವತಗೊಳಿಸಿರುವ ಗ್ರಾಮೀಣ ಸಮಾಜದ ಮೌಲ್ಯಗಳು ಆಧುನಿಕವಾಗಿಯೂ ಉಳಿದಿವೆ. ಗ್ರಾಮಗಳಲ್ಲಿ ದಿನನಿತ್ಯದ ವ್ಯವಹಾರಕ್ಕೆ ಪ್ರೀತಿಯೊಂದು ಜಾತಿಯವರ ಅವಶ್ಯಕತೆಯಿರುತ್ತದೆ. ತೋಟ, ತಳವಾರಿಕೆ, ನೀರಗಂಟಿ ಜೀತಗಾರಿಕೆ ಮುಂತಾದ ಪರಿಶ್ರಮದಾಯಕಾದ ಮತ್ತು ಕನಿಷ್ಠವೆಂದು ಭಾವಿಸಲಾದ ಕೆಲಸಗಳು ಅಸ್ಪೃಶ್ಯನಿಗೆ ಮೀಸಲಾಗಿದ್ದು ಕನಿಷ್ಠ ಕೆಲಸದ ಕಾರಣದಿಂದಲಾದರೂ ಸಮಾಜದ ಅಗತ್ಯವಾಗಿ ಪರಿಣಮಿಸಿದ್ದನು. ಆದರೆ ಭಾರತೀಯ ಸಮಾಜದ ಅನುವಂಶೀಚಿಚು ವೃತ್ತಿ ಸಂಬಂಧಗಳು ಬದಲಾಗಿದ್ದು ಅಸ್ಪೃಶ್ಯತೆ ಕಾನೂನು ಬದ್ಧವಾದ ಅಪರಾಧವೆಂದು ನಿರ್ಧಾರಿತವಾಗಿದ್ದರೂ ಇಂದಿಗೂ ಉಳಿದುಕೊಂಡು ಬಂದಿದೆ. "ಜಾತಿ ಪದ್ಧತಿ ಮತ್ತು ಅಸ್ಪೃಶ್ಯತೆ ಭಾರತೀಯ ಸಮಾಜಕ್ಕಂಟಿದ ಕಳಂಕವಾಗಿದ್ದು ಸಾಮಾಜಿಕವಾಗಿ ಮುಂದುವರಿದ ಜಾತಿಗಳು ಶ್ರೇಷ್ಠತೆಯ ಗುಂಗಿನಲ್ಲಿದ್ದರೆ, ತಳ ಜಾತಿಗಳು ಅಪಮಾನದಿಂದ ಕೀಳರಿಮೆಯಲ್ಲಿ ತೊಳಲಾಡುತ್ತಿವೆ."[19] ಬದಲಾದ ಸಾಮಾಜಿಕ ಸಂದರ್ಭದಲ್ಲಿ ಅಸ್ಪೃಶ್ಯರ ಸ್ವಾಭಿಮಾನಕ್ಕೆ ಆತಂಕಕಾರಿಯಾಗಿದ್ದು ಸಂಪ್ರದಾಯ ಸಮಾಜದ ವಿರುದ್ಧ ಸಂಘರ್ಷಗಳು ಅಸಮಾಧಾನಗಳು ಉಂಟಾಗುತ್ತಿರುತ್ತವೆ. ಅನೇಕ ದಮನಿತ ಸಮುದಾಯಗಳು ತಮ್ಮ ಧ್ವನಿಯನ್ನು ಹೊರಡಿಸಲಾಗದ ರೀತಿಯಲ್ಲಿ ಕಡೆಗಣಿಸಲ್ಪಟ್ಟಿರುವುದು ಮತ್ತೊಂದು ವಿಪರ್ಯಾಸವಾಗಿದೆ.

ಮತ್ತೊಂದು ರೀತಿಯಲ್ಲಿ ಇಂಥ ದಯನಿತ ಸಮುದಾಯಗಳು ನಗರ ಸಮಾಜದಲ್ಲಿ ತಮ್ಮ ಧ್ವನಿಯನ್ನು ಹೊರಡಿಸಲಾಗದ ರೀತಿಯಲ್ಲಿ ಕಡೆಗಣಿಸಲ್ಪಟ್ಟಿವೆ. ಇದಕ್ಕೆ ಸಫಾಯಿ ಕರ್ಮಚಾರಿ

ಸಮುದಾಯವು ಸ್ಪಷ್ಟ ಉದಾಹರಣೆಯಾಗಿದೆ "ನಗರಗಳು ಆಕರ್ಷಣೀಯ ಕೇಂದ್ರಗಳಾಗಿದ್ದು, ಅಲ್ಲಿನ ಕೆಲವು ಅನುಕೂಲಗಳ ಕಾರಣದಿಂದ ಹೆಚ್ಚಿನ ಸಂಖ್ಯೆಯಲ್ಲಿ ನಗರಗಳಿಗೆ ಸ್ಥಳಾಂತರಗೊಳ್ಳುವ ಪ್ರವೃತಿಯಿದೆ. ಈ ಕಾರಣದಿಂದಾಗಿ ಸಾಮಾಜಿಕ ಆರ್ಥಿಕ, ಸಾಂಸ್ಕೃತಿಕವಾದ ಸಮಸ್ಯೆಗಳು ಹೆಚ್ಚಾಗಿ ಪರಾವಲ ಖಿತನ ಶೋಷಣೆ, ಅನಶ್ಚಿತತೆ, ಅಭದ್ರತೆಗಳ ತೊಟ್ಟಿಲುಗಳ ನಗರಗಳಾಗಿವೆ"[20]

ಗುಲಬರ್ಗಾ ನಗರವು 2001ರ ಜನಗಣತಿಯ ಪ್ರಕಾರ ಜನ ಸಂಖ್ಯೆಯು ಐದು ಲಕ್ಷ್ಯ ಮೀರಿದ್ದು ನಗರದ ಎಲ್ಲ ಲಕ್ಷಣಗಳನ್ನು ಮೈಗೂಡಿಸಿಕೊಂಡಿರುವುದು. ಕೈಗಾರಿಕಾಭಿವೃದ್ಧಿಯ ಪರಿಣಾಮವಾಗಿ ಬದಲಾದ ಕಾರಣ ನಗರ ಹೆಚ್ಚಿನ ಜನ ಸಾಂದ್ರತೆ ಹೊಂದಿರುವುದು ಮತ್ತು ಆಡಳಿತ ಕೇಂದ್ರಗಳು ನಗರದಲ್ಲಿ ಕೇಂದ್ರೀಕೃತವಾದ ಪರಿಣಾಮವಾಗಿ ನೌಕರ ವರ್ಗ ಮತ್ತು ಕಾರ್ಮಿಕ ವರ್ಗದ ಜನ ನಗರದಲ್ಲಿ ನೆಲೆ ನಿಂತು ಅವರ ಅಗತ್ಯಗಳಿಗನುಗುಣವಾಗಿ ಸಾರಿಗೆ, ಶಿಕ್ಷಣ, ಆರೋಗ್ಯ, ನೈರ್ಮಲ್ಯ ಮುಂತಾದ ಅನುಕೂಲಗಳು ಕಲ್ಪಿತವಾಗಿ ಮನರಂಜನಾ ಕೇಂದ್ರಗಳೂ ಆಗಿ ಮಾರ್ಪಟ್ಟಿದ್ದರಿಂದ ಆಕರ್ಷಕವಾಗಿ ಪರಿಣಮಿಸಿದೆ. ಇದೇ ಪರಸ್ಥಿತಿ ಜಲ್ಲೆಯ ತಾಲೂಕು, ಹೋಬಳಿ ಕೇಂದ್ರಗಳೂ ಹೊಂದಿರುವವು.

ಗುಲಬರ್ಗಾವನ್ನು ಸುತ್ತುವರಿದಿರುವ ಅನೇಕ ಗ್ರಾಮಗಳೂ ಸಹ ಉಪ ನಗರಗಳಾಗಿ, ಬಡಾವಣೆಗಳಾಗಿ ಪರಿವರ್ತನೆ ಹೊಂದಿರುವುದನ್ನು ಕಾಣಬಹುದು. ಈ ಕಾರಣಕ್ಕೆ ಗುಲಬರ್ಗಾ ನಗರ ಮತ್ತು ಅದಕ್ಕೆ ಹೊಂದಿಕೊಂಡಿರುವ ಉಪನಗರಗಳು ಆಧುನಿಕ ಸಂಪರ್ಕ ಸಾಧನೆಗಳಿದಾಗಿ ಮಹಾನಗರವನ್ನು ಅನುಕರಿಸುವ ಸಂಸ್ಕೃತಿ ಬೆಳೆಯುತ್ತಿದೆ. ಇದರ ಪರಿಣಾಮವಾಗಿ ಸ್ಥಳೀಚುರಾಗಿದ್ದವರು ಸಾಂಪ್ರಾಯಕ ವೃತ್ತಿಗಳಲ್ಲಿಯೇ ತೊಡಗಿದ್ದವರು ನಗರ ಜೀವನ ಶೈಲಿಗೆ ಅಪ್ರಸ್ತುತವಾಗಿ ಪರಿಣಮಿಸಿದ್ದರೆ ಕೆಲವರು ಬದಲಾವಣೆಗಳನ್ನು ಮೈಗೂಡಿಸಿಕೊಂಡು ಮುನ್ನಡೆದಿರುವ ವೈರುಧ್ಯಗಳನ್ನು ಕಾಣಬಹುದು.

ನಗರದ ಬೆಳವಣಿಗೆಯ ಕಾರಣದಿಂದಾಗಿ ಹೊಸ ಹೊಸ ಬಡಾವಣೆಗಳು ಬೆಳೆದಂತೆ ಕೊಳಚೆ ಪ್ರದೇಶಗಳು ಬೆಳೆಯುತ್ತಿರುವವು, ನಗರದ ಹಳೆಯ ಬಡಾವಣೆಗಳು ಜನದಟ್ಟಣೆಯ ಗಲ್ಲಿ-ವಟಾರಗಳಾಗಿ ಮಾಲಿನ್ಯದ ಮಡುಗಳಾಗಿದ್ದರೆ ಹೊಸ ಬಡಾವಣೆಗಳು ಯೋಜಿತ ರೀತಿಯಲ್ಲಿರದೆ ಕಿರಿದಾರ ರಸ್ತೆ, ಅಸಮರ್ಪಕ ಚರಂಡಿ ವ್ಯವಸ್ಥೆ, ನೀರಿನ ಕೊರತೆ ಮುಂತಾದ ನಾಗರಿಕ ಸೌಲಭ್ಯಗಳಿಂದ ವಂಚಿತವಾಗಿವೆ ನೈರ್ಮಲ್ಯವಿಲ್ಲದ ಕಡೆಗೆ ರೋಗರುಜಿಗಳು ಹೆಚ್ಚಾಗಿ ನಾಗರಿಕ ಜೀವನ ಅಸ್ತವ್ಯವಸ್ತವಾಗುತ್ತಿದೆ.

ಯಾವುದೇ ನಗರ ಅಥವಾ ಪಟ್ಟಣದಲ್ಲಾಗಲಿ ಸಫಾಯಿಕರ್ಮಚಾರಿ ವೃತ್ತಿಯನ್ನು ಮಾಡಿಕೊಂಡು ಬರುವ ಸಮುದಾಯವು ಸಾಮಾಜಿಕವಾಗಿ ಅತ್ಯಂತ ಕೆಳಸ್ತರದಲ್ಲಿರುವುದನ್ನು ನೋಡುತ್ತೇವೆ ಇತರ ಜಾತಿ ಸಮುದಾಯಗಳಂತೆ ಚದುರಿ ಹೋಗಿರದೆ ತಮ್ಮ ವಾಸಸ್ಥಾನವನ್ನು ಒಚಿದು ನಿರ್ದಿಷ್ಟ ಸ್ಥಳದಲ್ಲಿ ಮಾಡಿಕೊಂಡಿರುತ್ತಾರೆ ಏಕೆಂದರೆ ಈ ಸಮುದಾಯವು ಮಾಡಿಕೊಂಡು ಬಂದಿರುವ ಸಫಾಯಿ ವೃತ್ತಿಯೇ ಇದಕ್ಕೆ ಕಾರಣವೆನ್ನಬೇಕು. ಈ ಸಮುದಾಯವು ತಲತಲಾಂತರದಿಂದ ಮಲ ಎತ್ತಿ ಹಾಕುವ ಶೌಚಾಲಯ ತೊಳೆಯುವ ವೃತ್ತಿಯನ್ನು ಮಾಡಿಕೊಂಡು ಬಂದಿರುವ ಕಾರಣವಾಗಿ ಇತರ ಜಾತಿಯ ಜನರು ಅವರನ್ನು ತಮ್ಮ ಹತ್ತಿರಕ್ಕೂ ಸುಳಿಯಲು ಬಿಡುವುದಿಲ್ಲ. ಹೀಗೆ ಊರವರ ಸೇವೆ ಮಾಡಿಯೂ, ಅದರಿಂದ ತಿರಸ್ಕರಿಸಲ್ಪಟ್ಟ ಸಫಾಯಿ ಕರ್ಮಚಾರಿಗಳು ಅನಿವಾರ್ಯವಾಗಿ ಪ್ರತ್ಯೇಕ ನೆಲೆಗಳನ್ನು ಹೊಂದಬೇಕಾಗಿರುತ್ತದೆ. ಈ ಜನರು ಹೆಚ್ಚಾಗಿ ಊರ ಹೊರಗಿನ ಕೊಳಚೆ ಪ್ರದೇಶ ಚ್ಚರಂಡಿಯ ಅಕ್ಕ ಪಕ್ಕದಲ್ಲಿ ತಮ್ಮ ಮನೆಗಳನ್ನು ಮಾಡಿಕೊಂಡಿರುವುದನ್ನು ಎಲ್ಲ ನಗರ, ಪಟ್ಟಣಗಳಂತೆ ಗುಲಬರ್ಗಾ ಜಿಲ್ಲೆಯಲ್ಲಿಯೂ ಕಾಣುತ್ತೇವೆ.

ಗುಲಬರ್ಗಾ ನಗರದಲ್ಲಿ ಸಫಾಯಿ ಕರ್ಮಚಾರಿಗಳದ್ದೇ ಆದ ಹಳೆಯ ಕೇರಿಯು ಗಾಜಿಪುರದಲ್ಲಿದೆ. ಗಾಜಿಪುರವು ಗುಲಬರ್ಗಾ ನಗರದ ಅತ್ಯಂತ ಹಳೆಯ ಕೇರಿ. ನೂರಾರು ವರ್ಷಗಳ ಹಿಂದೆ ಇಚಿದು ನಗರದಿಂದ ಪ್ರತ್ಯೇಕವಾಗಿತುತು. ಈ ಬಡಾವಣೆಯ ಮೇಲೆ ಉತ್ತರಕ್ಕೆ 'ಮೆಹತರ್‌ಗಲ್ಲಿ' ಎಂಬ ಕೊಳಗೇರಿ ಇತುತು. ನಗರವು ವಿಸ್ತರಣೆ ಹೊಂದಿ ಅದೀಗ ಗುಲಬರ್ಗಾ ನಗರದ ಮಧ್ಯ ಭಾಗವಾಗಿದೆ.

ಗಾಜಿಪುರ ನಿಜಾಮಶಾಹಿ ಆಡಳಿತ ಕಾಲದಲ್ಲಿದ್ದು ಒಂದು ಸಣ್ಣ ಗ್ರಾಮ. ಆಗಿನ ಗುಲಬರ್ಗಾ ಜನಗತ್, ಬಾಪು ನಗರ, ಸುಂದರ ನಗರ, ಕೆಳಗಿನ ಜಗತ್ ಸರಸ್ವತಿ ಗೋದಾಮ, ಮಿಲನ್ ಚೌಕ್ ಸೀಮೆಯನ್ನು ಹೊಂದಿತ್ತು. ಆಗಿನ ಬ್ರಹ್ಮಪುರ (ಹಾರೂಗೇರಿ) ಮಕ್ತಂಪು, ಗಾಜಿಪುರ, ಶಹಾಬಜಾರ, ಮೋಮಿನಪುರ, ಸಂತ್ರಸವಾಡಿ, ರೋಜಾ ಮುಂತಾದ ಈ ನಗರವನ್ನು ಆವರಿಸಿಕೊಂಡ ಗ್ರಾಮಗಳಾಗಿದ್ದವು. ಪೂರ್ವದಕಡೆಯಿಚಿದ ಈಗಿನ ಜಗತ್ ವೃತ್ತದಿಂದ ನಗರವನ್ನು ಪರವೇಶಿಸಿದರೆ ದಕ್ಷಿಣದ ಕಡೆಯ ಅಗಸಿ ಕೆಳಗಿನ ಜಗತ್‌ನಲ್ಲಿತ್ತು. ಜಗತ್‌ವೃತ್ತ ಮತ್ತು ಬ್ರಹ್ಮಪುರಗಳ ನಡುವೆ ವಿಶಾಲವಾದ ಕೆರೆ ಮತ್ತು ಬಹುಮನಿ ಕೋಟೆ ಪ್ರದೇಶವಿತ್ತು. ಗುಲಬರ್ಗಾ ನಗರದ ಸಫಾಯಿ ಕೆಲಸಕ್ಕೆ ಮಾಡುವ ಮೆಹತರರು ಈಗಿನ ಗಾಜಿಪುರ ಗ್ರಾಮದ ಅಂಚಿನಲ್ಲಿ ನೂರಾರು ವರ್ಷಗಳಿಂದ ನೆಲೆಗೊಂಡಿದ್ದರು. ಈ ಕೇರಿಯಲ್ಲಿ ಹೆಚ್ಚಾಗಿ ಅಸ್ಪೃಶ್ಯ ಸಮುದಾಯಕ್ಕೆ ಸೇರಿದ ಹಲಾಲಕೋರ, ಭಂಗಿ,

ಸಮುದಾಯದವರು ವಾಸಿಸುತ್ತಿದ್ದರು. ಸಚಿತ್ರಸವಾಡಿ, ರೋಜಾ ಬಡಾವಣೆಗಳಲ್ಲಿ ನೆಲೆಸಿರುವ ಸಫಾಯಿ ಕರ್ಮ್ಮಚಾರಿಗಳಲ್ಲಿ ಹೆಚ್ಚಾಗಿ ಮುಸ್ಲಿಂ ಜಾತಿಗೆ ಸೇರಿದವರಾಗಿದ್ದಾರೆ. ಇವು ಗುಲಬರ್ಗಾ ನಗರದಲ್ಲಿರುವ ಅತ್ಯಂತ ಪ್ರಾಚೀನ ಸಫಾಯಿ ಕರ್ಮಚಾರಿ ಬಡಾವಣೆಗಳಾಗಿವೆ. ಇವರಲ್ಲಿನ ಗಾಜಿಪುರ ಬಡಾವಣೆಯ ಮೆಹತರರು ಮಹಾರಾಷ್ಟ್ ಕಡೆಯಿಂದ ವಲಸೆ ಬಂದವರಾದರೆ, ಸಂತ್ರಸವಾಡಿಯ ಮೆಹತರು ಹೈದರಾಬಾದ ಮತ್ತು ಸ್ಥಳೀಯ ಮತಾಂತರಗೊಂಡವರಾಗಿದ್ದಾರೆ. ಗಾಜಿಪುರದ ಸಫಾಯಿ ಕರ್ಮಚಾರಿಗಳು ಪರಿಶಿಷ್ಟ ಜಾತಿಗೆ ಸೇರಿದ್ದರೆ, ಸಂತ್ರಸವಾಡಿ, ರೋಜಾ ಸಫಾಯಿ ಕರ್ಮಚಾರಿಗಳು ಅಲ್ಪಸಂಖ್ಯಾತ ವರ್ಗಕ್ಕೆ ಸೇರಿರುತ್ತಾರೆ. ಆದರೆ ಈ ಎರಡು ಸಮುದಾಯಗಳ ಕೆಲಸ ಮಾತ್ರ ಒಂದೇ ಆಗಿರುತ್ತದೆ. ನಗರ ಬೆಳೆದಂತೆ, ಬಡಾವಣೆಗಳು ಹೆಚ್ಚಿದಂತೆ ಅನೇಕರು ಬೇರೆ ಬೇರೆ ಕಡೆಗಳಿಂದ ವಲಸೆ ಒಂದು ಸಫಾಯಿ ಕರ್ಮಚಾರಿ ಕೆಲಸಗಳಲ್ಲಿ ತೊಡಗಿಸಿಕೊಂಡಿರುವರು, ವಲಸೆ ಬಂದ ಸಫಾಯಿ ಕರ್ಮ್ಮಚಾರಿಗಳು ನಗರದ ರೈಲು ನಿಲ್ದಾಣದ ಹಿಂಭಾಗ ದಕ್ಷಿಣಕ್ಕೆ ಇರುವ ತಾರಫೈಲ್, ಎಂ.ಎಸ್.ಕೆ. ಮಿಲ್ ಹತ್ತಿರದ ಮೋಮಿನ್‌ಪುರ ಬಡಾವಣೆಗಳಲ್ಲಿ ವಾಸಿಸುತ್ತಿದ್ದಾರೆ. ಇವ್ನ ಕೂಡ ಒಂದು ಕಾಲಕ್ಕೆ ನಗರದಿಂದ ದೂರದಲ್ಲಿದ್ದು ನಗರದ ವಿಸ್ತರಣೆಯಿಂದ ಈಗ ಅವು ಕೂಡ ನಗರದಲ್ಲಿ ಸೇರಿಕೊಂಡಿರುವವು ತಾರಫೈಲ್ ಮತ್ತು ಎಂ.ಎಸ್.ಕೆ. ಮಿಲ್ ಪ್ರದೇಶದಲ್ಲಿ ವಿವಿಧ ಸಮುದಾಯ ಮತ್ತು ಕೋಮಿಗೆ ಸೇರಿದವರಿದ್ದಾರೆ.

ಸಮಸ್ಯೆಗಳು

ಗುಲಬರ್ಗಾ ಜಿಲ್ಲೆಯ ಆಳಚಿದ, ಅಫಜಲ್‌ಪುರ, ಕಮಲಾಪುರ, ಜೇವರ್ಗಿ, ಚಿತ್ತಾಪೂರ, ವಾಡಿ, ಶಹಾಬಾದ ಪಟ್ಟಣಗಳಲ್ಲಿ ನೆಲೆಸಿರುವ ಸಫಾಯಿ ಕರ್ಮಚಾರಿಗಳಲ್ಲಿ ಹಲಾಲಕೋರ್, ಭಂಗಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಕಾಣುತ್ತೇವೆ. ಸೇಡಂ, ಚಿಂಚೋಳಿ ಪಟ್ಟಣಗಳಲ್ಲಿ ಹೈದರಾಬಾದ, ತೆಲಂಗಾಣ ಕಡೆಗಳಿಂದ ವಲಸೆ ಬಂದ ಜನರಿರುವರು. ಗುಲಬರ್ಗಾ ಜಿಲ್ಲೆಯಾದ್ಯಂತ ನೆಲೆಸಿರುವ ಸಫಾಯಿ ಕರ್ಮಚಾರಿಗಳು ಹಲವಾರು ಸಮಸ್ಯೆಗಳನ್ನು ಇತ್ತೀಚಿನವರೆಗೂ ಅನುಭವಿಸಿಕೊಂಡು ಬಂದಿದ್ದಾರೆ. ಇವರುಗಳಿಗೆ ಸ್ವಂತ ಮನೆಗಳಿಲ್ಲ, ಊರ ಹೊರಗೆ ಚರಂಡಿ ಅಕ್ಕಪಕ್ಕದ ಸರಕಾರಿ ಜಾಗೆಯಲ್ಲಿ ಟಿನ್ ಸೆಡ್ಡು ಇಲ್ಲವೇ ಸ್ಥಳೀಯವಾಗಿ ಲಭ್ಯವಿವರುವ ಶಹಾಬಾದಿ ಪರಸಿಕಲ್ಲಿನ ಚಿಕ್ಕ ಚಿಕ್ಕ ಮನೆಗಳನ್ನು ಕಟ್ಟಿಕೊಂಡು ಜೀವನ ಸಾಗಿಸುತ್ತಿರುವರು. ಇವರು ಮಲ ಎತ್ತಿ ಹಾಕುವಚಿತಹ ಕೆಲಸ ಮಾಡುತ್ತಿರುವ್ಯದರಿಂದ ಉಳಿದ ಸಮುದಯಗಳು ಇವರೊಡನೆ ಸಂಪರ್ಕ ಬೆಳೆಸಲು ಇಚ್ಚಿಸುವುದಿಲ್ಲ.

ಹೀಗಾಗಿ ಈ ಸಮುದಾಯಗಳು ಒಂದರ್ಥದಲ್ಲಿ ದ್ವೀಪಕಲ್ಪ ಸ್ಥಿತಿಯಲ್ಲಿ ಅಸಂಘಟಿತರಾಗಿ ಬದುಕು ಸಾಗಿಸುತ್ತ ಬಂದಿರುತ್ತಾರೆ. ಇವರಿರುವ ಬಡಾವಣೆಗಳು ಕೊಳಗೇರಿಯಾಗಿದ್ದರಿಂದ ನಾಗರಿಕ ಸೌಲಭ್ಯಗಳು ಕಾಣಲಾರೆವು. ನೈರ್ಮಲ್ಯವಿಲ್ಲದ ಕಡೆ ರೋಗ ರುಜಿನುಗಳಿಗೆ ಹೆಚ್ಚಾಗಿ ಬಲಿಯಾಗುತ್ತಿದ್ದಾರೆ.

ಸಫಾಯಿ ಕರ್ಮಚಾರಿ ಕುಟುಂಬದ ಎಲ್ಲ ಸದಸ್ಯರು ದಿನಾಲು ದುಡಿಯಲು ಹೊರಗೆ ಹೋಗುತ್ತಾರೆ. ವಯಸ್ಸಾದ ತಂದೆ ತಾಯಿ ಮಾತ್ರ ಮನೆಯಲ್ಲಿ ಉಳಿಯುತ್ತಾರೆ. ಗಂಡಸರು ನಗರದ ಸರಕಾರಿ, ಅರೇ ಸರಕಾರಿ, ಖಾಸಗಿ ಕಚೇರಿ, ಶಿಕ್ಷಣ ಸಂಸ್ಥೆ ಒಳಚರಂಡಿ ಸ್ವಚ್ಛಗೊಳಿಸುವ ಕೆಲಸದಲ್ಲಿ ತೊಡಗಿಸಿಕೊಂಡರೆ, ಹೆಂಗಸರು ಊರಿನ ಒಳ ನಿಗದಿತವಾದ ಬಡಾವಣೆಗಳಿಗೆ ಹೋಗಿ ಮನೆಗಳ ಶೌಚಾಲಯಗಳನ್ನು ಸ್ವಚ್ಛಗೊಳಿಸುವರು. ಮಕ್ಕಳು ಶಾಲೆಗೆ ಹೋಗುವದಿಲ್ಲ. ಅವರೆಲ್ಲ ವಿವಿಧ ಬಡಾಣೆಗಳ ತಿಪ್ಪೆಗುಂಡೆಗಳಲ್ಲಿ ರಸ್ತೆ, ಉದ್ಯಾನವನಗಳಲ್ಲಿ ಬಿದ್ದಿರುವ ಪ್ಲಾಸ್ಟಿಕ್ ಚೀಲ, ಬಾಟಲ್ ಕಬ್ಬಿಣಚೂರು ಸಾಮಾನುಗಳನ್ನು ಆಯ್ದುಕೊಂಡು ಬಂದು ಲೋಖಂಡೆಗಳಿಗೆ ಮಾರಿ ಹಣ ಸಂಪಾದಿಸುತ್ತಾರೆ.

ಸರಕಾರವು ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದವರಿಗೆ ಅನೇಕ ಯೋಜನೆಗಳನ್ನು ಅನುಷ್ಠಾನಕ್ಕೆ ತಂದಿದೆ. ಆದರೆ ಈ ಸಮುದಾಯದ ಅಜ್ಞಾನ, ನಿರಕ್ಷರತೆ, ಸಾಮಾಜಿಕವಾಗಿ, ರಾಜಕೀಯವಾಗಿ ಬಲ ಹೀನರಾಗಿದ್ದರಿಂದ ಸರಕಾರದ ಯೋಜನೆಗಳ ಏನು? ಯಾವ ಯಾವವು. ಅದನ್ನು ಹೇಗೆ ಪಡೆದುಕೊಳ್ಳಬೇಕೆಂಬ ತಿಳುವಳಿಕೆಯ ಕೊರತೆಯಿಂದಾಗಿ ಅವುಗಳ ಪ್ರಯೋಜನೆಗಳನ್ನು ಇತ್ತೀಚಿನವರೆಗೂ ಪಡೆಯಲು ಅಸಮರ್ಥರಾಗಿದ್ದಾರೆ. ವೃತ್ತಿ ಕಾರಣವಾಗಿ ಅವರಿಗೆ ಅಂಬೇಡ್ಕರ್ ಆವಾಜ್ ಯೋಜನೆಯ ಮನೆಗಳಲ್ಲಿ ಹೋಗಿ ಇರಲು ಸಾಧ್ಯವಾಗುತ್ತಿಲ್ಲ.

ಸಫಾಯಿ ಕರ್ಮಚಾರಿಗಳು ಪೌರ ಕಾರ್ಮಿಕರಾಗಿ ಕಾರ್ಯನಿರ್ವಹಿಸುತ್ತಿದ್ದರು. ಅವರಿಗೆ ಸೇವಾ ಭದ್ರತೆ, ಆರೋಗ್ಯ ಭದ್ರತೆ ಇಲ್ಲ. ಯಾಕೆಂದರೆ ಇವರು ಹೊರಗುತ್ತಿಗೆ ಆಧಾರದ ಮೇಲೆ ಉದ್ಯೋಗ ಮಾಡುತ್ತಾರೆ. ಸಫಾಯಿ ಕರ್ಮ್ಮಚಾರಿಗಳು ನಸುಕಿನ 5–00 ಗಂಟೆಯಿಂದ ಮುಂಜಾನೆ 10 ಗಂಟೆರೆಗೆ ಮತ್ತು ಮಧ್ಯಾಹ್ 2 ಗಂಟೆಯಿಂದ ಸಾಯಂಕಾಲ 4–30 ಗಂಟೆವರೆಗೆ ಕೆಲಸ ನಿರ್ವಹಿಸುವರು. ಬೆಳಗಿನ ವೇಳೆಯಲ್ಲಿ ಹೊಟ್ಟೆಗೆ ಏನೂ ಆಹಾರ ಸೇವಿಸದ ಬರುವ್ಯದರಿಂದ. ಮತ್ತು ಅಪೌಷ್ಠಿಕ ಆಹಾರ ಸೇವನೆಯಿಂದ ಅನೇಕ ರೋಗ ರುಜನುಗಳಿಗೆ ಒಳಗಾಗುವರು ನನ್ನ ಸರ್ವೆ ಕಾರ್ಯದಲ್ಲಿ ಅನೇಕ

ಸಫಾಯಿ ಕರ್ಮ್ಚಾರಿಗಳು ಕ್ಯಾನ್ಸರ್, ಕಾಮಾಲೆ, ಅಸ್ತಮಾ ಅನೇಕ ಅಂಟುಜಾಡ್ಯದಿಂದ ಬಳಲುತ್ತಿರುವುದು ಕಂಡು ಬಂದಿದೆ.

ಸಫಾಯಿ ಕರ್ಮಚಾರಿಗಳಿಗೆ ಸ್ವಚ್ಛ ಹಾಗೂ ಶುದ್ಧ ಕುಡಿಯುವ ನೀರು ಸಹ ಸಿಗುವುದಿಲ್ಲ. ಗಳಿಸಿದ ಅಲ್ಪಸ್ವಲ್ಪ ಆದಾಯವನ್ನು ಆಸ್ಪತ್ರೆ, ಕುಡಿತ, ಜೂಜಿಗೆ ಖರ್ಚು ಮಾಡುತ್ತಾರೆ. ಬಡತನ ಇವರಲ್ಲಿ ಸರ್ವೆ ಸಾಮಾನ್ಯವಾಗಿ ಕಾಣುತ್ತೇವೆ. ಸರಕಾರವು ಸಫಾಯಿ ಕರ್ಮಚಾರಿಗಳನ್ನು ಬಳಸಿ ಒಳಚರಂಡಿಗಳನ್ನು ಸ್ವಚ್ಛಗೊಳಿಸಬಾರದೆಂಬ ಆದೇಶವಿದ್ದರೂ, ಅಲ್ಲಲ್ಲಿ ಸಾರ್ವಜನಿ ಹಾಗೂ ಖಾಸಗಿಯವರು ಇವರನ್ನು ಬಳಸಿಕೊಂಡಂತಹ ಮತ್ತು ಮ್ಯಾನ್‌ಹೋಲ್‌ನಲ್ಲಿ ಕೆಲಸ ಮಾಡುವ ಸಂದರ್ಭದಲ್ಲಿ ಸಾವಿಗೀಡಾದ ಪ್ರಕರಣಗಳನ್ನು ಕೇಳುತ್ತೇವೆ. ಒಟ್ಟಾರೆ ಇವರುಗಳ ಸಾಮಾಜಿಕ ಜೀವನ ಕೆಳಮುಖವಾದ ಗತಿಶೀಲತೆಯನ್ನು ಹೊಂದಿದೆ ಎಂದು ಹೇಳಬೇಕು.

ಗುಲಬರ್ಗಾ ಜಿಲ್ಲೆಯ ಸಫಾಯಿ ಕರ್ಮಚಾರಿ ಸಮುದಾಯದವರ ಪ್ರಮುಖ ಸಮಸ್ಯೆಗಳತ್ತ ಗಮನ ಹರಿಸಿದಾಗ ಕಂಡು ಬರುವ ಅಂಶಗಳು ಹೀಗಿವೆ.

1) ವಾಸದ ಸಮಸ್ಯೆ

2) ಆರೋಗ್ಯದ ಸಮಸ್ಯೆ

3) ಶಕ್ಷಣಿಕ ಸಮಸ್ಯೆ

4) ಪಡಿತರ ಚೀಟಿ ಸಮಸ್ಯೆ

5) ಜಾತಿ ಪ್ರಮಾಣ ಪತ್ರದ ಸಮಸ್ಯೆ

ಸಫಾಯಿ ಕರ್ಮ್ಚಾರಿಗಳ ಒಂದು ಬೃಹತ್ ಸಮಸ್ಯೆಯೆಂದರೆ ಇವರನ್ನು ಸಮಾಜದ ಇತರೆ ವರ್ಗದವು ತಮ್ಮೊಡನೆ ಸೇರಿಸಿಕೊಳ್ಳದೆ ಇರುವ್ವದರಿಂದ ಇವರಿಗೆ ವಸತಿ ಸಮಸ್ಯೆ ತುಂಬಾ ಹೆಚ್ಚಿದೆ. ಅಲ್ಲದೆ ಸಫಾಯಿ ಕರ್ಮಚಾರಿ ಇದು ಕಸುಬು ಆಧಾರಿತ ಸಮುದಾಯ ಸಮಾಜದ ಬೇರೆ ಬೇರೆ ತಳ ಸಮುದಾಯದವರು ಈ ವೃತ್ತಿಯನ್ನು ಅವಲಂಬಿಸಿರುವ್ವದರಿಂದ ಇವರಿಗೆ ಯಾವ ಜಾತಿ ಪ್ರಮಾಣಭ ಪತ್ರ ನೀಡಬೇಕೆಂಬ ಸಮಸ್ಯೆ ಇದೆ.

ಸಫಾಯಿ ಕರ್ಮಚಾರಿ ಸಮುದಾಯವು ಹೈದರಾಬಾದ ರಾಜ್ಯದಲ್ಲಿ 1950 ರಲ್ಲಿ ಪರಿಶಿಷ್ಟ ಜಾತಯ ಪಟ್ಟಿಗೆ ಸಂವಿಧಾನಬದ್ಧವಾಗಿ ಮೀಸಲಾತಿ ಪಡೆಯಲು ದಾಖಲಾತಿ "1956 ರಲ್ಲಿ ಭಾಷಾವಾರು ರಾಜ್ಯ ರಚನೆಯ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯದ ಅಂದಿನ ಹೈದರಾಬಾದ ಕರ್ನಾಟಕ ಪ್ರದೇಶದ ಬೀದರ ಗುಲಬರ್ಗಾ ಮತ್ತು ರಾಯಚೂರು ಜಿಲ್ಲೆಗಳಿಗೆ ಸೀಮಿತವಾಗುವಂತೆ ಈ

ಸಮುದಾಯದವರಿಗೆ ಪರಿಶಿಷ್ಟ ಜಾತಿ ಪಟ್ಟಿಯ ಕ್ರಮ ಸಂಖ್ಯೆ 32 ರಲ್ಲಿ ದಾಖಲಾದರು" 1977 ರಿಂದ ಈ ಸಮುದಾಯದ ಪ್ರಾದೇಶಿಕ ಮಿತಿಯನ್ನು ಸಡಿಲಿಸಿ ಕರ್ನಾಟಕ ರಾಜ್ಯಕ್ಕೆ ವಿಸ್ತರಿಸಲಾಯಿತು.

ಸಫಾಯಿ ಕರ್ಮ್ಮಚಾರಿಗಲ್ಲಿ ಎಲ್ಲರ ಕಣ್ಣಿಗೂ ಮೊದಲು ಕಾಣುವ ಮುಖ್ಯ ಸಂಗತಿ ಎಚಿದರೆ ಅವರ ಸರಳತೆ, ಮುಗ್ಧತೆ ಇವರ ವಾಸಸ್ಥಾನದ ನೆಲೆಗಳು ಮತ್ತು ಉಡುಗೆ ತೊಡುಗೆಯಲ್ಲಿಯೇ ಸರಳತೆ ಕಂಡು ಬರುತ್ತದೆ. ಹಾಗಾಗಿ ಇತರೆ ಸಮುದಾಯಗಳು ಇವರನ್ನು ಕೀಳಾಗಿ ಕಾಣುತ್ತಲೇ ಬಂದಿದ್ದಾರೆ. ಇಂದಿಗೂ ಸಫಾಯಿ ಕರ್ಮ್ಮಚಾರಿಯವರನ್ನು ಒಂದು ರೀತಿಯ ತತ್ಸಾರ ಮನೋಭಾವನೆಯನ್ನು ತಳೆಯುತ್ತಾರೆ. ಜೊತೆಗೆ ಅಸ್ಪೃಶ್ಯತೆ ಪಿಡುಗು ಇವರ ಶೋಷಣೆಗೆ ಕಾರಣವಾಗಿದೆ. ಹಾಗಾಗಿ ಕೀಳರಿಮೆ ಮತ್ತು ಪರಕೀಯತೆ ಈ ಸಮುದಾಯವನ್ನು ಕಾಡುತ್ತಲೇ ಇದೆ.

ಉನ್ನತ ಜಾತಿಯವರು ಇವರನ್ನು ಮನೆಯೊಳಗೆ ಸೇರಿಸಿಕೊಳ್ಳುವುದಿಲ್ಲ. ಅಪಮಾನ, ತಾತ್ಸಾರ ಬಡತನ, ಅನಾರೋಗ್ಯದ ಏಳು-ಬೀಳುಗಳ ಜೊತೆ ತಮ್ಮ ಅಸ್ತಿತ್ವದ ಬಗೆಗೆ ಹೋರಾಡುತ್ತಲೇ ಬಂದಿದ್ದಾರೆ.

2. ಆರ್ಥಿಕ ಸ್ಥಿತ್ಯಂತರಗಳು

ಸಾಮಾಜಿಕ ಜೀವನ ಸಮೃದ್ಧವಾಗಿದ್ದರೆ ಸಾಂಸ್ಕೃತಿಕವಾಗಿಯು ಜೀವಂತಿಕೆಯನ್ನು ಕಾಣಬಹುದು. ಸಮಾಜ ಮತ್ತು ಸಂಸ್ಕೃತಿಗಳೆರಡೂ ಆರ್ಥಿಕ ಪರಿಸ್ಥಿತಿಯನ್ನವಲಂಬಿಸುತ್ತದೆ. ಜನ ಜೀವನದ ಪ್ರತಿಯೊಂದು ಕ್ಷೇತ್ರವೂ ಆರ್ಥಿಕ ಸಾಮರ್ಥ್ಯವನ್ನು ಆದರಿಸಿರುತ್ತದೆ. ಆದ್ದರಿಂದ ಗುಲಬರ್ಗಾ ಜಿಲ್ಲೆಯ ಸಫಾಯಿ ಕರ್ಮಚಾರಿಗಳಲ್ಲಿ ಆರ್ಥಿಕ ಪರಿಸ್ಥಿತಿಯಲ್ಲಿ ಸ್ಥಿತ್ಯಂತರವನ್ನು ಕಾಣದೆಯಿರಲಾರೆವು. ಸಫಾಯಿಕರ್ಮಚಾರಿಗಳು ಸಂಪೂರ್ಣ ಭೂರಹಿತರಾಗಿದ್ದು ತಮ್ಮ ಕುಲ ಕಸುಬನ್ನು ಮಾಡುತ್ತ ಅದರಲ್ಲಿಯೇ ಕುಟುಂಬ ಜೀವನವನ್ನು ನಡೆಸುತ್ತಿರುವ ಅಸಂಘಟಿತ ಕಾರ್ಮಿಕರಾಗಿದ್ದಾರೆ, ಆದುದರಿಂದ ಇವರುಗಳ ಆರ್ಥಿಕ ಪರಸ್ಥಿತಿ ಅನೇಕ ಏರು-ಪೇರುಗಳಿಂದ ಕೂಡಿದೆ. ಇದು ಗುಲಬರ್ಗಾ ನಗರ ಹಾಗೂ ಜಿಲ್ಲೆಯ ತಾಲ್ಲೂಕುಗಳು ಮತ್ತು ಹೋಬಳಿಗಳಲ್ಲಿ ಕೆಲಸಮಾಡುವವರ ಪರಿಸ್ಥಿತಿಯೂ ಇದುವೇ ಆಗಿದೆ.

ಸಫಾಯಿ ಕರ್ಮಚಾರಿಗಳಿಗೆ ಸ್ವಚ್ಛತಾ ಕೆಲಸವೊಂದನ್ನು ಬಿಟ್ಟರೆ ಅವರ ಜೀವನೋಪಾಯಕ್ಕೆ ಬೇರೆ ಉದ್ಯೋಗಗಳಿಲ್ಲ. ಹಾಗೇ ಒಂದು ವೇಳೆ ಇತರ ಉದ್ಯೋಗಗಳನ್ನು ಕೈಕೊಂಡು ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳುವುದಕ್ಕೆ ಸಮಾಜವು ಅವಕಾಶ ಮಾಡಿಕೊಡುವುದಿಲ್ಲ.

ಸಮಾಜದಲ್ಲಿ ತೀರ ಕಟ್ಟ ಕಡೆಯ ಅಸ್ಪೃಶ್ಯರು ಇವರು ಎನಿಸಿದ್ದರಿಂದ ಮತ್ತು ಹೇಸಿಗೆಯ ಕೆಲಸದಲ್ಲಿ ತೊಡಗಿಸಿಕೊಂಡಿರುವುದರಿಂದ ಯಾವುದೇಋ ಉದ್ಯೋಗ ಅಥವಾ ವ್ಯಾಪಾರಕ್ಕೆ ಜನರಿಂದ ನಿಶ್ಚಿತ ಮಟ್ಟದ ಪ್ರೋತ್ಸಾಹ ದೊರೆಯುವುದಿಲ್ಲ. ಹಾಗಾಗಿ ಇವರು ಉದರ ಪೋಷಣೆಗಾಗಿ ತಮ್ಮ ಕುಲಕಸುಬನ್ನು ತೊರೆಯದೆ ಉಳಿಸಿಕೊಂಡು ಬಂದಿದ್ದಾರೆ. ಸರಕಾರವು ಇತ್ತೀಚೆಗೆ ಸಫಾಯಿ ಕರ್ಮಚಾರಿಗಳ ಮಾನವ ಶಕ್ತಿಯನ್ನು ಬಳಸಿಕೊಳ್ಳುವುದರ ಮೇಲೆ ನಿರ್ಬಂಧ ಹೇರಿಸಲು ಪ್ರಾರಂಭಿಸಿದಾಗಿನಿಂದ ಅನೇಕರು ಉದ್ಯೈಒಗ ವಂಚಿತರಾಗಿದ್ದಾರೆ ಎನ್ನಬಹುದು.

ಸರ್ವರಿಗೂ ಸಮಾನ ಅವಕಾಶ, ಸಮಾನ ಬದುಕು ನೀಡುವ ಸಂವಿಧಾನ ಜಾರಿಯಾಗಿ 65 ವರ್ಷಗಳು ಕಳೆದವು. ಆದರೂ ದೇಶದ ಮೂರನೇಯ ಒಂದು ಭಾಗ ಜನತೆ ಹಸಿವಿನ ರೇಖೆಯ ಕೆಳಗೆ ಬದುಕುತ್ತಿದೆ. ದಿನೇ ದಿನೇ ಸ್ಲಮ್ ಗಳು ಬೆಳೆಯುತ್ತಿವೆ. ಅಗತ್ಯ ವಸ್ತುಗಳು ತುಟ್ಟಿಯಾಗುತ್ತಿವೆ. ಉದ್ಯೋಗ ನೀಡಲಾರದ ಜೀವನ ಭದ್ರತಯೆಯೋದಗಿಲಾರದ ಪರಿಸ್ಥಿತಿಯಿದೆ ಎಲ್ಲ ಬದಲಾವಣೆಗಳ ಮೂಲಕಾರಣ ಆರ್ಥಿಕ ಸುಧಾರಣೆ ಹೆಸರಿನಲ್ಲಿ ಸಂಭವಿಸುತ್ತಿರುವ ಜಾಗತೀಕರಣ, ಖಾಸಗಿಕರಣ ಮತ್ತು ಉದಾರೀಕರಣ ಎಂಬ ನೀತಿಗಳು ಅವುಗಳ ಹಿಂದಿರುವುದು ಮಾರುಕಟ್ಟೆ ಆರ್ಥಿಕತೆ ಮಾರುಕಟ್ಟೆ ಕೇವಲ ಆರ್ಥಿಕತೆಯನ್ನಷ್ಟೇ ಸ್ಥಿತ್ಯಂತರಗೊಳಿಸಿಲ್ಲ, ಅದರ ಬೆನ್ನೆಲುಬಾದ ಚಿಂತನಾಕ್ರಮ ಬದುಕಿನ ರೀತಿ, ವ್ಯವಸ್ಥೆ, ಪರಂಪರೆ ಎಲ್ಲವನ್ನು ಬುಡಮಟ್ಟದಿಂದ ಅಲುಗಾಡಿಸಿ ಬೇರೆ ಮಾಡತ್ತಿದೆ. ದೇಶದ ಅರ್ಧಕರ್ಧ ಸಂಪತ್ತು ನಾಲ್ಕಾರು ಉದ್ಯಮಿಕುಟುಂಬಗಳ ತಿಜೋರಿಯಲ್ಲಿ ಅಡಗಿರುವಾಗ ಒಡೆದ ಕನ್ನಡಿಯಲ್ಲಿ ತಮ್ಮ ಪ್ರತಿಬಿಂಬ ನೋಡಿಕೊಳ್ಳುವುದರಲ್ಲೇ ಶ್ರಮಿಕ ಸಮುದಾಯಗಳು ಮಗ್ನವಾಗಿವೆ. ನಿಜವಾದ ಸಮಸ್ಯೆಯನ್ನು ಗುರುತಿಸಲು ಪರಿಹಾರಾತ್ಮಕ ಪರ್ಯಾಯಗಳ ಕುರಿತು ಯೋಚಿಸಲು ಅಸಮರ್ಥವಾಗಿವೆ. ಜಾಗತೀಕರಣದೆದುರು ಜಾತಿ ವ್ಯವಸ್ಥೆ ನಾಶವಾಗಬಹುದೆಂಬ ಆಶಯವಿತ್ತು. ಆದರೆ ಶ್ರಮಿಕ ಮತ್ತು ಕೆಳ ವರ್ಗಗಳ ಮೇಲೆ ಅದರ ವಿನಾಶಕಾರಿ ಪರಿಣಾಮಗಳು ಈಗ ನಿಚ್ಚಳವಾಗಿ ಗೋಚರಿಸತೊಡಗಿವೆ.

ಇಂದು ಪ್ರತಿಯೊಂದು ಕ್ಷೇತ್ರದಲ್ಲಿ ಜಾಗತಿಕರಣವು ತನ್ನ ಕಬಂದಬಾಹು ಚಾಚುತ್ತಿದೆ. ಜಾಗತೀಕರಣ ಕೂಸು ಆದ ಖಾಸಗೀಕರಣವು ಎಲ್ಲೆಡೆಯು ಆಕ್ರಮಣ ಮಾಡುತ್ತಿದೆ. ಇದಕ್ಕೆ ಪೌರ ಸಂಸ್ಥೆಯೂ ಹೊರತಾಗಿ ಉಳಿದಿಲ್ಲ ಎನ್ನಬೇಕು. ಈ ಮೊದಲು ಜಾಡಮಾಲಿಗಳು, ಸಫಾಯಿಕರ್ಮಚಾರಿಗಳು ಪೌರಾಢಳಿತದ ನೌಕರರಾಗಿ ತಮ್ಮ ಕೆಲಸಗಳನ್ನು ಮಾಡುತ್ತಿದ್ದರು. ಆದರೆ ಈಗ ಖಾಸಗಿ ಏಜೆನ್ಸಿಯ ಹೊರಗುತ್ತಿಗೆ ಕಾರ್ಮಿಕರಾಗಿ ಕೆಲಸ ನಿರ್ವಹಿಸಬೇಕಾದ ಪರಿಸ್ಥಿತಿಯಿದೆ.

ಈ ಕ್ರಮದಿಂದಾಗಿ ಸಫಾಯ ಕರ್ಮಚಾರಿಗಳ ವರಮಾನದಲ್ಲಿ ಸ್ಥಿತ್ಯಂತರ ಕಂಡು ಬದುಕು ಸಾಗಿಸುವುದು ದುಸ್ತರವಾಗಿದೆ.

ನಗರ ನೈರ್ಮಲ್ಯ ಸಂರಕ್ಷಿಸುವುದಕ್ಕಾಗಿ ಆಡಳಿತವು ಸುಲಬ ಶೌಚಾಲಯ ವ್ಯವಸ್ಥೆ ಜಾರಿಗೆ ತಂದಿದೆ. ಸಾಮಾನ್ಯವಾಗಿ ಇವಗಳನ್ನು ಸಾರ್ವಜನಿಕ ಸ್ಥಳಗಳು, ಮಾರ್ಕೇಟ, ರೈಲು ನಿಲ್ದಾಣ, ಬಸ್ ನಿಲ್ದಾನ, ಮತ್ತಿತರ ಕಡೆಗಳಲ್ಲಿ ಇದೆ. ಇವುಗಳ ನಿರ್ವಹಣೆ ವ್ಯವಸ್ಥೆಯನ್ನು ಟೆಂಡರ, ಹರಾಜ ಮೂಲಕ ನೀಡಲಾಗುತ್ತಿದೆ. ಆಶಾಕಿರಣವಾಗುವುದೆಂದು ತಿಳಿಯಲಾಗಿತ್ತು ಆದರೆ ಹಾಗಾಗಿಲ್ಲ, ಇಲ್ಲಿಯೂ ಆರ್ಥಿಕವಾಗಿ ಸಬಲನಾದ ಯಾವುದೋ ವ್ಯಕ್ತಿ ಟೆಂಡರ ಮೂಲಕ ತಾನು ಗುತ್ತಿಗೆ ಪಡೆಧು ಕೊಂಡು ಅಲ್ಲಿ ಸಫಾಯಿ ಕರ್ಮಚಾರಿಗಳನ್ನು ಕೂಲಿಗಾಗಿ ದುಡಿಸಿಕೊಳ್ಳ ತೊಡಗಿದನು ಲಾಭ ಮಾತ್ರ ಟೆಂಡರ ಪಡೆದವನಿಗೆ ಮಾತ್ರ ಹೀಗೆ ಇವರ ಪರಂಪರಾಗತ ವೃತ್ತಿಯಲ್ಲಿಯೂ ಅನ್ಯರು ಪ್ರವೇಶಿಸಿದ್ದರಿಂದ ಸಫಾಯಿ ಕರ್ಮಚಾರಿಗಳು ಮತ್ತೆ ಅದೇ ಬಡತನದಲ್ಲಿಯೇ ಇರುವಂತಹ ಪರಿಸ್ಥಿತಿಯಿದೆ. ಹಾವೇರಿ ಜಿಲ್ಲೆಯ ಸರ್ವಪೂರಿನಲ್ಲಿ ತಮ್ಮ ಆರ್ಥಿಕ ಶೋಚನೀಯ ಸ್ಥಿತಿಯನ್ನು ಸಾರ್ವಜನಿಕ ಸರಕಾರದ ಗಮನ ಸೆಳೆಯುವುದಕ್ಕೆಂದೇ ತಲೆ ಮೇಲೆ ಮಲ ಸುರಿದು ಪ್ರತಿಭಟನೆ ಮಾಡಿದ ಘಟನೆ ಇಡೀ ದೇಶ ವಿದೇಶಗಳಲ್ಲಿ ಸುದ್ದಿ ಮಾಡಿತು.

ಜೀತ ಪದ್ಧತಿ ಕಾರಣದಿಂದಾಗಿ ಸಫಾಯಿ ಕರ್ಮಚರಿಗಳನ್ನು ಸಾಮಾಜಿಕ, ಧಾರ್ಮಿಕ, ಆರ್ಥಿಕವಾಗಿ ತೀರ ಅಂಚೆಗೆ ತಳ್ಳಲ್ಪಟಿರುವುದನ್ನು ಕಾಣುತ್ತೇವೆ. ಸಫಾಯಿ ಕರ್ಮಚಾರಿಗಳ ಬಗ್ಗೆ ಅಧಿಕೃತ ಅಂಕಿ ಅಂಶಗಳು ನಮಗೆ ದೊರಕುವುದು ಉದ್ಯೋಗವೆಂದು ದಾಖಲಾಗಿರುವ ವರಧಿಗಳಿಂದ, ಪುರುಷರು ಸಾರ್ವಜನಿಕ ಶೌಚಾಲಯಗಳಲ್ಲಿನ ಮಲ ಎತ್ತುವ ಕೆಲಸ ಮಾಡುತ್ತಿದ್ದರೆ, ಹೆಣ್ಣು ಮಕ್ಕಳು ಖಾಸಗಿ ಮೆನಗಳಲ್ಲಿ ಮಲ ಬಾಚುವ, ಸ್ವಚ್ಛಗೊಳಿಸುವ ಕೆಲಸವನ್ನೂ ಕಮ್ಮಿ ಕೂಲಿ ಪಡೆದು ಮಾಡುವರು. ಅಂದರೆ ಖಾಸಗೀ ಕೆಲಸಗಾರರಾಗಿರುವ ಈ ಮಹಿಳೆಯರು ಕೂಲಿ ತಿಂಗಳಿಗೆ 10/- ದಿಂದ 20/- ರೂ ಹಾಗೂ ಮನೆಯವರು ಕೊಡುವ ತಂಗಳನ್ನ ಮಾತ್ರ ಸಂಪಾದಿಸುತ್ತಾರೆ.

ಅನೇಕ ಪುರಸಭೆ, ನಗರಸಭೆ, ಮಹಾನಗರ ಸಭೆಗಳಲ್ಲಿ ಪುರಾತನ ಕಾಲದ ಪೊರಕೆ, ಬುಟ್ಟಿ, ಬಕೇಟ್, ಬ್ರೆಸ್ ಗಳನ್ನು ಸಫಾಯಿ ಕರ್ಮಚಾರಿ ಕೆಲಸಕ್ಕೆ ನೀಡಲಾಗುತ್ತದೆ. ಬಹುತೇಕ ಕಡೆಗಳಲ್ಲಿ ಈ ಕೆಲಸದಲ್ಲಿ ತೊಡಗಿದವರಿಗೆ ಗಮ್ ಶೂಗಳು, ಕೈಚೀಲ (ಹ್ಯಾಂಡಗ್ಲೋಸ್) ಈ ಮುಖವಾಡಗಳನ್ನು ನೀಡಲಾಗಿಲ್ಲ, ಹೀಗೆ ಇತರ ಆರೋಗ್ಯ ಮತ್ತು ಬದುಕನ್ನು ಕಾಯುವ ಈ ಜನಕ್ಕೆ ಆಧುನಿಕ

ಸಾಧನಗಳಿಲ್ಲದೆ ಅಪಾಯಕಾರಿ ಸನ್ನಿವೇಶದಲ್ಲಿ ಆರೋಗ್ಯ ಮತ್ತು ಆರ್ಥಿಕ ಡೋಲಾಯಮಾನ ಸ್ಥಿತಿಯಲ್ಲಿರುವುದು. ಈ ಹಿಂದಿನ ರಾಷ್ಟ್ರೀಯ ಯೋಜನಾ ಸಮೀತಿಯ ಅಧ್ಯಯನದ ಪ್ರಕಾರ ಈ ಕೆಲಸದಲ್ಲಿ ತೊಡಗಿರುವವರ ಆರೋಗ್ಯ ಮತ್ತು ಆರ್ಥಿಕ ಪರಿಸ್ಥಿತಿ ದೀನ ಸ್ಥಿತಿಗೆ ತಲುಪಿದೆಯೆಂದು ಹೇಳಿರುವುದು ಈಗಲೂ ವಾಸ್ತವವಾಗಿಯೇ ಉಳಿದುಕೊಂಡಿದೆ.

3. ಧಾರ್ಮಿಕ ಸ್ಥಿತ್ಯಂತರಗಳು

ಗುಲಬರ್ಗಾ ಜಿಲ್ಲೆಯಲ್ಲಿ ಬೇರೆ ಬೇರೆ ಧರ್ಮಿಯರು ಇರುವರಾದರೂ ಪ್ರಮುಖವಾಗಿ ಹಿಂದೂ ಮತ್ತು ಮುಸ್ಲಿಂ ಧರ್ಮಿಯರು ಹೆಚ್ಚಿನ ಪ್ರಮಾಣದಲ್ಲಿರುವರು, ಇನ್ನುಳಿದಂತೆ ಕ್ರಿಶ್ಚಿಯನರು, ಶಿಖ್ಖರು, ಪಾರ್ಸಿ ಬೌದ್ಧರು, ಜೈನರು ಅಲ್ಲಲ್ಲಿ ಕಂಡು ಬರುತ್ತಾರೆ. ಇವರೆಲ್ಲರಂತೆ ಜಿಲ್ಲೆಯ ನಗರ, ಪಟ್ಟಣಗಳಲ್ಲಿ ವಿವಿಧ ಕಸುಬುಗಳನ್ನು ಮಾಡುವ ಕಾರ್ಮಿಕ ವರ್ಗಗಳು ಕಂಡು ಬರುತ್ತವೆ. ಅವುಗಳಲ್ಲಿ ವಿವಿಧ ಸಾಮಾನು ಸಲಕರಣೆಗಳನ್ನು ಮಾಡುವ ವೃತ್ತಿಕಾರರು ಮತ್ತು ಸ್ವಚ್ಛತಾ ಕೆಲಸಗಳನ್ನು ಮಾಡುವ ಸಫಾಯಿ ಕರ್ಮಚಾರಿಗಳಾಗಿರುವವರು.

ಸಫಾಯಿ ಕರ್ಮಚಾರಿ ಸಮುದಾಯದಲ್ಲಿ ಎರಡು ತರದ ವೃತ್ತಿ ಕಾರರನ್ನು ಕಾಣಲಾಗುತ್ತದೆ. ಅವುಗಳಲ್ಲಿ ನಗರ ರಸ್ತೆ ಸಾರ್ವಜನಿಕ ಸ್ಥಳಗಳ ಕಸವನ್ನು ಗುಡಿಸುವ ಪೌರಕಾರ್ಮಿಕಾದರೆ, ಮತ್ತೆ ಕೆಲವರು ಸಾರ್ವಜನಿಕ ಮತ್ತು ಖಾಸಗಿ ಶೌಚಾಲಯಗಳನ್ನು ಸ್ವಚ್ಚಗೊಳಿಸುವ ಕಾರ್ಮಿಕರಾಗಿರುತ್ತಾರೆ. ಶೌಚಾಲಯಗಳನ್ನು ಸ್ವಚ್ಛಗೊಳಿಸುವ ಇವರು ತಮ್ಮ ವೃತ್ತಿಯನ್ನು ಪರಂಪರಾಗತವಾಗಿ ನಡೆಸಿಕೊಂಡು ಬಂದವರಾಗಿರುವರು ಇವರೀವರೂ ಹಿಂದು ವರ್ಗ ವ್ಯವಸ್ಥೆಯಲ್ಲಿನ ದಲಿತ ಅಸ್ಪೃಶ್ಯ ಜಾತಿಗೆ ಸೇರಿದವರಾಗಿದ್ದರೂ ಜಾಡ ಮಾಲಿಗಳಿಗಿಂತಲೂ ಸಾಮಾಜಿಕವಾಗಿ, ಧಾರ್ಮಿಕವಾಗಿ ತೀರ ನಿರ್ಲಕ್ಷಕೊಳಗಾಗಿರುವ ಸಮುದಾಯವಾಗಿದೆ.

ಧರ್ಮವು ಸಹ ಜಾತಿ ವ್ಯವಸ್ಥೆಯಷ್ಟೇ ವಿಷಕಾರಿಯಾದ ವ್ಯವಸ್ಥೆಯಾಗಿದೆ. ಈ ವ್ಯವಸ್ಥೆ ದಲಿತ, ಅಸ್ಪೃಶ್ಯರ ಬಾಳಿನುದ್ದಕ್ಕೂ ಸರಸವಾಡುತ್ತಲೇ ಬಂದಿದೆ. ಇವರ ಮೇಲೆ ಪ್ರಭಾವ ಬೀರಿದ ಧರ್ಮಗಳಿಂದ ಸಂಪೂರ್ಣವಾಗಿ ಮುಕ್ತಿ ಪಡೆದಿದ್ದಾರೆಯೇ ಎಂಬ ಪ್ರಶ್ನೆಗೆ ಉತ್ತರ ಮಾತ್ರ ಅಸ್ಪಷ್ಟವಾಗಿ ಸಿಗುತ್ತದೆ. ಆರ್ಯರ ವರ್ಣ ವ್ಯವಸ್ಥೆಯಲ್ಲಿ ಅದರ ಹೊರಗುಳಿದ ಅಂತ್ಯಜರು ಮೇಲ್ವರ್ಗದವರ ಶೋಷಣೆಗೆ ತುತ್ತಾಗಿ ಅವರ ಮನೆಯ ನಾಯಿಗಿಂತಲೂ ಕೀಳೆನಿಸಿದರು. ಇಂತಹ ಅಸ್ಪೃಶ್ಯರು ಉಳ್ಳವರ ಉದ್ಧಾರಕ್ಕಾಗಿ ದುಡಿದರು. ಅನ್ನ ನೀರು, ಉತ್ತಮ ಬಾಳ್ವೆಗಾಗಿ ಉತ್ತಮ

ಪರಿಸರವಿಲ್ಲದೆ ಒದ್ದಾಡಿದ ಸಮುದಾಯವಿದು. ಈ ಸಮಸ್ಯೆ, ಸಫಾಯಿಕರ್ಮಚಾರಿ ಸಮುದಾಯವನ್ನು ಇಂದಿಗು ಕಾಡುತ್ತಿದೆ.

ನಮ್ಮ ಸಮಾಜದೊಳಗೆ ಸಾಂಪ್ರದಾಯಿಕ ಸೇವೆ ಪಡೆಯಲು ಮತ್ತು ನೀಡುವುದಕ್ಕೆ ಪ್ರತ್ಯೇಕ ನಿಯಮಗಳಿವೆ. ಇವರಲ್ಲಿ ಸಫಾಯಿಗಳ ಇಂದಿಗೂ ಸೇವೆ ಮಾಡಲಿಕ್ಕೆ ಸುಪಾತ್ರರು, ಪಡೆಯಲಿಕ್ಕೆ ಮಾತ್ರ ಅನರ್ಹರೆಂಬ ಸಾಮಾಜಿಕ, ಧಾರ್ಮಿಕ ನಿಬಂಧನೆಗಳಿವೆ ಇದೊಂದು ಅಮಾನವೀಯ ವ್ಯವಸ್ಥೆ ಭಾರತದ ಎಲ್ಲ ರಾಜ್ಯ ಪ್ರದೇಶದಲ್ಲಿ ಇಂದಿಗೂ ಜಾಲ್ತಿಯಲ್ಲಿದೆ.

ಸಫಾಯಿ ಕರ್ಮಚಾರಿಗಳ ಧಾರ್ಮಿಕ ಸ್ಥಿತಿ ತುಂಬ ವಿಚಿತ್ರವಾಗಿದೆ. ಈ ವೃತ್ತಿಯನ್ನು ಮಾಡುತ್ತಿರುವವರಲ್ಲಿ ಹಿಂದು, ಮುಸ್ಲಿಂ, ಶಿಖ್, ಕ್ರಿಶ್ಚಿಯನ್ ಧರ್ಮವನ್ನು ಹೊಂದಿದರಾಗಿರುವುದು. ಇವರುಗಳು ಯಾವುದೇ ಕಾಲದಲ್ಲಿ ಮುಸ್ಲಿಂ, ಕ್ರಿಶ್ಚಿಯನ್, ಶಿಖ್ಖ್ ಧರ್ಮಗಳಿಗೆ ಧಾರ್ಮಿಕ ಸ್ಥಿತ್ಯಂತರ ಹೊಂದಿದ್ದರು ಸಹ ಅವರು ಮಾಡುತ್ತಿರುವ ವೃತ್ತಿಯಲ್ಲಿ ಮಾತ್ರ ಸ್ಥಿತ್ಯಂತರವಾಗಿಲ್ಲ ಅಂದರೆ ಧರ್ಮ ಬೇರೆಯಾದರು ಕಸುಬು ಮಾತ್ರ ಒಂದೇ ಆಗಿದೆ. ಈ ಸ್ಥಿತಿಗೆ ಅವರದೇ ಆದ ಕಾರಣಗಳಿರುವುದು.

ತಲತಲಾಂತರಗಳಿಂದ ಬಂದ ಅಸ್ಪೃಶ್ಯರು ಆಳುವ ವರ್ಗ ಉಳ್ಳವರ ದೌರ್ಜನ್ಯ, ಶೋಷಣೆಗೆ ಬೇಸತ್ತು ಮತ್ತು ತಮ್ಮ ಜೀವನ ಮಟ್ಟದ ಸುಧಾರಣೆಗೊಳ್ಳುವ ಆಶಾವಾದದಿಂದ ಹಾಗೂ ಇನ್ನಿತರ ಕಾರಣಗಳಿಂದಾಗಿ ಮುಸ್ಲಿಂ, ಕ್ರಿಶ್ಚಿಯನ್, ಶಿಖ್ ಮುಂತಾದ ಧರ್ಮಗಳಿಗೆ ಮತಾಂತರವಾಗಿರ ಬಹುದೆನಿಸುತ್ತದೆ.

ಮಧ್ಯಕಾಲಿನ ಸಂದರ್ಭದಲ್ಲಿ ಉತ್ತರದಿಂದ ದಖ್ಖನ್ ಪ್ರಾಂತಗಳ ಮೇಲೆ ದಂಡಯಾತ್ರೆ ನಡೆಸಿದ ಮುಸ್ಲಿಂ ಅರಸರ ಸೈನ್ಯದ ಮೂಲಕ ಬಂದವರು. ದಂಡಯಾತ್ರೆ ಬಳಿಕ ಇಲ್ಲಿಯೇ ನೆಲೆಯೂರಿಕಬೇಕು ನಿರ್ವಸತಿಕರಾದ ಇವರು ಸಾಮಾಜಿಕ ಸ್ಥಾನ ಮಾನಕ್ಕಾಗಿ ಇಸ್ಲಾಂ ಧರ್ಮಕ್ಕೆ ಮತಾಂತರಾದರು. ಭೂರಹಿತರಾಗಿದ್ದ ಇವರು ಉಳ್ಳವರ ಚಾಕರಿಗೆ ನಿಂತರು. ಇವರುಗಳೇ ಸಫಾಯಿ ಕರ್ಮಚಾರಿಗಳಾದರೆನ್ನಬೇಕು ಮತ್ತು 17, 18ನೇ ಶತಮಾನದಲ್ಲಿ ನಿಜಾಮ ರಾಜ್ಯದಲ್ಲಿ ಸವಲತ್ತುಗಳನ್ನು ಪಡೆಯುವ ಸಲುವಾಗಿ ಮತಾಂತರವಾದ ಅಸ್ಪೃಶ್ಯರೆ ಸಫಾಯಿ ಕರ್ಮಚಾರಿಗಳಾದರು. ಗುಲಬರ್ಗಾ ಜಿಲ್ಲೆಯಲ್ಲಿ ಕಂಡು ಬರುವ ಸಫಾಯಿ ಕರ್ಮ ಚಾರಿಗಳಲ್ಲಿ ಮರಾಠಿ ಮೂಲದವರೂ ಕಂಡು ಬರುತ್ತಾರೆ. ಇವರೆಲ್ಲರೂ ಮೂಲತಃ ಶಿವಾಜಿಯ ಸೈನ್ಯದಲ್ಲಿದ್ದವರು. ದಂಡಯಾತ್ರೆಯಿಂದ ಶಿವಾಜಿಯು ಮರಳಿ ದನಾದರೂ ಅವರ ಜೋತೆಗೆ

ಬಂದಿದ್ದವರು ಇಲ್ಲಿಯೇ ಉಳಿದರು ಬದುಕಿನ ನಿರ್ವಹಣೆಗಾಗಿ ಸಫಾಯಿ ವೃತ್ತಿಯವರಾದರೆಂದು ಹೇಳಬಹುದಾಗಿದೆ.

ಒಟ್ಟಾರೆಯಾಗಿ ಹೇಳಬೇಕೆಂದರೆ ಸಾಮಾಜಿಕವಾಗಿ, ಆರ್ಥಿಕವಾಗಿ ತೀರ ಹಿಂದುಳಿದ ಜನರು ಬೇರೆ ಬೇರೆ ಕಾರಣಾಂತರಗಳಿಂದ ಧಾರ್ಮಿಕ ಸ್ಥಿತ್ಯಂತರ ಹೊಂದಿದ್ದರೂ ಅವರ ವೃತ್ತಿಯಲ್ಲಿ ಮಾತ್ರ ಸ್ಥಿತ್ಯಂತರ ಆಗಿದ್ದನ್ನು ಕಾಣಲಾರೆವು ಎಂದು ಹೇಳ ಬಹುದಾಗಿದೆ.

4. ಶೈಕ್ಷಣಿಕ ಸ್ಥಿತ್ಯಂತರಗಳು

ಆರ್ಥಿಕವಾಗಿ ಅಭಿವೃದ್ಧಿಯನ್ನು ಸಾಧಿಸುವುದಕ್ಕೆ ಮೂಲಭೂತವಾಗಿ ಶಿಕ್ಷಣ ಮತ್ತು ದುಡಿಯುವ ಕೈಗಳಿಗೆ ಕೆಲಸವನ್ನು ಒದಗಿ ಬಂದಾಗ ಮಾತ್ರ ಸಾಧ್ಯವೆಂಬ ಅರ್ಥಶಾಸ್ತ್ರಜ್ಞರ ಮಾತುಗಳು ಸಮಂಜಸವಾದುದಾಗಿದೆ.

ಕರ್ನಾಟಕದಂತೆ ಗುಲಬರ್ಗಾ ಜಿಲ್ಲೆಯಲ್ಲಿ ಕಡುಬಡತನದಲ್ಲಿರುವ ಸಫಾಯಿ ಕರ್ಮ ಚಾರಿಗಳಿಗೆ ಶಿಕ್ಷಣ ಕಲಿಯಲು ಬೇಕಾದ ಅನುಕೂಲತೆಗಳು ಇನ್ನೂ ನಿರ್ಮಾಣವಾಗಿಲ್ಲ. ಅವರು ಶಿಕ್ಷಣವನ್ನು ಬೇಕಂತಲೇ ಉಪೇಕ್ಷೆ ಮಾಡಿದವರಲ್ಲ, ಬಡತನ ಪರಿಸ್ಥಿತಿಯ ಒತ್ತಡ ಅವರನ್ನು ಶಿಕ್ಷಣ ಸೌಲಭ್ಯದಿಂದ ದೂರಮಾಡಿದೆ. ಹೊಟ್ಟೆ ಪಾಡಿಗಾಗಿ ದಿನಂಪ್ರತಿ ಮುಂಜಾನೆಯಿಂದ ಸಂಜೆಯವರೆಗು ದುಡಿಮೆಗಾಗಿ ಅಲೆದಾಡುವುದರಿಂದ ಇವರಿಗೆ ಮತ್ತು ಇವರ ಮಕ್ಕಳಿಗೆ ಶಿಕ್ಷಣದ ಸೌಲಭ್ಯ ದುರ್ಲಭವಾಗಿದೆ.

ಅಧ್ಯಯನ ಕ್ಷೇತ್ರವಾದ ಗುಲಬರ್ಗಾ ನಗರ ಮತ್ತು ಜಿಲ್ಲೆಯ ವಿವಿಧ ತಾಲ್ಲೂಕುವಾರು ಸಮುದಾಯದ ಶೈಕ್ಷಣಿಕ ವಿವರಗಳನ್ನು ಕುರಿತು ಸಂಗ್ರಹಿಸಿದ ಮಾಹಿತಿಗಳು ಆಧಾರದ ಮೇಲೆ ಸಫಾಯಿ ಕರ್ಮಚಾರಿಗಳ ಶೈಕ್ಷಣಿಕ ಸ್ಥಿತ್ಯಂತರಗಳನ್ನು ಗುರುತಿಸಲಾಗುತ್ತಿದೆ. ಗುಲಬರ್ಗಾ ನಗರದಲ್ಲಿ ಶೇಕಡಾ 2.84 (238) ಪುರುಷರು ಶೇಕಡಾ 1.56 (104) ಸ್ತ್ರೀಯರು ಶಿಕ್ಷಣವನ್ನು ಪಡೆದಿರುತ್ತಾರೆ. ಇನ್ನು ತಾಲ್ಲೂಕವಾರುಗಳಲ್ಲಿ ಆಳಂದ 178 (108) ಪುರುಷರು 078 (101) ಮಹಿಳೆಯರು, ಅಫಜಲಪೂರ 2.11 (108) ಪುರುಷರು 1.26 (80) ಮಹಿಳೆಯರು ಜೇವರಗಿ 078 (108) ಪುರುಷರು 1.87 (142) ಮಹಿಳೆಯರು, ಸೇಡಂ 1.71 (69) ಪುರುಷರು 02.8 (48) ಮಹಿಳೆಯರು ಚಿಂಚೋಳಿ 0.64 (53) ಪುರುಷರು 0.29 (32) ಮಹಿಳೆಯರು ಚಿತ್ತಾಪೂರ 1.94


(130) ಪುರುಷರು 1.94 (130) ಮಹಿಳೆಯರು ಪ್ರಾಥಮಿಕ ಶಿಕ್ಷಣ ಪಡೆದವರಿದ್ದಾರೆ. ಆದರೆ ಸಫಾಯಿ ಕರ್ಮಚಾರಿ ಸಮುದಾಯದ ಶೈಕ್ಷಣಿಕ ಸ್ಥಿತಿಯ ಒಟ್ಟು ಸಾಕ್ಷರತೆಯ ಪ್ರಮಾಣ 17.05 ಇರುವುದು ಕಂಡಬರುತ್ತದೆ. ಇದರಲ್ಲಿ ಪುರುಷ ಶೈಕ್ಷಣಿಕ ಪ್ರಮಾಣ 12.24 (821) ಇದ್ದರೆ, ಮಹಿಳೆಯರು 4.20 (540) ಮಹಿಳೆಯ ಶೈಕ್ಷಣಿಕ ಪ್ರಮಾಣವಾಗಿದೆ. ಬಿ.ಎ ಪುರುಷರಲ್ಲಿ ಹೆಚ್ಚಿನ ಶಿಕ್ಷಣ ಹೊಂದಿದರಾಗಿದ್ದಾರೆ. ಮಹಿಳೆಯರು ಎಸ್.ಎಸ್.ಎಲ್.ಸಿ ವರೆಗೆ ಮಾತ್ರ ಶಿಕ್ಷಣ ಹೊಂದಿರುವವರಾಗಿದ್ದಾರೆ. ಪದವಿ ಪೂರ್ವ, ಪದವಿ ಶಿಕ್ಷಣ ಪಡೆಯುವವರ ಸಂಖ್ಯೆ ತೀರ ಮಧ್ಯಮದಲ್ಲಿದ್ದು, ಸ್ನಾತಕೋತ್ತರ ಪದವಿ ಪೂರ್ವ ಶಿಕ್ಷಣ ಹಾಗೂ ವೃತ್ತಿ ಶಿಕ್ಷಣ ಪಡೆಯುವಲ್ಲಿ ಇವರ ಸಂಖ್ಯೆ ತೀರ ಕಡಿಮೆಯದ್ದಾಗಿದೆ. ಮುಂದುವರಿದ ಪ್ರದೇಶಗಳಲ್ಲಿ ಹಾಗೂ ಸರಕಾರಿ ಸೌಲಭ್ಯಗಳಿಂದಾಗಿ ಇತ್ತೀಚಿನ ದಿನಗಳಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಬಡತನ, ಉದ್ಯೋಗದ ಕಾರಣವಾಗಿ ಶಿಕ್ಷಣ ಪ್ರಮಾಣ ಕಡಿಮೆಯದ್ದಾಗಿದೆ. ಈಗ ಗುಲಬರ್ಗಾ ನಗರದ ಸಫಾಯಿ ಕರ್ಮಚಾರಿ ಸಮುದಾಯ ಇರುವ ಕೇರಿಗಳಲ್ಲಿ ಸರಕಾರವು ಅಂಗನವಾಡಿ ಶಾಲೆ ತೆರೆದಿದೆ. ಇದರಿಂದ ಸಫಾಯಿ ಕರ್ಮಚಾರಿ ಮಕ್ಕಳಿಗೆ ಒಮದಷ್ಟು ಶಿಕ್ಷಣ ಸೌಲಭ್ಯ ಒದಗಿಸುವುದು ಸಧ್ಯವಾಗಿದೆ. ಆದರೆ ಸರಕಾರಿ ಪ್ರಾಥಿಮಿಕ ಶಾಲೆಗಳು ಇಲ್ಲದಿರುವ ಕೊರತೆ ಎದ್ದು ಕಾಣುತ್ತದೆ.

ಕೋಷ್ಟಕ – 8


ಸಫಾಯಿ ಕರ್ಮಚಾರಿ ಸಮುದಾಯದ ಶೈಕ್ಷಣಿಕ ಸ್ಥಿತಿಗತಿ

ಕ್ರಸಂ	ಗುಲಬರ್ಗಾ ನಗರ	ಪುರುಷ ಶೇಕಡಾ	ಸ್ತ್ರೀಯರು ಶೇಕಡಾ	ಒಟ್ಟು ಶೇಕಡಾ	ಗುಲಬರ್ಗಾ ಜಿಲ್ಲೆಯ ತಾಲ್ಲೂಕುಗಳು		
					ಪುರುಷ ಶೇಕಡಾ	ಸ್ತ್ರೀಯರು ಶೇಕಡಾ	ಒಟ್ಟು ಶೇಕಡಾ
01	ಪ್ರಾಥಮಿಕ	25.05	10.25	35.35%	8.22	6.95	15.22%
02	ಮಾಧ್ಯಮಿಕ	10.92	7.13	18.12%	5.15	4.01	9.06%
03	ಕಾಲೇಜು (ಪ.ಪೂ/ಪದವಿ)	10.10 3.93	4.17 0.8	15.20% 4.15%	4.02	2.98	6.20%
04	ಸ್ನಾತಕೋತ್ತರ	0.62	0.4	0.60%	0.32	0.20	01.52%
05	ವೃತ್ತಿ ಶಿಕ್ಷಣ	1.12	0.7	13.05%	12.05	0.85	12.95%

ಗುಲಬರ್ಗಾ ನಗರದ ಸಫಾಯಿ ಕರ್ಮಚಾರಿ ಸಮುದಾಯದ ಶಿಕ್ಷಣ ಸ್ಥಿತಿ



ತಾಲೂಕುವಾರು ಸಫಾಯಿ ಕರ್ಮಚಾರಿ ಸಮುದಾಯದ ಶಿಕ್ಷಣ ಸ್ಥಿತಿ



ಪ್ರಸ್ತುತ ಅಧ್ಯಯನದಿಂದ ಕಂಡುಬಂದ ಸಂಗತಿಗಳೇನೆಂದರೆ ಶೇಕಡಾ 22.58 ಪುರುಷರು ಶೇಕಡಾ 14.74 ಸ್ತ್ರೀಯರು ಸಾಕ್ಷರರಾಗಿದ್ದಾರೆ. ಕಾರಣವೇನೆಂದರೆ ಬಡತನ ಅಂದಾನುಕರಣೆ ಸಂಪ್ರದಾಯಗಳು ಆಗಿವೆ. ಪುರುಷರಿಗಿಂತ ಸ್ತ್ರೀಯರು ಕಡಿಮೆ ಕೌಟುಂಬಿಕ ವ್ಯವಸ್ಥೆ ಕಾರಣವೆನ್ನಬೇಕು ಜೋತೆಗೆ ಕುಟುಂಬದ ಆರ್ಥಿಕ ಸ್ಥಿತಿ, ಶೀಘ್ರ ವಿವಾಹ ಪದ್ಧತಿ ಉನ್ನತ ಶಿಕ್ಷಣದ ಸೌಲಭ್ಯದ ಕೊರತೆ ಹಾಗೂ ಸಾಂಪ್ರದಾಯಿಕತೆ ಮೊದಲಾದವು ಸೇರಿವೆ.


ಶಿಕ್ಷಣ ಎಂಬ ಈ ಮೂರು ಅಕ್ಷರಗಳಲ್ಲಿ ವಿಶ್ವ ನಿರ್ಮಾಣ ಕಾರ್ಯವೂ ಅಡಗಿದೆ. ಒಂದು ಸಮಾಜದ ಸರ್ವತೋ ಮುಖ ಅಭಿವೃದ್ಧಿಯಲ್ಲಿ ಶಿಕ್ಷಣ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ಪುರಾತನ ಕಾಲದಿಂದಲೂ ಶಿಕ್ಷಣವೆಂಬ ಪ್ರಕ್ರಿಯೆಯು ಸ್ಥಿರವಾಗಿರದೆ ಚಲನ ಶೀಲ ಸ್ವರೂಪದ್ದಾಗಿರುವುದು ಕಂಡು ಬರುತ್ತದೆ.

ಸಫಾಯಿ ಕರ್ಮಚಾರಿ ಸಮುದಾಯದವರು ತಮ್ಮ ಸಾಂಪ್ರದಾಯಕ ವೃತ್ತಿಗಳನ್ನು ಅನುಸರಿಸುತ್ತಾ ನಿರಕ್ಷರತೆ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಇದರಿಂದಾಗಿ ಸಾಕ್ಷರತೆಯ ಪ್ರಮಾಣ ಕಡೆಮೆಯಾಗಿತ್ತು. ಅದರಲ್ಲಿಯೂ ಸ್ತ್ರೀಯ ಸಾಕ್ಷರತೆಯ ಪ್ರಮಾಣ ಇನ್ನು ಕಡಿಮೆಯಿರುವುದು ಕಾಣುತ್ತೇವೆ. ಆದರೆ ಸಂವಿಧಾನಾತ್ಮಕ ಶಾಸನೀಯ ಸೌಲಭ್ಯಗಳ ಪರಿಣಾಮದಿಂದ ಈ ಸಮುದಾಯವು ಅಷ್ಟಿಷ್ಟು ಶಿಕ್ಷಣ ಹೊಂದುವಂತಾಗಿರುವುದು. ಸಂವಿಧಾನದ 338ನೇ ಕಲಂ ಪ್ರಕಾರ ರಾಷ್ಟ್ರಪತಿಯು ಪರಿಶಿಷ್ಟ ಜಾತಿಯ ಮೂಲಭೂತ ಹಕ್ಕುಗಳ ರಕ್ಷಣೆಗಾಗಿ ವಿಶೇಷ ಅಧಿಕಾರಿಯನ್ನು ನೇಮಿಸಿರುವರು. ಸಂವಿಧಾನದ 46ನೇ ಕಲಂನಂತೆ ಸಾಮಾಜಿಕ ಜಾತಿಯವರಿಗೆ ರಕ್ಷಣೆ ಕೊಟ್ಟು ಅವರ ಶೈಕ್ಷಣಿಕ ಮತ್ತು ಆರ್ಥಿಕ ಪ್ರಗತಿಯನ್ನು ಸಾಧಿಸಲು ಪ್ರಯತ್ತಿಸುವುದಾಗಿದೆ. ಅದೇ ರೀತಿ 29ನೇ ಕಲಂ ಪ್ರಕಾರ ಯಾವುದೇ ಶೈಕ್ಷಣಿಕ ಸಂಸ್ಥೆಯಲ್ಲಿ ಪರಿಶಿಷ್ಟ ಜಾತಿಯವರೆಗೆ ಪ್ರವೇಶ ನೀಡುವುದು ಕಡ್ಡಾಯವಾಗಿದೆ. ಈ ಸಂವಿಧಾನಾತ್ಮಕ ಪ್ರಯೋಜನ ಸಫಾಯಿ ಕರ್ಮಚಾರಿ ಸಮುದಾಯಕ್ಕೆ ಆಗಬೇಕಾದ ಜರೂರಿ ಇದೆ.


ಕೋಷ್ಟಕ – 9
ನನ್ನ ಕ್ಷೇತ್ರ ಕಾರ್ಯ ಆದರಿಸಿ ಸಿದ್ಧಪಡಿಸಿದ 2011–2013 ರ ಸಾಲಿನ ಸಫಾಯಿ ಕರ್ಮಚಾರಿ ಸಮುದಾಯದ ಶೈಕ್ಷಣಿಕ ಸ್ಥಿತಿಗತಿ

ಕ್ರ.ಸಂ	ಗುಲಬರ್ಗಾ ನಗರ	ಪುರುಷ ಶೇಕಡಾ	ಸ್ತ್ರೀಯರು ಶೇಕಡಾ	ಒಟ್ಟು ಶೇಕಡಾ	ಗುಲಬರ್ಗಾ ಜಿಲ್ಲೆಯ ತಾಲ್ಲೂಕುಗಳು		
					ಪುರುಷ ಶೇಕಡಾ	ಸ್ತ್ರೀಯರು ಶೇಕಡಾ	ಒಟ್ಟು ಶೇಕಡಾ
01	ಪ್ರಾಥಮಿಕ	27.45	18.20	45.65	10.18	07.65	17.83%
02	ಮಾಧ್ಯಮಿಕ	12.25	08.90	21.15	06.75	05.20	11.95%
03	ಕಾಲೇಜು (ಪ.ಪೂ)	11.90	05.70	17.60	05.75	03.00	08.75%
04	ಕಾಲೇಜು (ಪದವಿ)	04.50	01.25	05.75	07.25	04.00	11.25%
05	ಸ್ನಾತಕೋತ್ತರ	01.05	01.04	02.09	0.85	0.40	01.25%
06	ವೃತ್ತಿ ಶಿಕ್ಷಣ	02.80	01.20	04.00	13.75	01.25	15.00%

ಗುಲಬರ್ಗಾ ನಗರದ ಪುರುಷ ಸಫಾಯಿ ಕರ್ಮಚಾರಿ ಸಮುದಾಯದ 2011–13 ರ ಸಾಲಿನ ಶಿಕ್ಷಣಸ್ಥಿತಿ



ಗುಲಬರ್ಗಾ ಜಿಲ್ಲೆಯ ತಾಲ್ಲೂಕುಗಳ ಪುರುಷ ಸಫಾಯಿ ಕರ್ಮಚಾರಿ ಸಮುದಾಯದ 2011–13 ರ ಸಾಲಿನ ಶಿಕ್ಷಣಸ್ಥಿತಿ



ಹಿಂದಿನ ಶೈಕ್ಷಣಿಕ ಸ್ಥಿತಿಗತಿ ಆಧರಿಸಿ ಹೇಳಬೇಕೆಂದರೆ ಸರಕಾರದ ಸರ್ವ ಶಿಕ್ಷಣ ಅಭಿಮಾನ ಯೋಜನೆಯಂತೆ ಸರ್ವರಿಗೂ ಉಚಿತ ಕಡ್ಡಾಯ / ಶಿಕ್ಷಣ ಪಡೆದ ಸಫಾಯಿ ಕರ್ಮಚಾರಿಗಳಲ್ಲಿ ಶೈಕ್ಷಣಿಕ ಸ್ಥಿತಿ ಗತಿಯಲ್ಲಿ ಏರಿಕೆಯಾಗಿರುವುದ ನನ್ನ ಕ್ಷೇತ್ರ ಕಾರ್ಯದಿಂದ ಕಂಡು ಬರುತ್ತದೆ. ಮಧ್ಯಾಹ್ನದ ಬಿಸಿ ಊಟ, ಅನ್ನ ಭಾಗ್ಯ, ಸಮವಸ್ತ್ರ ವಿತರಣೆಗಳು ಸಫಾಯಿ ಕರ್ಮಚಾರಿಗಳ ಮಕ್ಕಳಿಗೆ ತಲುಪಿದೆ. ಅದರಂತೆ ಪ್ರಾಥಮಿಕ ಶಿಕ್ಷಣದಲ್ಲಿ ಪುರುಷರಲ್ಲಿ 24.45%, ಸ್ತ್ರೀಯರಲ್ಲಿ 18.20% ಮಾಧ್ಯಮಿಕ ಶಿಕ್ಷಣದಲ್ಲಿ ಪುರುಷರಲ್ಲಿ 12.25%, ಸ್ತ್ರೀಯರಲ್ಲಿ 8.90% ಕಾಲೇಜು ಪದವಿ ಪೂರ್ವ ಶಿಕ್ಷಣದಲ್ಲಿ ಪುರುಷರಲ್ಲಿ 7.25%, ಸ್ತ್ರೀಯರಲ್ಲಿ 4.00% ಕಾಲೇಜು ಪದವಿ ಶಿಕ್ಷಣದಲ್ಲಿ ಪುರುಷರಲ್ಲಿ 5.75%, ಸ್ತ್ರೀಯರಲ್ಲಿ 3.00% ಕಾಲೇಜು ಶಿಕ್ಷಣದಲ್ಲಿ ಪುರುಷರಲ್ಲಿ 4.50%, ಸ್ತ್ರೀಯರಲ್ಲಿ 1.25% ಸ್ನಾತಕೋತ್ತರ ಶಿಕ್ಷಣದಲ್ಲಿ ಪುರುಷರಲ್ಲಿ 1.05%, ಸ್ತ್ರೀಯರಲ್ಲಿ 1.04% ವೃತ್ತಿ ಶಿಕ್ಷಣದಲ್ಲಿ ಪುರುಷರಲ್ಲಿ 2.80%, ಸ್ತ್ರೀಯರಲ್ಲಿ 1.20% ವೃದ್ಧಿಯಾಗಿರುತ್ತದೆ.

ಗುಲಬರ್ಗಾ ಜಿಲ್ಲೆಯ ಏಳು ತಾಲೂಕುಗಳಲ್ಲಿ ಶೈಕ್ಷಣಿಕ ಸ್ಥಿತಿಗತಿ ಪ್ರಾಥಮಿಕ ಶಿಕ್ಷಣದಲ್ಲಿ ಪುರುಷರಲ್ಲಿ 7.65%, ಸ್ತ್ರೀಯರಲ್ಲಿ 17.83% ಮಾಧ್ಯಮಿಕ ಶಿಕ್ಷಣದಲ್ಲಿ ಪುರುಷರಲ್ಲಿ 5.20%, ಸ್ತ್ರೀಯರಲ್ಲಿ 11.95% ಕಾಲೇಜು ಪದವಿ ಪೂರ್ವ ಶಿಕ್ಷಣದಲ್ಲಿ ಪುರುಷರಲ್ಲಿ 4.00%, ಸ್ತ್ರೀಯರಲ್ಲಿ 11.25% ಕಾಲೇಜು ಪದವಿ ಶಿಕ್ಷಣದಲ್ಲಿ ಪುರುಷರಲ್ಲಿ 5.75%, ಸ್ತ್ರೀಯರಲ್ಲಿ 3.00% ಸ್ನಾತಕೋತ್ತರ ಶಿಕ್ಷಣದಲ್ಲಿ ಪುರುಷರಲ್ಲಿ 1.05%, ಸ್ತ್ರೀಯರಲ್ಲಿ 1.04% ವೃತ್ತಿ ಶಿಕ್ಷಣದಲ್ಲಿ ಪುರುಷರಲ್ಲಿ 2.80%, ಸ್ತ್ರೀಯರಲ್ಲಿ 1.20% ವೃದ್ಧಿಯಾಗಿರುತ್ತದೆ.

5. ಸಾಂಸ್ಕೃತಿಕ ಸ್ಥಿತ್ಯಂತರಗಳು

ಸಂಸ್ಕೃತಿಯೆಂದರೆ ಬರೀ ಮ್ಯೂಜಿಯಂ ಸಾಮಗ್ರಿಯಲ್ಲ ಅದೊಂದು ನಿರಂತರವಾಗಿ ಬದಲಾವಣೆಗೊಳ್ಳುವ ಚಲನ ಶೀಲ ಪ್ರಕ್ರಿಯೆ ಸ್ಥಗಿತ ಮೌಲ್ಯ ಮತ್ತು ಜೀವನ ಕ್ರಮಗಳನ್ನು ನಿರೂಪಿಸುವ ಅಂಶಿಕ ಸತ್ಯವನ್ನು ಮಿರಿ ಸಂಸ್ಕೃತಿಯ ಇತಿಹಾಸವನ್ನು ಚರಿತ್ರೆಯ ಚಲನ ಶೀಲ ನೆಲೆಯಲ್ಲಿ ಗ್ರಹಿಸುವುದು ಸಮಗ್ರ ನೋಟದತ್ತ ಸಾಗುವ ಸಾರ್ಥಕ ನಡೆಯಾಗಬಲ್ಲದು. ಈ ನಡಿಗೆ ನಿರಂತರವೆಂಬ ಎಚ್ಚರವು ಅಗತ್ಯವಾದದು. ಈ ಹಿನ್ನೆಲೆಯಲ್ಲಿ ಸಫಾಯಿ ಕರ್ಮಚಾರಿ ಸಮುದಾಯದ ವಿವಿಧ ವಲಯಗಳ ಸಂಸ್ಕೃತಿಯ ವಿವರಗಳನ್ನು ಸ್ಥಿತ್ಯಂತರಗಳ ನೆಲೆಯಿಂದ ನೋಡುವುದು ಉಚಿತ ವಿಧಾನವೆನಿಸಿದೆ.

ಸಫಾಯಿ ಕರ್ಮಚಾರಿಗಳ ತಮ್ಮದೇ ಆದ ಸಾಂಸ್ಕೃತಿಕ ವಿಶಿಷ್ಟತೆಯನ್ನು ಹೊಂದಿದ್ದಾರೆ. ಅವುಗಳನ್ನು ಬೇರೆ ಬೇರೆ ಜ್ಞಾನ ಶಿಸ್ತುಗಲ ಮೂಲಕ ಗುರುತಿಸುವ ವಿಶ್ಲೇಷಿಸಿ ಅವುಗಳ ಅಸ್ಮಿತೆಯನ್ನು ಕಟ್ಟಿಕೊಡುವಂತಹ ಕೆಲಸಗಳು ಇನ್ನೂ ನಡೆಯಬೇಕಿದೆ. ಒಂದು ನಾಡಿನ ರಾಜಕೀಯ ಇತಿಹಾಸ ಆ ಪ್ರದೇಶದಲ್ಲಿನ ರಾಜ ಮಹಾ ರಾಜರುಗಳ ಅಧಿಕಾರದ ಅವ್ಯಸ್ಥೆಗಳನ್ನು, ಆಡಳಿತದ ಪದರುಗಳನ್ನು ತಿಳಿಸಿಕೊಡುತ್ತದೆ. ಅದೇ ನಾಡಿನ ಜನ ಜೀವನಕ್ಕೆ ಸಂಬಮಧಿಸಿದ ವಿವರಗಳನ್ನು ತಿಳಿಯಬೇಕಾದರೆ ಅಲ್ಲಿನ ಸಾಂಸ್ಕೃತಿಕವಾದ ಅಂಶಗಳನ್ನು ಬದಲಾವಣೆಗಳನ್ನು ಗಮನಿಸಬೇಕಾಗುತ್ತದೆ. ಒಂದು ನಾಡು ಎಂದರೆ ಅದನ್ನು ಆಳಿದ ರಾಜರು ಅಲ್ಲ, ಅಲ್ಲಿ ಬದುಕಿದ ಜನರೂ ಆಗುತ್ತಾರೆ.

ಸಮಾಜ ಒಂದೇ ರೂಪದಲ್ಲಿ ಇರುವುದಿಲ್ಲ. ವಿಕಾಸವಾಗುತ್ತ ಹೋಗುತ್ತದೆ. ಅದರೊಂದಿಗೆ ಸ್ಥಿತ್ಯಂತರಗಳನ್ನು ಮೈಗೂಡಿಸಿಕೊಂಡು ಮುಂದುವರಿಯುತ್ತದೆ. ಈ ರೀತಿಯ ಚಲನಶೀಲ

ಸಮಾಜದಲ್ಲಿನ ಸಂಸ್ಕೃತಿಯೂ ಪರಿವರ್ತನೆ ಹೊಂದುತ್ತದೆ. ಈ ಪರಿವರ್ತನೆಗೆ ಸಫಾಯಿ ಕರ್ಮಚಾರಿ ಸಮುದಾಯು ಒಳ್ಳೆಯ ಅರಿವು ಮೂಡತೊಡಗಿದೆ. ಅದಕ್ಕಾಗಿ ಈಗೀನ ಸಂಘಟನೆಯತ್ತ ಹೆಜ್ಜೆಯಿಡುತ್ತಿದ್ದಾರೆ. ಅದಕ್ಕಾಗಿ ಈಗೀಗ ಸಫಾಯಿ ಕರ್ಮಚಾರಿಗಳು ಡಾ: ಬಿ.ಆರ್. ಅಂಬೇಡ್ಕರ ಅಭಿವೃದ್ಧಿ ಸಂಘ, ಬಾಬು ಜಗಜೀವನರಾಮ ಹೋರಾಟ ಸಮಿತಿ, ಸಫಾಯಿ ಕರ್ಮಚಾರಿ ಹೋರಾಟ ಸಮಿತಿಗಳಂತಹ ಸಂಘಟನೆಗಳನ್ನು ಸಮಾಜದ ಯುವಕರು ಕಟ್ಟಿಕೊಂಡು ತಮ್ಮ ಸಾಮಾಜಿಕ ಆರ್ಥಿಕ, ಶೈಕ್ಷಣಿಕ, ರಾಜಕೀಯ ಹೋರಾಟಕ್ಕೂ ತೊಡಗಿಸಿಕೊಳ್ಳುತ್ತಿರುವು. ಆಧುನಿಕ ಜೀವನ ಶೈಲಿಗೆ ಒಡ್ಡಿ ಕೊಳ್ಳುತ್ತಿರುವರು.

ಪ್ರಜಾಪ್ರಭುತ್ವ, ಆಧುನಿಕತೆ, ನಾಗರೀಕರಣಗಳು ಸಫಾಯಿ ಕರ್ಮಚಾರಿಗಳ ಜೀವನದಲ್ಲಿ ಹಲವಾರು ಬದಲಾವಣೆಗಳಿಗೆ ಕಾರಣವಾಗಿವೆ. ವಸತಿ ಮನೆಗಳು, ಉಡುಗೆ ತೊಡುಗೆಗಳು ಆಹಾರ ಶೈಲಿ, ಮನರಂಜನೆ ಸಾಧನಗಳು ಸುಧಾರಿಸಲ್ಪಟ್ಟಿರುವವು. ಬದಲಾದ ಕಾಲದೊಡನೆ ಹೆಜ್ಜೆ ಹಾಕುತ್ತ ಬದುಕನ್ನು ಬಾಳುತ್ತಿರುವ ಸಪಾಯಿ ಕರ್ಮಚಾರಿಗಳು ತಮ್ಮ ಸಂಸ್ಕೃತಿಯ ಅನನ್ಯತೆಗು ಶ್ರಮಿಸುತ್ತಿದ್ದಾರೆ. ಎನ್ನಬಹುದು. ದೇಶ ವಿದೇಶಗಳಾದ್ಯಂತ ಸುದ್ದಿ ಮಾಡಿತು.

ಮಹಿಳೆಯರು ಮಕ್ಕಳು ಹೆಚ್ಚಾಗಿ ನಗರದ ರಸ್ತೆ ಬದಿಯಲ್ಲಿನ ಕಸದ ತೊಟ್ಟಿಗಳಲ್ಲಿ ಹಾಗೂ ನಗರದ ಕಸ ಹಾಕುವ ಸ್ಥಳಗಳಲ್ಲಿ ದೊರಕುವ ಪ್ಲಾಸ್ಟಿಕ ಹಾಳೆ, ಚೀಲ, ತುಂಡು, ಕಬ್ಬಿಣ, ಬಲ್ಬ ಮತ್ತು ಹಾಳಾದ ಟ್ಯೂಬ್ ಲೈಟಿನ ಲೋಹಯುಕ್ತ ಭಾಗಗಳನ್ನು ಸಂಗ್ರಹಿಸುತ್ತಾರೆ. ಅಲ್ಲದೆ ಆಸ್ಪತ್ರೆಯಲ್ಲಿ ಬಳಸುವ ಪ್ಲಾಸ್ಟಿಕ ಉಪಕರಣಗಳಿಗಾಗಿ ಕಸದ ತೊಟ್ಟಿಯ ಬಳಿ ಕಾಯುತ್ತ ಕುಳಿತು ಅವುಗಳನ್ನು ಸಂಗ್ರಹಿಸುತ್ತಾರೆ. ಇದರಿಂದ ಒಂದು ದಿನಕ್ಕೆ ಹತ್ತರಿಂದ ಹದಿನೈದು ರೂಪಾಯಿಗಳಷ್ಟು ಮೋಡ್ಕಾ ವಸ್ತುಗಳನ್ನು ಸಂಗ್ರಹಿಸಿ ಮಧ್ಯವರ್ತಿಗಳಿಗೆ ಮಾರಾಟ ಮಾಡುತ್ತಾರೆ. ಅಂದು ದೊರೆತ ಹಣದಿಂದಲೇ ಅಂದಿನ ದಿನದ ಊಟ ಸಣ್ಣ ಮಕ್ಕಳೂ ಸಹ ಈ ಕೆಲಸದಲ್ಲಿ ನಿರತರಾಗಿರುತ್ತಾರೆ.

ಅಡಿಟಿಪ್ಪಣಿಗಳು

1. ಬೇವಿನಕಟ್ಟಿ ಮಂಜುನಾಥ, ಬುಡಕಟ್ಟು ಅಧ್ಯಯನ ಪು. 12, ಸಂಪುಟ–3, ಸಂಚಿಕೆ–1, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2006.
2. ಅದೇ ಪು. 12.
3. ದಿನ್ನಿ ದಸ್ತಗೀರಸಾಬ್ (ಸಂ) ಪ್ರಸ್ತಾವನೆ, ಜಾಗತೀಕರಣ ಮತ್ತು ಸಂಸ್ಕೃತಿ, ಕನಸು ಪ್ರಕಾಶನ, ರಾಯಚೂರು, 2004.

4. ಪೂರ್ವೋಕ್ತ, ಮುರಾರಿ ಬಲ್ಲಾಳ ನಿ., ಜಾಗತೀಕರಣ ಒಂದು ಸಮಗ್ರ ಅಧ್ಯಯನ ಪು.34, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 2004.

5. ಮನು ಚಕ್ರವರ್ತಿ ಎನ್. (ಸಂ) ಜಾಗತೀಕರಣ ಒಂದು ಸಮಗ್ರ ಅಧ್ಯಯನ ಪು. 52, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 2004.

6. ಅದೇ ಪು. 58.

7. ಸುಂಕಾಪುರ ಎಂ.ಎಸ್., ಮುನ್ನುಡಿ, ಜನಪದ ಸಮಾಜ ಮತ್ತು ಸಂಸ್ಕೃತಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1979.

8. ಕೋಡಿರಾಂಪುರ ರಂಗಾರೆಡ್ಡಿ (ಲೇ) ಜಾಗತೀಕರಣ ಮತ್ತು ಸಂಸ್ಕೃತಿ, ಪು. 48, ಕನಸು ಪ್ರಕಾಶನ, ರಾಯಚೂರು, 2004.

9. ಬರಗೂರ ರಾಮಚಂದ್ರಪ್ಪ, ಸಂಸ್ಕೃತಿ–ಉಪಸಂಸ್ಕೃತಿ ಪು. 44, ವಿಚಾರ ಸಾಹಿತ್ಯ–1994, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1995.

10. ಗೋಳಸಂಗಿ ಅರ್ಜುನ, ದಲಿತರ ಬದುಕು ಮತ್ತು ಸಂಸ್ಕೃತಿ ಪು. 13, ವಿಮೋಚನಾ ಪ್ರಕಾಶನ, ಆಥಣಿ, ಬೆಳಗಾವಿ ಜಿಲ್ಲೆ, 2000.

11. ಸಿದ್ದಲಿಂಗಸ್ವಾಮಿ, ಪು. 124, ವಿಚಾರ ಸಾಹಿತ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1994.

12. ಕಲಬುರ್ಗಿ ಎಂ.ಎಂ., ಬಸವಣ್ಣನವರ ವಚನ ಸಂಪುಟ–1, ಪು. 295, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2001.

13. ಸಿದ್ಧಲಿಂಗಸ್ವಾಮಿ, ಪು. 125, ವಿಚಾರ ಸಾಹಿತ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1994.

14. ಅದೇ, ಪು. 134.

15. ಲೋಹಿಯಾ ರಾಮಮನೋಹರ, ಜಾತಿ ಪದ್ಧತಿ (ಅನು) ಹಸನ ನಯೀಂ ಸುರಕೋಡ, ಪು. 162, ಲಂಕೇಶ ಪ್ರಕಾಶನ, ಬೆಂಗಳೂರು, 2001.

16. ಬರಗೂರ ರಾಮಚಂದ್ರಪ್ಪ, ಸಂಸ್ಕೃತಿ–ಉಪಸಂಸ್ಕೃತಿ ಪು. 48, ವಿಚಾರ ಸಾಹಿತ್ಯ–ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1995.

17. ಹಿರೇಮಠ ಎಸ್. ಜಿ., ಭಾರತೀಯ ಸಮಾಜದ ಅಧ್ಯಯನ, ಪುಟ–41, ಪ್ರದೀಪ ಪ್ರಕಾಶನ, ಸಿಂದಗಿ, 2007.

18. ಅದೇ, ಪುಟ 42, 2007

19. ಪಾಟೀಲ ಎಂ.ಬಿ., (ಸಂ) ಗುಲಬರ್ಗಾ ಜಿಲ್ಲೆ ಗೆಜಿಟೀರ್ ಪುಟ 225, ಕರ್ನಾಟಕ ಸರಕಾರ, ಬೆಂಗಳೂರು, 1997.

20. ಬೇವಿನಕಟ್ಟೆ ಮಂಜುನಾಥ, ಬುಡಕಟ್ಟು ಅಧ್ಯಯನ ಪುಟ 12 ಸಂಪುಟ–3, ಸಂಚಿಕೆ–1, ಕನ್ನಡ ವಿಶ್ವವಿದ್ಯಾಲಯ ಹಂಪಿ, 2006.

21. ದಿನ್ನಿ. ದಸ್ತಗಿರಿಸಾಬ್ (ಸಂ) ಪ್ರಸ್ತಾವನೆ, ಜಾಗತೀಕರಣ ಮತ್ತು ಸಂಸ್ಕೃತಿ 2004.

22. ಮುರಾರಿ ಬಲ್ಲಾಳ ಜಾಗತೀಕರಣ ಒಂದು ಸಮಗ್ರ ಅಧ್ಯಯನ ಪುಟ-34, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 2004.

23. ಮನು ಚಕ್ರವರ್ತಿ ಎನ್. (ಸಂ) ಜಾಗತೀಕರಣ ಒಂದು ಸಮಗ್ರ ಅಧ್ಯಯನ ಪುಟ 52, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, 2004.

24. ಅದೇ, ಪುಟ - 58, 2004

25. ಸುಂಕಾಪುರ ಎಂ.ಎಸ್., ಜಾನಪದ, ಸಮಾಜ ಮತ್ತು ಸಂಸ್ಕೃತಿ ಮುನ್ನುಡಿ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1979.

26. ರಂಗಾರೆಡ್ಡಿ ಕೋಡಿರಾಂಪುರ (ತೇ) ಜಾಗತೀಕರಣ ಮತ್ತು ಸಂಸ್ಕೃತಿ ಪುಟ-48, ಕನಸು ಪ್ರಕಾಶನ ರಾಯಚೂರು, 2004.

27. ಬರಗೂರ ರಾಮಚಂದ್ರಪ್ಪ, ಸಂಸ್ಕೃತಿ, ಉಪಸಂಸ್ಕೃತಿ, ಪುಟ-13, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 2000.

28. ಗೋಳಸಂಗಿ ಅರ್ಜುನ ದಲಿತರ ಬದುಕು ಮತ್ತು ಸಂಸ್ಕೃತಿ ಪುಟ-44, ವಿಮೋಚನಾ ಪ್ರಕಾಶನ, ಅಥಣಿ, 2000.

29. ಸಿದ್ಧಲಿಂಗಸ್ವಾಮಿ ವಿಚಾರ ಸಾಹಿತ್ಯ ಪುಟ-124, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1994.

30. ಕಲಬುರ್ಗಿ ಎಂ.ಎಂ., ಬಸವಣ್ಣನವರ ವಚನ ಸಂಪುಟ-1, ಪುಟ : 295, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2001.

31. ಸಿದ್ಧಲಿಂಗಸ್ವಾಮಿ ವಿಚಾರ ಸಾಹಿತ್ಯ ಪುಟ-125, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1994.

32. ಅದೇ, ಪುಟ 134, 1994.

33. ಲೋಹಿಯಾ ರಾಮಮನೋಹರ, ಜಾತಿ ಪದ್ಧತಿ (ಅನು) ಹಸನ ನಯೀಂ ಸುರಕೋಡ ಪುಟ-162, ಲಂಕೇಶ ಪತ್ರಿಕೆ ಪ್ರಕಾಶನ, ಬೆಂಗಳೂರು, 2001.

34. ಬರಗೂರ ರಾಮಚಂದ್ರಪ್ಪ ಸಂಸ್ಕೃತಿ- ಉಪ ಸಂಸ್ಕೃತಿ, ಪುಟ-48, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 2000.

ಸಮಾರೋಪ

ಸಮಾರೋಪ

ಭಾರತದ ನಾಗರಿಕತೆ ಮತ್ತು ಸಂಸ್ಕೃತಿಗಳ ಇತಿಹಾಸವನ್ನು ಅವಲೋಕಿಸಿದರೆ, ವರ್ಣ, ಜಾತಿ, ವರ್ಗ ಹಾಗೂ ಲಿಂಗ ವ್ಯವಸ್ಥೆಯ ಚಿತ್ರಗಳು ಹೆಚ್ಚು ಢಾಳವಾಗಿ ಕಣ್ಣಿಗೆ ಕಾಣುತ್ತವೆ. ಇದು ಕೇವಲ ಪ್ರಾಚೀನ ಇತಿಹಾಸಕ್ಕೆ ಮಾತ್ರ ಸೀಮಿತಗೊಂಡಿಲ್ಲ. ಭಾರತದ ಇಂದಿನ ಸಾಮಾಜಿಕ, ಧಾರ್ಮಿಕ ಮತ್ತು ರಾಜಕೀಯ ಸನ್ನಿವೇಶವು ಎಷ್ಟೇ ಆಧುನಿಕ ವೇಷವನ್ನು ಧರಿಸಿರಲಿ, ಆರ್ಥಿಕವಾಗಿ ಬಲಾಢ್ಯವೆನಿಸಿ ಜಾಗತಿಕ ಮಟ್ಟದಲ್ಲಿ ಸಡಗರಿಸುತ್ತಿರಲಿ, ಸಾವಿರಾರು ವರ್ಷಗಳ ಹಿಂದಿನ ಎಲ್ಲ ಸಾಮಾಜಿಕ, ಸಾಂಸ್ಕೃತಿಕ ವಿಷಯತೆಗಳನ್ನು ತನ್ನ ಒಡಲಲ್ಲಿ ಇನ್ನಷ್ಟು ಗಾಢವಾಗಿ ಸೂಕ್ಷ್ಮವಾಗಿ ಇರಿಸಿಕೊಂಡಿರುವುದನ್ನು ಕಾಣುತ್ತೇವೆ. ಸಾಮಾಜಿಕ, ಧಾರ್ಮಿಕ ಅಸಹನೆ ಎಷ್ಟು ಇದೆಯೆಂದರೆ, ಅದು ಚರಿತ್ರೆಯ ಅತ್ಯಂತ ಕರಾಳ ಪುಟಗಳನ್ನು ನಾಚಿಸುತ್ತದೆ. ಹಾಗೆಯೇ ಆಧುನಿಕತೆ, ಜಾಗತೀಕರಣ, ಖಾಸಗೀಕರಣಗಳು ಭಾರತದ ಬಹುರೂಪಿ ಸಂಸ್ಕೃತಿಯನ್ನು ನಾಶಪಡಿಸಿ ಕೇವಲ ಏಕರೂಪಿಯಾದ ಸರಕು ಸಂಸ್ಕೃತಿಯು ವಿಜೃಂಭಿಸುತ್ತಿರುವ ದಾವಂತವು ನಮ್ಮ ಕಣ್ಣೆದುರಿಗಿದೆ.

ಹಲವು ವೈರುಧ್ಯಗಳಿಂದ ಕೂಡಿದ ನಮ್ಮ ಸಾಮಾಜಿಕ ವ್ಯವಸ್ಥೆಯು ಜಾತಿಪದ್ಧತಿಯ ಏಣಿಶ್ರೇಣಿ ಸ್ವರೂಪ ಹೊಂದಿರುವಂತಹದು. ಅಸ್ಪೃಶ್ಯನೆನಿಸಿದ ಪಂಚಮನು ಈ ವ್ಯವಸ್ಥೆಯ ಅತ್ಯಂತ

ಕೆಳಸ್ತರದಲ್ಲಿ ಅಂದರೆ, ಪಾದವಾದರೆ, ಭೂಸುರರೆನಿಸಿದ ಬ್ರಾಹ್ಮಣ ಅದರ ಶಿರೋಭಾಗವಾಗಿದ್ದಾನೆ. ಈ ಎರಡು ತುದಿಗಳ ನಡುವೆ ಹಲವು ಹತ್ತು ಸ್ಥರಗಳಿದ್ದು ನೂರಾರು ಕಸಬುಗಳಲ್ಲಿ ತೊಡಗಿಸಿಕೊಂಡಿರುವ ಸಾವಿರಾರು ಜಾತಿ, ಉಪಜಾತಿಗಳಿವೆ. ಈ ಒಂದೊಂದು ಜಾತಿ, ಉಪಜಾತಿಗಳು ತಮ್ಮದೇ ಆದ ವಿಶಿಷ್ಟವೆನಿಸುವ ಸಾಂಸ್ಕೃತಿಕ ಚಹರೆಗಳನ್ನು ಹೊಂದಿ ತಮ್ಮ ಅಸ್ಮಿತೆಯನ್ನು ಉಳಿಸಿಕೊಂಡವುಗಳಾಗಿವೆ.

ಒಂದೊಂದು ಜಾತಿಗೂ ಇಂತಿಂತಹದ್ದೆಂದು ನಮ್ಮ ಸಾಮಾಜಿಕ, ಧಾರ್ಮಿಕ, ರಾಜಕೀಯ ವ್ಯವಸ್ಥೆಗಳು ನಿರ್ಧರಿಸಿವೆ. ಊಟ, ವಿವಾಹಾದಿಗಳು ಆಯಾ ಜಾತಿಗಳ ಒಳಗೆ ಮಾತ್ರ ನಡೆಯಬೇಕು. ಅವುಗಳ ಸಾಮಾಜಿಕ ಸ್ಥಾನಮಾನಗಳಿಗನುಸಾರವಾಗಿ ಉದ್ಯೋಗ, ಆರ್ಥಿಕ ಸ್ಥಿತಿಗಳನ್ನು ಕೂಡ ನಿರ್ಧರಿಸುತ್ತ ಬರಲಾಗಿದೆ. ಆ ಕಸಬು ಮತ್ತು ಆರ್ಥಿಕ ಮಾನದಂಡಗಳಿಗನುಗುಣವಾಗಿ ಜಾತಿಗಳು ಮೇಲೋ, ಕೀಳೋ ಎಂದು ನಿಧಾರವಾಗುತ್ತವೆ. ಇಲ್ಲಿ ಶ್ರಮ ವಿಭಜನೆಯನ್ನು ಮಾತ್ರ ಕಾಣಬಹುದೇ ಹೊರತು ಶ್ರಮಗೌರವವಲ್ಲ. ಅಂದರೆ ವೃತ್ತಿ ಸಮಾನತೆಯು ಇಲ್ಲಿ ಇಲ್ಲವೇ ಇಲ್ಲ. ಅಸಮಾನ ವೃತ್ತಿ ಮೂಲದಿಂದ ಹುಟ್ಟಿದ ಜಾತಿಗಳಲ್ಲಿ ಸಫಾಯಿ ಕರ್ಮಚಾರಿಗಳು ಒಬ್ಬರಾಗಿದ್ದಾರೆ.

ಸಫಾಯಿ ಕರ್ಮಚಾರಿಗಳು ಭಾರತೀಯ ಅತ್ಯಂತ ಪುರಾತನ ಸಮುದಾಯಕ್ಕೆ ಸೇರಿದ್ದಾರೆ. ದ್ರಾವಿಡ ಮೂಲ ನಿವಾಸಿಗಳಾಗಿದ್ದು, ಆರ್ಯ ದ್ರಾವಿಡ ಸಂಘರ್ಷದ ನಂತರ ಹುಟ್ಟಿಕೊಂಡ ವರ್ಣ, ವರ್ಗ, ಸಾಮಾಜಿಕ, ಆರ್ಥಿಕ ವ್ಯವಸ್ಥೆಯಲ್ಲಿ ತೀರ ಕೆಳಸ್ತರಕ್ಕೆ ತಳ್ಳಲ್ಪಟ್ಟಿರಬೇಕು. ಹೀಗಾಗಿರುವುದರಿಂದ ಅವರು ಅನುಸರಿಸಿಕೊಂಡುಬಂದ ಕಸಬು ಕಾರಣವಾಗಿರಬೇಕು. ಸ್ವಚ್ಛತೆ ಕಾಯಕಕ್ಕೆ ತೊಡಗಿಸಿಕೊಂಡು ಸಮಾಜ ಸೇವೆಗಿಳಿದ ಈ ಸಮುದಾಯ ಬದಲಾದ ಇತಿಹಾಸಿಕ ಕಾಲಘಟ್ಟಗಳಲ್ಲಿ ಹಿಂದಕ್ಕೆ ನೂಕಲ್ಪಟ್ಟರು. ಜೊತೆಗೆ ಸಮಾಜದ ಎಲ್ಲ ವರ್ಣ, ಜಾತಿ, ವರ್ಗದವರಿಂದ ಅಸ್ಪೃಶ್ಯರಾಗಿ ಬದುಕುತ್ತ ಇಂದಿಗೂ ಅವರು ಅದೇ ಸ್ಥಿತಿಯಲ್ಲಿ ಉಳಿದಿರುವುದನ್ನು ಕಾಣುತ್ತೇವೆ.

ಸಫಾಯಿ ಕರ್ಮಚಾರಿಗಳು ಭಾರತದ ಅನೇಕ ರಾಜ್ಯ ಪ್ರದೇಶಗಳಲ್ಲಿದ್ದಾರೆ. ಅವರಿಗೆ ಪ್ರಾದೇಶಿಕವಾಗಿ ಬೇರೆ ಬೇರೆ ಹೆಸರುಗಳಿಂದ ಕರೆಯಲಾಗುತ್ತದೆ. ಕರ್ನಾಟಕ ರಾಜ್ಯದಲ್ಲಿಯೂ ಈ ಸಮುದಾಯದವರನ್ನು ಎಲ್ಲ ಜಿಲ್ಲೆಗಳಲ್ಲಿ ಕಾಣುತ್ತೇವೆ. ಅವುಗಳಲ್ಲಿ ಗುಲಬರ್ಗಾ ಜಿಲ್ಲೆಯೂ ಒಂದಾಗಿದೆ. ಕರ್ನಾಟಕದಲ್ಲಿ ಈ ಸಮುದಾಯದವನ್ನು ಭಂಗಿ ಮೇಹತರ್, ಸಫಾಯಿಗಾರ್,

ಸಫಾಯಿ ಕರ್ಮಚಾರಿ ಎಂಬ ಹೆಸರುಗಳಿಂದ ಕರೆಯುವ ರೂಢಿಯಿದೆ. ಸಫಾಯಿ ಕರ್ಮಚಾರಿಗಳು ಕರ್ನಾಟಕದ ಭಿನ್ನ ಪ್ರದೇಶಗಳಲ್ಲಿ ನೆಲೆಸಿದ್ದರೂ ಅವರ ಉದ್ಯೋಗ ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಲಕ್ಷಣಗಳಲ್ಲಿ ಯಾವುದೇ ಗುರುತಿಸುವಂಥ ವ್ಯತ್ಯಾಸವನ್ನು ಕಾಣುವುದಿಲ್ಲ. ಆದರೆ ದ್ವಿಭಾಷಾ ಪ್ರದೇಶಗಳಲ್ಲಿ ನೆಲೆಸಿರುವಲ್ಲಿ ಹಾಗೂ ಆಧುನಿಕತೆಯ ಪ್ರಭಾವದಿಂದ ಅವರ ವೇಷಭೂಷಣ ಹಾಗೂ ಊಟೋಪಚಾರಗಳಲ್ಲಿ ಸಾಮಾನ್ಯವಾದ ಕೆಲವು ಅಂತರಗಳನ್ನು ಗುರುತಿಸಲು ಸಾಧ್ಯವಿದೆ.

ಮೇಲಿನ ಸಂಗತಿಗಳನ್ನು ಗಮನದಲ್ಲಿರಿಸಿಕೊಂಡು ಇಲ್ಲಿ ಗುಲಬರ್ಗಾ ಜಿಲ್ಲೆಯ ಸಫಾಯಿ ಕರ್ಮಚಾರಿಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಕರ್ನಾಟಕದ ಸಫಾಯಿ ಕರ್ಮಚಾರಿಗಳ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳು ಎಂಬ ಶೀರ್ಷಿಕೆಯಡಿಯಲ್ಲಿ ಬರೆಯಲ್ಪಟ್ಟ ಪ್ರಸ್ತುತ ಮಹಾಪ್ರಬಂಧವು ಒಟ್ಟು ಆರು ಅಧ್ಯಾಯಗಳನ್ನು ಒಳಗೊಂಡಿದೆ. ಪ್ರಸ್ತುತ ಅಧ್ಯಯನದಲ್ಲಿ ನಾನು ಕಂಡುಕೊಂಡ ಫಲಿತಗಳನ್ನು ಇಲ್ಲಿ ನೀಡಿರುವೆನು.

1. ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ವರ್ಣ, ವರ್ಗ ಹಾಗೂ ಲಿಂಗ ಭೇದಗಳನ್ನು ಅತ್ಯಂತ ಪ್ರಧಾನವಾಗಿ, ಢಾಳವಾಗಿ ಕಾಣುತ್ತೇವೆ. ಇವು ಕೇವಲ ಯಾವುದೋ ಕಾಲಕ್ಕೆ ಸೇರಿದ ಸಂಗತಿಗಳಾಗಿಲ್ಲ. ಇಂದಿನ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಸನ್ನಿವೇಶಗಳಲ್ಲಿ ಮುಂದುವರೆದಿದೆ.
2. ಸಾಮಾಜಿಕವಾಗಿ ಶೋಷಿತರಾದ ಅಸ್ಪೃಶ್ಯರು ಭಾರತದ ಮೂಲನಿವಾಸಿಗಳು ಇವರ ಮೇಲೆ ಪರರ ಸಂಸ್ಕೃತಿಯ ದಾಳಿಯಿಂದ ಜೀವನ ಅಸ್ತವ್ಯಸ್ತವಾದವು. ಭಾರತದ ಪೂರ್ವ ಇತಿಹಾಸವನ್ನು ಅವಲೋಕಿಸಿದರೆ ಈ ದೇಶದ ನಾಗರಿಕತೆಯ ವಾಸ್ತವಿಕತೆ ಬಿಚ್ಚಿಕೊಳ್ಳುತ್ತದೆ.
3. ವಿಶಾಲವಾದ ಭಾರತದ ಬದುಕು ವೈಶಿಷ್ಟಪೂರ್ಣವಾಗಿರುವಂತೆ ಸಂಕೀರ್ಣವೂ ಆಗಿದೆ. ಈ ದೇಶದ ಸಂಸ್ಕೃತಿ ಕೂಡ ವಿಶಿಷ್ಟವಾದದ್ದೇ. ಇಡೀ ದೇಶಕ್ಕೆ ಒಂದು ಧರ್ಮವಾಗಲಿ, ಸಮಾಜವಾಗಲಿ, ಸಂಸ್ಕೃತಿಯಾಗಲಿ ಇಲ್ಲ. ಹಲವು ಧರ್ಮಗಳ, ಹಲವು ಸಮಾಜಗಳ, ಹಲವು ಕಾಯಕಗಳ ಹಲವು ಸಂಸ್ಕೃತಿಗಳ ಸಂಗಮವಿಲ್ಲಿರುವುದನ್ನು ಕಾಣಬಹುದು. ಭಾರತದ ವೈಶಿಷ್ಟ್ಯವೇ ಹಲವು ವೈವಿಧ್ಯಗಳ ಮಡಿಲಲ್ಲಿಯೇ ಏಕತೆಯ ಸ್ಪಂದನವಿರುವುದೂ ಇಲ್ಲಿಯ ವಿಶೇಷತೆ.

ಭಾಷಿಕವಾಗಿ, ಸಾಂಸ್ಕೃತಿಕವಾಗಿ ಚಿಂತಿಸುವ ಲೇಖಕರು ಸಾಮಾಜಿಕವಾಗಿಯೂ ಚಿಂತಿಸುತ್ತ ಬಂದಿದ್ದಾರೆ. ಇಪ್ಪತ್ತನೆಯ ಶತಮಾನದ ಕೊನೆಯ ದಶಕಗಳಲ್ಲಿ ವಸಾಹತ್ತೋತ್ತರ ಚಿಂತನೆಗಳು ಸಾಮಾಜಿಕ, ಸಾಂಸ್ಕೃತಿಕ ಸಾಮಗ್ರಿಯನ್ನು ಒದಗಿಸುತ್ತಿರುವುದರಿಂದಲೇ ಅನೇಕ ಜಾತಿ, ಸಮುದಾಯದಗಳ ಬಗೆಗೆ ಸಂಶೋಧನೆಗಳನ್ನು ನಡೆಸಲು ಸಾಧ್ಯವಾಯಿತೆನ್ನಬೇಕು.

4. ಜಾತಿ, ಉಪಜಾತಿ, ಪಂಗಡಗಳು ದೇಶದ ಪಳಿಯುಳಿಕೆಯಾಗಿರುವಂತೆ, ಪ್ರಾದೇಶಿಕ ನೆಲೆಯ ಪಳಿಯುಳಿಕೆಯಾಗಿ ಅವು ಇಂದಿಗೂ ಉಳಿದುಬಂದಿವೆ. ಪ್ರಬಲವಾದ ಜಾತಿ ಸಮುದಾಯಗಳು ದುರ್ಬಲ ಜಾತಿ ಸಮುದಾಯಗಳ ಮೇಲೆ ನಿರಂತರ ತಮ್ಮ ಯಜಮಾನಿಕೆಯನ್ನು ಸ್ಥಾಪಿಸಿ ಅವುಗಳನ್ನು ಶೋಷಿಸುತ್ತ ಬಂದಿರುವುದನ್ನು ಇತಿಹಾಸದುದ್ದಕ್ಕೂ ಕಾಣುತ್ತೇವೆ. ಈ ದೇಶದ ಜಾತಿ ವ್ಯವಸ್ಥೆಯ ಯಜಮಾನಿಕೆಯ ನೆರಳಲ್ಲಿಯೇ ಜೀವಿಸಿರುವ ಸಫಾಯಿ ಕರ್ಮಚಾರಿಗಳು (ಪ್ರಾದೇಶಿಕವಾಗಿ ಭಂಗಿಗಳು) ಸಾಮಾಜಿಕ ಅಸ್ಪೃಶ್ಯತೆಯನ್ನು ಅನುಭವಿಸುತ್ತಿದ್ದಾರೆ.

ಭಂಗಿಗಳು ಪರಿಶ್ರಮ ಜೀವಿಗಳು. ಉಳ್ಳವರ ಮನೆಯ ಮಲವನ್ನು ಸ್ವಚ್ಛಗೊಳಿಸುವಂಥ ಅತ್ಯಂತ ಹೀನವಾಗಿ ತಮ್ಮ ಬದುಕನ್ನು ಸವೆಸುತ್ತ ತಲತಲಾಂತರಗಳಿಂದ ಬದುಕು ಸಾಗಿಸುತ್ತಿದ್ದಾರೆ. ಹೀಗಿದ್ದೂ ಈ ಜಾತಿ ಸಮುದಾಯವು ತನ್ನದೇ ಆದ ಸಾಮಾಜಿಕ ವ್ಯವಸ್ಥೆಯನ್ನು ಹೊಂದಿರುತ್ತಾರೆ. ಇವರುಗಳು ಹೊಂದಿರುವ ಕುಟುಂಬ, ವಿವಾಹ, ಬಂಧುತ್ವ, ವಾಸದ ಮನೆಗಳು ಆಹಾರ ಪದ್ಧತಿ ವೇಷಭೂಷಣ, ಜನನ–ಮರಣ ಸಂಸ್ಕಾರಗಳು ನ್ಯಾಯಪದ್ಧತಿ ಮೊದಲಾದವುಗಳಲ್ಲಿ ಈ ವಿಶಿಷ್ಟತೆ ಮತ್ತು ಅವುಗಳ ಅನನ್ಯತೆಯನ್ನು ಗುರುತಿಸಲಾಗಿದೆ.

5. ಯಾವುದೇ ಒಂದು ಜಾತಿ ಸಮುದಾಯದ ಸ್ಥಿತಿಯನ್ನು ಕೇವಲ ಒಂದು ಅಂಶದಿಂದ ತೀರ್ಮಾನಿಸಲು ಸಾಧ್ಯವಿಲ್ಲ. ಸ್ಥಿಗತಿಗಳಿಗೆ ಇಂಬು ನೀಡುವ ಅಂಶಗಳಲ್ಲಿ ಆರ್ಥಿಕ ಹಿಡುವಳಿಗಳನ್ನು ಸೂಕ್ಷ್ಮ ಮತ್ತು ಸಮಗ್ರವಾಗಿ ಅವಲೋಕಿಸಬೇಕಾಗುತ್ತದೆ.

ಪ್ರಸ್ತುತ ಅಧ್ಯಯನದೊಳಗೆ ಭಂಗಿ ಅಥವಾ ಸಫಾಯಿ ಕರ್ಮಚಾರಿಗಳ ಆರ್ಥಿಕ ಮೂಲಾಧಾರವಾದ ವೃತ್ತಿ, ಗಂಡು ಹೆಣ್ಣುಗಳ ತಲಾದಾಯ, ಕುಟುಂಬ ನಿರ್ವಹಣೆಗೆ

ಮಾಡುವ ಖರ್ಚು, ಧಾರ್ಮಿಕ ಕಾರ್ಯ, ಮನರಂಜನೆ ಇತ್ಯಾದಿಗಳಿಗೆ ಮಾಡುವ ಖರ್ಚು ಪರ್ಯಾಯ ಉದ್ಯೋಗ ಮಾಡುವುದಕ್ಕೆ ಇರುವ ನಿಷೇಧಗಳು ಇವುಗಳನ್ನು ಸಮೀಕ್ಷೆ ಮೂಲಕ ಖಚಿತಪಡಿಸಿಕೊಳ್ಳಲಾಗಿದೆ.

ನಗರ, ಪಟ್ಟಣ ಪ್ರದೇಶಗಳಿಂದ ಮಾತ್ರ ಸಂಶೋಧನಾ ನಿಲುವುಗಳಿಗೆ ಉತ್ತರ ಸಿಗುವುದೆಂಬ ಕಾರಣದಿಂದ ಪ್ರಸ್ತುತ ಇಲ್ಲಿ ಗುಲಬರ್ಗಾ ನಗರ ಹಾಗೂ ಜಿಲ್ಲೆಯ ಏಳು ತಾಲೂಕು ಪಟ್ಟಣಗಳು ಮತ್ತು ಅರೆಪಟ್ಟಣಗಳನ್ನು ಆಯ್ಕೆಮಾಡಿಕೊಂಡು ಸಮೀಕ್ಷೆ ಮಾಡಲಾಗಿದೆ. ಇದಕ್ಕೆ ಶಾಸ್ತ್ರೀಯ ಮಾದರಿಗಳನ್ನು ಅಳವಡಿಸಿಕೊಂಡಿದ್ದರಿಂದಾಗಿ ಸಫಾಯಿ ಕರ್ಮಚಾರಿಗಳ ಆರ್ಥಿಕ ಸ್ಥಿತಿಗಳನ್ನು ಅರಿಯಲು ಸಾಧ್ಯವಾಗಿದೆ.

6. ಸಾಮಾನ್ಯವಾಗಿ ಸಫಾಯಿ ಕರ್ಮಚಾರಿಗಳು ನಾಗರಿಕ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡೂ ಆ ಸಮಾಜದಿಂದ ದೂರ ಉಳಿದವರು ಇಂದು ಕರ್ನಾಟಕದಲ್ಲಿ ಗುಲಬರ್ಗಾ ಜಿಲ್ಲೆಯಲ್ಲಿ ದಟ್ಟವಾಗಿ ವಾಸಮಾಡುತ್ತಿರುವ ಸಫಾಯಿ ಕರ್ಮಚಾರಿಗಳ ಮೂಲ ದೈಹಿಕ ರಚನೆ, ಬಣ್ಣ ಅವರ ಜೀವನ ವಿಧಾನ ಅತ್ಯಂತ ವಿಶಿಷ್ಟವೆನಿಸಿವೆ. ಈ ಜನಾಂಗದ ಭಾಷೆ, ಮದುವೆ ಶಾಸ್ತ್ರ, ಉಟೋಪಚಾರಗಳ ಮೇಲೆ ಮಹಾರಾಷ್ಟ್ರ ಸಂಸ್ಕೃತಿಯ ಪ್ರಭಾವ ಕಾಣುತ್ತೇವೆ.

ದೇವರ ಜಾತ್ರೆ, ಉತ್ಸವಗಳಲ್ಲಿ ದೇವರಿಗೆ ಬೇಟೆಯನ್ನು ಒಪ್ಪಿಸುವ ಕ್ರಿಯೆ ವಿಶೇಷವಾಗಿದೆ. ತಾವು ಬಲಿಕೊಟ್ಟ ಪ್ರಾಣಿಗಳ ಮಾಂಸವನ್ನು ಕೆಲವು ವಿಶಿಷ್ಟ ಪದ್ಧತಿಯನ್ನು ಅನುಸರಿಸಿಯಾದ ನಂತರ ಸ್ವೀಕರಿಸುತ್ತಾರೆ. ಸಫಾಯಿ ಕರ್ಮಚಾರಿಗಳು ಹೆಚ್ಚಾಗಿ ಸ್ತ್ರೀದೇವತಾರಾಧಕರು. ಕೆಲವು ಕಡೆಗಳಲ್ಲಿ ಪಂಡರಾಪುರ ವಿಠಲ, ಹನುಮಂತ, ತಿರುಪತಿ ತಿಮ್ಮಪ್ಪ ಮೊದಲಾದ ದೇವರನ್ನು ಆರಾಧಿಸುವರು. ಇವರು ಸಾಮಾನ್ಯವಾಗಿ ಕನ್ನಡ, ಹಿಂದಿ, ಉರ್ದು, ಮರಾಠಿ, ತೆಲಗು ಭಾಷೆಗಳನ್ನು ಆಡುವರು. ಇವರ ಮೇಲೆ ಅನ್ಯ ಸಂಸ್ಕೃತಿಯ ಪ್ರಭಾವ ಆಗಿರುವುದನ್ನು ಇಲ್ಲಿನ ಅಧ್ಯಯನದಿಂದ ನಿಚ್ಚಳಗೊಂಡಿರುವುದು.

7. ಗುಲಬರ್ಗಾ ಜಿಲ್ಲೆಯೂ ಸೇರಿ ಕರ್ನಾಟಕದಾದ್ಯಂತ ಇರುವ ಸಫಾಯಿ ಕರ್ಮಚಾರಿಗಳ ಮೇಲೆ ಆಧುನಿಕೋತ್ತರ ಜಾಗತೀಕರಣ ಬೀರಿರುವ ಪ್ರಭಾವ ಮತ್ತು ಅವರ ಒಟ್ಟು

ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿ ಜೀವನದಲ್ಲಿ ಆಗಿರುವ ಪಲ್ಲಟಗಳನ್ನು ಅಧ್ಯಯನ ಸಂದರ್ಭದಲ್ಲಿ ಪ್ರಮುಖವಾಗಿ ಗಮನಿಸಲಾಗಿದೆ.

ಸಫಾಯಿ ಕರ್ಮಚಾರಿಗಳು ಅಸ್ಪೃಶ್ಯರಾದರೂ ಶೋಷಿತರು ಹಿಡುವಳಿ ಹೀನ ಜಾತಿಗಳು ಅನ್ಯರ ಕೈಸೆರೆಯೊಳಗೆ ಬಾಳಿದವರು. ಹಿಂದೆಲ್ಲ ತಲೆ ಮೇಲೆ ಮಲ ಹೊರುತ್ತಿದ್ದರು. ಆಧುನಿಕ ಸೌಲಭ್ಯದಿಂದ ಅದೀಗ ನಿಂತಿದ್ದರೂ ಮಲ ಬಳಿಯುವುದು ಮಾತ್ರ ತಪ್ಪಿಲ್ಲ. ಸಾಮಾನ್ಯವಾಗಿ ಇಂದಿಗೂ ಮಲೀನ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಇದರಿಂದ ಅವರ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳಲ್ಲಿ ಯಾವುದೇ ಹೇಳಿಕೊಳ್ಳುವಂಥ ಬದಲಾವಣೆಗಳನ್ನು ಕಾಣುವುದಿಲ್ಲ. ಸರಕಾರದ ಮೀಸಲಾತಿಯ ಲಾಭವನ್ನೂ ಈ ಜನಾಂಗವು ಬಳಸಿಕೊಳ್ಳುವಲ್ಲಿ ಹಿಂದೆ ಬಿದ್ದಿದೆ. ಇದಕ್ಕೆ ಕಾರಣವೆಂದರೆ ಸಫಾಯಿ ಕರ್ಮಚಾರಿಗಳಲ್ಲಿ ಸಾಕ್ಷರತೆ ಪ್ರಮಾಣ ತೀರ ಕೆಳಮಟ್ಟದ್ದಾಗಿದೆ. ಇತ್ತೀಚೆಗೆ ಸರಕಾರಿ ವಿವಿಧ ಇಲಾಖೆಗಳಲ್ಲಿ ಸಫಾಯಿ ಕಾರ್ಮಿಕರಾಗಿ ನೌಕರಿಗೆ ಕೆಲವರು ಸೇರಿದ್ದಾರೆ. ಇಂತಹ ಕೆಲವು ನಿದರ್ಶನಗಳನ್ನು ಬಿಟ್ಟರೆ ಇವರಿಗೆ ಸ್ಥಿರವಾಗಿ ಬರುವ ಆದಾಯ ಮೂಲಗಳಿಲ್ಲ. ಆದುದರಿಂದ ಇಂದಿಗೂ ಬಡತನ ರೇಖೆಯಿಂದ ಮೇಲೇರಲಾಗಿಲ್ಲ.

"ಮೀಸಲಾತಿ ಸೌಲಭ್ಯದಿಂದ ಎಲ್ಲಾ ಶೋಷಿತರು ಸ್ವಾವಲಂಭಿಗಳಾಗಿಲ್ಲ ಎನ್ನುವುದಕ್ಕೆ ಸಫಾಯಿ ಕರ್ಮಚಾರಿಗಳ ಸಮುದಾಯವೇ ಸ್ಪಷ್ಟ ಸಾಕ್ಷಿಯಾಗಿದೆ"[1]. ಪ್ರಸ್ತುತ ಮೀಸಲಾತಿಯ ಬಗ್ಗೆ ಸಾಕಷ್ಟು ಗೊಂದಲವಿದೆ. ಇದರ ಪ್ರಯೋಜನ ಇವರಿಗೆ ದಕ್ಕಿಲ್ಲವೆಂಬುದು ಸತ್ಯ ಕೂಡ ಇದೆ. ಪ್ರತಿ ಜನಗಣತಿಯು ಇದನ್ನು ತೋರಿಸುತ್ತದೆ. ಇತ್ತೀಚೆಗೆ ಮೀಸಲಾತಿಯ ಸೌಲಭ್ಯದ ಅವಕಾಶಕ್ಕಾಗಿ ಅನೇಕ ಜಾತಿ ಪಂಗಡಗಳು ರಾಜಕೀಯ ಹಿತಾಸಕ್ತಿಯ ಪರಿಣಾಮವಾಗಿ ಪರಿಶಿಷ್ಟರ ಪಟ್ಟಿಯಲ್ಲಿ ಸೇರಿಕೊಳ್ಳುತ್ತಿರುವದರಿಂದ ಮೂಲ ಆದಿಮ ಜಾತಿಯ ಜನರಿಗೆ ಸೌಲಭ್ಯಗಳನ್ನು ಪಡೆದುಕೊಳ್ಳಲಾಗುತ್ತಿಲ್ಲ. ಆದರೆ ಸಧ್ಯದ ಪರಿಸ್ಥಿಯಲ್ಲಿ ಗುಲಬರ್ಗಾ ಜಿಲ್ಲೆಯ ಕೆಲವೊಂದು ನಗರ/ಸ್ಥಳೀಯ ಸಂಸ್ಥೆಗಳಲ್ಲಿ ಕೇಂದ್ರ ಸರಕಾರ ಜಾರಿಯಲ್ಲಿ ತಂದ (Cetral Sector Scheme of Self Employment Scheme for Rehabilitaion of Manual Scavengers Introduction of the scheme ಇವನ್ನು ಈ ಕೆಳಗಿನಂತೆ ನಗರ / ಸ್ಥಳೀಯ ಸಂಸ್ಥೆಗಳಲ್ಲಿ ಕೊಟ್ಟ ಬಗ್ಗೆ ವಿವರ.

ಆಳಂದ – ಫಲಾನುಭವಿಗಳಿಗೆ ಸೌಲಭ್ಯಕೊಡಬೇಕಾಗಿದೆ.

ಸೇಡಂ – 9 ರಲ್ಲಿ 6 ಜನರಿಗೆ ಆಶ್ರಯ ಮನೆ ಕೊಡಲಾಗಿದೆ.

3 ಫಲಾನುಭವಿಗಳು ಸ್ವಯಂ ಉದ್ಯೋಗ ಸಾಲ ಕೊಡಲಾಗಿದೆ.

ಚಿತ್ತಾಪುರ – 8 ಫಲಾನುಭವಿಗಳಿಗೆ ಆಶ್ರಯ ಸ್ವತಃ ಕೊಡಲಾಗಿದೆ.

ವಾಡಿ (ಜೇ) – 10 ರಲ್ಲಿ 3 ಜನರಿಗೆ ಪುರಸಭೆಯಲ್ಲಿ ಕೆಲಸ ಕೊಡಲಾಗಿದೆ. ಮತ್ತು 7 ಜನರಿಗೆ ಸಾಲ ಸೌಲಭ್ಯ ಕಲ್ಪಿಸಿಕೊಡಲಾಗಿದೆ.

ಈ ಕೆಲವೇ ಫಲಾನುಭಾವಿಗಳು ಮಾತ್ರ ಸೌಲಭ್ಯ ಪಡೆದಿರುವರು ನನ್ನ ಕ್ಷೇತ್ರ ಕಾರ್ಯ ಅಧ್ಯಯನದಲ್ಲಿ ಕಂಡು ಬಂದಿರುತ್ತೆ.

ಜಾಗತೀಕರಣ ಮತ್ತು ಖಾಸಗೀಕರಣದ ಮೂಲ ಉದ್ದೇಶ ಸಂಪತ್ತಿನ ಕ್ರೋಢೀಕರಣ ಮಾತ್ರ. ಇಲ್ಲಿ ಸಂಪತ್ತಿನ ಹಂಚಿಕೆಗೆ ಆಸ್ಪದವಿರುವುದಿಲ್ಲ. ಇದು ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದವರ ಮೇಲೆ ತೀವ್ರವಾದ ಪರಿಣಾಮವನ್ನು ಬೀರುತ್ತದೆ. ಕೆಲವೇ ಜನರ ಹಿತಾಸಕ್ತಿ ಕಾಪಾಡಿ ಬಹುಜನರನ್ನು ನರಕಕ್ಕೆ ತಳ್ಳುತ್ತದೆ. ಜಾಗತೀಕರಣವು ಅದರಲ್ಲೂ ಮುಖ್ಯವಾಗಿ ಭಂಗಿಗಳ ಬಾಳನ್ನು ಮತ್ತಷ್ಟು ಕತ್ತಲೆಯೆಡೆಗೆ ದೂಡಿದ್ದನ್ನು ಅಧ್ಯಯನ ಸಮೀಕ್ಷೆಯಿಂದ ಕಂಡುಬಂದಿರುವುದು.

ಒಟ್ಟಾರೆಯಾಗಿ ಹೇಳುವುದಾದರೆ, ತಲತಲಾಂತರದಿಂದ ಅತೀ ಕೆಳಮಟ್ಟದ ಜೀವನ ನಡೆಸುತ್ತಿರುವ ಸಫಾಯಿ ಕರ್ಮಚಾರಿಗಳ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳಲ್ಲಿ ಬದಲಾವಣೆಯುಂಟಾಗಬೇಕಾದರೆ, ಸಮಾಜದಲ್ಲಿ ಜಿಡ್ಡುಗಟ್ಟಿರುವ ಜಾತಿಯತೆ, ಮೂಢಾಚಾರ, ಶಿಷ್ಟಚಾರ ತೊಡೆದು ಹಾಕಬೇಕು. ಸರಕಾರವು ಸಂವಿಧಾನಿಕ ಸೌಲಭ್ಯಗಳನ್ನು ಒದಗಿಸಿ ಆರ್ಥಿಕ ಸಂಕಷ್ಟವನ್ನು ನಿವಾರಿಸಬೇಕು. ಆರ್ಥಿಕ ಮತ್ತು ಉದ್ಯೋಗ ಭದ್ರತೆ ಒದಗಿಸಬೇಕು. ಸಮಾಜ, ಜನತೆಯು ಅಸ್ಪೃಶ್ಯತೆಯನ್ನು ಬದಿಗೆ ಸರಿಸಿ ಎಲ್ಲರಂತೆ ಅವರನ್ನು ನೋಡುವ, ಗೌರವಯುತವಾದ ಸಮಾನ ಸ್ಥಾನಮಾನ ಕಲ್ಪಿಸುವ ನಿಟ್ಟಿನಲ್ಲಿ ಚಿಂತನೆ ನಡೆಸಬೇಕಾಗುತ್ತದೆ.

ಸಲಹೆಗಳು

ಸಫಾಯಿ ಕರ್ಮಚಾರಿ ಸಮುದಾಯದ ಪ್ರಚಲಿತ ಸಮಸ್ಯೆಗಳು ಹಾಗು ಅವುಗಳ ಪರಿಹಾರೋಪಾಯ ಮಾರ್ಗಗಳಿಗೆ ಸಲಹೆಗಳು

1. ಸರಕಾರವು ಸಫಾಯಿ ಕರ್ಮಚಾರಿ ಅಭಿವೃದ್ಧಿ ಪ್ರಾಧಿಕಾರವನ್ನು ಸ್ಥಾಪಿಸಬೇಕು. ಆ ಮೂಲಕ ಸಫಾಯಿ ಕರ್ಮಚಾರಿ ಸಮುದಾಯದ ಸಮಗ್ರ ಅಭಿವೃದ್ಧಿಯನ್ನು ಮಾಡಬೇಕು.
2. ಗುತ್ತಿಗೆ, ಹೊರಗುತ್ತಿಗೆ ಪದ್ಧತಿಯನ್ನು ರಾಜ್ಯದಲ್ಲಿ ಕೂಡಲೇ ಸಂಪೂರ್ಣವಾಗಿ ನಿಷೇಧಿಸಬೇಕು. ದಿನಗೂಲಿ ನೌಕರರಾಗಿರುವ ಸಫಾಯಿ ಕರ್ಮಚಾರಿಗಳನ್ನು ಸೇವೆಯಲ್ಲಿ ಖಾಯಂ ಗೊಳಿಸಿಬೇಕು ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು. ವೇತನವನ್ನು ಸಫಾಯಿ ಕರ್ಮಚಾರಿ ನೌಕರರ ಬ್ಯಾಂಕ ಖಾತೆಗೆ ನೇರವಾಗಿ ಹಾಕಬೇಕು.
3. ಮಹಿಳಾ ಸಫಾಯಿ ಕರ್ಮಚಾರಿಗಳಿಗೆ ಸಂಬಳ ಸಹಿತ ಹೆರಿಗೆ ರಜೆ ನೀಡಬೇಕು.
4. ಪುರುಷ ಸಫಾಯಿ ಕರ್ಮಚಾರಿಗಳಿಗೆ ಸಂಬಲ ಸಹಿತ ಆರೋಗ್ಯ ರಜೆ ನೀಡಬೇಕು.
5. ಸಫಾಯಿ ಕರ್ಮಚಾರಿ ಸಮುದಾಯದ ಮಕ್ಕಳಿಗೆ ವಸತಿ ಶಾಲೆಗಳನ್ನು ತೆರೆಯಬೇಕು. ಈ ಶಾಲೆಗಳಲ್ಲಿ ಶೇಕಡಾ 25%% ಇತರೆ ಸಮುದಾಯದ ಮಕ್ಕಳಿಗೂ ಪ್ರವೇಶ ನೀಡಬೇಕು. ಇತರೆ ಶಾಲೆಗಳಲ್ಲಿ ಆರ್.ಟಿ.ಇ. ಮಿಸಲಾತಿ ನೀಡಬೇಕು.
6. ಒಂದನೇ ತರಗತಿಯಿಂದ ಸ್ನಾತಕೋತ್ತರ ಪದವಿ. ವೃತ್ತಿ ಶಿಕ್ಷಣದಲ್ಲಿ ಮಿಸಲಾತಿ ಕಲ್ಪಿಸಿ, ಉಚಿತ ಹಾಗೂ ಏಕರೂಪದ ಕಡ್ಡಾಯ ಶಿಕ್ಷಣ ನೀಡಬೇಕು.
7. ಸಫಾಯಿ ಕರ್ಮಚಾರಿಗಳಿಗೆ ಸಾಕ್ಷರರನ್ನಾಗಿಸಲು ಸಂಜೆ ಶಾಲೆಗಳನ್ನು ತೆರೆಯಬೇಕು.
8. ಮ್ಯಾನುವೇಲ್ ಸ್ಕ್ಯಾವೆಂಜಿಂಗ್ ಸಂಪೂರ್ಣ ನಿಷೇಧಿಸಬೇಕು. ಮತ್ತು ಒತ್ತಾಯ ಮಾಡುವವರಿಗೆ ಕಠಿಣ ಶಿಕ್ಷೆಗೊಳಪಡಿಸಬೇಕು.
9. ಕೇಂದ್ರ, ರಾಜ್ಯ ಮತ್ತು ಸ್ಥಳೀಯ ಸಂಸ್ಥೆಗಳ ಪರಿಶಿಷ್ಟ ಜಾತಿಗೆ ನೀಡಲ್ಪಡುವ ಅನುಧಾನದಲ್ಲಿ ಶೇಕಡಾ 10% ರಷ್ಟು ಅನುಧಾನವನ್ನು ಸಫಾಯಿ ಕರ್ಮಚಾರಿ ಸಮುದಾಯದ ಅಭಿವೃದ್ಧಿಗೆ ಮಿಸಲಿಡಬೇಕು.

10. ಯಂತ್ರದಿಂದ ಮ್ಯಾನುವೆಲ್ ಗಳನ್ನು ಸ್ವಚ್ಛಗೊಳಿಸುವ ಸಾರ್ವಜನಿಕ ಶೌಚಾಲಯ ನಿರ್ವಹಣೆ ಸುಲಭ ಶೌಚಾಲಯ ಗುತ್ತಿಗೆಯನ್ನು ಕಡ್ಡಾಯವಾಗಿ ಸಫಾಯಿ ಕರ್ಮಚಾರಿ ಸಮುದಾಯಕ್ಕೆ ನೀಡಬೇಕು.
11. ವಿಶೇಷ ಆರೋಗ್ಯ ಯೋಜನೆಯನ್ನು ರೂಪಿಸಿ ಪ್ರತಿಮೂರು ತಿಂಗಳಿಗೊಮ್ಮೆ ಕಡ್ಡಾಯವಾಗಿ ಪ್ರತಿಯೊಬ್ಬ ಮಹಿಳೆ, ಪುರುಷ ಹಾಗೂ ಮಕ್ಕಳಿಗೆ ಆರೋಗ್ಯ ತಪಾಸಣೆಯನ್ನು ಉಚಿತವಾಗಿ ನಡೆಸಬೇಕು, ಚಿಕಿತ್ಸೆ ಮತ್ತು ಔಷಧೋಪಚಾರ ನೀಡಬೇಕು.
12. ಸಫಾಯಿ ಕರ್ಮಚಾರಿ ಬಡಾವಣೆಗೆ ಉಚಿತ ನೀರು ವಿದ್ಯುತ್ ನೀಡಬೇಕು. ಸಿ.ಸಿ ರಸ್ತೆ ನಿರ್ಮಿಸಿ ನೈರ್ಮಲ್ಯ ಕಾಪಾಡಬೇಕು. ಸಮುದಾಯ ಭದನ ನಿರ್ಮಿಸಬೇಕು.
13. ಸಫಾಯಿ ಕರ್ಮಚಾರಿ ಸಮುದಾಯವು ಕೆಲಸ ಮಾಡುವ ನಿಗದಿತ ಸ್ಥಳದಲ್ಲಿ ಮಹಿಳೆಯರಿಗೆ ಮತ್ತು ಪುರುಷರಿಗೆ ವಿಶ್ರಾಂತಿ, ಗೃಹ, ಶೌಚಾಲಯ, ಉಪಾಹಾರ ಗೃಹಗಳನ್ನು ಸ್ಥಾಪಿಸಬೇಕು.
14. ಸಫಾಯಿ ಕರ್ಮಚಾರಿಗಳಿಗೆ ಅವರವರ ಕೆಲಸದ ಆಧಾರದ ಮೇಲೆ ಸೂಕ್ತ ಸುರಕ್ಷಾ ಸಲಕರಣೆಗಳನ್ನು ನೀಡಬೇಕು ಹಾಗೂ ಅವುಗಳ ಬಳಕೆಯನ್ನು ಕುರಿತು ಜಾಗೃತಿ ಮೂಡಿಸಬೇಕು.

ಅಡಿಟಿಪ್ಪಣಿ

1. ಪೋತೆ ಎಚ್.ಟಿ. ದಲಿತ ಲೋಕ ಪು–68 ಕುಟುಂಬ ಪ್ರಕಾಶನ, ಕಲಬುರಗಿ, 2013.
2. ಸಫಾಯಿ ಕರ್ಮಚಾರಿ ಕೈಪಿಡಿ ಕರ್ನಾಟಕ ಸರಕಾರ ಬೆಂಗಳೂರು, 2013.

ಅನುಬಂಧಗಳು

1) ಪರಾಮರ್ಶನ ಗ್ರಂಥಗಳು

2) ನಕ್ಷೆ

3) ವಕ್ತೃಗಳ ಪಟ್ಟಿ

4) ಪ್ರಶ್ನಾವಳಿ

5) ಭಾವಚಿತ್ರಗಳು

6) ಆಯೋಗದ ವರದಿ

ಪರಾಮರ್ಶನ ಗ್ರಂಥಗಳು

ಪರಾಮರ್ಶನ ಗ್ರಂಥಗಳು

1. ಅಂಬೇಡ್ಕರ್ ಬಿ.ಆರ್. (ಡಾ): ಬರಹ ಮತ್ತು ಭಾಷಣಗಳು (ಸಂ. 1–5)
   ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 1996
2. ಅಂಜನಪ್ಪ ಯೆಳನಾಡು: ಹಗಲುವೇಷದಾರರ ಸಂಸ್ಕೃತಿ
   ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರ, 1993
3. ಅಂಬಳಿಕೆ ಹಿರಿಯಣ್ಣ (ಡಾ) ಕಚ್ಚೆಗೌಳಿಗರ ಸಂಸ್ಕೃತಿ
   ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1993
4. ಅಮರೇಶ ನುಗಡೋಣಿ (ಡಾ): ಹೈದರಾಬಾದು ಕರ್ನಾಟಕ ಹಾಡು ಪಾಡು
   ಕನ್ನಡ ವಿಶ್ವವಿದ್ಯಾಲಯ, ಹಂಪಿ, 2003

5. ಅಲ್ಲಮಪ್ರಭು ಬೆಟ್ಟದೂರು ಎಚ್.ಎಸ್. ಪಾಟೀಲ ವಿಮೋಚನೆ ಜಿಲ್ಲಾಡಳಿತ, ಕೊಪ್ಪಳ, 1999

6. ಅರ್ಜುನ ಗೊಳಸಂಗಿ (ಡಾ): ದಲಿತರ ಬದುಕು ಮತ್ತು ಸಂಸ್ಕೃತಿ, ಜಾನಪದೀಯ ಅಧ್ಯಯನ ವಿಮೋಚನಾ ಪ್ರಕಾಶನ, ಅಥಣಿ, ಜಿ. ಬೆಳಗಾವಿ, 2000

7. ಕಕ್ಕಿಲ್ಲಾಯ ಬಿ.ಎ. (ಅನು): ಪ್ರಾಚೀನ ಭಾರತದಲ್ಲಿ ಭೌತಿಕವಾದ, ಚಾರ್ವಾಕವಾದ, ಲೋಕಾಯತ ಒಂದು ಅಧ್ಯಯನ ನವಕರ್ನಾಟಕ ಪ್ರಕಾಶನ, ಬೆಂಗಳೂರು, 1989

8. ಕಪಟರಾಳ ಕೃಷ್ಣರಾವ: ಕರ್ನಾಟಕ ಸಂಸ್ಕೃತಿಯ ಸಂಶೋಧನೆ ಉಷಾಸಾಹಿತ್ಯ ಮಾಲೆ, ಮೈಸೂರು, 1970

9. ಕರಿಶೆಟ್ಟಿ ರುದ್ರಪ್ಪ: ಮ್ಯಾಸನಾಯಕರು–ಒಂದು ಜನಾಂಗೀಯ ಅಧ್ಯಯನ ಕನ್ನಡ ವಿಶ್ವವಿದ್ಯಾಲಯ, ಹಂಪಿ, 1995

10. ಕೃಷ್ಣಮೂರ್ತಿ ಹನೂರು (ಡಾ): ಮ್ಯಾಸ ಬ್ಯಾಡರ ಸಂಸ್ಕೃತಿ ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1993

11. ಕೃಷ್ಣಶರ್ಮ ಬೆಟಗೇರಿ (ಡಾ): ಕರ್ನಾಟಕ ಜನಜೀವನ ಸಮಾಜ ಪುಸ್ತಕಾಲಯ, ಧಾರವಾಡ, 1993

12. ಕುಶಾಲಪ್ಪಗೌಡ ಕೆ. (ಡಾ): ಕನ್ನಡ ತಿರುಳ್ಗನ್ನಡ ಮತ್ತು ಸಮಾಜ ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, 1991

13. ಕೇಶವ ಪ್ರಸಾದ ಕಪ್ಪೆ (ಡಾ): ಹೊಲೆಯರ ಸಂಸ್ಕೃತಿ ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1993

14. ಖಾಜಿವಲಿ ಈಚನಾಳ: ಲಿಂಗಭೇದ ಸಮಸ್ಯೆ ಮತ್ತು ಸರ್ವೋತ್ತರ ಕಾದಂಬರಿಗಳು ಕನ್ನಡ ವಿಶ್ವವಿದ್ಯಾಲಯ, ಹಂಪಿ, (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ), 1997

15. ಖಾಡೆ ಜಿ.ಬಿ.: ಕಾಡ ಹೂವುಗಳು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, 1973

16. ಗಣಪತಿಭಟ್ಟ : ತುಳುನಾಡಿನ ಜನಪದ ನಂಬಿಕೆಗಳು ಕನ್ನಡ ವಿಶ್ವವಿದ್ಯಾಲಯ, ಹಂಪಿ, (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ), 1989

17. ಗಾಯತ್ರಿ ಎನ್. (ಡಾ): ವಿರಚನೆ ಎನ್.ಆರ್. ಎ.ಎಂ. ಪ್ರಕಾಶನ, ಕೊಟ್ರೇಶ್ವರ, ದ.ಕ., 2003

18. ಗೀತಾ ನಾಗಭೂಷಣ (ಡಾ): ದುರಗ ಮುರಿಗಿಯವರ ಸಂಸ್ಕೃತಿ ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1993

19. ಗುರುಪ್ರಸಾದ ಸಿ.ಟಿ.: ಒಂದು ಧಾರ್ಮಿಕ ಸಮುದಾಯ ಅಧ್ಯಯನ ಕನ್ನಡ ವಿಶ್ವವಿದ್ಯಾಲಯ, ಹಂಪಿ, (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ), 2002

20. ಗೋಪಾಲರಾವ್ ವೈ.ಎಲ್.: ಭಾರತೀಯ ನಾರಿ-ಅಂದು-ಇಂದು ಭೈರವ ಪಬ್ಲಿಕೇಷನ್, ಬೆಂಗಳೂರು, 2002

21. ಚಕ್ರಕೋಡಿ ಈಶ್ವರಶಾಸ್ತ್ರಿ: ಮನುಸ್ಮೃತಿ ಸಮಾಜ ಪುಸ್ತಕಾಲಯ, ಧಾರವಾಡ, 1965

22. ಚಂದ್ರಶೇಖರ ಕಂಬಾರ (ಡಾ): ಕನ್ನಡ ಜಾನಪದ ವಿಶ್ವಕೋಶ ಸಂಪುಟ-1 ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1992

23. ಚಂದ್ರಶೇಖರ ಕಂಬಾರ (ಡಾ): ಕನ್ನಡ ಜಾನಪದ ವಿಶ್ವಕೋಶ ಸಂಪುಟ-2 ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1992

24. ಚಂದ್ರಶೇಖರ ದಾಮ್ಲೆ: ಸಮಾಜಶಾಸ್ತ್ರ ಕನ್ನಡ ವಿಶ್ವವಿದ್ಯಾಲಯ, ಹಂಪಿ, 2004

25. ಚಂದ್ರಮತಿ ಸೋಂದಾ: ಚಿಪ್ಪೊಡೆದ ಮೌನ ಸ್ತ್ರೀವಾದಿ ವಿಮರ್ಶೆ ಅಭಿರುಚಿ ಪ್ರಕಾಶನ, ಸರಸ್ವತಿಪುರಂ, ಮೈಸೂರು, 2004

26. ಚಿದಾನಂದಮೂರ್ತಿ (ಡಾ): ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಸ್ವಪ್ನ ಬುಕ್ ಹೌಸ್, ಬೆಂಗಳೂರು, 2002

27. ಚಿದಾನಂದಮೂರ್ತಿ (ಡಾ): ಬೃಹತ್ ಕರ್ನಾಟಕ ಭಾಷಿಕ ಸಾಂಸ್ಕೃತಿಕ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2007

28. ಚಿದಾನಂದಮೂರ್ತಿ (ಡಾ): ಜನ-ಜನಪದ-ಜಾನಪದ ಸ್ವಪ್ನ ಬುಕ್ ಹೌಸ್, ಬೆಂಗಳೂರು, 2002

29. ಚಿದಾನಂದಮೂರ್ತಿ (ಡಾ): ಸಂಶೋಧನ ತರಂಗ ಸಂಪುಟ–1
ಬಾಪ್ಕೋ ಪ್ರಕಾಶನ, ಬೆಂಗಳೂರು, 1970

30. ಚಿದಾನಂದಮೂರ್ತಿ (ಡಾ): ಗ್ರಾಮೀಣ ಬಾಪ್ಕೋ ಪ್ರಕಾಶನ, ಬೆಂಗಳೂರು, 1977

31. ಚೆನ್ನಣ್ಣ ವಾಲೀಕಾರ (ಡಾ): ಹೈದ್ರಾಬಾದ ಕರ್ನಾಟಕ ಗ್ರಾಮದೇವತೆಗಳು
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1983

32. ಚಲುವರಾಜು (ಸಂ) (ಡಾ): ಜುಂಜಪ್ಪ ಕನ್ನಡ ವಿಶ್ವವಿದ್ಯಾಲಯ, ಹಂಪಿ, 1998

33. ಜಗನ್ನಾಥ ಸಿಂಥೆ (ಡಾ): ಬಿ. ಶಾಮಸುಂದರ್ ಕುಟುಂಬ ಪ್ರಕಾಶನ, ಗುಲಬರ್ಗಾ,
2006

34. ಜಯದೇವ ಹು.ಕ. ಮತ್ತು ರಾಮಚಂದ್ರಪ್ಪ, ಬರಗೂರ ಜಾನಪದ ವೈಜ್ಞಾನಿಕ ಅಧ್ಯಯನ
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, 1980

35. ಜವರಯ್ಯ ಮ.ನ. (ಡಾ): ದಲಿತ ಶರಣರು ಒಂದು ಅಧ್ಯಯನ ಮೈಸೂರು
ವಿಶ್ವವಿದ್ಯಾಲಯ, ಮೈಸೂರು, 1990

36. ಜಾಗೀರದಾರ ಆರ್.ಜಿ.: ಹೈದರಾಬಾದ ಕರ್ನಾಟಕ ಪ್ರೇಮನಗರ, ಹೈದರಾಬಾದ, 1940

37. ಜಾನ್. ಎಫ್. ಕಿಟಲ್: ಕನ್ನಡ ಇಂಗ್ಲಿಷ ಡಿಕ್ಷನರಿ ಕರ್ನಾಟಕ ಸರಕಾರ, ಬೆಂಗಳೂರು,
1999

38. ಜೋತ್ಸ್ನಾ ಕಾಮತ್: ಮಹಿಳೆ ಒಂದು ಅಧ್ಯಯನ ನವಕರ್ನಾಟಕ ಪಬ್ಲಿಕೇಷನ್,
ಬೆಂಗಳೂರು, 1999

39. ಜ್ಯೋತಿ ಶಶಿಕುಮಾರ: ಮಹಿಳಾ ಸಾಮಾಜಿಕತೆ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ, 2007

40. ಜೋಶಿ ಶಂ.ಬಾ. (ಡಾ): ಕರ್ನಾಟಕ ಸಂಸ್ಕೃತಿಯ ಪೂರ್ವ ಪೀಠಿಕೆ, ಭಾಗ–1
ಮನೋಹರ ಗ್ರಂಥಮಾಲೆ, ಧಾರವಾಡ, 1999

41. ಜೋಶಿ ಶಂ.ಬಾ. (ಡಾ): ಕರ್ನಾಟಕ ಸಂಸ್ಕೃತಿಯ ಪೂರ್ವ ಪೀಠಿಕೆ, ಭಾಗ–2
ಮನೋಹರ ಗ್ರಂಥಮಾಲೆ, ಧಾರವಾಡ, 1997

42. ಜೋಶಿ ಶಂ.ಬಾ. (ಡಾ): ಕನ್ನಡ ನಾಡಿನ ಎಡೆಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 1999

43. ತಿಪ್ಪೇರುದ್ರಸ್ವಾಮಿ ಎಚ್. (ಡಾ): ಕರ್ನಾಟಕ ಸಂಸ್ಕೃತಿ ಸಮೀಕ್ಷೆ ಮೈಸೂರು ವಿಶ್ವವಿದ್ಯಾಲಯ, ಮೈಸೂರು, 1997

44. ತಾಪಿ ಧರ್ಮರಾವ: ವಿವಾಹ ಹುಟ್ಟು ಮತ್ತು ಪೂರ್ವೋತ್ತರ ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು, 1989

45. ದಾಸೇಗೌಡ ಜಿ.ವಿ.: ನಮ್ಮ ಜನಪದ ನಂಬಿಕೆಗಳು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, 1973

46. ದಾಸನೂರ ಕೂಸಣ್ಣ (ಡಾ): ಶೋಷಿತ ಜಂಗಮರ ಮೀಸಲಾತಿ ಮಾತಂಗ ಪ್ರಕಾಶನ, ಮೈಸೂರು, 1999

47. ನಂಜಮ್ಮ: ಮಾನವಶಾಸ್ತ್ರ: ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, 1974

48. ನಾಗೇಗೌಡ ಎಚ್.ಎಲ್. (ಡಾ): ಪ್ರವಾಸಿ ಕಂಡ ಇಂಡಿಯಾ ಮೈಸೂರು ವಿಶ್ವವಿದ್ಯಾಲಯ, ಮೈಸೂರು, 1979

49. ನಾಯಕ ಎಸ್.ಆರ್. (ಡಾ): ಕರ್ನಾಟಕ ಶಕ್ತಿ ದೇವತೆಗಳು ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, 1983

50. ನಾಗರಾಜಯ್ಯ ಹಂ.ಪ. (ಡಾ): ದ್ರಾವಿಡ ಭಾಷಾ ವಿಜ್ಞಾನ ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, 1990

51. ನಾರಾಯಣರಾವ ಜಿ.ಟಿ.: ಗ್ರಹಣಗಳು ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, 1990

52. ನಾವಡ ಎ.ವಿ. (ಡಾ): ತುಳುವ ದರ್ಶನ ಪ್ರಾದೇಶಿಕ ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ, 1988

53. ನಾವಡ ಗಾಯತ್ರಿ (ಡಾ): ಮತ್ತು ನಾವಡ ಎ.ವಿ. (ಡಾ) ಕಾಡ್ಯಾನಾಚೆ ಪಠ್ಯ ಮತ್ತು ಪ್ರದರ್ಶನ ಪ್ರಾದೇಶಿಕ ರಂಗ ಕಲೆಗಳ ಅಧ್ಯಯನ ಕೇಂದ್ರ, 1992

54. ನಿಂಗಣ್ಣ ಸಣ್ಣಕ್ಕಿ (ಡಾ): ಗೊಂದಲಿಗರ ಸಂಸ್ಕೃತಿ ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1993

55. ನಿರೂಪಮಾ: ಧರ್ಮಶಾಸ್ತ್ರಗಳು ಸ್ತ್ರೀ ಹಾಗೂ ಶೋಷಣೆ ಆರತಿ ಪಬ್ಲಿಕೇಷನ್ಸ್, ಬೆಂಗಳೂರು, 1997

56. ನೆಗಿನಾಳ ಎಂ.ಬಿ. (ಡಾ): ಕನ್ನಡ ಪ್ರಾಚೀನ ಶಾಸನಗಳ ಭಾಷಿಕ ಅಧ್ಯಯನ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1982

57. ನೆಗಿನಾಳ ಎಂ.ಬಿ. (ಡಾ): ನೆಗಿನಾಳ ಪ್ರಬಂಧಗಳು ಸಪ್ನ ಬುಕ್ ಹೌಸ್, ಬೆಂಗಳೂರು, 1997

58. ನೆಗಿನಾಳ ಎಂ.ಬಿ. (ಡಾ): ಮೈಲಾರಲಿಂಗ ಖಂಡೋಬಾ ಒಂದು ಸಾಂಸ್ಕೃತಿಕ ಅಧ್ಯಯನ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1993

59. ನೆಗಳೂರು ರಂಗನಾಥ: ಹಾಲುಮತ ದರ್ಶನ ಬೆಳವಡಿ ಪ್ರಕಾಶನ, ಸವದತ್ತಿ, 1990

60. ಪರಮಶಿವಯ್ಯ ಜಿ.ಶಂ. (ಡಾ): ಜಾನಪದ ಸಂಗಮ ಮೈಸೂರು ವಿಶ್ವವಿದ್ಯಾಲಯ, ಮೈಸೂರು, 1979

61. ಪುರುಷೋತ್ತಮ ಬಿಳಿಮಲೆ: ಕರಾವಳಿ ಜಾನಪದ ಶಾರದಾ ಪ್ರೆಸ್, ಮಂಗಳೂರು, 1990

62. ಪುರುಷೋತ್ತಮ ಬಿಳಿಮಲೆ: ಜಾನಪದ ಕ್ಷೇತ್ರಕಾರ್ಯ ಆಧುನಿಕ ವಿಧಾನಗಳು ಕನ್ನಡ ವಿಶ್ವವಿದ್ಯಾಲಯ, ಹಂಪಿ, 1993

63. ಪುರುಷೋತ್ತಮ ಬಿಳಿಮಲೆ: ಕೊರಗ ಸಂಸ್ಕೃತಿ ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1993

64. ಪೋತೆ ಎಚ್.ಟಿ. (ಡಾ): ದಲಿತಾಂತರಂಗ ಕುಟುಂಬ ಪ್ರಕಾಶನ, ಗುಲಬರ್ಗಾ, 2004

65. ಪೋತೆ ಎಚ್.ಟಿ. (ಡಾ): ನೀರು ನೆಳಲು ಕುಟುಂಬ ಪ್ರಕಾಶನ, ಗುಲಬರ್ಗಾ, 2009

66. ಪೋತೆ ಎಚ್.ಟಿ. (ಡಾ): ಡಾ. ಅಂಬೇಡ್ಕರ್: ದಲಿತ ಚಳವಳಿ ಕುಟುಂಬ ಪ್ರಕಾಶನ, ಗುಲಬರ್ಗಾ, 1990

67. ಪೋತೆ ಎಚ್.ಟಿ. (ಡಾ): ಮಾಂಗಾರುಡಿಗರ ಸಂಸ್ಕೃತಿ ಕುಟುಂಬ ಪ್ರಕಾಶನ, ಗುಲಬರ್ಗಾ, 2010

68. ಪೋತೆ ಎಚ್.ಟಿ. (ಡಾ): ದಲಿತ ಸಾಹಿತ್ಯ ಸಂಸ್ಕೃತಿ ಸಪ್ನ ಬುಕ್ ಹೌಸ್, ಬೆಂಗಳೂರು, 2011

69. ಪೋತೆ ಎಚ್.ಟಿ. (ಡಾ): ಫುಲೆ, ಶಾಹೂ, ಅಂಬೇಡ್ಕರ್ ಕುಟುಂಬ ಪ್ರಕಾಶನ, ಗುಲಬರ್ಗಾ, 2003

70. ಪೋತೆ ಎಚ್.ಟಿ. (ಡಾ): ಸಂಸ್ಕೃತಿ ಸಂಕ್ರಮಣ ಕುಟುಂಬ ಪ್ರಕಾಶನ, ಗುಲಬರ್ಗಾ, 2007

71. ಪೋತೆ ಎಚ್.ಟಿ. (ಡಾ): ಅವೈದಿಕ ಚಿಂತನೆ ಕುಟುಂಬ ಪ್ರಕಾಶನ, ಗುಲಬರ್ಗಾ, 2007

72. ಪೋತೆ ಎಚ್.ಟಿ. (ಡಾ): ಲೋಕ ಮತ್ತ್ರರ ನಡುವೆ ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2009

73. ಬಸವರಾಜ ಕಲ್ಗುಡಿ (ಡಾ): ಅನುಭಾವ, ಸಾಂಸ್ಕೃತಿಕ ಸಮಸ್ಯೆ ಮತ್ತು ಹುಡುಕಾಟ ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, 1997

74. ಭಾಲಚಂದ್ರ ಜಯಶೆಟ್ಟಿ (ಡಾ): ಸಮ್ಮೇಳನಾಧ್ಯಕ್ಷರ ಭಾಷಣ ಜಿಲ್ಲಾ ಕನ್ನಡ ಸಾಹಿತ್ಯ ಪರಿಮಾತು, ಬೀದರ, 1998

75. ಭೀಮಸೇನರಾವ ಡಿ.ಕೆ.: 13ನೇ ಶತಮಾನದ ಕರ್ನಾಟಕ ಆಂಧ್ರ ಮಹಾರಾಷ್ಟ್ರ ಸಾಹಿತ್ಯಾವಲೋಕನ
ನಿಶಾಂತ ಪ್ರಕಾಶನ, ಬೆಳಗಾವಿ, 1999

76. ಮಹಾರಾಜನ ಎಸ್.: ತಿರುವಳ್ಳುವರ್ ಸಾಹಿತ್ಯ ಅಕಾಡೆಮಿ, ದೆಹಲಿ, 1980

77. ರಹಮತ ತರೀಕೆರೆ (ಡಾ): ಭಾಷಿಕ ಸಂಸ್ಕೃತಿ ಕನ್ನಡ ವಿಶ್ವವಿದ್ಯಾಲಯ, ಹಂಪಿ, 1999

78. ರಾಜೇಂದ್ರ ಚೆನ್ನಿ (ಸಂ): ಜಾಗತೀಕರಣ ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 2004

79. ರಾಮಾನುಜಂ ಪಿ.ಎಸ್. (ಸಂ): ಕರ್ನಾಟಕ ಪರಂಪರೆ ಕನ್ನಡ ಮತ್ತು ಸಂಸ್ಕೃತಿ

ಇಲಾಖೆ, ಬೆಂಗಳೂರು, 1992

80. ರಾಮಚಂದ್ರಪ್ಪ ಬರಗೂರು: ಸಂಸ್ಕೃತಿ ಮತ್ತು ಸೃಜನಶೀಲತೆ ಬಂಡಾಯ ಸಾಹಿತ್ಯ ಸಂಘಟನೆ, ಬೆಂಗಳೂರು, 1991

81. ವೀರಭದ್ರಪ್ಪ ಬಿ.: ನೈಜಾಮ ಕಾಲದ ಶಿಕ್ಷಣ ಪದ್ಧತಿ ನವೋದಯ ಪ್ರಕಾಶನ, ಬೆಂಗಳೂರು, 2000

82. ವೆಂಕಟೇಶ ಎನ್.ಆರ್.: ಬುಡಗಿ ಜನಾಂಗ ನರೇಂದ್ರ ಪ್ರಕಾಶನ, ಹೈದರಾಬಾದ, 1995

83. ಶರ್ಮಾ ಆರ್.ಎಸ್.: ಪ್ರಾಚೀನ ಭಾರತ ನವಕರ್ನಾಟಕ ಪ್ರಕಾಶನ, ಬೆಂಗಳೂರು, 1997

84. ಶೇಖ ಅಲಿ ಬಿ.: ಕರ್ನಾಟಕ ಚರಿತ್ರೆ ಸಂ.–4 ಕನ್ನಡ ವಿಶ್ವವಿದ್ಯಾಲಯ, ಹಂಪಿ, 1997

85. ಶೇಖ ಅಲಿ ಬಿ.: ಕರ್ನಾಟಕ ಚರಿತ್ರೆ ಸಂ.–5 ಕನ್ನಡ ವಿಶ್ವವಿದ್ಯಾಲಯ, ಹಂಪಿ, 1997

86. ಸದಾಶಿವಯ್ಯ ಕೆ.ಎಸ್.: ಆರ್ಥಿಕ ಕ್ಷೇತ್ರದಲ್ಲಿ ಖಾಸಗಿ ಸಂಸ್ಥೆಗಳು ಪ್ರಗತಿ ಪ್ರಕಾಶನ, ಬೆಂಗಳೂರು, 1998

ಇಂಗ್ಲಿಷ್ ಗ್ರಂಥಗಳು

1. Alte I.D.: Rural Employment of Scheduled Castes Deep & Deep Pvt. Ltd. Delhi, 1992

2. Brigg Geo W.: Religious life of India Association Press Calcutta , 1992

3. Enthoven: The Tribes and castes at Bombay Cosmo Publication Delhi, 1995

4. Hussen Syed Sirija-ul: The caste and Tribes of H.E.H. The Nizama Dominions Asian Edu. Services Delhi, 1989

5. Hatch W.J.: The land pirate of India Karnataka State Gazetteer, 1990

6. Iyer L.K.A.: The Mysore Tribes and Castes Mital Publisher, Delhi, 1996

7. Mahar J. Michael: The untouchables in contemporary India Arizpno University Punjab Delhi, 1972

8. Thurstan E: Caste and Tribes of Southern India Vol.I & II Arizpno University Punjab Delhi, 1995

ವಿಶ್ವಕೋಶ/ನಿಘಂಟುಗಳು

1.	ಕನ್ನಡ ವಿಶ್ವಕೋಶ	ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು
2.	ಕನ್ನಡ ಜಾನಪದ ವಿಶ್ವಕೋಶ	ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು
3.	ಕನ್ನಡ ನಿಘಂಟು	ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು
4.	ಕನ್ನಡ ಕಸ್ತೂರಿ ಕೋಶ	ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು
5.	ಕಿಟಲ್ ಕೋಶ	ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು

ಇಂಗ್ಲಿಷ

1.	Thaeodar H. Gaster	A Standard Dictionary of Folklore
2.	T. Burrow & M.B. Emneau	Dravidian Etymological Dictionary Encyclopedia of Religion and Ethics Encyclopedia of Philosophy
3.	Mirier Williams	Sanskrit-English and English-Sanskrit

ಪತ್ರಿಕೆ / ನಿಯತಕಾಲಿಕೆಗಳು

1.	ಉದಯವಾಣಿ	ಮಣಿಪಾಲ
2.	ಕರ್ನಾಟಕ ಭಾರತಿ	ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
3.	ಕನ್ನಡ ಪ್ರಭ	ಬೆಂಗಳೂರು
4.	ತರಂಗ	ಮಣಿಪಾಲ
5.	ಜಾನಪದ	ವಾರ್ತಾ ಮತ್ತು ಪ್ರಚಾರ ಇಲಾಖೆ, ಬೆಂಗಳೂರು
6.	ಜಾನಪದ ಜಗತ್ತು	ಕರ್ನಾಟಕ ಜಾನಪದ ಟ್ರಸ್ಟ್, ರಾಮನಗರ (ಬೆಂಗಳೂರು)
7.	ದ್ರಾವಿಡ ಅಧ್ಯಯನ	ಕನ್ನಡ ವಿಶ್ವವಿದ್ಯಾಲಯ, ಹಂಪಿ
8.	ಪ್ರಜಾವಾಣಿ	ಎಂ.ಜಿ. ರಸ್ತೆ, ಬೆಂಗಳೂರು
9.	ಬುಡಕಟ್ಟು ಅಧ್ಯಯನ	ಕನ್ನಡ ವಿಶ್ವವಿದ್ಯಾಲಯ, ಹಂಪಿ
10.	ಸಂವಾದ	ಸ್ಫೂರ್ತಿಧಾಮ, ಬೆಂಗಳೂರು
11.	ಸಂಕ್ರಮಣ	ಸಂಪಾದಕರು, ಡಾ. ಚಂದ್ರಶೇಖರ ಪಾಟೀಲ, ಬೆಂಗಳೂರು
12.	ಸಂಯುಕ್ತ ಕರ್ನಾಟಕ	ಹುಬ್ಬಳ್ಳಿ

ಇಂಗ್ಲಿಷ

1.	ಡೆಕ್ಕನ್ ಹೆರಾಲ್ಡ್	ಬೆಂಗಳೂರು
2.	ಇಂಡಿಯನ್ ಎಕ್ಸ್‌ಪ್ರೆಸ್	ಬೆಂಗಳೂರು ಆವೃತ್ತಿ
3.	ಹಿಂದು	ಬೆಂಗಳೂರು ಆವೃತ್ತಿ
4.	ಟೈಮ್ಸ್ ಆಫ್ ಇಂಡಿಯಾ	ಹೈದರಾಬಾದ ಆವೃತ್ತಿ

ಆಯೋಗದ ವರದಿಗಳು

1. The Commissioner: Scheduled Castes and Tribes, Government of India, New Delhi, 1958-86)
2. The Commissioner: Atrocities on Scheduled Castes and Tribes causes and Remedies SC/ST's Commission , 1990
3. Mandal B.P.: Backward Classes Commission, Government of India, New Delhi, 1981
4. Havanoor L.B.: Karnataka Backward Classes Commission, Government of Karnataka, 1975
5. Chinnappa Reddy: Third Backward Classes Commission, Government of Karnataka, 1990
6. Venkataswamy V.: Second Backward Classes Commission, 1986

Gazetteers

1. Andhra Pradesha: All the Districts, 1976
2. Bombay District, Dharwar, Belgaum and Bijapur
3. Suryanath Kamath, Karnataka Gazetteer All the Districs, 1984
4. ಗುಲಬರ್ಗಾ ಜಿಲ್ಲೆ ಗೆಜಿಟೀಯರ್‌ಳು: ಕರ್ನಾಟಕ ಸರಕಾರ, ಬೆಂಗಳೂರು, 1939.

[illegible]

ಗುಲಬರ್ಗಾ ಅವಿಭಜಿತ ಜಿಲ್ಲೆಯ ನಕ್ಷೆ



ವಕ್ತೃಗಳ ಪಟ್ಟಿ

ವಕ್ತೃಗಳ ಪಟ್ಟಿ

ಕ್ರ ಸಂ.	ವಕ್ತೃರ ಹೆಸರು	ವಯಸ್ಸು	ಲಿಂಗ ಗಂಡು/ಹೆಣ್ಣು	ಸಂದರ್ಶನ ನಡೆಸಿದ ಊರು	ದಿನಾಂಕ
1.	ರಾಮದಾಸ ತಂದೆ ಬಾಬು	65	ಗಂಡು	ಅಫಜಲಪುರ	18.03.2009
2.	ಮೇತಾಬ್ ತಂದೆ ಲಸಿಂಗ್	62	ಗಂಡು	ಅಫಜಲಪುರ	21.03.2012
3.	ಲಕಮನಸಿಂಗ ತಂದೆ ಹನುಮಾನ	60	ಗಂಡು	ಅಫಜಲಪುರ	21.03.2012
4.	ಬಾಬು ಭವಾನಸಿಂಗ ತಂದೆ ಲಾಲಸಾಬ	58	ಗಂಡು	ಅಫಜಲಪುರ	21.03.2012
5.	ರಾಮಸಿಂಗ ತಂದೆ ಬಾಬು	35	ಗಂಡು	ಅಫಜಲಪುರ	20.03.2010

6.	ಕಮಲಾಬಾಯಿ ಗಂಡ ಮೇತಾಬ	58	ಹೆಣ್ಣು	ಅಫಜಲಪುರ	20.03.2010
7.	ರೇಖಾಬಾಯಿ ಗಂಡ ಸುರೇಶ	35	ಹೆಣ್ಣು	ಅಫಜಲಪುರ	20.03.2010
8.	ಆಶಾ ತಂದೆ ಮೇತಾಬ	25	ಹೆಣ್ಣು	ಅಫಜಲಪುರ	18.02.2011
9.	ಮೋನು ತಂದೆ ಸುರೇಶ	22	ಹೆಣ್ಣು	ಅಫಜಲಪುರ	18.02.2011
10.	ಸಂಧ್ಯಾ ತಂದೆ ಸುರೇಶ	20	ಹೆಣ್ಣು	ಅಫಜಲಪುರ	18.02.2011
11.	ಜಯಸಿಂಗ್ ತಂದೆ ಹರಿಸಿಂಗ	70	ಗಂಡು	ಆಳಂದ	03.04.2009
12.	ವಿಶಾಲ ತಂದೆ ಹರಿಸಿಂಗ		ಗಂಡು	ಆಳಂದ	03.04.2009
13.	ಈಶ್ವರಸಿಂಗ ತಂದೆ ಜಯಸಿಂಗ	40	ಗಂಡು	ಆಳಂದ	03.04.2009
14.	ಜೆ. ಸಾಯಿಂದರ ತಂದೆ ಜಯಸಿಂಗ	38	ಗಂಡು	ಆಳಂದ	03.04.2009
15.	ರಾಮಸಿಂಗ ತಂದೆ ಭಾವನಸಿಂಗ	65	ಗಂಡು	ಆಳಂದ	14.04.2009
16.	ಪ್ರೇಮಿಳಾ ಗಂಡ ರಾಮಸಿಂಗ	55	ಹೆಣ್ಣು	ಆಳಂದ	14.04.2009
17.	ರೇಖಾ ಗಂಡ ಗೌತಮ	40	ಹೆಣ್ಣು	ಆಳಂದ	14.04.2009
18.	ಗೌತಮ ತಂದೆ ರಾಮಸಿಂಗ	45	ಗಂಡು	ಆಳಂದ	14.04.2009
19.	ವಿಮಲಾಬಾಯಿ ಗಂಡ ಲಕಮಣ್ಣ	48	ಹೆಣ್ಣು	ಆಳಂದ	20.04.2009
20.	ಲಲಿತಾಬಾಯಿ ಗಂಡ ಬಾಬು	35	ಹೆಣ್ಣು	ಆಳಂದ	20.04.2009
21.	ಫಕೀರಚಂದ ತಂದೆ ಭಗವಾನ	62	ಗಂಡು	ಚಿಂಚೋಳಿ (ಚಂದಾಪುರ)	15.05.2009
22.	ಕವಿತಾಬಾಯಿ ಗಂಡ ಫಕೀರಚಂದ	55	ಹೆಣ್ಣು	ಚಿಂಚೋಳಿ (ಚಂದಾಪುರ)	15.05.2009
23.	ವಿಜಯಲಕ್ಷ್ಮಿ ತಂದೆ ಫಕೀರಚಂದ	38	ಹೆಣ್ಣು	ಚಿಂಚೋಳಿ (ಚಂದಾಪುರ)	15.05.2009

24.	ಕಾಮೇಶ ತಂದೆ ಫಕೀರಚಂದ	40	ಗಂಡು	ಚಿಂಚೋಳಿ (ಚಂದಾಪುರ)	15.05.2009
25.	ಪ್ರಕಾಶ ತಂದೆ ಚಂದರಾಮ	36	ಗಂಡು	ಚಿಂಚೋಳಿ (ಚಂದಾಪುರ)	16.05.2009
26.	ಸಂತೋಷ ತಂದೆ ಪ್ರಕಾಶ	21	ಗಂಡು	ಚಿಂಚೋಳಿ (ಚಂದಾಪುರ)	16.05.2009
27.	ಬಬಲಿ ತಂದೆ ಪ್ರಕಾಶ	19	ಹೆಣ್ಣು	ಚಿಂಚೋಳಿ (ಚಂದಾಪುರ)	16.05.2009
28.	ವಂಶಿ ತಂದೆ ಪ್ರಕಾಶ	18	ಗಂಡು	ಚಿಂಚೋಳಿ (ಚಂದಾಪುರ)	16.05.2009
29.	ಆರತಿ ಗಂಡ ಲಕ್ಷ್ಮಣ	21	ಹೆಣ್ಣು	ಚಿಂಚೋಳಿ (ಚಂದಾಪುರ)	16.05.2009
30.	ಜಯಪುರೆ	40	ಹೆಣ್ಣು	ಚಿಂಚೋಳಿ (ಚಂದಾಪುರ)	16.05.2009
31.	ಕೈಲಾಸಬಾಯಿ ಗಂಡ ರಮೇಶ	58	ಹೆಣ್ಣು	ಚಿತ್ತಾಪುರ	16.06.2010
32.	ಭೀಮಬಾಯಿ ಗಂಡ ಕಾಮೇಶ	50	ಹೆಣ್ಣು	ಚಿತ್ತಾಪುರ	16.06.2010
33.	ವಿಜಯ ತಂದೆ ಕಾಮೇಶ	32	ಗಂಡು	ಚಿತ್ತಾಪುರ	16.06.2010
34.	ವಿಜಯ ಲಕ್ಷ್ಮಿ ತಂದೆ ಕಾಮೇಶ	28	ಹೆಣ್ಣು	ಚಿತ್ತಾಪುರ	16.06.2010
35.	ಚಂದರಾಮ ತಂದೆ ಭಗವಾನ	60	ಗಂಡು	ಚಿತ್ತಾಪುರ (ಇಂದಿರಾನಗರ)	16.06.2010
36.	ಮಹೇಶ ತಂದೆ ಸುಕವೀರ	32	ಗಂಡು	ಚಿತ್ತಾಪುರ (ಸ್ಟೇಷನ್ ಪ್ರದೇಶ	20.06.2010
37.	ರಾಣಿಯಾದಿ	30	ಹೆಣ್ಣು	ಚಿತ್ತಾಪುರ (ವಾಡಿ)	20.06.2010
38.	ಪಿಂಕಿ ತಂದೆ ಸುಖವೀರ	21	ಹೆಣ್ಣು	ಶಹಾಬಾದ	20.06.2010
39.	ಮಂಜುಳಾ ತಂದೆ ಸತಪಾಲ	25	ಹೆಣ್ಣು	ಶಹಾಬಾದ	18.07.2010

40.	ಯೋಗೇಶ ತಂದೆ ಸತಪಾಲ	28	ಗಂಡು	ಗುಲಬರ್ಗಾ (ಗಾಜಿಪುರ)	18.07.2010
41.	ಮೀರಾಬಾಯಿ ಗಂಡ ರಂಜನಸಿಂಗ	50	ಹೆಣ್ಣು	ಗುಲಬರ್ಗಾ (ಗಾಜಿಪುರ)	25.04.2010
42.	ಲಾಡು ತಂದೆ ರಂಜನಸಿಂಗ	32	ಗಂಡು	ಗುಲಬರ್ಗಾ (ಗಾಜಿಪುರ)	25.04.2010
43.	ಲಕ್ಷ್ಮಿ ತಂದೆ ಕಾಮಾ	30	ಹೆಣ್ಣು	ಗುಲಬರ್ಗಾ (ಗಾಜಿಪುರ)	25.04.2010
